ಕರ್ನಾಟಕ ಸರ್ಕಾರ

ಸಮಕಾಲೀನ ಸಾಹಿತ್ಯ ಮಾಲಿಕೆ–10
ಪ್ರಧಾನ ಸಂಪಾದಕರು : ಡಾ. ಬಂಜಗೆರೆ ಜಯಪ್ರಕಾಶ

ಕರಡಚ್ಚು ತಿದ್ದುವಿಕೆ ಮತ್ತು ಕನ್ನಡ ಭಾಷೆ

ಪ್ರೊ. ಜಿ. ಅಶ್ವತ್ಥನಾರಾಯಣ



ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ೫೬೦೦೦೨

ಸಮಕಾಲೀನ ಸಾಹಿತ್ಯ ಮಾಲಿಕೆ-10
ಪ್ರಧಾನ ಸಂಪಾದಕರು : ಡಾ. ಬಂಜಗೆರೆ ಜಯಪ್ರಕಾಶ

ಕರಡಚ್ಚು ತಿದ್ದುವಿಕೆ ಮತ್ತು ಕನ್ನಡ ಭಾಷೆ

ಲೇ : ಪ್ರೊ.ಜಿ. ಅಶ್ವತ್ಥನಾರಾಯಣ

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

KARADCHCHU THIDDUVIKE MATTU KANNADA BHASHE Written by PROF IN ASWATTHA NARAYANA; Published by Mahadevaiah, Administrative Officer, Kannada Pustaka Pradhikara, kannada Bhavana, J.C. Road, Bengalore-560002.

ಮೊದಲ ಮುದ್ರಣ : ೨೦೧೭
ಪುಟಗಳು : iv + 240 = 244
ಪ್ರತಿಗಳು : 1000
ಬೆಲೆ : ರೂ. 170/–

First Print : 2017
Pages : iv + 240 = 244
Copies : 1000
Price : Rs. 170/-

ಪ್ರಕಾಶಕರು :
ಮಹದೇವಯ್ಯ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು–560002

ಕರಡು ತಿದ್ದಿದವರು : ಲೇಖಕರು
ಡಿ.ಟಿ.ಪಿ. : ನಂದ
ರಕ್ಷಾಪುಟ ವಿನ್ಯಾಸ : ಯು.ಟಿ. ಸುರೇಶ್

ಮುದ್ರಕರು :
ತಾರಾ ಪ್ರಿಂಟ್ಸ್, ಮೈಸೂರು

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿತವಾಗಿರುವ ಸರ್ಕಾರದ ಅಂಗಸಂಸ್ಥೆ. ಲೇಖಕರು, ಪ್ರಕಾಶಕರು ಹಾಗೂ ಓದುಗರ ಅಭಿರುಚಿ ಉತ್ತೇಜನಕ್ಕೆ ಪೂರಕವಾಗಿ ಕಾರ್ಯಕ್ರಮ ಕೈಗೊಳ್ಳುವುದು ಪುಸ್ತಕ ಪ್ರಾಧಿಕಾರದ ಮುಖ್ಯ ಆಶಯ. ಇದಕ್ಕಾಗಿ ಯುವಜನತೆಯಲ್ಲಿ ವಾಚನಾಭಿರುಚಿಯನ್ನು ಬೆಳೆಸುವ ದೃಷ್ಟಿಯಿಂದ ವಿವಿಧ ಜಿಲ್ಲೆಗಳ ಪದವಿ ಕಾಲೇಜುಗಳಲ್ಲಿ 2015ರ ಸಾಲಿನಂತೆಯೇ ಪದಿಪೂರ್ವ 2016ರಲ್ಲೂ 200 ಪುಸ್ತಕಪ್ರೇಮಿ ಬಳಗವನ್ನು ಆರಂಭಿಸುವ ಯೋಜನೆ ಕೈಗೊಂಡು ಈ ಯೋಜನೆಗೆ ಪದವಿಪೂರ್ವ ಕಾಲೇಜುಗಳನ್ನೂ ಒಳಪಡಿಸಿದೆ. ಅವಶ್ಯ ಬಂದಲ್ಲಿ ಕೆಲವು ಪ್ರೌಢಸಾಲೆಗಳನ್ನೂ ಇದರಡಿ ಒಳಗೊಳ್ಳಲು ನೀತಿ ರೂಪಿಸಿಕೊಂಡಿದೆ.

ಹೊಸ ಬರಹಗಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಯುವ ಬರಹಗಾರರ ಚೊಚ್ಚಲ ಕೃತಿಗಳಿಗೆ ಪ್ರೋತ್ಸಾಹಧನ ನೀಡುವ ಯೋಜನೆಯನ್ನು ಪ್ರತಿ ವರ್ಷವೂ ಮುಂದುವರಿಸುತ್ತಾ ಬಂದಿದ್ದು ಈ ಹಿಂದೆ ತಲಾ ರೂ.10.000–00ಇದ್ದ ಪ್ರೋತ್ಸಾಹಧನದ ಮೊತ್ತವನ್ನು 15,000–00ಗಳಿಗೆ ಹೆಚ್ಚಿಸಿದೆ. ವಿದ್ಯಾರ್ಥಿ/ ವಿದ್ಯಾರ್ಥಿನಿಯರಲ್ಲಿ ಸಾಹಿತ್ಯ ರಸಗ್ರಹಣ ಸಾಮರ್ಥ್ಯ ಬೆಳೆಸಲು ಹಾಗೂ ಸಾಹಿತ್ಯಕೃತಿಗಳ ಪರಿಚಯ ಹೆಚ್ಚಿಸುವ ದೃಷ್ಟಿಯಿಂದ 'ನನ್ನ ಮೆಚ್ಚಿನ ಪುಸ್ತಕ' ವಿದ್ಯಾರ್ಥಿ ಅಭಿಪ್ರಾಯ ಮಂಡನೆ ಸ್ಪರ್ಧೆಗಳನ್ನು ಒಟ್ಟು 200 ಕಾಲೇಜುಗಳಲ್ಲಿ ನಡೆಸಲು 2015 ರಂತೆ 2016ರಲ್ಲೂ ಕ್ರಿಯಾಯೋಜನೆ ಹಾಕಿಕೊಂಡಿತ್ತು. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಪುಸ್ತಕದೋದಿಗೆ ಅಭಿವ್ಯಕ್ತಿ ಶೈಲಿ ಬೆಳವಣಿಗೆ, ಸ್ವಯಂ ಅಧ್ಯಯನ ಸಾಮರ್ಥ್ಯ ಹೆಚ್ಚಲು ಉಂಟಾಗಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಕಳೆದ ಎರಡು ದಶಕದ ಅವಧಿಯಲ್ಲಿ 400ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿದೆ. ಅಪರೂಪಕ್ಕೆ ಸೃಜನಾತ್ಮಕ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿರುವುದಿದ್ದರೂ, ಶಾಸ್ತ್ರ, ವೈಚಾರಿಕತೆಗೆ ಸಂಬಂಧಿಸಿದಂತಹ ಕೃತಿಗಳೇ ಹೆಚ್ಚು ಪ್ರಕಾಶನಗೊಂಡಿವೆ ಎನ್ನಬಹುದು. ಇದಕ್ಕಾಗಿ ಹಲವು ಪ್ರಕಟಣೆ ಮಾಲಿಕೆಗಳನ್ನು ಆರಂಭಿಸಲಾಗಿದೆ.

ಈ ನಿಟ್ಟಿನಲ್ಲಿ 'ಸಮಕಾಲೀನ ಸಾಹಿತ್ಯ ಮಾಲಿಕೆಯಲ್ಲಿ'ಯಲ್ಲಿ 'ಕರಡಚ್ಚು ತಿದ್ದುವಿಕೆ ಮತ್ತು ಕನ್ನಡ ಭಾಷೆ ಕೃತಿಯನ್ನು ಕನ್ನಡ ಬರಹಗಾರರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಬರೆದುಕೊಟ್ಟಿದ್ದಾರೆ. ಕನ್ನಡ ಗ್ರಂಥೋದ್ಯಮದ ಬೆಳವಣಿಗೆಗೆ ಈ ಕೃತಿ ಅತ್ಯುಪಯುಕ್ತ ಎನ್ನುವುದು ನನ್ನ ಅನಿಸಿಕೆ. ಕನ್ನಡ ಪ್ರಕಾಶಕರಿಗೆ, ಲೇಖಕರಿಗೆ ಈ ಕೃತಿಯು ಮಾರ್ಗದರ್ಶನ ಮಾಡಿ ಪುಸ್ತಕ ಪ್ರಕಟಣೆಯ ಕಾರ್ಯವನ್ನು ಮತ್ತಷ್ಟು ಸುಲಭಗೊಳಿಸುತ್ತದೆ. ಕರಡಚ್ಚು ತಿದ್ದುವುದು ಪುಸ್ತಕ ಪ್ರಕಟಣೆಯ ಮುಖ್ಯ ಅಂಗಗಳಲ್ಲೊಂದು. ಈ ಬಗ್ಗೆ ತಜ್ಞ ತಿಳಿವಳಿಕೆಯನ್ನು ಈ ಕೃತಿ ಒದಗಿಸುತ್ತಿದೆ.

ಕರಡಚ್ಚು ತಿದ್ದುವಿಕೆಯ ಮಹತ್ವದ ಮಾಹಿತಿಯನ್ನು ತಲುಪಿಸುವಲ್ಲಿ ಈ ಕೃತಿ ಯಶಸ್ವಿಯಾಗುತ್ತೆಂದು ನಾನು ಭಾವಿಸುತ್ತಿದ್ದೇನೆ. ಈ ಕಾರ್ಯಭಾರವನ್ನು ನೆರವೇರಿಸಿಕೊಟ್ಟಿದ್ದಕ್ಕೆ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ಪುಸ್ತಕ ಪ್ರಾಧಿಕಾರದ ಪರವಾಗಿ ಕೃತಜ್ಞತೆ ಸಲ್ಲಿಸುತ್ತಿದ್ದೇನೆ. ಇಷ್ಟು ಸಮರ್ಪಕವಾದ ಕರಡಚ್ಚು ತಿದ್ದುವಿಕೆ ಮಾರ್ಗದರ್ಶನ ನೀಡುತ್ತಿರುವ ಸಮಗ್ರ ಕೃತಿ ಕನ್ನಡದಲ್ಲಿ ಬರುತ್ತಿರುವುದು ಇದೇ ಮೊದಲು ಎಂದು ನಾನು ಭಾವಿಸಿದ್ದೇನೆ.

ಈ ಕೃತಿಯು ಪ್ರಕಟಣೆಯಲ್ಲಿ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಮಹದೇವಯ್ಯ, ಸಹಾಯಕ ನಿರ್ದೇಶಕರಾದ ಶ್ರೀಮತಿ ಸೌಭಾಗ್ಯ, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಾರಿಯಾಗಿದ್ದೇನೆ. ಕನ್ನಡ ವಾಚಕಲೋಕ ಈ ಕೃತಿಯನ್ನು ತುಂಬು ಹೃದಯದಿಂದ ಸ್ವಾಗತಿಸುತ್ತದೆಂದು ಆಶಿಸುತ್ತಿದ್ದೇನೆ.

(ಡಾ. ಬಂಜಗೆರೆ ಜಯಪ್ರಕಾಶ)
ಅಧ್ಯಕ್ಷರು

ಲೇಖಕರ ನುಡಿ

ಇಂದು ದಿನಕ್ಕೆ ಹತ್ತಾರು ಪತ್ರಿಕೆಗಳು, ಪುಸ್ತಕಗಳು ಕನ್ನಡದಲ್ಲಿ ಪ್ರಕಟವಾಗುತ್ತಿವೆ. ಒಂದು ಕಾಲದಲ್ಲಿ ವರುಷಕ್ಕೆ 10ಪುಸ್ತಕಗಳು ಕನ್ನಡದಲ್ಲಿ ಪ್ರಕಟವಾಗುತ್ತಿರಲಿಲ್ಲ ಆದರೆ ಅಚ್ಚಿನಕಲೆಯಲ್ಲಿ ಅದ್ಭುತ ಸುಧಾರಣೆಗಳಾಗಿವೆ. ಲೇಖಕರ ಸಂಖ್ಯೆ ದಿನೇದಿನೇ ಅಧಿಕವಾಗುತ್ತಿದೆ. ಇಂದು ವರುಷಕ್ಕೆ ಒಂದು ಅಂದಾಜಿನಂತೆ 5000ಕ್ಕೂ ಹೆಚ್ಚು ಕನ್ನಡ ಗ್ರಂಥಗಳು ಪ್ರಕಟವಾಗುತ್ತಿವೆ. ಮುದ್ರಣಕಾರರ ಸಂಖ್ಯೆ ಹೆಚ್ಚಿದೆ. ಇದು ಸಂತೋಷದ ಸಂಗತಿಯೇ ಆದರೂ ದುಃಖದ ಸಂಗತಿಯೂ ಇದರೊಂದಿಗೆ ಇದೆ. ಅದೇನೆಂದರೆ ಅಚ್ಚಾಗುತ್ತಿರುವ ಪುಸ್ತಕಗಳಲ್ಲಿ ಮುದ್ರಣ ದೋಷಗಳೂ ಭಾಷಾದೋಷಗಳೂ ದಿನೇದಿನೇ ಹೆಚ್ಚಾಗುತ್ತಿವೆ. ಒಂದೂ ತಪ್ಪಿಲ್ಲದೆ ಅಚ್ಚಾದ ಪುಸ್ತಕ ಶೇಕಡಾ 2ರಷ್ಟೂ ಇಲ್ಲವೆಂದರೆ ತಪ್ಪಾಗದು. ಇದಕ್ಕೆ ಹಲವಾರು ಕಾರಣಗಳಿವೆ. ಗ್ರಂಥ ಬಿಡುಗಡೆ ದಿನಾಂಕಕ್ಕೆ ಆತುರದಲ್ಲಿ ಗ್ರಂಥವನ್ನು ಸಿದ್ಧಪಡಿಸುವುದು, ಕರಡಚ್ಚು ತಿದ್ದುಗಾರರಿಗೆ ಸರಿಯಾಗಿ ಭಾಷಾಜ್ಞಾನ, ತಾಂತ್ರಿಕಜ್ಞಾನದ ಪರಿವೆ ಇಲ್ಲದಿರುವುದು. ಡಿಟಿಪಿ ಮಾಡುವವರಿಗೆ ಕನ್ನಡ ಭಾಷಾಗಂಧವೇ ಇಲ್ಲದಿರುವುದು. ಅನುವಾದದ ಗ್ರಂಥಗಳನ್ನು ಅಚ್ಚಿಸುವಾಗ ಮೂಲಭಾಷೆಯ ಲಘುಪರಿಚಯವೂ ಇಲ್ಲದಿರುವುದು ಇತ್ಯಾದಿ ಕಾರಣಗಳು ಮುಖ್ಯವಾಗಿವೆ. ಅಚ್ಚಿನ ದೋಷಗಳಲ್ಲಿ ಅಕ್ಷರದೋಷಗಳ ವಿಚಾರ ಹಾಗಿರಲಿ, ಅರ್ಥದೋಷಗಳು ಅಶುದ್ಧಪದ ಬಳಕೆ, ತಪ್ಪು ವಾಕ್ಯರಚನೆ ಇತ್ಯಾದಿಗಳ ಹಾವಳಿ ವಿಪರೀತವಾಗಿದೆ. ಹೀಗಾಗಿ ಸಾವಿಲ್ಲದ ಮನೆಯಲ್ಲಿ ಸಾಸಿವೆ ತರಲು ಕಿಸಾಗೋತಮಿ ಕಷ್ಟಪಟ್ಟಂತೆ. ಶುದ್ಧವಾಗಿ ಅಂದವಾಗಿ ತಪ್ಪಿಲ್ಲದ ಕನ್ನಡ ಗ್ರಂಥಗಳು ಇಂದು ಅತಿ ವಿರಳವಾಗಿ ಪ್ರಕಟವಾಗುತ್ತಿವೆ. ಇಂದು ಗ್ರಂಥ ಪ್ರಕಟನೆಗಳಲ್ಲಿ ಬಹುಮಂದಿ ಪ್ರಕಾಶಕರು ಮುದ್ರಣದ ಅಂದಚಂದ ರಕ್ಷಾಪುಟ, ವಿನ್ಯಾಸಗಳಿಗೆ ಕೊಟ್ಟ ಪ್ರಾಶಸ್ತ್ಯವನ್ನು ಅಚ್ಚಿನದೋಷ ನಿವಾರಣೆಗೆ ಗಮನವೀಯುತ್ತಿಲ್ಲ.

ಪ್ರತಿಯೊಂದು ಕಲಿಕೆಗೂ ತರಬೇತಿ ಬೇಕು. ತರಬೇತಿಯಿಲ್ಲದೆ ವೃತ್ತಿನಿರತರಿಗೆ ಆಯಾವೃತ್ತಿಯಲ್ಲಿ ಪರಿಣಿತಿ ಇರುವುದಿಲ್ಲ. ಕರಡಚ್ಚು ತಿದ್ದುವುದು ಒಂದು ಕಲೆ ಅದಕ್ಕೆ ತರಬೇತಿ, ಮಾರ್ಗದರ್ಶನ, ಅಭ್ಯಾಸ, ತಿದ್ದುವಿಕೆ ಮಹತ್ವದ ಪಾತ್ರ ವಹಿಸುತ್ತದೆ. ಅಚ್ಚಾದ ಕರಡಚ್ಚುಗಳ ತಪ್ಪುಗಳನ್ನು ತಿದ್ದುವುದು ಒಂದು ಭಾಗವಾದರೆ ಹಸ್ತಪ್ರತಿಯನ್ನು ಓದಿ.

ಲೇಖಕರ ವಿಚಿತ್ರಲಿಪಿ ಬರಹಗಳನ್ನು ಅರ್ಥೈಸಿಕೊಂಡು ಟೈಪಿಸುವುದು ಇನ್ನೊಂದು ಭಾಗವಾಗಿರುತ್ತದೆ.

ಡಿಟಿಪಿ ಮಾಡುವವರು, ಕರಡಚ್ಚು ತಿದ್ದುವವರು ಹೀಗೆ ಇಂದು ಎರಡು ವರ್ಗದವರನ್ನು ಕಾಣುತ್ತೇವೆ. ಕೆಲವು ಲೇಖಕರೇ ಸ್ವತಃ ಡಿಟಿಪಿ ಮಾಡುತ್ತಾರೆ. ಆದರೆ ಬಹುಪಾಲು ಲೇಖಕರು ಕೈಬರಹದಲ್ಲೇ ಹಸ್ತಪ್ರತಿ ಸಿದ್ಧಪಡಿಸುತ್ತಾರೆ. ಲೇಖಕರೇ ಡಿಟಿಪಿ ಮಾಡಿದಾಗ ಸಾಕಷ್ಟು ಅಚ್ಚಿನದೋಷಗಳು ಇರುವುದಿಲ್ಲ.

ಕರಡಚ್ಚು ತಿದ್ದುವವರು ಹಿಂದಿನ ಕಾಲದಲ್ಲಿ ಲೇಖಕರೇ ಆಗಿದ್ದು ಅವರು ವಿದ್ವಾಂಸರೂ ಆಗಿರುತ್ತಿದ್ದರು. ಹಾಗಾಗಿ ತಪ್ಪುಗಳೇ ಇಲ್ಲವೇನೋ ಎಂಬ ರೀತಿಯಲ್ಲಿ ಗ್ರಂಥಗಳು ನವೋದಯ ಸಾಹಿತ್ಯದ ಕಾಲದಲ್ಲಿ ಅಚ್ಚಾಗುತ್ತಿದ್ದವು. ಆಕಾಲದ ಕನ್ನಡದ ಪ್ರಸಿದ್ಧ ವಿದ್ವಾಂಸರಾದ ಮುಳಿಯತಿಮ್ಮಪ್ಪಯ್ಯ, ಸೇಡಿಯಾಪು ಕೃಷ್ಣಭಟ್ಟ, ಎಂ. ಗೋವಿಂದಪೈ, ಡಿ.ವಿ.ಜಿ., ಎ.ಆರ್.ಕೃ, ಡಿ.ಎಲ್.ಎನ್., ತೀನಂಶ್ರೀ, ಎಂ ಮರಿಯಪ್ಪಭಟ್, ಎಂ.ಆರ್.ಶ್ರೀ, ವಿ.ಸೀ., ಮೊದಲಾದ ವಿದ್ವಾಂಸರು ತಮ್ಮ ಕೃತಿಗಳ ಕರಡಚ್ಚನ್ನು ಹಲವಾರು ಬಾರಿ ತಾವೇ ಓದಿ ತಿದ್ದುತ್ತಿದ್ದರು. ಇಂದು ಅಂಥವರ ಸಂಖ್ಯೆ ತೀರಾ ಕಡಿಮೆ ಆಗಿದೆ.

ಅಚ್ಚಿನಯಂತ್ರಗಳಲ್ಲಿ ಸುಧಾರಣೆ ಆಗಿ ಆಧುನಿಕ ಮುದ್ರಣಯಂತ್ರಗಳು, ವಿದ್ಯುನ್ಮಾನ ಯಂತ್ರಗಳು ಬಂದು, ವಿದೇಶದ ಮುದ್ರಣದ ಕಲೆಯ ಪ್ರಭಾವದಿಂದ ನಾನಾಬಗೆಯ ಮುದ್ರಣದ, ವಿನ್ಯಾಸ, ರೀತಿನೀತಿಗಳು ಮುದ್ರಣಕಲೆಯಲ್ಲಿ ಕಂಡುಬರುತ್ತಿವೆ. ಅತ್ಯಂತ ಸುಂದರ ವಿನ್ಯಾಸ ಮುದ್ರಣದ ವರ್ಣರಂಜಿತ ಗ್ರಂಥಗಳು ಹೊರಬರುತ್ತಿವೆ. ಆದರೆ ಭಾಷೆಯ ವಿಷಯದಲ್ಲಿ, ಕರಡಚ್ಚು ತಿದ್ದುವುದರಲ್ಲಿ ಸುಧಾರಣೆಗಳು ಸಾಕಷ್ಟು ಆಗಿಲ್ಲ. ಇದಕ್ಕೆ ಮುಖ್ಯ ಕಾರಣ ಇಂದಿನ ಡಿಟಿಪಿಕಾರರಿಗೆ, ಕರಡಚ್ಚು ತಿದ್ದುವವರಿಗೆ ತರಬೇತಿ ಇಲ್ಲ. ಆಸಕ್ತಿ ಶ್ರದ್ಧೆಗಳಿಲ್ಲ. ಕೇವಲ ಹಣದ ದೃಷ್ಟಿಯಿಂದ ಕೆಲಸ ನಿರ್ವಹಿಸುತ್ತಾರೆ. ಪುಟಕ್ಕೆ ಇಷ್ಟು ಹಣ ಎಂದು ಗೊತ್ತುಮಾಡಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಹೆಚ್ಚು ಪುಟಗಳನ್ನು ಆದಷ್ಟು ಬೇಗ ಡಿಟಿಪಿ ಮಾಡಬೇಕು, ಆದಷ್ಟು ಬೇಗ ಹೆಚ್ಚು ಪುಟಗಳ ಕರಡು ತಿದ್ದಬೇಕು ಎಂಬ ಪ್ರವೃತ್ತಿಯಿಂದ ಅಚ್ಚಿನದೋಷಗಳನ್ನು ಹೇರಳವಾಗಿ ಕಾಣುತ್ತೇವೆ. ಅಷ್ಟೇ ಅಲ್ಲದೆ ನಾನಾ ಕಾರಣಗಳಿಂದ ಅನೇಕ ಮುದ್ರಕರು ಮೂರಕ್ಕಿಂತ ಹೆಚ್ಚುಬಾರಿ ಕರಡಚ್ಚು ತಿದ್ದಲು ಅವಕಾಶ ನೀಡುವುದಿಲ್ಲ ಮತ್ತು ಅಂತಿಮ ಕರಡಚ್ಚಿನ ದೋಷಗಳನ್ನು ಎಚ್ಚರಿಕೆಯಿಂದ ಪೂರ್ಣವಾಗಿ ಸರಿಪಡಿಸುವುದಿಲ್ಲ.

ಹೀಗೆ ಹತ್ತಾರು ಕಾರಣಗಳಿಂದ ಕರಡಚ್ಚು ತಿದ್ದುವುದರಲ್ಲಿ ಕನ್ನಡಭಾಷೆಯ ಜ್ಞಾನವನ್ನು ಸಾಕಷ್ಟು ನೀಡಲು ಒಂದು ಗ್ರಂಥ ಕನ್ನಡದಲ್ಲಿ ಅಗತ್ಯವಿದ್ದು ಪ್ರತ್ಯೇಕವಾಗಿ ಬರೆದ ಗ್ರಂಥ ಇಲ್ಲದಿರುವುದನ್ನು ಗಮನಿಸಿ ಆ ಬಗ್ಗೆ ನನಗಿರುವ ಹತ್ತಾರು ವರುಷಗಳ ಕರಡಚ್ಚು ತಿದ್ದುವ ಅನುಭವದಿಂದ ಈ ಕಿರುಗ್ರಂಥವನ್ನು ರಚಿಸಿದ್ದೇನೆ.

ಹೀಗೆ ಹತ್ತಾರು ಕಾರಣಗಳಿಂದ ಕರಡಚ್ಚು ತಿದ್ದುವುದರ ಬಗ್ಗೆ ಇರುವ ಸಮಸ್ಯೆಗಳನ್ನು ಕಂಡು ಆ ಬಗೆಗೆ ಒಂದು ಪರಿಚಯ ಮಾರ್ಗದರ್ಶನ ಗ್ರಂಥವನ್ನು, ಕರಡುತಿದ್ದುವವರಿಗೆ ಮತ್ತು ಡಿಟಿಪಿ ಮಾಡುವವರಿಗೆ ಉಪಯುಕ್ತವಾಗಿರುವ ಹಾಗೆ ರಚಿಸಬೇಕೆಂದು ಪ್ರಯತ್ನಿಸಿ ವಿಷಯಸಂಗ್ರಹ ಮಾಡುತ್ತಿದ್ದೆ.

ಇಂಥ ಸಂದರ್ಭದಲ್ಲಿ ಒಮ್ಮೆ ಮಿತ್ರರಾದ ಮತ್ತು ಪ್ರಸಿದ್ಧ ಪ್ರಕಾಶಕರಾದ ಪ್ರಕಾಶ್‌ಕಂಬತ್ತಳ್ಳಿ ಅವರು ವಿಶ್ವಪುಸ್ತಕ ದಿನಾಚರಣೆ ಸಂದರ್ಭದಲ್ಲಿ ಏರ್ಪಡಿಸಿದ ವಿಚಾರಗೋಷ್ಠಿಯಲ್ಲಿ ಕನ್ನಡದಲ್ಲಿ ಕರಡು ತಿದ್ದುವುದರ ಬಗ್ಗೆ ಕೆಲವು ವಿಚಾರಗಳನ್ನು ಮಂಡಿಸಲು ಆಹ್ವಾನಿಸಿದರು.

ಆಗ ಈ ಗ್ರಂಥದ ಸ್ಥೂಲರೂಪರೇಖೆಗಳು ಮೂಡಿದವು. ಅದಕ್ಕನುಸಾರವಾಗಿ ಗ್ರಂಥ ರಚನೆ ಮಾಡಲು ಪ್ರಯತ್ನಿಸುತ್ತಿದ್ದಾಗ, ಈ ವಿಷಯ ತಿಳಿದ ಅಚ್ಚಿನಕಲೆಯಲ್ಲಿ ನಿಷ್ಣಾತರು, ಕನ್ನಡಭಾಷೆ-ಸಾಹಿತ್ಯದಲ್ಲಿ ಪರಿಣಿತರಾದವರು, ಮುದ್ರಣವಿಚಾರದಲ್ಲಿ ನುರಿತವರೂ ಆತ್ಮೀಯ ಮಿತ್ರರಾದ ಜೆ.ಎನ್. ಶಾಮರಾವ್ ಅವರು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿರುವ ಪುಸ್ತಕಲೋಕ ನಿಯತಕಾಲಿಕೆಯಲ್ಲಿ ಸಂಪಾದಕರಾಗಿದ್ದ ಅವರು ನನ್ನಿಂದ ಕರಡಚ್ಚು ತಿದ್ದುವಿಕೆ ಬಗ್ಗೆ ಹಲವಾರು ಲೇಖನಗಳನ್ನು ಬರೆಯಿಸಿ ಪ್ರಕಟಿಸಿದರು. ಅವರ ಒತ್ತಾಯ, ಪ್ರೋತ್ಸಾಹ, ಮಾರ್ಗದರ್ಶನದಿಂದಲೇ ಈ ಗ್ರಂಥ ರೂಪುಗೊಂಡಿದೆ ಅವರಿಗೆ ನಾನು ಋಣಿ. ಈ ಗ್ರಂಥದ ಲೇಖನಮಾಲೆಯನ್ನು ಓದಿದ ನಾಡಿನ ಪ್ರಸಿದ್ಧ ವಿದ್ವಾಂಸರಾದ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಈ ಲೇಖನಗಳೆಲ್ಲ ಗ್ರಂಥವಾಗಿ ಪ್ರಕಟವಾಗಬೇಕು ಮತ್ತು ಕನ್ನಡಕ್ಕೆ ಇಂದು ಅತ್ಯಗತ್ಯ ಗ್ರಂಥ ಎಂದು ಪ್ರೋತ್ಸಾಹಿಸಿದರು. ಈ ವಿಚಾರದಲ್ಲಿ ಅವರು ಬರೆದ ಲೇಖನಗಳನ್ನು ಬಳಸಿಕೊಳ್ಳಲು ಅನುಮತಿಸಿದರು. ಅವರಿಗೆ ಆಭಾರಿ ಆಗಿದ್ದೇನೆ.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಬಂಜಗೆರೆ ಜಯಪ್ರಕಾಶರು ಮತ್ತು ಪ್ರಕಟನ ಸಮಿತಿಯವರ ಗಮನಕ್ಕೆ ತಂದಾಗ ಸಂತೋಷದಿಂದ ಪ್ರಾಧಿಕಾರದಿಂದ ಪ್ರಕಟಿಸಲು ಒಪ್ಪಿದರು. ಅವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಗ್ರಂಥ ರಚನೆಗೆ ಕನ್ನಡ ಭಾಷಾಶಾಸ್ತ್ರದ ಗ್ರಂಥಗಳು ಕೋಶಗಳು, ವ್ಯಾಕರಣ, ಛಂದಸ್ಸು, ಅಲಂಕಾರ, ಗ್ರಂಥ ಸಂಪಾದನಾಶಾಸ್ತ್ರ ಗ್ರಂಥಗಳು ಮತ್ತು ಈ ಕ್ಷೇತ್ರಗಳಲ್ಲಿ

ಪರಿಣತರಾದವರ ಬರಹಗಳ ನೆರವನ್ನು ಪಡೆದಿದ್ದೇನೆ. ಆ ಎಲ್ಲ ಲೇಖಕರಿಗೆ, ಸಾಹಿತಿಗಳಿಗೆ, ವಿದ್ವಾಂಸರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥದ ಹಸ್ತಪ್ರತಿಯನ್ನು ತಿದ್ದುವಲ್ಲಿ ಮತ್ತು ಪರಿಷ್ಕರಿಸುವಲ್ಲಿ ಮೊದಲಿಗೆ ನೆರವಾದವರು ಲೇಖನರೂಪದಲ್ಲಿ ಈ ಗ್ರಂಥದ ಕೆಲವು ಭಾಗಗಳನ್ನು ಪುಸ್ತಕ ಲೋಕದಲ್ಲಿ ಪ್ರಕಟಿಸಿದವರು ಮಿತ್ರರೂ, ಮುದ್ರಣತಜ್ಞರೂ ಆದ ಜೆ.ಎನ್. ಶಾಮರಾವ್ ಅವರು. ಅವರಿಗೆ ನಾನು ಋಣಿ ಆಗಿದ್ದೇನೆ. ಅನಂತರ ಕರಡಚ್ಚುಗಳನ್ನು ತಿದ್ದುವುದರ ಜತೆಗೆ ಹಿನ್ನುಡಿ ಬರೆದುಕೊಟ್ಟು ಮುದ್ರಣಕಾರ್ಯದಲ್ಲಿ ನೆರವಾಗಿ ಉಪಕರಿಸಿರುವ ಗೆಳೆಯರು, ವಿದ್ವಾಂಸರಾದ ಡಾ. ಬಿ.ಎಸ್. ಪ್ರಣತಾರ್ತಿಹರನ್ ಅವರ ಸ್ನೇಹವಿಶ್ವಾಸಗಳಿಗೆ ನಾನು ಸದಾ ಆಭಾರಿ. ಕೆಲವು ಸಲಹೆ ಸೂಚನೆಗಳನ್ನು ಗೆಳೆಯರಾದ ವಿದ್ವಾಂಸ ಎಸ್. ಕಾರ್ತಿಕ್ ಮತ್ತು ಗಣಕ ಪರಿಷತ್ತಿನ ಜಿ.ಎನ್. ನರಸಿಂಹಮೂರ್ತಿ ಅವರು ನೀಡಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಮಹದೇವಯ್ಯನವರಿಗೂ, ಶ್ರೀ ಲಕ್ಷ್ಮಣ್ ಅವರಿಗೂ, ಕಚೇರಿಯ ಸಿಬ್ಬಂದಿವರ್ಗಕ್ಕೂ ಅವರ ಪ್ರೋತ್ಸಾಹಕ್ಕಾಗಿ ಆಭಾರಿಯಾಗಿದ್ದೇನೆ.

ಪತ್ರಿಕೇಲಿ ಮೊದಲಿಗೆ ಲೇಖನಮಾಲೆಯಾಗಿ ಅನಂತರ ಬಿಡಿಬಿಡಿಯಾಗಿ ಕೆಲವು ಲೇಖನಗಳು ಪ್ರಕಟವಾದ್ದರಿಂದ ಕೆಲವು ವಿಚಾರಗಳು ಪುನರುಕ್ತಿಯಾಗಿವೆ. ಓದುಗರು ಇದನ್ನು ಗಮನಿಸಬೇಕು.

ಹಸ್ತಪ್ರತಿಯನ್ನು ಡಿಟಿಪಿ ಮಾಡಿ ಅಚ್ಚು ಮಾಡಲು ಮೈಸೂರಿನ ಪ್ರಕಾಶಕರೂ, ಮುದ್ರಕರೂ ಆದ ತಾರಾ ಪ್ರಿಂಟರ್ಸ್ ಅವರು ಸಕಾಲದಲ್ಲಿ ಸುಂದರವಾಗಿ ಗ್ರಂಥವನ್ನು ಹೊರತಂದಿದ್ದಾರೆ. ಅವರಿಗೆ ನನ್ನ ವಂದನೆಗಳು.

ಈ ಗ್ರಂಥರಚನೆ ಕಾಲದಲ್ಲಿ ಹಲವಾರು ವಿಧಗಳಲ್ಲಿ ನೆರವಾದ ನನ್ನ ಪತ್ನಿ ಎಂ.ಆರ್. ಲಕ್ಷ್ಮೀದೇವಿಯನ್ನು, ದೂರದ ಅಮೆರಿಕೆಯಲ್ಲಿರುವ, ಪುಸ್ತಕವನ್ನು ಬೇಗ ಬರಿ ಬೇಗ ಬರಿ ಎಂದು ಹುರಿದುಂಬಿಸಿದ ಮಗಳು ಡಾ. ಕ್ಷಮಾ ಅಶ್ವತ್ಥಳನ್ನು ನಾನು ನೆನೆಯಲೇಬೇಕು.

ಕನ್ನಡದಲ್ಲಿ ಕರಡಚ್ಚು ತಿದ್ದುವ ಉದ್ಗ್ರಂಥವೊಂದು ಬರಲು ಈ ಗ್ರಂಥ ನಾಂದಿಯಾಗಲಿ ಕನ್ನಡಿಗರು ಈ ಗ್ರಂಥವನ್ನು ಕೊಂಡು ಓದಿ ಇದರ ಪ್ರಯೋಜನ ಪಡೆಯಲಿ ಎಂದು ಆಶಿಸುತ್ತೇನೆ. ಈ ಪುಸ್ತಕವನ್ನು ಪ್ರಕಾಶನಗೊಳಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಬಂಜಗೆರೆ ಜಯಪ್ರಕಾಶ್ ಅವರಿಗೂ, ಸಮಿತಿ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ತಾ. 16-12-2016

ಜಿ. ಅಶ್ವತ್ಥನಾರಾಯಣ
ಬೆಂಗಳೂರು
ದೂ: 080-26637783

ಪರಿವಿಡಿ

ಅಧ್ಯಾಯ : 1

ಕರಡು ತಿದ್ದುವಿಕೆ : ಕೆಲವು ವಿಚಾರಗಳು

ಕನ್ನಡ ರತ್ನಕೋಶ (ಕಸಾಪ)ದಲ್ಲಿ ಕರಡಚ್ಚು ಎಂಬ ಪದ ಅಕಾರಾದಿಯಲ್ಲಿಲ್ಲ. ಆದರೆ ಕೆಲವು ಉಪಯುಕ್ತ ಮಾಹಿತಿಗಳು ಎಂಬ ಅನುಬಂಧದ ವಿಭಾಗದಲ್ಲಿ ಕರಡಚ್ಚು ತಿದ್ದುಪಡಿ ಚಿಹ್ನೆಗಳು ಎಂಬ ಶೀರ್ಷಿಕೆ ಕೊಟ್ಟು ೨೯ ಕರಡಚ್ಚು ಚಿಹ್ನೆಗಳನ್ನು, ಅವುಗಳ ಅರ್ಥವನ್ನು ಕೊಟ್ಟಿದ್ದಾರೆ. ಅನೇಕರು ಈ ಚಿಹ್ನೆಗಳನ್ನು ಗಮನಿಸಿ ಕರಡಚ್ಚು ತಿದ್ದುವುದನ್ನು ಕಲಿತುಕೊಂಡಿದ್ದಾರೆ.

ಕರಡಚ್ಚು ತಿದ್ದುವಿಕೆ ಎಂಬ ಮಾತಿನಲ್ಲಿ ಮುಖ್ಯವಾಗಿ ಮೂರು ಮಾತುಗಳಿವೆ. ಕರಡು, ಅಚ್ಚು, ತಿದ್ದು ಎಂಬ ಪದಗಳು. ನಿಘಂಟಿನಲ್ಲಿ ಈ ಪದಗಳಿಗೆ ಬೇರೆ ಬೇರೆ ಸಾಮಾನ್ಯ ಅರ್ಥಗಳಿವೆ. ಆದರೆ ಈ ಮೂರು ಪದಗಳು ಸೇರಿ ಸಂಯುಕ್ತಪದವಾದಾಗ ಪಾರಿಭಾಷಿಕಪದವಾಗಿದೆ. ಕರಡಚ್ಚು ತಿದ್ದುವುದು (ಪ್ರೂಫ್ ರೀಡಿಂಗ್) ಎಂಬುದು ಮುದ್ರಣಕಲೆಯ ವ್ಯಾಸಂಗದಲ್ಲಿ ಕಲಿಯಲೇಬೇಕಾದ ವಿಷಯವಾಗಿದೆ.

ಜಿ. ವೆಂಕಟಸುಬ್ಬಯ್ಯನವರ ಪ್ರಿಸಂ ಕನ್ನಡ ಕ್ಲಿಷ್ಟ ಪದಕೋಶದಲ್ಲಿ (ಪುಟ. ೮೩) ಕರಡು (<ಮರಾ.ಖರಡಾ) (ನಾ) ಕಚ್ಚಾಪ್ರತಿ, ನಕಲು, ಕರಡು, ಕಚ್ಚಾಲೆಕ್ಕದ ಟಿಪ್ಪಣಿ, ಕರಡಚ್ಚು (ದೇ) (ನಾ) ಮುದ್ರಣದ ಕಚ್ಚಾಪ್ರತಿ ಎಂದಿದ್ದಾರೆ. ಇಲ್ಲಿ ಕರಡು, ಕರಡಚ್ಚು ಎರಡರ ಅರ್ಥ ಬೇರೆ ಬೇರೆ ಎಂದು ತಿಳಿಸಿದ್ದಾರೆ. ಆದರೆ ಕರಡು, ಕರಡಚ್ಚು ಎಂಬುದನ್ನು ಒಂದೇ ಅರ್ಥದಲ್ಲಿ ಹಲವರು ಬಳಸುತ್ತಾರೆ. ಇದು ಸರಿಯಲ್ಲ ಎನ್ನಬೇಕಾಗಿದೆ.

ಕರಡಚ್ಚು ತಿದ್ದುವಿಕೆ ಎಂದರೇನು?

ಇಂಗ್ಲಿಷಿನಲ್ಲಿ Proof reading (ಪ್ರೂಫ್ ರೀಡಿಂಗ್) ಎಂಬ ಪದಕ್ಕೆ ಕನ್ನಡದಲ್ಲಿ ಹೆಚ್ಚಾಗಿ ಬಳಸುವ ಪದ ಕರಡಚ್ಚು ತಿದ್ದುವಿಕೆ. ಆದರೆ ಕರಡು ತಿದ್ದುವಿಕೆ, ಕರಡಚ್ಚು ತಿದ್ದುಪಡಿ, ಕರಡಚ್ಚು ತಿದ್ದುವಿಕೆ, ಕರಡೋಲೆ ತಿದ್ದುವುದು, ಅಚ್ಚಿನೋಲೆ ತಿದ್ದುವಿಕೆ ಮೊದಲಾದ ಪದಗಳೂ ಬಳಕೆಯಲ್ಲಿವೆ.

ಪ್ರೂಫ್ ರೀಡಿಂಗ್ ಪದಕ್ಕೆ ನಿಘಂಟುಗಳ ಪ್ರಕಾರ ಬಗೆಬಗೆಯ ಅರ್ಥಗಳಿವೆ.

ಕನ್ನಡ ನಿಘಂಟು (ಕಸಾಪ. ಪುಟ. ೧೫೩೪) ವಿನಲ್ಲಿ ವಿವರಣೆ ಹೀಗಿದೆ.

ಕರಡು, ಕರಡೆ, ಖರಡು ೧. ಒರಟಾದ, ಒಡ್ಡಾದ, ನಯವಿಲ್ಲದ (ನಾ). ೨. ದೋಷ, ಕಳಂಕ.

ಕರಡೆ : ಕರಡೆ ಕಾಗದ (ಒರಟು ಕಾಗದ, ಉರುಟು ಕಾಗದ, ಕೋರಿ ಕಾಗದ) ಕರಡು > ಕರಡೆ.

ಕರಡೋಲೆ : ಅಚ್ಚಿನ ಕರಡು ಪ್ರತಿ

ಕರಡೋಲೆಯೋದುಗ : ಕರಡೋಲೆಯನ್ನು ಓದಿ ತಪ್ಪು ತಿದ್ದುವವನು.

ಕರಡುಪ್ರತಿ : ಕಚ್ಚಾಪ್ರತಿ, ತಿದ್ದುಪಡಿ ಆಗಬೇಕಾದ ಪ್ರತಿ.

ಕರಡಚ್ಚು : ಮುದ್ರಣವಾದ ಕಚ್ಚಾಪ್ರತಿ.

ಪ್ರೂಫ್‌ರೀಡಿಂಗ್, ಪ್ರೂಫ್ ಷೀಟ್, ಪ್ರೂಫ್‌ರೀಡರ್, ಪ್ರೂಫ್‌ರೀಡ್, ಪ್ರೂಫ್ ಕರೆಕ್ಷನ್ ಮೊದಲಾದ ಪದಗಳು ಕನ್ನಡದ ಪದಗಳಿಗೆ ಮೂಲವಾಗಿವೆ. ಆ ಇಂಗ್ಲಿಷ್ ಪದಗಳ ಅನುವಾದಗಳೇ ಕನ್ನಡದಲ್ಲಿ ಕರಡಚ್ಚು ತಿದ್ದುವುದು. ಕರಡಚ್ಚು ತಿದ್ದಣೆ, ಕರಡಚ್ಚು ಓದಿ ತಪ್ಪುಗಳನ್ನು ತಿದ್ದುವುದು, ಕರಡಚ್ಚಿನ ಹಾಳೆ, ಅಂತಿಮ ಮುದ್ರಣಕ್ಕೆ ಮುಂಚೆ ತಿದ್ದುಪಡಿಗೆ ಒದಗಿಸಿದ ಹಾಳೆ (ಫೈನಲ್ ಪ್ರೂಫ್), ಕರಡುತಿದ್ದು, ಕರಡಚ್ಚು ತಿದ್ದು (ಕರಡು, ಕರಡಚ್ಚು ಪದಗಳನ್ನು ಒಂದೇ ಅರ್ಥದಲ್ಲಿ ಬಳಸಿದ್ದನ್ನು ಗಮನಿಸಿ) ಕರಡಚ್ಚು ತಿದ್ದುವವನು (ಳು) ಎಂಬ ಪದಗಳ ಅರ್ಥಗಳನ್ನು ಮೈವಿವಿ ಇಂ-ಕ. ನಿಘಂಟು, ಪ್ರಿಸಂ ಕ್ಲಿಷ್ಟ ಪದಗಳ ಕೋಶ ಮುಂತಾದವು ಕೊಟ್ಟಿವೆ. ಈ ಪದಗಳಷ್ಟೆ ಅಲ್ಲದೆ ಕರಡಚ್ಚು ತಿದ್ದುವ ಚಿಹ್ನೆಗಳೂ ಅವುಗಳ ಬಳಕೆಯ ರೀತಿಯೂ ಇಂಗ್ಲಿಷ್ ಪದ್ಧತಿಯಲ್ಲಿಯೇ ಕನ್ನಡಕ್ಕೆ ಬಂದಿದೆ. ಎಷ್ಟೋ ಕರಡಚ್ಚು ತಿದ್ದುಪಡಿ ಚಿಹ್ನೆಗಳಿಗೆ ಕನ್ನಡದಲ್ಲಿ ಸಮಾನಾರ್ಥಕ ಪದಗಳೇ ಇಲ್ಲ, ಇಂಗ್ಲಿಷ್ ಪದಗಳನ್ನೇ ಬಳಸುತ್ತೇವೆ.

ಕರಡಚ್ಚುಗಾರರ ಸಮಸ್ಯೆಗಳು : ಕರಡಚ್ಚು ತಿದ್ದುವುದು ಒಂದು ಕಲೆ. ಕರಡಚ್ಚು ತಿದ್ದುವ ಕಾರ್ಯದಲ್ಲಿ ಮೂವರ ಪಾತ್ರವಿದೆ. ಮೊಳೆ ಜೋಡಿಸುವವನು ಅಥವಾ ಡಿಟಿಪಿ ಮಾಡುವವನು, ಕರಡಚ್ಚು ತಿದ್ದುವವನು, ಅವನು ತೋರಿಸಿದ ಸರಿರೂಪಗಳನ್ನು ಮುದ್ರಣ ಪ್ರತಿಯಲ್ಲಿ ಅಳವಡಿಸುವವನು. ಈ ಮೂವರಲ್ಲಿ ಯಾರೊಬ್ಬರು ಕರ್ತವ್ಯಚ್ಯುತರಾದರೆ ಮುದ್ರಣದಲ್ಲಿ ದೋಷಗಳು ಉಳಿದೇ ಉಳಿಯುತ್ತವೆ. ಈ ಮೂವರೂ ಸಮನಾಗಿ ಸಮರ್ಥವಾಗಿ ಒಟ್ಟಿಗೆ ದಕ್ಷತೆಯಿಂದ ಕಾರ್ಯನಿರ್ವಹಿಸದೇ ಇರುವ ಸನ್ನಿವೇಶಗಳು ಹೆಚ್ಚಾಗಿ ಇರದು. ಕಿಸಾಗೋತಮಿ ಸಾವಿಲ್ಲದ ಮನೆಯಲ್ಲಿ ಸಾಸಿವೆ ತರಲು ಆಗದ ಹಾಗೆ ತಪ್ಪಿಲ್ಲದ ಮುದ್ರಣದ ಪುಸ್ತಕ, ಪತ್ರಿಕೆಯನ್ನು ಕಾಣುವುದು ಅತಿ ದುರ್ಲಭವಾಗಿದೆ.

ಮುದ್ರಣ ದೋಷಗಳು ಏಕಾಗುತ್ತವೆ ಎಂಬ ವಿಚಾರ ಚಿಂತನೀಯವಾಗಿದೆ. ಮುಖ್ಯವಾಗಿ, ಕರಡಚ್ಚು ತಿದ್ದುಗಾರರು ಎಂದರೆ ತಪ್ಪಿಲ್ಲ. ಏಕೆಂದರೆ ನಮ್ಮಲ್ಲಿ ಕರಡಚ್ಚುಗಾರರು ಬಹುಮಂದಿ ಹವ್ಯಾಸಿ ಕರಡಚ್ಚುಗಾರರು. ಎಲ್ಲೋ ಒಂದಿಬ್ಬರು ವೃತ್ತಿ

ಕರಡಚ್ಚುಗಾರರು. ಪ್ರತಿ ಕರಡಚ್ಚುಗಾರರಿಗೆ ಕೊಟ್ಟ ಸಂಬಳವಾಗಲಿ ಹವ್ಯಾಸಿ ಕರಡಚ್ಚುಗಾರರಿಗೆ ಕೊಡುವ ಪುಟದ ದರವಾಗಲಿ ತೀರಾ ಕನಿಷ್ಠಮಟ್ಟದ್ದು. ಹಾಗೆ ನೋಡಿದರೆ ಲೇಖಕನಿಗಿಂತ ಹೆಚ್ಚು ತಿಳಿವಳಿಕೆ ಅನುಭವ ಇರುವ ವಿಷಯ ಪರಿಣತ, ಭಾಷಾ ಪರಿಚಿತ ಕರಡಚ್ಚುಗಾರನಾಗಿರುತ್ತಾನೆ. ಅವನಿಗೆ ಲೇಖಕನಿಗೆ ದೊರೆಯುವಷ್ಟು ಸಂಭಾವನೆ ದೊರೆಯುವುದಿಲ್ಲ. ತುಂಡು ಗುತ್ತಿಗೆಯಂತೆ, ದಿನಗೂಲಿಯಂತೆ ಪುಟದರದಲ್ಲಿ ಪ್ರಕಾಶಕರು ನೀಡುತ್ತಾರೆ. ನಮ್ಮಲ್ಲಿ ಬುದ್ಧಿಮತ್ತತೆಯ ಶೋಷಣೆಗಳಲ್ಲಿ ಇದೊಂದು. ಇದರ ಪರಿಣಾಮವಾಗಿ ಇಂದು ಸಮರ್ಥ, ದಕ್ಷ, ಅನುಭವಿ ಕರಡಚ್ಚುಗಾರರು ಅತ್ಯಲ್ಪಮಂದಿ ಇದ್ದಾರೆ. ಹಾಗಾಗಿ ಕರಡಚ್ಚು ತಿದ್ದುವ ಕಚ್ಚಾ ಪರಿಣಿತರಿಂದ ಹೆಚ್ಚಾಗಿ ಮುದ್ರಣ ದೋಷಗಳು ಹೆಚ್ಚಾಗಿರುವುದು ವಾಸ್ತವಸಂಗತಿ. ಎರಡು : ಕರಡಚ್ಚುಗಾರರಿಗೆ ತಿದ್ದಲುಕೊಡುವ ಕಾಲಾವಧಿ ಸಾಕಾಗದು ಮತ್ತು ಕರಡಚ್ಚು ಹಾಳೆಗಳನ್ನು ಕೊಟ್ಟಾಗ ಅದರಲ್ಲಿ ತಪ್ಪುಗಳನ್ನು ತಿದ್ದಿ ಗುರುತಿಸಲು ಸಾಕಷ್ಟು ಖಾಲಿಜಾಗ ಬದಿಗಳಲ್ಲಿ ಇರುವುದಿಲ್ಲ. ಇನ್ನು ಲೇಖಕರು ಕೊಡುವ ಹಸ್ತಪ್ರತಿ ನೆರಳಚ್ಚು ಪ್ರತಿ ಆಗಿದ್ದರೆ ಸರಿಯಾಗಿ ನಕಲಾಗಿರುವುದಿಲ್ಲ. ಹಸ್ತಪ್ರತಿ ಆಗಿದ್ದರೆ ಲಿಪಿವಕ್ರತೆಯಿಂದ ಓದಲು ಕಷ್ಟವಾಗಿರುತ್ತದೆ. (ಬಂಗಾಳಿಯಿಂದ ಕನ್ನಡಕ್ಕೆ ನಿಬಂಧಮಾಲಾ ಅನುವಾದಿಸಿದ ಎ.ಆರ್. ಕೃಷ್ಣಶಾಸ್ತ್ರಿಗಳು ಠಾಗೂರರ ಹಸ್ತಪ್ರತಿಯನ್ನು ಓದಲು ಬಹಳ ಶ್ರಮಿಸಿದರಂತೆ.) ಲೇಖಕರ ಭಾಷಾಪಾಂಡಿತ್ಯದ ಕೊರತೆಯಿಂದ ಹೇರಳ ದೋಷಗಳಿದ್ದು ಅದನ್ನು ಡಿಟಿಪಿ ಮಾಡುವವರಿಗೆ ಸರಿಯಾಗಿ ಓದಲಾಗದೆ ಕರಡಚ್ಚು ಅಪಾರ ತಪ್ಪುಗಳಿಂದ ಕೂಡಿರುತ್ತದೆ. ಆಗ ಮೂರು ಸಲ ಅಲ್ಲ ಆರು ಸಲ ತಿದ್ದಿದರೂ ದೋಷಗಳು ಉಳಿದಿರುತ್ತವೆ.


ನಮ್ಮಲ್ಲಿ ಎಷ್ಟೋ ಜನಕ್ಕೆ ಹಸ್ತಪ್ರತಿಗಳನ್ನು ಸರಿಯಾಗಿ ಓದಿಕೊಂಡು ಟೈಪಿಸಲು ಬರುವುದಿಲ್ಲ. ಏಕೆಂದರೆ ಅವರಿಗೆ ಕನ್ನಡ ಭಾಷಾಜ್ಞಾನ, ವ್ಯಾಕರಣಗಳ ಪ್ರಾಥಮಿಕ ಸಂಗತಿಗಳ ಅರಿವೂ ಇಲ್ಲ. ಕಂಪ್ಯೂಟರಿನಲ್ಲಿ ಟೈಪಿಸುವ ಕೆಲಸಕ್ಕೆ ಬರುವವರಲ್ಲಿ ಬಹುಮಂದಿಗೆ ಕೇವಲ ಕೀಲಿಮಣೆ ಬಳಸುವುದಷ್ಟೆ ಗೊತ್ತು. ಕನ್ನಡ ಭಾಷೆ ವ್ಯಾಸಂಗ, ಗಂಧ ಇಲ್ಲದವರಾಗಿದ್ದಾರೆ. ಎಷ್ಟೋ ಜನ ಅನ್ಯಭಾಷಿಕರಾಗಿದ್ದಾರೆ. ಇವರಿಗೆ ಕನ್ನಡ ಲಿಪಿ-ಭಾಷೆಯ ಪೂರ್ಣ ಪರಿಚಯವೇ ಇಲ್ಲ.

ಇನ್ನು ಎಷ್ಟೋ ಕಡೆ ಮೊದಲ ಕರಡಚ್ಚನ್ನು ಓದುವಾಗ ಹಸ್ತಪ್ರತಿಯನ್ನು ಓದಲು ಇನ್ನೊಬ್ಬ ವ್ಯಕ್ತಿ ಇರಬೇಕು. ಆದರೆ ಇರುವುದಿಲ್ಲ; ಎರಡನ್ನೂ ಒಬ್ಬರೇ ಓದುವುದರಿಂದ ಹಸ್ತಪ್ರತಿಯ ಕೆಲವು ಭಾಗಗಳು ಬಿಟ್ಟುಹೋಗುವ ಸಂದರ್ಭಗಳಿರುತ್ತವೆ.

ಕರಡಚ್ಚುಗಾರರ ಮತ್ತೊಂದು ಕಷ್ಟ ಎಂದರೆ ಲೇಖಕರ ನಿರ್ಬಂಧದ ನಿಯಮ. ಕೆಲವು ಲೇಖಕರು 'ನಾವು ಬರೆದುದನ್ನು ಏನೂ ಬದಲಿಸಬಾರದು' ಎಂದು ಕಟ್ಟಪ್ಪಣೆ

ಮಾಡಿರುತ್ತಾರೆ. ಎಷ್ಟೋಸಲ ಕರಡಚ್ಚುಗಾರರು ಲೇಖಕರಿಗಿಂತ ಪಾಂಡಿತ್ಯವುಳ್ಳವರಾಗಿರುತ್ತಾರೆ, ಅನುಭವಿಗಳಾಗಿರುತ್ತಾರೆ. ಅಂಥ ಸಂದರ್ಭದಲ್ಲಿ ತಿದ್ದದೆ ಇರುವುದು ಹೇಗೆ? ಇದೊಂದು ಸಮಸ್ಯೆ.

ಲೇಖಕರೇ ಕರಡಚ್ಚುಗಾರರಾಗಿ ತಿದ್ದುವಾಗ ಈ ಸಮಸ್ಯೆ ಇರುವುದಿಲ್ಲ. ಆದರೆ ಎಲ್ಲ ಲೇಖಕರಿಗೂ ಕರಡಚ್ಚು ತಿದ್ದುವುದು ಬರುವುದಿಲ್ಲ. ಇನ್ನು ವಿದ್ವಾಂಸರ ಲೇಖನಗಳನ್ನು ಸಾಮಾನ್ಯರು ತಿದ್ದಿದಾಗ ಇಲ್ಲದ ದೋಷಗಳು ಉಂಟಾಗುತ್ತವೆ. ಕರಡಚ್ಚುಗಾರರು ಕರಡು ತಿದ್ದಲು ಸಾಕಷ್ಟು ಸಮಯ ಇಲ್ಲದೆ ಅವಸರದಲ್ಲಿ ತಿದ್ದಿದಾಗಲೂ ದೋಷಗಳು ಉಂಟಾಗುತ್ತವೆ, ಇಲ್ಲವೇ ದೋಷಗಳು ಉಳಿಯುತ್ತವೆ. ಕರಡಚ್ಚು ತಿದ್ದುವ ಜಾಗ ಏಕಾಂತವಾಗಿರಬೇಕು. ಅನೇಕ ಕಡೆಗಳಲ್ಲಿ ಜನ ಬಂದು ಹೋಗುವ ಜಾಗ ಆಗಿದ್ದು ಇತರರು ಮಾತಾಡಿಸಿದಾಗ ತಪ್ಪುಗಳು ಆಗಲು ಅವಕಾಶ ಆಗುತ್ತದೆ. ಇನ್ನು ಕರಡಚ್ಚು ತಿದ್ದುಗಾರರಲ್ಲಿ ಅನೇಕರಿಗೆ ಇಂಗ್ಲಿಷಿನಲ್ಲಿರುವ ಕರಡಚ್ಚು ಸಂಕೇತಗಳೂ ಅವುಗಳ ಬಳಕೆ ನಿಯಮಗಳು ಸರಿಯಾಗಿ ತಿಳಿದಿರುವುದಿಲ್ಲ. ಕೆಳಗಿನ ಸಂಕೇತ, ವಿವರಣೆ ಗಮನಿಸಿ ಇವುಗಳನ್ನು ಎಲ್ಲ ಕರಡಚ್ಚುಗಾರರು ಸರಿಯಾಗಿ ಬಳಸುವುದಿಲ್ಲ.



Set in boldface CAPITALS
Superior letter
Inferior figure

Position

Move to right
Move to left
Center
Lower letters or words
Raise letters or words
Straighten type (horizontally
Align type (vertically)
Transpose
Transpose (order letters or or words)

Spacing

Insert lead (space) between lines
Take out lead
Close up: take out space
Close up partly: leave

ಎಲ್ಲ ದೋಷಗಳಿಗೂ ಕರಡಚ್ಚುಗಾರರೇ ಹೊಣೆಯಲ್ಲ. ಉದಾಹರಣೆಗೆ, ಅಂತಿಮ ಕರಡನ್ನು ತಿದ್ದಿದ ಮೇಲೆ ಉಳಿದ ಕೆಲವೇ ತಪ್ಪುಗಳನ್ನು ತಿದ್ದಿದಾಗ ಅದನ್ನು ನಾವು ಸರಿಪಡಿಸಿಹಾಕಿಕೊಳ್ಳುತ್ತೇವೆ, ನೀವೇನೂ ಚಿಂತಿಸಬೇಡಿ ಎನ್ನುತ್ತಾರೆ ಮುದ್ರಣಕಾರರು. ಕೆಲವೊಮ್ಮೆ ಮಿಷನ್ ಪ್ರೂಫ್‌ನ್ನು ನೋಡಿ ಯಂತ್ರದ ಮೇಲಿನ ಪ್ರತಿಯಲ್ಲಿ ದೋಷಗಳನ್ನು ತಿದ್ದಿದೆಯೇ ಇಲ್ಲವೇ ನೋಡಲಾಗದೆ, ಮುದ್ರಕರು ತಿದ್ದದೆ ತಪ್ಪುಗಳು ಹಾಗೆಯೇ ಉಳಿದುಬಿಡುತ್ತವೆ.

ಅನೇಕಸಲ ಕರಡು ತಿದ್ದುಗಾರರು ಸಾಲಿನ ಕೊನೆಯಲ್ಲಿ ಪದಚ್ಛೇದ ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಗಮನಿಸುವುದಿಲ್ಲ ಹಾಗಾಗಿ ಕಾರ್ಯಕ್ರ-ಮಗಳನ್ನು ಮಂಗಳಾ-ರತಿಯನ್ನು ಇತ್ಯಾದಿ ಅರ್ಥಹೀನವಾಗಿ ಪದಚ್ಛೇದವಾಗಿರುವುದನ್ನು ಕಾಣಬಹುದು. ಇಂಥ ಸಾಲಿನ ಕೊನೆಯ ಪದಚ್ಛೇದಗಳಲ್ಲಿ ದೋಷವಿಲ್ಲದೆ ಅಚ್ಚಾದ ಗ್ರಂಥ ಎಂದರೆ ನನ್ನ ಗಮನಕ್ಕೆ ಬಂದಿದ್ದು ಚಿದಾನಂದಮೂರ್ತಿ ಅವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಮಹಾಪ್ರಬಂಧ. ಆದರೆ ಈ ಗ್ರಂಥದ ಪುನರ್ಮುದ್ರಣದಲ್ಲಿ ಈ ಶುದ್ಧತೆ ಕಾಣುವುದಿಲ್ಲ. ಇನ್ನೊಂದು ಮುದ್ರಿತ ನಿರ್ದೋಷಗ್ರಂಥ ಎ.ಆರ್.ಕೃ. ಅವರ ವಚನಭಾರತ. ಇಂದಿನ ದಿನಗಳಲ್ಲಿ ನಿರ್ದೋಷವಾಗಿ ಅಚ್ಚಾದ ಗ್ರಂಥಗಳು ಕನ್ನಡದಲ್ಲಿ ಅತ್ಯಪರೂಪ.

ಅನೇಕ ಸಂದರ್ಭಗಳಲ್ಲಿ ಕೇವಲ ಅಕ್ಷರದೋಷ, ಪದದೋಷಗಳನ್ನಷ್ಟೇ ಗಮನಿಸುವುದರ ಜತೆಗೆ ವಿಷಯದೋಷವನ್ನೂ ಗಮನಿಸಬೇಕು. ಇದಕ್ಕೆ ಅಗತ್ಯವಾದ ವಿಷಯದ ಶಾಸ್ತ್ರಜ್ಞಾನ, ಪಾರಿಭಾಷಿಕ ಪದಗಳ ಜ್ಞಾನ ಇರುವುದಿಲ್ಲ. ನನ್ನ ಒಂದು ಲೇಖನವನ್ನು ಅಚ್ಚುಮಾಡಿದ ಸಂಸ್ಥೆಯವರು ರೈಸರು ಹೇಳಿದಂತೆ ಎಂಬ ಮಾತನ್ನು ರೈತರು ಹೇಳಿದಂತೆ ಎಂದು ಅಚ್ಚು ಮಾಡಿದ್ದರು. ಭಾಷಣದ ಧ್ವನಿಮುದ್ರಣವನ್ನು ವಿದ್ಯಾರ್ಥಿಗಳಿಂದ ಲಿಪೀಕರಣ ಮಾಡಿಸಿದ್ದರು. ಪಾಪ ಆ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ ಚರಿತ್ರೆಯ ಪರಿಚಯ ಹೇಗಿರಲು ಸಾಧ್ಯ?

ಕನ್ನಡದಲ್ಲಿ ಇಂದು ಶಾಸ್ತ್ರಗ್ರಂಥಗಳ ಮತ್ತು ವಿಜ್ಞಾನಗ್ರಂಥಗಳ ಕರಡು ತಿದ್ದುವವರು ಸಿಗುವುದು ಕಷ್ಟ. ಏಕೆಂದರೆ ವ್ಯಾಕರಣ, ಸಂಗೀತ, ಉಪನಿಷತ್, ಭೌತವಿಜ್ಞಾನ, ಗಣಿತ, ಜ್ಯೋತಿಷ್ಯ ಇತ್ಯಾದಿ ಶಾಸ್ತ್ರಗ್ರಂಥಗಳ ಕರಡನ್ನು ತಿದ್ದುವವರಿಗೆ ಆಯಾ ಶಾಸ್ತ್ರ ಪರಿಚಯ ಅನಿವಾರ್ಯ. ಆ ರೀತಿ ಶಾಸ್ತ್ರಜ್ಞರಾದ ಕರಡಚ್ಚು ತಿದ್ದುವವರು ಸಿಗುವುದು ದುರ್ಲಭವಾಗಿದೆ.

ಜಿ.ಪಿ. ರಾಜರತ್ನಂ, ಡಿಎಲ್‌ಎನ್, ತೀನಂಶ್ರೀ, ಗೋವಿಂದ ಪೈ, ಡಿವಿಜಿ, ಎಲ‌ರ್‌ಕೃ ಮೊದಲಾದ ವಿದ್ವಾಂಸರು ತಮ್ಮ ಕೃತಿಗಳನ್ನು ತಾವೇ ತಿದ್ದುತ್ತಿದ್ದರು. ಅವರು ಬಹುಶಾಸ್ತ್ರವಿಶಾರದರಾಗಿದ್ದರು. ಇಂದು ಮುದ್ರಣಾಲಯಗಳಲ್ಲಿ, ಪತ್ರಿಕಾಲಯಗಳಲ್ಲಿ ಕರಡಚ್ಚು ತಿದ್ದುವವರಲ್ಲಿ ಬಹುಮಂದಿ ಹೊಸಗನ್ನಡ ಗದ್ಯದ ಕತೆ, ಕಾದಂಬರಿ, ನಾಟಕ ಪ್ರಬಂಧ ಇತ್ಯಾದಿ ಬರಹಗಳನ್ನು ತಿದ್ದುವವರೇ ಹೆಚ್ಚಾಗಿದ್ದಾರೆ. ಪತ್ರಿಕೋದ್ಯಮ ಶಿಕ್ಷಣದಲ್ಲಿ ತಜ್ಞರಾದವರು, ಶಾಸ್ತ್ರಜ್ಞರಾಗಿರುವವರು ಕರಡುತಿದ್ದುವವರನ್ನು ಸಿದ್ಧಪಡಿಸುವ ಕಾರ್ಯದಲ್ಲಿ ನಿರತರಾಗಿಲ್ಲ ಎಂದು ನನ್ನ ಎಣಿಕೆ.

ಕರಡಚ್ಚುಗಾರರು ಅಕ್ಷರ, ಪದ, ವಾಕ್ಯ, ತಿದ್ದುವುದರ ಜತೆಗೆ ಮತ್ತೊಮ್ಮೆ ಓದಿ ಅರ್ಥದೋಷಗಳನ್ನು ಹುಡುಕಿ ತಿದ್ದಬೇಕು. ಅನೇಕರು ಇದನ್ನು ಮಾಡುವುದಿಲ್ಲ.

ರಾಯಚೂರಿನಲ್ಲಿ ನನ್ನ ಭಾಷಣದ ಕಾರ್ಯಕ್ರಮವನ್ನು ಪತ್ರಿಕೆಯೊಂದು ಪ್ರಕಟಿಸಿದ್ದು ಹೀಗೆ: ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಇಂದು ಸಂಜೆ ನಗರದಲ್ಲಿ ಉಪವಾಸ ಮಾಡುತ್ತಾರೆ. (ಉಪನ್ಯಾಸ ಎನ್ನುವ ಬದಲು, ಉಪವಾಸ ಎಂಬ ಪದ ಅಚ್ಚಿಸಿದ್ದರು) ಅಕ್ಷರ ದೋಷವನ್ನಷ್ಟೆ ನೋಡಲು ಹೋದಾಗ ವಾಕ್ಯದೋಷ, ಅರ್ಥದೋಷ ಕಣ್ಣಿಗೆ ಬೀಳುವುದು ಕಷ್ಟ. ಅದನ್ನು ಪ್ರತ್ಯೇಕವಾದ ವಾಚನದಿಂದ ನೋಡಬೇಕು.

ಆಧುನಿಕ ಮುದ್ರಣ ಪದ್ಧತಿಯಲ್ಲಿ ಕಂಡುಬರುವ ದೊಡ್ಡ ದೋಷವೆಂದರೆ ಪದಗಳ ನಡುವೆ ತೆರಪು (space) ಕೊಡುವ ರೀತಿ. ಎಲ್ಲ ಪದಗಳ ನಡುವೆ ಸಮಾನ ತೆರಪು (ಈಕ್ವಲ್ ಸ್ಪೇಸ್) ಕೊಡುವುದರಿಂದ ಅರ್ಥಹೀನ ಪದವಿಭಜನೆ ಆಗಿ ಕನ್ನಡ ಭಾಷೆಯ ಸೊಗಸು ಜಾಯಮಾನ ಮಾಯವಾಗುತ್ತದೆ. ಈ ಬಗ್ಗೆ ಎಚ್ ನರಸಣ್ಣ ಅವರು ತಮ್ಮ 'ಮುದ್ರಣ ಸಮೀಕ್ಷೆ' ಗ್ರಂಥದಲ್ಲಿ (೧೯೭೦) 'ಕರಡುಪ್ರತಿ ತಿದ್ದುವ ವಿಧಾನ' ಲೇಖನದಲ್ಲಿ ಹೇಳಿರುವ ಮಾತಿದು : 'ಪದಗಳ ನಡುವೆ ತೆರವು ಕೊಡುವ ವಿಚಾರವಾಗಿ ಹೇಳುವುದಾದರೆ, ಇಂಗ್ಲಿಷಿನ ಪುಸ್ತಕಗಳಲ್ಲಿ ಪದಗಳ ನಡುವೆ ಈಕ್ವಲ್ ಸ್ಪೇಸ್, ಸಮಾನ ತೆರವು ಕೊಡಲಾಗುತ್ತದೆ, ಇದು ಕನ್ನಡ ಜಾಯಮಾನಕ್ಕೆ ಗೊತ್ತಿಲ್ಲ. ಕನ್ನಡ ಭಾಷೆಯಲ್ಲಿ ಪದಗಳ ಮಧ್ಯೆ ತೆರವು ಕೊಡುವಾಗ ಎಲ್ಲ ಕಡೆ ಸಮಾನ ತೆರವು ಇರಬೇಕಿಲ್ಲ. ಕೆಲವು ಪದಗಳ ಮಧ್ಯೆ ೧/೨M ಸ್ಥಳ ಬಿಟ್ಟರೆ ಕೆಲವು ಪದಗಳ ನಡುವೆ ೧/೪M ಸ್ಥಳ ಬಿಡುವುದು ಸೂಕ್ತ. ಈ ತೆರವು ಕೊಡುವ ಕೆಲಸ ಅರ್ಥಕ್ಕೆ, ಭಾವಕ್ಕೆ ತಕ್ಕಂತೆ ಇರುತ್ತದೆ. ಆ ಈ ಅಕ್ಷರಬಿಟ್ಟು ಉಳಿದ ಎರಡು ಅಥವಾ ಹೆಚ್ಚಿನ ಅಕ್ಷರಗಳ ಪದಗಳಲ್ಲಿ ಒಂದಕ್ಷರ ಬೇರೆಯಾಗಿ ಬರುವಂತೆ ಒಡೆಯಬಾರದು. ಕರಡಚ್ಚನ್ನು ತಿದ್ದುವ ತರಬೇತಿ ಇಲ್ಲದೆ ಬಹುಮಂದಿ ಕರಡಚ್ಚುಗಾರರು ತಮಗೆ ತಾವೇ ಅಲ್ಲಿ ಇಲ್ಲಿ ನೋಡಿ ಕಲಿತ ಏಕಲವ್ಯಗೋತ್ರದವರಾದ ಕಾರಣ ಕರಡಚ್ಚು ತಿದ್ದುವುದರಲ್ಲಿ ಒಂದು ಕ್ರಮವಿಲ್ಲದೆ ಎಷ್ಟೋ ಸಲ ಕರಡಚ್ಚು ತಿದ್ದುಗಾರರು ಬಳಸುವ ಚಿಹ್ನೆಗಳು ಅದನ್ನು ಅಚ್ಚಿನಲ್ಲಿ ಸರಿಪಡಿಸುವವರಿಗೆ ಸರಿಯಾಗಿ ಅರ್ಥವಾಗದೆ ಹಲವಾರು ತಪ್ಪುಗಳಾಗುತ್ತವೆ.

ಹೀಗೆ ಕರಡಚ್ಚು ತಿದ್ದುವವರಿಗೂ ಅದನ್ನು ಮುದ್ರಣದಲ್ಲಿ ಸರಿಪಡಿಸುವವರಿಗೂ ಸಮಸ್ಯೆಯೇ ಇಲ್ಲದ ಸಂದರ್ಭವೆಂದರೆ ಹಿಂದಿನಕಾಲದ ಮೊಳೆ ಜೋಡಿಸುವ ಪದ್ಧತಿಯಲ್ಲಿ ಕೆಲವು ವಿದ್ವಾಂಸರು ಮುದ್ರಕರಿಗೆ ತಾವೇ ಮೊಳೆ ಜೋಡಿಸಿಕೊಡುತ್ತಿದ್ದುದು. ಉದಾಹರಣೆಗೆ, ಹೊಳೆಕಲ್ಲು ನರಸಿಂಹಯ್ಯನವರ ವಿಚಾರದರ್ಪಣ ಪ್ರೆಸ್ ಬೆಂಗಳೂರಿನಲ್ಲಿ ಅತ್ಯಂತ ಹಳೆಯ ಮುದ್ರಣಾಲಯಗಳಲ್ಲಿ ಒಂದು. ಅಲ್ಲಿ ಪಂಡಿತರು ಮೊಳೆ ಜೋಡಿಸಿ ಸಂಸ್ಕೃತ ಸ್ತೋತ್ರಗ್ರಂಥಗಳನ್ನು, ಆದಿತ್ಯ ಹೃದಯ ಇತ್ಯಾದಿ ಹಾಗೂ ಅಮರಕೋಶದಂಥ ಗ್ರಂಥಗಳನ್ನು ಸಿದ್ಧಪಡಿಸಿಕೊಡುತ್ತಿದ್ದರು. ಅವರು ಸ್ವತಃ

ಘನವಿದ್ವಾಂಸರಾಗಿದ್ದು ಪಠ್ಯ ಬಾಯಿಗೆ ಬರುತ್ತಿದ್ದುದರಿಂದ ಅದನ್ನು ಅವರೇ ಮೊಳೆ ಜೋಡಿಸುತ್ತಿದ್ದುದರಿಂದ ಕರಡಚ್ಚು ತಿದ್ದುವ ಪ್ರಮೇಯವೇ ಬರುತ್ತಿರಲಿಲ್ಲ. ಆಧುನಿಕ ಕಾಲದಲ್ಲಿ ಲೇಖಕರೇ ಡಿಟಿಪಿ ಮಾಡಿದಾಗ ಅಚ್ಚಿನಲ್ಲಿ ದೋಷ ಅತಿಕಡಿಮೆ ಆಗಿರುತ್ತದೆ. ಇನ್ನು ಕಲ್ಲಚ್ಚು ಮುದ್ರಣದಲ್ಲಿ ಶಾಸನಗಳ ಪಡಿಯಚ್ಚು ತೆಗೆದಾಗ ನೆರಳಚ್ಚು ಪ್ರತಿ (ಕ್ಸರಾಕ್ಸ್) ತೆಗೆದಾಗ ಕರಡಚ್ಚು ತಿದ್ದುವ ಪ್ರಮೇಯವಿರುವುದಿಲ್ಲ. ಅಥವಾ ಸಚಿತ್ರಮುದ್ರಣ ಮಾಡಿದಾಗಲೂ ಅಷ್ಟೆ. ಪುನರ್ಮುದ್ರಣವನ್ನು ಚಿತ್ರಮುದ್ರಣ ಮಾಡಿದಾಗ ಕರಡು ತಿದ್ದುವ ಪ್ರಮೇಯವಿಲ್ಲದಿದ್ದರೆ ಹಳೆಯ ಅಚ್ಚಿನ ತಪ್ಪುಗಳು ಹಾಗೆಯೇ ಉಳಿದಿರುತ್ತದೆ. ಅಚ್ಚಾದಮೇಲೆ ಗಮನಕ್ಕೆ ಬಂದ ತಪ್ಪುಗಳನ್ನು ತಿದ್ದಲಾಗದಿದ್ದರೂ ಅದನ್ನು ತಿದ್ದೋಲೆಯಾಗಿ ಗ್ರಂಥದ ಕೊನೆಯಲ್ಲಿ ಕೊಡುವ ಪರಿಪಾಟವಿತ್ತು. ಈಗ ಅದೂ ಕಾಣುವುದಿಲ್ಲ. ವಿಪರೀತ ಪದದೋಷ, ಅರ್ಥದೋಷ, ವಿಷಯದೋಷ ಆದಾಗ, ಪುಸ್ತಕವನ್ನೇ ಮತ್ತೆ ತಿದ್ದಿ ಪ್ರಕಟಿಸಿದ ಪ್ರಸಂಗಗಳೂ, ಪುಸ್ತಕವನ್ನು ಬಹಿಷ್ಕರಿಸಿದ ಪ್ರಸಂಗಗಳೂ ಉಂಟು.

ಮುದ್ರಣ ವಿನ್ಯಾಸದ ಪರಿಚಯ, ಅಕ್ಷರಗಳ ಗಾತ್ರ ಪರಿಚಯ ಕರಡಚ್ಚುಗಾರರಿಗೆ ಇಲ್ಲದೆ ಅನೇಕ ದೋಷಗಳಾಗುವುದುಂಟು. ಸಾಮಾನ್ಯವಾಗಿ ಕರಡಚ್ಚು ತಿದ್ದುವವರಿಗೆ ಮುದ್ರಣಕಲೆಯ ಅಕ್ಷರಗಾತ್ರ, ವಿನ್ಯಾಸ ವಿಚಾರ ತಿಳಿದಿರುವುದಿಲ್ಲ. ಅದನ್ನು ಅಚ್ಚಿನ ವಿನ್ಯಾಸಕಾರರಿಗೆ ಬಿಟ್ಟುಬಿಡುತ್ತಾರೆ. ಆದರೆ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಂಥ ಗ್ರಂಥಗಳ ಕರಡು ತಿದ್ದುವವರಿಗೆ, ಶಾಸ್ತ್ರಗ್ರಂಥಗಳನ್ನು ತಿದ್ದುವವರಿಗೆ ಇದರ ಪರಿಜ್ಞಾನ ಅತ್ಯಗತ್ಯ. ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಸಂಪಾದಕರು ವೈಜ್ಞಾನಿಕ ಕ್ರಮವೊಂದನ್ನು ಬಳಸಿದ್ದಾರೆ. ಮುಖ್ಯಪದದ ಅಕ್ಷರಗಾತ್ರ, ಪ್ರಯೋಗಗಳ ಗಾತ್ರ, ಆಕರಗ್ರಂಥಗಳ ಅಕ್ಷರಗಾತ್ರ, ಪದಮೂಲ ಸೂಚನೆಯ ಪದಗಳ ಗಾತ್ರ ಇತ್ಯಾದಿಗಳನ್ನು ಚಿಕ್ಕಕ್ಷರ, ದಪ್ಪಕ್ಷರ (ಸ್ಮಾಲ್, ಬೋಲ್ಡ್) ಅಕ್ಷರಗಳು ಯಾವ ಯಾವ ಗಾತ್ರದ್ದು ಇರಬೇಕು ಎಂದು ನಿರ್ಧರಿಸಿರುತ್ತಾರೆ. ಅದನ್ನು ಗಮನಿಸದೆ ಕರಡಚ್ಚು ತಿದ್ದಲು ಸಾಧ್ಯವಿಲ್ಲ. ಈ ಎಲ್ಲ ವಿಷಯಗಳಲ್ಲಿ ಮುದ್ರಣವಿಚಾರ, ಕರಡಚ್ಚು ವಿಚಾರ, ಹಸ್ತಪ್ರತಿ ವಿಚಾರ, ಮೊಳೆಗಳ ವಿನ್ಯಾಸ ವಿಚಾರ ಇತ್ಯಾದಿ ಎಲ್ಲವನ್ನೂ ತಿಳಿದ ಕರಡಚ್ಚುಗಾರರು ವಿರಳ. ಅವೆಲ್ಲವನ್ನು ತಿಳಿದ ಲೇಖಕರಲ್ಲಿ ಶೇಷನಾರಾಯಣರು ಒಬ್ಬರು. ಅಂಥ ಮುದ್ರಕರು ಕರಡಚ್ಚುಗಾರರು ವಿರಳರಾಗಿದ್ದಾರೆ. ಅವರು ಹೇಳಿದ ಮಾತಿದು (ಮಯೂರ ೨೦೦೧ನೆ ಇಸವಿಯ ಸಂಚಿಕೆ ನೋಡಿ) "ನಾನು ಮುದ್ರಣ ಮಾಡಿರುವ ಪ್ರೂಫ್ ನೋಡಿರುವ ಪುಸ್ತಕಗಳ ಸಂಖ್ಯೆ ಸಾವಿರಕ್ಕೂ ಹೆಚ್ಚು ಮೀರುತ್ತದೆ. ಪುಸ್ತಕಗಳನ್ನು ಅಚ್ಚುಮಾಡುವುದರ ಜತೆಗೆ ಪ್ರೂಫ್ ನೋಡುವುದರಲ್ಲಿ ನಾನು ಗಟ್ಟಿಗ ಎಂದು ಎಷ್ಟೋ ಪ್ರಕಾಶಕರು ತಮ್ಮ ಪ್ರಕಾಶನದ

ಪುಸ್ತಕಗಳನ್ನು ನನಗೆ ಪ್ರೂಫ್ ತಿದ್ದಲು ಕೊಡುತ್ತಿದ್ದರು." ಕುವೆಂಪು, ತೀನಂಶ್ರೀ, ಡಿಎಲ್‌ಎನ್, ಡಿವಿಜಿ, ಮಾಸ್ತಿ, ವಿಸೀ, ರಾಜರತ್ನಂ, ಅನಕೃ, ತರಾಸು, ತ್ರಿವೇಣಿ ಮೊದಲಾದವರ ಗ್ರಂಥಗಳನ್ನು ಪ್ರೂಫ್ ನೋಡಿ ಅಂದಚೆಂದದಿಂದ ತಪ್ಪಿಲ್ಲದೆ ಮುದ್ರಿಸಿ ಭೇಷ್ ಎನಿಸಿಕೊಂಡವರು ಶೇಷನಾರಾಯಣ ಅವರು. ಅವರು ಸ್ವತಃ ಲೇಖಕರೂ ಹೌದು.

ಕನ್ನಡದಲ್ಲಿ ಕರಡಚ್ಚು ತಿದ್ದುವ ವಿಧಾನದಲ್ಲಿ ಏಕರೂಪತೆ ಇಲ್ಲ. ಕಾರಣ ಸ್ಪಷ್ಟವಾಗಿದೆ. ಕರಡು ತಿದ್ದುವ ವಿಚಾರದಲ್ಲಿ ಪರಿಪೂರ್ಣವಾದ ಪಠ್ಯಗ್ರಂಥವೇ ಇಲ್ಲ. ಅಲ್ಲಿ ಇಲ್ಲಿ ಪ್ರಕಟವಾದ ಕೆಲವು ಲೇಖನಗಳು ಮತ್ತು ಕರಡಚ್ಚು ಚಿಹ್ನೆಗಳ ಪಟ್ಟಿ ಬಿಟ್ಟರೆ ಬೇರೆ ಇಲ್ಲ. ಇನ್ನು ಕರಡಚ್ಚು ತಿದ್ದುವ ತರಬೇತಿ ಕೊಡುವ ಶಾಲೆ ಆಗಲಿ, ಶಿಬಿರಗಳಾಗಲಿ ನಡೆದಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಕರಡಚ್ಚು ತಿದ್ದಲು ನೆರವಾಗುವ ಚಿಹ್ನೆಗಳನ್ನು ತಿಳಿಸುವ ಕೋಶಗಳು, ಗ್ರಂಥಗಳು ಕನ್ನಡದಲ್ಲಿ ಕೆಲವಿವೆ.

೧. ಕಸಾಪದ ಕನ್ನಡ ನಿಘಂಟು ಪೀಠಿಕೆ, ೨. ಕನ್ನಡ ರತ್ನಕೋಶ (ಕಸಾಪ), ೩. ಜಿ. ವೆಂಕಟಸುಬ್ಬಯ್ಯನವರ ಪ್ರಿಸಂ ಕ್ಲಿಷ್ಟಪದಕೋಶ, ೪. ಡಿ.ಕೆ. ಭಾರದ್ವಾಜರ ಇಂ-ಕ ಶಬ್ದಕೋಶ, ೫. ಕನ್ನಡ ಗ್ರಂಥಸಂಪಾದನೆ-ಡಿಎಲ್‌ಎನ್, ೬. ರನ್ನನ ಗದಾಯುದ್ಧ ಸಂಗ್ರಹ-ತೀನಂಶ್ರೀ, ೭. ಕನ್ನಡ ಗ್ರಂಥಸಂಪಾದನಾ ಶಾಸ್ತ್ರ-ಎಂ.ಎಂ. ಕಲ್ಬುರ್ಗಿ, ೮. ಗ್ರಂಥ ಸಂಪಾದನ ಪರಿಭಾಷಾ ಕೋಶ, ೯. ಆಧುನಿಕ ಮುದ್ರಣಕಲೆ-ಹರಿದಾಸ್, ೧೦. ಅಕ್ಷರ ಮುದ್ರಣ-ಕೃಷ್ಣಾಜಿರಾವ್, ೧೧. ಮುದ್ರಣಕಲೆ-ನರಸಣ್ಣ, ೧೨. ಕನ್ನಡಶೈಲಿ ಕೈಪಿಡಿ-ಇತ್ಯಾದಿ ಮತ್ತು ಇತರರ ಕೆಲವು ಲೇಖನಗಳು ಈ ವಿಷಯದಲ್ಲಿ ಉಪಯುಕ್ತವಾಗಿವೆ. ಇಷ್ಟಾದರೂ ಕಲಿಯುವವರಿಗೆ ಸೂಕ್ತ ಗ್ರಂಥ ಇಲ್ಲ. ಕ್ರಮಬದ್ಧವಾಗಿ ಕರಡಚ್ಚು ತಿದ್ದುವುದನ್ನು ಕಲಿಸುವ ವ್ಯವಸ್ಥೆಯಿಲ್ಲ. ಇಂದಿಗೂ ಭಾಷಾಶುದ್ಧಿ ಬಗ್ಗೆ ಕರಡಚ್ಚು ತಿದ್ದುವವರು ಗಮನಿಸಬೇಕಾದ ಕೆಲವು ಗ್ರಂಥಗಳಿವೆ. ಅವುಗಳ ಅಧ್ಯಯನ ಕರಡಚ್ಚು ತಿದ್ದುವವರಿಗೆ ಅತ್ಯಗತ್ಯ. ಉದಾಹರಣೆಗೆ:

೧. ಶುದ್ಧಾಶುದ್ಧ ಕನ್ನಡ - ಪ್ರೊ. ಎಂ. ರಾಜಗೋಪಾಲಾಚಾರಿ, ಮುಂಬೈ ವಿಶ್ವವಿದ್ಯಾನಿಲಯ, ೧೯೯೦.

೨. ಇಂದಿನ ಕನ್ನಡ ರಚನೆ ಮತ್ತು ಬಳಕೆ, ಡಾ. ಎಸ್.ಎನ್. ಶ್ರೀಧರ್, ಕವಿವಿ ಹಂಪಿ.

೩. ಕನ್ನಡಶೈಲಿ - ಎಸ್.ಎನ್. ಶ್ರೀಧರ್, ಕವಿವಿ ಹಂಪಿ.

೪. ನುಡಿಸಿರಿ - ನಡೆಸಿರಿ, ಸತ್ಯನಾರಾಯಣ ಮಲ್ಲಿಪಟ್ಟಣ, ಮಂಗಳ ಪ್ರಕಾಶನ, ೧೯೯೮.

೫. ಪರಿಶುದ್ಧ ಕನ್ನಡ - ಅರಳುಗುಪ್ಪೆ, ೧೯೮೨, ಸಮಾಜ ಪುಸ್ತಕಾಲಯ, ಧಾರವಾಡ.

೬. ದರ್ಪಣ ವಿವರಣ - ಟಿ.ವಿ. ವೆಂಕಟಾಚಲಶಾಸ್ತ್ರೀ, ಸಪ್ನಾ ಬುಕ್ ಹೌಸ್, ಬೆಂಗಳೂರು.

೭. ಇಗೋ ಕನ್ನಡ - ೩ ಸಂಪುಟಗಳು - ಜಿ. ವೆಂಕಟಸುಬ್ಬಯ್ಯ, ನವ ಕರ್ನಾಟಕ ಪ್ರಕಾಶನ.

೮. ಪದಾರ್ಥ ಚಿಂತಾಮಣಿ - ಪಾವೆಂ ಆಚಾರ್ಯ, ನವ ಕರ್ನಾಟಕ ಪ್ರಕಾಶನ, ೧೯೯೪.

೯. ಕನ್ನಡ ನಿಘಂಟು ಪೀಠಿಕೆ - ಕಸಾಪ ಪ್ರಕಟನೆ.

೧೦. ಶಂಕರಭಟ್ಟರ ಕನ್ನಡಭಾಷೆಯನ್ನು ಕುರಿತ ೮ ಗ್ರಂಥಗಳು.

೧೧. ಕೆ.ವಿ. ನಾರಾಯಣ ಅವರ 'ನಮ್ಮ ಸುತ್ತಮುತ್ತ' ಇತ್ಯಾದಿ ಗ್ರಂಥಗಳು.

೧೨. ಧಾರವಾಡಕರ ಅವರ ಕನ್ನಡ ಭಾಷಾಶಾಸ್ತ್ರ.

೧೩. ಎಂ.ಎಚ್. ಕೃಷ್ಣಯ್ಯನವರ ಸಂಕ್ಷಿಪ್ತ ಕನ್ನಡ ಭಾಷಾಶಾಸ್ತ್ರ.

೧೪. ಡಿಎಲ್‌ನ ಅವರ ಶಬ್ದವಿಹಾರ.

೧೫. ರಂಗನಾಥ ಶರ್ಮರ ಹೊಸಗನ್ನಡ ವ್ಯಾಕರಣ.

೧೬. ಟಿ. ಕೇಶವಭಟ್ಟರ ಕನ್ನಡ ವ್ಯಾಕರಣ ಇತ್ಯಾದಿ.

ಕರಡಚ್ಚು ತಿದ್ದುವವರು ಗ್ರಂಥದಲ್ಲಿ ಗಮನಿಸಬೇಕಾದ ಭಾಗಗಳು ಮೂರು ಇವೆ.

೧. ಪೀಠಿಕಾ ಪುಟಗಳು (ಮೊದಲ ೧೬ ಅಥವಾ ೮ ವಿವರಗಳ ಪುಟಗಳು) ಮುದ್ರಣ ವಿವರ, ಅರ್ಪಣೆ, ಲೇಖಕರ ಪೀಠಿಕೆ, ಪ್ರಕಾಶಕರ ನುಡಿ, ಇತರರ ಮುನ್ನುಡಿ, ವಿಷಯಸೂಚಿ ಇತ್ಯಾದಿ)

೨. ಪಠ್ಯದ ಭಾಗ.

೩. ಅನುಬಂಧಗಳು (ಮುಖ್ಯ ಪದಸೂಚಿ, ಗ್ರಂಥ ಲೇಖನ ಸೂಚಿ, ವಂಶಾವಳಿ, ಇತ್ಯಾದಿ ಅನೇಕ ಅನುಬಂಧಗಳು) ಇವುಗಳಲ್ಲಿ ಪೀಠಿಕಾಪುಟಗಳು ಮತ್ತು ಅನುಬಂಧಗಳ ವಿಚಾರವಾಗಿ ಕರಡಚ್ಚುಗಾರರಿಗೆ ಸಂಬಂಧಿಸಿದಂತೆ ಕೆಲವು ಸಂಗತಿಗಳನ್ನು ಹೇಳಬೇಕಾಗಿದೆ.

ಪೀಠಿಕಾ ಪುಟಗಳಿಗೆ ರೋಮನ್ ಅಂಕಿಗಳನ್ನು (ಸಣ್ಣದು ಅಥವಾ ದೊಡ್ಡದು I II III.... i ii iii ಇತ್ಯಾದಿ) ಬಳಸುತ್ತಾರೆ. ಈ ಪದ್ಧತಿ ವಿದೇಶಿ ಪದ್ಧತಿಯ ಅಂಧಾನುಕರಣೆ. ಕನ್ನಡಕ್ಕೆ ಅನಿವಾರ್ಯವಾದ ಪದ್ಧತಿ ಅಲ್ಲ. ಹೊಸಕೆರೆ ಚಿದಂಬರಯ್ಯನವರು ನೂರಕ್ಕೂ ಹೆಚ್ಚು ಗ್ರಂಥಗಳನ್ನು, ವಿವಿಧ ವಿಷಯಗಳನ್ನು ಕುರಿತು ರಚಿಸಿದ ವಿದ್ವಾಂಸರು; ಹೊಸಗನ್ನಡ

ಗದ್ಯನಿರ್ಮಾಪಕರಲ್ಲಿ ಒಬ್ಬರು. ಇವರು ತಮ್ಮ ಗ್ರಂಥಗಳಲ್ಲಿ ಪೀಠಿಕಾ ಪುಟಗಳಿಗೆ ಅಆಇಈ, ಕಖಗಘಜ ಇತ್ಯಾದಿ ಕನ್ನಡ ವರ್ಣಮಾಲೆಯನ್ನು ಬಳಸಿದ್ದಾರೆ. ಇದನ್ನು ನಮ್ಮ ಲೇಖಕರು, ಮುದ್ರಕರು ಯಾರೂ ಬಳಸದೆ ರೋಮನ್ ಅಂಕೆಗಳನ್ನು ಬಳಸುತ್ತಿರುವುದು ನಮ್ಮ ಕನ್ನಡತನದ ದೃಷ್ಟಿಯಿಂದ ಕನ್ನಡಭಾಷೆ ಸಂಸ್ಕೃತಿಯ ಹಿನ್ನೆಲೆಯಲ್ಲಿ ಯೋಚಿಸದೆ ಇರುವುದಕ್ಕೆ ಇದೊಂದು ನಿದರ್ಶನ. ಕನ್ನಡ ಶೀಘ್ರಲಿಪಿ, ಕನ್ನಡ ಬೆರಳಚ್ಚಿನ ಕೀಲಿಮಣೆಗಳಲ್ಲೂ ಯಾಂತ್ರಿಕವಾಗಿ ಅಂಧಾನುಕರಣೆ ಮಾಡಿದ್ದರಿಂದ ಅವು ನಮ್ಮ ಕನ್ನಡದ ಅಗತ್ಯಗಳನ್ನು ಪೂರೈಸುವಲ್ಲಿ ಪರಿಪೂರ್ಣವಾಗಿಲ್ಲ.

ಇನ್ನು ಅನುಬಂಧಗಳಲ್ಲಿ ವಿಷಯ ಪದಸೂಚಿ, ಅಕಾರಾದಿ ಪದಸೂಚಿ, ಲೇಖಕಸೂಚಿ, ಗ್ರಂಥಸೂಚಿ ಇತ್ಯಾದಿ ಕೊಡುವಾಗ, ಟಿಪ್ಪಣಿಗಳನ್ನು ಕೊಡುವಾಗ ಅವುಗಳ ಸಂಖ್ಯೆ ಪಠ್ಯದಲ್ಲಿರುವ ಸಂಖ್ಯೆಗಳನ್ನು ಅಥವಾ ಆಯಾ ವಿಷಯಗಳು ಬರುವ ಪುಟಗಳ ಸಂಖ್ಯೆ ಇರುವುದನ್ನು ಕರಡಚ್ಚುಗಾರರು ಪರಿಶೀಲಿಸಬೇಕು. ಇಲ್ಲದಿದ್ದಲ್ಲಿ ಸಂಶೋಧಕರಿಗೆ ಈ ಗ್ರಂಥಗಳನ್ನು ಬಳಸುವಾಗ ತೊಂದರೆ ಆಗುತ್ತದೆ. ೧೪-೩ ಎಂಬುದು (೧೪ನೇ ಅಧ್ಯಾಯ ೩ನೇ ಪದ್ಯ) ೩-೧೪ ಎಂದಾದರೆ ಎಷ್ಟು ಅನರ್ಥವಾಗುತ್ತದೆ. ಗ್ರಂಥಗಳು ಪುನರ್ಮುದ್ರಣವಾದಾಗ ಅಚ್ಚಿನ ಪುಟಗಳ ಸಂಖ್ಯೆ ವ್ಯತ್ಯಾಸವಾದಾಗ ಅವುಗಳನ್ನು ಮೊದಲ ಮುದ್ರಣದ ಸಂಖ್ಯೆಗಳನ್ನು ಬಿಟ್ಟು ಹೊಸಮುದ್ರಣದ ಪುಟಗಳಿಗೆ ಹೊಂದಿಸುವಾಗ ಲೇಖಕ/ಕರಡಚ್ಚುಗಾರ ಎಚ್ಚರವಾಗಿ ಪರಿಶೀಲಿಸಿ ತಿದ್ದಬೇಕು. ಹೊಸಗನ್ನಡ ಸಾಹಿತ್ಯದ ಅರುಣೋದಯ ಗ್ರಂಥದ ಪುನರ್ಮುದ್ರಣ ಕಾಲದಲ್ಲಿ ಮೊದಲ ಮುದ್ರಣದ ಪುಟಗಳ ಸಂಖ್ಯೆಯನ್ನು ಪದಸೂಚಿಯಲ್ಲಿ ಬದಲಿಸುವಾಗ ಲೇಖಕರಾದ ಶ್ರೀನಿವಾಸ ಹಾವನೂರರು ಪಟ್ಟ ಶ್ರಮವನ್ನು ಕಣ್ಣಾರೆ ಕಂಡಿದ್ದೇನೆ. ನನ್ನ ಶತ್ರುವಿಗೂ ಈ ಕಷ್ಟ ಬೇಡ ಎನ್ನುತ್ತಿದ್ದರು. ಹಠದಿಂದ, ಸಹನೆಯಿಂದ ಅವರು ಆ ಕೆಲಸ ಪೂರೈಸಿದರು. ಇದು ಅತಿಶ್ರಮದ ಕೆಲಸ. ಇನ್ನು ಅಕಾರಾದಿ ಪದಕೋಶಗಳನ್ನು ಅನುಬಂಧದಲ್ಲಿ ಕೊಟ್ಟಾಗ ಅವು ನಿಘಂಟಿನ ಪ್ರಕಾರ ಅಕಾರಾದಿ ಕ್ರಮ ಸರಿಯಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

ವಂಶಾವಳಿ ಇತ್ಯಾದಿ ನಕ್ಷೆಗಳು ಇದ್ದಾಗ ಎಚ್ಚರದಿಂದ ಗಮನಿಸಬೇಕು. ಇತ್ತೀಚೆಗೆ ನಾನೊಂದು ಪುಸ್ತಕದ ಕರಡನ್ನು ತಿದ್ದಿದಾಗ ಲೇಖಕರ ವಂಶಸ್ಥರ ವಂಶಾವಳಿಯನ್ನು ಉದ್ದುದ್ದ ಇದ್ದುದನ್ನು ಮಡಿಚಿ ಅಡ್ಡಡ್ಡವಾಗಿ ತಿರುಗಿಸಿ ಅಚ್ಚು ಮಾಡಿದಾಗ ಮಕ್ಕಳಲ್ಲಿ ಒಬ್ಬರ ಹೆಸರು ಬಿಟ್ಟು ಹೋಯಿತು. ಆಗ ಅವರು ತೀವ್ರವಾಗಿ ಆಕ್ಷೇಪಿಸಿದ್ದರಿಂದ ಮತ್ತೆ ಆ ಹೆಸರನ್ನು ಅಚ್ಚುಮಾಡಿ ೧೦೦೦ ಪ್ರತಿಗಳಿಗೆ ಅಂಟಿಸಲಾಯಿತು. ಕರಡಚ್ಚುಗಾರರು ಮತ್ತು ಮುದ್ರಕರು ಇಬ್ಬರೂ ಗಮನಿಸದೇ ಇದ್ದುದರಿಂದ ಆದ ತಪ್ಪಿದು.

ಇನ್ನು ಚಿತ್ರಗಳ ಸಂಖ್ಯೆ ಅವುಗಳ ಶೀರ್ಷಿಕೆಗಳನ್ನು ಚೆನ್ನಾಗಿ ಗಮನಿಸಬೇಕು. ಹಾಲು ಕಾಗದದ ಮೇಲೆ ಅಚ್ಚಾದ ಶೀರ್ಷಿಕೆಗಳ ಕರಡಚ್ಚನ್ನು ತಿದ್ದುವಾಗ ಸಾಮಾನ್ಯ ಶಾಯಿ ಆರ್ಟ್‌ಪೇಪರ್ ಮೇಲೆ ಜಾರುವುದು; ಬೇರೆ ಬಗೆಯ ಬಣ್ಣದ ಶಾಯಿಯಲ್ಲಿ ತಿದ್ದಬೇಕು.

ಕರಡಚ್ಚು ಚಿಹ್ನೆಗಳು

ಕರಡಚ್ಚು ತಿದ್ದುವುದರಲ್ಲಿ ಮಹತ್ತ್ವದ ಭಾಗ ಎಂದರೆ ಕರಡಚ್ಚು ಚಿಹ್ನೆಗಳ ಬಳಕೆಯ ರೀತಿ. ಪುಸ್ತಕ ಮುದ್ರಣಕಲೆ ವಿದೇಶೀಯರಿಂದ ನಮಗೆ ಬಳುವಳಿ ಬಂದ ಹಾಗೆಯೇ ಕರಡಚ್ಚು ತಿದ್ದುವ ಚಿಹ್ನೆಗಳೂ ವಿದೇಶೀಯರಿಂದ ಬಂದ ಕೊಡುಗೆ ಆಗಿದೆ.

ಕರಡಚ್ಚು ಚಿಹ್ನೆಗಳೂ ನೂರಾರು ಇವೆ. ಇಷ್ಟೇ ಎಂದು ಹೇಳಲಾಗದು. ಇವುಗಳನ್ನು ಮುಖ್ಯವಾಗಿ ಹಲವು ವಿಧಗಳಲ್ಲಿ ವರ್ಗೀಕರಿಸಬಹುದು.

೧. ಅಂಕಿಗಳ ಬಳಕೆ, ೨. ಸಂಕೇತ ಅಕ್ಷರ ಬಳಕೆ ೩. ಕರಡಚ್ಚು ಚಿಹ್ನೆಗಳು ೪. ಗ್ರಂಥ ಸಂಪಾದನೆ ಚಿಹ್ನೆಗಳು ೫. ವಿಜ್ಞಾನ ಗ್ರಂಥಗಳ ಚಿಹ್ನೆಗಳು ೬. ಶಾಸನಶಾಸ್ತ್ರದ ಚಿಹ್ನೆಗಳು ೭. ಲೇಖನ ಚಿಹ್ನೆಗಳು ಇತ್ಯಾದಿ.

೧. ಅಂಕಿಗಳ ಬಳಕೆ: ಕನ್ನಡದ ಗ್ರಂಥಗಳಲ್ಲಿ ಕನ್ನಡ ಅಂಕಿಗಳು, ರೋಮನ್ ಅಂಕಿಗಳು, ಅರಾಬಿಕ್ ಅಂಕಿಗಳು ಎಂದು ಮೂರು ಬಗೆಯ ಅಂಕಿಗಳನ್ನು ಬಳಸುತ್ತಾರೆ. ಪೀಠಿಕಾ ಪುಟದಲ್ಲಿ ಮತ್ತು ಅನುಬಂಧಗಳಲ್ಲಿ ರೋಮನ್ ಸಣ್ಣ ದೊಡ್ಡ ಅಂಕಿಗಳನ್ನು ಬಳಸುತ್ತಾರೆ. ಪುಟಗಳ ಸಂಖ್ಯೆಗೆ ಕೆಲವರು ಇಂಗ್ಲಿಷ್ (ಅರಾಬಿಕ್) ಅಂಕಿಗಳನ್ನು ಕೆಲವರು ಕನ್ನಡ ಅಂಕಿಗಳನ್ನು ಬಳಸುತ್ತಾರೆ. ಈ ಮೂರು ಬಗೆಯ ಅಂಕಿಗಳನ್ನು ಬಳಸುವಲ್ಲಿ ಒಂದು ಕ್ರಮವಿರುವುದನ್ನು ಗಮನಿಸಬೇಕು.

೨. ಗ್ರಂಥ ಸಂಪಾದನೆ ಚಿಹ್ನೆಗಳು: ವಿಶೇಷವಾಗಿ ಹಳಗನ್ನಡದ ಗ್ರಂಥಗಳನ್ನು, ಹಸ್ತಪ್ರತಿಗಳಿಂದ ಅಚ್ಚಿಗೆ ಸಿದ್ಧಪಡಿಸುವಾಗ ಗ್ರಂಥಸಂಪಾದನಾಶಾಸ್ತ್ರಾನುಸಾರವಾಗಿ ಹಲವು ಚಿಹ್ನೆಗಳನ್ನು ಬಳಸುತ್ತಾರೆ. ಇವುಗಳಲ್ಲಿ ಅಕ್ಷರಚಿಹ್ನೆಗಳೂ ಇವೆ, ವಿಶಿಷ್ಟಚಿಹ್ನೆಗಳೂ ಲೇಖನಚಿಹ್ನೆಗಳೂ ಇವೆ. ಇವುಗಳನ್ನು ಸಂಪಾದಕರು ಬಳಸಿದ ರೀತಿಯನ್ನು ಕರಡಚ್ಚುಗಾರರು ಗಮನಿಸಿ ತಿದ್ದಲು ಬಳಸಬೇಕು. ತೀನಂಶ್ರೀ ಅವರು ಸಂಪಾದಿಸಿದ ಗದಾಯುದ್ಧ ಸಂಗ್ರಹದಲ್ಲಿ ಮತ್ತು ಟಿ.ಎಸ್. ವೆಂಕಣ್ಣಯ್ಯನವರು ಬಸವರಾಜದೇವ ರಗಳೆಯಲ್ಲಿ ಬಳಸಿರುವ ಗ್ರಂಥಸಂಪಾದನಾ ಚಿಹ್ನೆಗಳನ್ನು ಗಮನಿಸಿದರೆ ಕನ್ನಡಕ್ಕೆ ಅವರು ಕೊಟ್ಟ ಕೊಡುಗೆ ತಿಳಿಯುತ್ತದೆ.

೩. ಲೇಖನ ಚಿಹ್ನೆಗಳು: ಹೊಸಗನ್ನಡದ ವ್ಯಾಕರಣ ಗ್ರಂಥಗಳಲ್ಲಿ ಲೇಖನ ಚಿಹ್ನೆಗಳನ್ನು, ಅವುಗಳನ್ನು ಬಳಸುವ ರೀತಿಯನ್ನು ತಿಳಿಸಿರುತ್ತಾರೆ. ಕೆಲವು ನಿಘಂಟುಗಳಲ್ಲೂ ಇವುಗಳನ್ನು ವಿವರಿಸಲಾಗಿದೆ. ಇವುಗಳನ್ನು ಚೆನ್ನಾಗಿ ಅಧ್ಯಯನ ಮಾಡಬೇಕು. ಸಾಮಾನ್ಯವಾಗಿ ಲೇಖನ ಚಿಹ್ನೆಗಳನ್ನು ಒಂದೇ ರೀತಿ ಬಳಸಿದರೂ ಅವುಗಳನ್ನು ಒಂದೇ ಅರ್ಥದಲ್ಲಿ ಅನೇಕರು ಬಳಸುವುದಿಲ್ಲ. ಇದನ್ನು ಕರಡಚ್ಚುಗಾರರು ಗಮನಿಸಬೇಕು.

ಉದಾಹರಣೆಗೆ: 'o' ಎಂಬ ಕುಂಡಲನ ಚಿಹ್ನೆಯನ್ನು ಅಕ್ಷರದ ಕೆಳಬಲಪಕ್ಕದಲ್ಲಿ ಕನ್ನಡನಿಘಂಟಿನಲ್ಲಿ ಒಂದು ಪದವನ್ನು ವಿಶೇಷ ಕಾರಣಗಳಿಗಾಗಿ ವಿವರಿಸಿಲ್ಲ ಎಂಬುದನ್ನು ಸೂಚಿಸಲು ಬಳಸಲಾಗಿದೆ. (ಕನ್ನಡನಿಘಂಟು ಸಂಪುಟ 1 ಪುಟ 55)

ಅಂಕದುವರ = ಹೆಬ್ಬಾಗಿಲು ---- [ಅಂಕ ₀ + ದುವರ (<ದ್ವಾರ)

ಕಿಟೆಲ್ ಅವರು ಪದಗಳಲ್ಲಿ ಸಂಧಿ ಆದ ಪದಗಳಲ್ಲಿ ಸಂಧಿ ಆದ ಅಕ್ಷರದ ಮೇಲೆ ಇದನ್ನು ಬಳಸುತ್ತಾರೆ.

ಪಂಜರ ₀ ದೊಳಗೆ = ಪಂಜರದ + ₀ಳಗೆ; ದ + ಒ ತೋರಿಸಲು ಕುಂಡಲನ ಚಿಹ್ನೆ ೦ ಬಳಸಿದೆ. (ಕನ್ನಡ ಕಾವ್ಯಮಾಲೆ ಕಿಟೆಲ್ ಪುಟ ೩)

ತೀನಂಶ್ರೀ ಅವರು ಗದಾಯುದ್ಧ ಸಂಗ್ರಹದಲ್ಲಿ ಕಾವ್ಯದಲ್ಲಿ ಸಮಾಸಪದದ ಒಂದು ಭಾಗವನ್ನು, ಟಿಪ್ಪಣಿಯಲ್ಲಿ ತೋರಿಸಿ ಅರ್ಥ ಬರೆದಿದೆ ಎಂಬುದಕ್ಕೆ ಈ ಕುಂಡಲನ ಚಿಹ್ನೆ ೦ ಬಳಸಿದ್ದಾರೆ.


ಉದಾ: ನಿಜಭುಜಪ್ರತಾಪನಿರ್ಜಿತ 'o' ನಿಖಿಲ ಭೀಮಸೇನಾ..... ಇಲ್ಲಿ ನಿರ್ಜಿತ ಪದಕ್ಕೆ ಟಿಪ್ಪಣಿಯಲ್ಲಿ ಅರ್ಥ ಕೊಟ್ಟಿದೆ ಎಂಬುದು ಈ ಚಿಹ್ನೆಯ ಅರ್ಥವಾಗಿದೆ.

ಕುವೆಂಪು ಅವರು ._ ಚಿಹ್ನೆಯನ್ನು ವಿಶಿಷ್ಟಾರ್ಥದಲ್ಲಿ ಬಳಸಿದ್ದಾರೆ. (ನೋಡಿ ರಾ. ದರ್ಶನದ ಅರ್ಪಣೆ) ಎಂ.ಎಸ್. ಪುಟ್ಟಣ್ಣ ಅವರು ಹೇಮಚಂದ್ರ ರಾಜವಿಲಾಸ (ಕಿಂಗ್‌ಲಿಯರ್) ನಾಟಕದಲ್ಲಿ (೧೮೯೯) ಸಂಭಾಷಣೆಗಳ ವ್ಯಕ್ತಿಗಳ ಹೆಸರಿನ ಮುಂದೆ ಬಳಸಿದ್ದಾರೆ. ದೊರೆ ._ ಇಂದುಕಲೆ ._ ಇತ್ಯಾದಿ.

ಲೇಖನ ಚಿಹ್ನೆಗಳಲ್ಲಿ ಸಾಮಾನ್ಯವಾಗಿ ಒಂದು ಸಲಕ್ಕೆ ಒಂದು ಚಿಹ್ನೆ ಬಳಕೆ ಆಗುತ್ತದೆ. ಆದರೆ ಕೆಲವೊಮ್ಮೆ ಎರಡೆರಡು ಚಿಹ್ನೆಗಳನ್ನು ಒಟ್ಟಿಗೆ ಬಳಸುತ್ತಾರೆ. ಶಿ.ಶಿ.

ಬಸವನಾಳರು ಬಸವಣ್ಣನವರ ವಚನಗಳಲ್ಲಿ ವಿನ್ಯಾಸದಲ್ಲಿ ! ! ! ಎಂದು ಆಶ್ಚರ್ಯಚಿಹ್ನೆಯನ್ನು ಮೂರು ಬಾರಿ ಬಳಸಿದ್ದಾರೆ. ಗಣಿತದ ಚಿಹ್ನೆಗಳನ್ನು ಬೇರೆ ಅರ್ಥದಲ್ಲಿ ವ್ಯಾಕರಣಗ್ರಂಥಗಳಲ್ಲಿ ಬಳಸಲಾಗುತ್ತದೆ. = ಸಮ + ಅಧಿಕ - ಋಣ ಚಿಹ್ನೆಗಳನ್ನು ಪದದ ಅರ್ಥಕ್ಕೆ ಗಿರಿ=ಬೆಟ್ಟ, ಸಂಧಿ ಸೂಚಿಸಲು ಅರುಣ + ಉದಯ = ಅರುಣೋದಯ ಮನೆ-ಮಾರು ಇತ್ಯಾದಿ.

೪. **ಕರಡಚ್ಚು ಚಿಹ್ನೆಗಳು:** ಕರಡಚ್ಚು ತಿದ್ದುವಲ್ಲಿ ಮಾತ್ರ ಬಳಸುವ ಚಿಹ್ನೆಗಳನ್ನು ಕರಡಚ್ಚು ಚಿಹ್ನೆಗಳು ಎಂದು ಕರೆಯುತ್ತೇವೆ. ಉದಾ: ⁀ ಸೇರಿಸು # ಬಿಡಿಸು ⊔ ಕೆಳಕ್ಕೆ ಇಳಿಸಿ ⊓ ಎತ್ತರಿಸಿ ಇತ್ಯಾದಿ.



ಬಿಟ್ಟುಬಿಡಿ ಮತ್ತು ಹತ್ತಿರ ತನ್ನಿ
ತಿರುವುಮುರುವು ಮಾಡಿ - **reverse**
ಹತ್ತಿರ ತನ್ನಿ - **closeup**
ದೂರವಿರಲಿ - **insert space**
ಪ್ಯಾರಾ - **para**
ಒಂದು ಎಮ್ ಇಂಡೆಂಟ್ - **indent**
ಎಡಗಡೆಗೆ ಹೋಗಬೇಕು - **move to left**
ಬಲಗಡೆಗೆ ಹೋಗಬೇಕು - **move toright**
ಕೆಳಕ್ಕೆ ಇಳಿಸಬೇಕು - **lower**
ಮೇಲಕ್ಕೆ ಎತ್ತರಿಸಬೇಕು - **elevate**
ಮಾರ್ಜಿನ್‌ನಲ್ಲಿ ಸೂಚಿಸಿರುವುದನ್ನು
ಸಮಾನವಾದ ಸ್ಥಳ ಬಿಡಬೇಕು.
ಮುರಿದ ಅಕ್ಷರ - **broken letter**
ಕೊಟ್ಟಿರುವ ಸ್ಪೇಸನ್ನು ಕೆಳಕ್ಕೆ ಇಳಿಸಬೇಕು
ಸಾಲುಗಳನ್ನು ನೆಟ್ಟಗೆ ಮಾಡಿ - **stright up**
ಟೈಪುಗಳನ್ನು ಹೊಂದಿಸಿ - **alignment**
ಅರ್ಧವಿರಾಮ ಸೇರಿಸಿ
ಅಪಾಸ್ಟ್ರಫಿ (ಆವರಣ ಚಿಹ್ನೆ) ಸೇರಿಸಿ

|=| ಹೈಫನ್ ಸೇರಿಸಿ - **insert hyphen**

:| ಕೋಲನ್ ಸೇರಿಸಿ - **insert colon**

;| ಸೆಮಿ ಕೋಲನ್ ಸೇರಿಸಿ - **insert semi colon**

⊙ ಪೂರ್ಣವಿರಾಮ ಸೇರಿಸಿ - **insert full stop**

? ಪ್ರಶ್ನೆ ಚಿಹ್ನೆ ಸೇರಿಸಿ - **insert question mark**

(?) ಲೇಖಕರಿಗೆ ಪ್ರಶ್ನೆ - **query to the author**

add ಲಿಗೇಚರ್ ಬಳಸಿ - **use ligature**

(Sp) ಕಾಗುಣಿತ ಪರಿಶೀಲಿಸಿ - **check the spelling**

tr ಪಲ್ಲಟಿಸಿ - **transpose**

೫. ಅಕ್ಷರ ಚಿಹ್ನೆಗಳು: Wf ತಪ್ಪುಮೊಳೆ, Sp ಕಾಗುಣಿತ ಪರಿಶೀಲಿಸಿ, rom ರೋಮನ್ ಟೈಪು ಬಳಸಿ ಇತ್ಯಾದಿ. ಅಕ್ಷರ ಚಿಹ್ನೆಗಳಲ್ಲಿ ಇಂಗ್ಲಿಷ್ ಅಕ್ಷರಗಳನ್ನು ಬಳಸುತ್ತಿದ್ದಾರೆ. ಕನ್ನಡ ಬಳಸುತ್ತಿಲ್ಲ, ಏಕೆ ಬಳಸಬಾರದು?

wf ತಪ್ಪು ಫಾಂಟ್ - **wrong font** ತಮೊ (ತಪ್ಪು ಮೊಳೆ)

X ಮುರಿದ ಫಾಂಟ್ - **broken font** ಮುಮೊ (ಮುರಿದ ಮೊಳೆ)

rom ರೋಮನ್ ಟೈಪುಗಳು- **roman types**

ital ಇಟಾಲಿಕ್‌ಗಳು, ಓರೆ ಅಕ್ಷರಗಳು - **italics** ಓಅ (ಓರೆ ಅಕ್ಷರ)

Cap ಕ್ಯಾಪಿಟಲ್‌ಗಳು - **capitals** ದಅ (ದಪ್ಪ ಅಕ್ಷರ)

Sc ಚಿಕ್ಕ ಗಾತ್ರದ ಕ್ಯಾಪಿಟಲ್ ಅಕ್ಷರಗಳು - **small capitals** ಸಅ (ಸಣ್ಣ ಅಕ್ಷರ)

lc ಲೋವರ್ ಕೇಸ್ - **lower case**

Cap ಲೋವರ್ ಕೇಸಿನ ಅಕ್ಷರ. ಇಂಗ್ಲಿಶ್‌ನ ಚಿಕ್ಕ ಅಕ್ಷರ - **lower case letter**

✓ ತಿದ್ದುವುದಕ್ಕಿಂತ ಮೊದಲಿದ್ದದ್ದನ್ನು ಉಳಿಸಿಕೊಳ್ಳಿ - **retain the original**

No ¶ ಪ್ಯಾರಾ ಬೇಡ - **no paragraph**

F ಒತ್ತಕ್ಷರ ಸೇರಿಸಿ

೬. ಸಂಕ್ಷಿಪ್ತಾಕ್ಷರಗಳು: ಗ್ರಂಥಗಳ ಹೆಸರುಗಳನ್ನು ಲೇಖಕರ / ಸಂಸ್ಥೆಗಳ ಹೆಸರುಗಳನ್ನು ಸಂಕ್ಷಿಪ್ತಗೊಳಿಸುವ ಪರಿಪಾಟವನ್ನು ಮುದ್ರಣದಲ್ಲಿ ಕಾಣುತ್ತೇವೆ.

ಉದಾ: ಪಂ.ಭಾ, ಕವಿರಾ, ಆದಿಪು, ಅನಕೃ, ತರಾಸು, ಪುತಿನ, (ಲೇಖಕರು) ಕಸಾಪ, ಮೈವಿವಿ (ಸಂಸ್ಥೆ)

ಪು (ಪುಟ), ಪಂಭಾ (ಪಂಪಭಾರತ), ಆದಿಪು (ಆದಿಪುರಾಣ) ಗ್ರಂಥಗಳು ಇತ್ಯಾದಿಯಾಗಿ ಒಂದಕ್ಷರ, ಎರಡಕ್ಷರ, ಮೂರಕ್ಷರಗಳಿಂದ ಹಿಡಿದು ನಾಲ್ಕೈದು ಅಕ್ಷರಗಳವರೆಗೆ ಸಂಕ್ಷಿಪ್ತಾಕ್ಷರಗಳನ್ನು ಬಳಸುವುದುಂಟು. ಪುನರುಕ್ತಿ ಆಗದಿರಲು ಸಾಮಾನ್ಯವಾಗಿ ಮೂರಕ್ಷರಗಳಲ್ಲಿ ಸಂಕ್ಷಿಪ್ತಾಕ್ಷರ ಸಂಕೇತ ರಚಿಸುವ ನಿಯಮವನ್ನು ಕನ್ನಡ ನಿಘಂಟಿನಲ್ಲಿ ಅನುಸರಿಸಿದೆ. ಇದು ಉಳಿದವರಿಗೆ ಮಾದರಿ ಆಗಿದೆ. ಪಂಪಭಾ, ಆದಿಪು, ಯಶೋಚ ಇತ್ಯಾದಿ ಅನೇಕ ಸಂಕೇತ ಅಕ್ಷರಗಳು ಬಂದಾಗ ಪುನರುಕ್ತಿ ಆಗದಿರಲು ಮೂರಕ್ಷರ ಪದ್ಧತಿ ಒಳ್ಳೆಯದು.

೭. ಅಕ್ಷರ ಸಂಕೇತಗಳು: ಅಕ್ಷರ ಸಂಕೇತಗಳು ಎಂದರೆ ಯಾವುದೋ ಒಂದು ವಿವರವನ್ನು ಸಂಕೇತಿಸುವ ಅಕ್ಷರಗಳಿಗೆ ಅಕ್ಷರ ಸಂಕೇತಗಳು ಎನ್ನುತ್ತೇವೆ. ಗ್ರಂಥ ಸಂಪಾದನೆಯಲ್ಲಿ ವಿಶೇಷವಾಗಿ ಇವನ್ನು ಬಳಸುತ್ತೇವೆ.

ಉದಾಹರಣೆ: 'ಕ' ಪ್ರತಿ = ಮೈಸೂರು ಓರಿಯಂಟಲ್ ಪ್ರತಿ

'ಚ' ಪ್ರತಿ = ತಿಮ್ಮಣ್ಣದಾಸರ ಪ್ರತಿ, ಇತ್ಯಾದಿ

ಕನ್ನಡ ಅಕ್ಷರಗಳ ಬದಲಾಗಿ ಇಂಗ್ಲಿಷ್ ಅಕ್ಷರಗಳನ್ನು ಬಳಸುವುದುಂಟು. ಕಿಟೆಲ್ ಶಬ್ದಮಣಿದರ್ಪಣಕ್ಕೆ ಆಕರವಾದ ಹಸ್ತಪ್ರತಿಗಳಿಗೆ ಇಂಗ್ಲಿಷ್ ಸಂಕೇತ ಬಳಸಿದ್ದಾರೆ.

೮. ಅಡಿಟಿಪ್ಪಣಿ ಚಿಹ್ನೆಗಳು: ಮೇಲೆ ಪಠ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿಷಯಗಳನ್ನು ಅಥವಾ ಉಲ್ಲೇಖಗಳ ಆಕರಸೂಚಿಸಲು ಸಂಖ್ಯೆಗಳನ್ನು ಸಂಶೋಧನ ಪ್ರಬಂಧಗಳಲ್ಲಿ ಈಗ ಬಳಸುತ್ತಾರೆ. ಆದರೆ ಹಳೆಯ ಲೇಖಕರು ಗ್ರಂಥ ಸಂಪಾದಕರು ಮ. ರಾಮಾನುಜಲಯ್ಯಂಗಾರ್, ಅಳಸಿಂಗಾಚಾರ್ಯ ಮೊದಲಾದವರು ಕೆಲವು ಚಿಹ್ನೆಗಳನ್ನು ಅಡಿಟಿಪ್ಪಣಿಗಳಿಗೆ ಬಳಸುತ್ತಿದ್ದರು. ಇದು ಹಿಂದಿನಕಾಲದ ವಿದ್ವಾಂಸರೆಲ್ಲರ ಪದ್ಧತಿ ಆಗಿತ್ತು ಎನ್ನಬಹುದು ‡ + ✶ ξ ಮೊದಲಾದ ಚಿಹ್ನೆಗಳನ್ನು ಬಳಸಿರುವುದನ್ನು ಕಾಣಬಹುದು. ಕರಡಚ್ಚುಗಳಲ್ಲಿ ಬಳಸುವ ಚಿಹ್ನೆಗಳು, ಅಕ್ಷರಗಳ ಬಗ್ಗೆ ಚಿಹ್ನೆ / ಅಕ್ಷರ, ಅದರ ಹೆಸರು, ಬಳಸುವ ಸಂದರ್ಭ ಇತ್ಯಾದಿಗಳ ಸಮಗ್ರ ಪಟ್ಟಿ ಕನ್ನಡದಲ್ಲಿ ಯಾರೂ ಸಿದ್ಧಪಡಿಸಿಲ್ಲ.

೯. **ಶಾಸ್ತ್ರಗಳ ಚಿಹ್ನೆಗಳು:** ಸಂಗೀತದಲ್ಲಿ ಪ್ರಸ್ತಾರದ ಚಿಹ್ನೆಗಳು, ಗಣಿತ ಭೌತಶಾಸ್ತ್ರ ಚಿಹ್ನೆಗಳು ಪ್ರತ್ಯೇಕವಾಗಿವೆ. ಪ್ರತ್ಯೇಕ ಅರ್ಥದಲ್ಲಿ ಬಳಸಲಾಗಿದೆ.

ಕರಡಚ್ಚು ತಿದ್ದುಗಾರನಿಗೆ ಈ ಎಲ್ಲ ಬಗೆಯ ಚಿಹ್ನೆಗಳು ಸಂಕೇತಾಕ್ಷರಗಳು ಅಂಕಿಗಳು ಇತ್ಯಾದಿ, ಪೂರ್ಣಪರಿಚಯ ಬಳಕೆ ವಿಧಾನಗಳು ತಿಳಿದಿರಬೇಕು. ಆದ್ದರಿಂದ ಕರಡಚ್ಚು ತಿದ್ದುವವನು ವಿಷಯತಜ್ಞ ಆಗಿರಬೇಕು. ವ್ಯಾಕರಣ, ಭಾಷಾವೈಖರಿ ತಿಳಿದಿರಬೇಕು. ಹಸ್ತಪ್ರತಿ ಓದುವ ಅಭ್ಯಾಸ, ವಿವಿಧ ಲಿಪಿಗಳ ಪರಿಚಯ ತಿಳಿದಿರಬೇಕು. ಶ್ರದ್ಧೆ ಆಸಕ್ತಿಗಳಿಂದ ಕಲಿಯುವ ಮನೋಭಾವ ಇರಬೇಕು. ಕರಡಚ್ಚುಗಾರ ಮುದ್ರಣ ಪ್ರಪಂಚದಲ್ಲಿ ಗ್ರಂಥಶುದ್ಧಿಗೆ ಅನಿವಾರ್ಯವಾದ ಮಹತ್ವದ ವ್ಯಕ್ತಿ. ಅವನಿಗೆ ತಕ್ಕ ಸ್ಥಾನಮಾನ, ಸಂಭಾವನೆಯನ್ನು ಕೊಡುವುದು ಪ್ರಕಾಶಕರ, ಮುದ್ರಕರ ಆದ್ಯಕರ್ತವ್ಯ. ಕನ್ನಡ ಪುಸ್ತಕ ಪ್ರಾಧಿಕಾರದಂತಹ ಸಂಸ್ಥೆಗಳು ನಮ್ಮ ನಾಡಿನಾದ್ಯಂತ ಕನಿಷ್ಠಪಕ್ಷ ಮೂರು ದಿನಗಳಿಗೆ ಕಡಿಮೆಯಿಲ್ಲದೆ ಸಾಧ್ಯವಾದರೆ ಒಂದು ವಾರ ಕರಡಚ್ಚು ತಿದ್ದುವ ಕಮ್ಮಟಗಳನ್ನು ಏರ್ಪಡಿಸಿದರೆ ಒಳ್ಳೆಯದು. ಪತ್ರಿಕೆಯಲ್ಲಿ ಕರಡು ತಿದ್ದುವವರಿಗೆ, ಆಹ್ವಾನಪತ್ರಿಕೆ, ವಿಜ್ಞಾನಗ್ರಂಥಗಳನ್ನು, ಶಾಸ್ತ್ರಗ್ರಂಥ, ಗ್ರಂಥಸಂಪಾದನೆ, ಗ್ರಂಥಗಳನ್ನು ಸಣ್ಣಪುಟ್ಟ ಬಿಡಿ ಪ್ರಕಟಣೆಗಳನ್ನು ತಿದ್ದುವ ಹವ್ಯಾಸಿ ಹಾಗೂ ವೃತ್ತಿ ಕರಡಚ್ಚನ್ನು ತಿದ್ದುವವರಿಗೆ ಪ್ರತ್ಯೇಕ ಕಮ್ಮಟಗಳನ್ನು ಏರ್ಪಡಿಸುವ ಅಗತ್ಯವಿದೆ. ಹಾಗೂ ಡಿಟಿಪಿ ಮಾಡುವವರಿಗೆ, ಆಧುನಿಕ ವಿದ್ಯುನ್ಮಾನ ಯಂತ್ರಗಳನ್ನು ಬಳಸುವವರಿಗೆ ಕರಡು ತಿದ್ದುವ ವಿಧಾನದ ಪರಿಚಯ ಅಗತ್ಯವಿದೆ. ಹೀಗಾದರೆ ಅಚ್ಚಿನ ತಪ್ಪಿಲ್ಲದ ಗ್ರಂಥಗಳು ಕನ್ನಡದಲ್ಲಿ ಹೆಚ್ಚಾಗಿ ಬರಲು ಶಕ್ಯವಿದೆ.

ಬಹಳ ಕಾಲದ ಹಿಂದೆ ಶಿವರಾಮಕಾರಂತರ ಮಾರ್ಗದರ್ಶನದಲ್ಲಿ ಬೆಂಗಳೂರಿನಲ್ಲಿ ಲೇಖಕರ, ಮುದ್ರಕರ, ಚಿತ್ರಕಾರರ ಮತ್ತು ಪ್ರಕಾಶಕರ ಗೋಷ್ಠಿಗಳನ್ನು ಸಮಾನಾಂತರವಾಗಿ ಏರ್ಪಡಿಸಿ ಅನಂತರ ಸಮನ್ವಯಗೋಷ್ಠಿಯನ್ನು ನಡೆಸಲಾಗಿತ್ತು. ಅಂಥ ಶಿಬಿರಗಳನ್ನು ಏರ್ಪಡಿಸಿದರೆ ಮುದ್ರಣದ ವಿಚಾರದಲ್ಲಿ ಕರಡಚ್ಚು ತಿದ್ದುವುದರಲ್ಲಿ ಸುಧಾರಣೆ, ಸಮಾನತೆ ಬರಲು ಶಕ್ಯವಿದೆ.

ಅಧ್ಯಾಯ : 2

ಕರಡಚ್ಚು ತಿದ್ದುವಿಕೆ ಮತ್ತು ಅಂಕಿಗಳ ಬಳಕೆ

ಲೇಖಕರು ಅಥವಾ ಸಂಪಾದಕರು ಒಂದು ಹಸ್ತಪ್ರತಿಯನ್ನಾಗಲಿ ಕರಡಚ್ಚಿನ ಪ್ರತಿಯನ್ನಾಗಲಿ ಗಮನಿಸಿದಾಗ ಅದರಲ್ಲಿ 1. ಅಂಕಿಗಳು, 2. ಲೇಖನ ಚಿಹ್ನೆಗಳು, 3. ಸಂಕೇತ ಚಿಹ್ನೆಗಳು, 4. ಸಂಕೇತಾಕ್ಷರಗಳು, 5. ಸಂಕ್ಷಿಪ್ತಾಕ್ಷರಗಳು, 6. ಶಾಸ್ತ್ರ ಚಿಹ್ನೆಗಳು (ಗ್ರಂಥ ಸಂಪಾದನ ಚಿಹ್ನೆಗಳು, ಗಣಿತ, ಭೌತ ರಸಾಯನ ಮೊದಲಾದ ವಿಜ್ಞಾನಶಾಸ್ತ್ರದ ಚಿಹ್ನೆಗಳು) 7. ಅಡಿಟಿಪ್ಪಣಿ ಚಿಹ್ನೆಗಳು, 8. ಕರಡಚ್ಚು ಚಿಹ್ನೆಗಳು 9. ಅನ್ಯಭಾಷಾ ಚಿಹ್ನೆಗಳು, 10. ಸಂಕೀರ್ಣ ಚಿಹ್ನೆಗಳು ಎಂದು ಬಗೆಬಗೆಯ ಚಿಹ್ನೆಗಳನ್ನೂ ಬಗೆಬಗೆಯ ಅಕ್ಷರ ವಿನ್ಯಾಸಗಳನ್ನೂ ಬಳಸುತ್ತಾರೆ. ಇವೆಲ್ಲದರ ವಿಸ್ತಾರವಾದ ಪರಿಚಯ ಕರಡಚ್ಚುಗಾರನಿಗೆ ಇರಬೇಕು.

ಆದರೆ ಈ ಬಗ್ಗೆ ವಿಶೇಷ ಗಮನವೀಯುವವರು ಕೆಲವರೇ. ಇದಕ್ಕೆ ಕಾರಣ ಕರಡಚ್ಚು ತಿದ್ದುವ ಶಿಕ್ಷಣವನ್ನು ಶಾಸ್ತ್ರೀಯವಾಗಿ ಕನ್ನಡದಲ್ಲಿ ರೂಪಿಸಿ ಬೋಧಿಸಿದವರೂ ಇಲ್ಲ, ಕಲಿತವರೂ ಇಲ್ಲ, ತಾವೇ ಏಕಲವ್ಯರಂತೆ ಅಲ್ಲಿ ನೋಡಿ, ಇಲ್ಲಿ ನೋಡಿ, ಅವರನ್ನು ಕೇಳಿ, ಇವರನ್ನು ಕೇಳಿ, ತಮಗೆ ತೋಚಿದಂತೆ ಚಿಹ್ನೆಗಳನ್ನು ಬಳಸಿ ಕರಡಚ್ಚು ತಿದ್ದುತ್ತಿರುವವರೇ ಅನೇಕ ಮಂದಿ.

ಕರಡಚ್ಚು ತಿದ್ದುವವರಲ್ಲಿ ಮೂರು ಬಗೆ ಜನರಿದ್ದಾರೆ.

1. ಲೇಖಕರು / ಸಂಪಾದಕರು / ಅನುವಾದಕರು
2. ಪತ್ರಿಕೆ ಕರಡಚ್ಚು ತಿದ್ದುವವರು. (ಬಿಡಿಬರಹಗಳ ತಿದ್ದುಗಾರರು)
3. ಮುದ್ರಣಾಲಯಗಳಲ್ಲಿ ನೇಮಕಗೊಂಡ ವೃತ್ತಿನಿರತ ಕರಡಚ್ಚು ತಿದ್ದುಗಾರರು.

ಮೊದಲ ವರ್ಗದವರು ಲೇಖಕರಾಗಲಿ, ಸಂಪಾದಕರಾಗಲಿ, ಅನುವಾದಕರಾಗಲಿ ವಿಶೇಷವಾಗಿ ಗ್ರಂಥಗಳನ್ನು ರಚಿಸುತ್ತಾರೆ/ಅನುವಾದಿಸಿರುತ್ತಾರೆ. ಅವರನ್ನು **ಗ್ರಂಥದ ಕರಡಚ್ಚು ತಿದ್ದುಗಾರರು** ಎನ್ನಬಹುದು. ಪತ್ರಿಕಾ ಕರಡಚ್ಚು ತಿದ್ದುಗಾರರು ಲೇಖನಗಳನ್ನು ಸುದ್ದಿಗಳನ್ನು ಪ್ರಕಟನೆಗಳನ್ನು, ಜಾಹೀರಾತುಗಳನ್ನು ಎಂದರೆ ಬಿಡಿಬರಹಗಳನ್ನು ತಿದ್ದುವ ಕರಡಚ್ಚುಗಾರರು ಆಗಿರುತ್ತಾರೆ. ಇವರನ್ನು **ಪತ್ರಿಕಾ ಕರಡಚ್ಚುಗಾರರು** ಎಂದು

ಕರೆಯಬಹುದು. ಇನ್ನು ಬಿಡಿ ಪ್ರಕಟನೆಗಳನ್ನು ತಿದ್ದುವವರು ಮೂರನೆಯ ವರ್ಗದವರಾಗಿರುತ್ತಾರೆ. ಸಭೆಗಳ ಆಹ್ವಾನ ಪತ್ರಿಕೆ, ಸಾರ್ವಜನಿಕ ಪ್ರಕಟನೆ, ಲಗ್ನಪತ್ರಿಕೆ, ವೇಳಾ ಪತ್ರಿಕೆ, ಶಾಲಾ ಕಾಲೇಜುಗಳ ವಾರ್ಷಿಕ ಪತ್ರಿಕೆ, ಮೊದಲಾದ ಬಿಡಿಪ್ರಕಟನೆಗಳನ್ನು ತಿದ್ದುವವರು ಯಾರಾದರೂ ಆಗಿರುತ್ತಾರೆ. ಇವರನ್ನು **ಬಿಡಿಪ್ರಕಟನೆಯ ಕರಡಚ್ಚು ತಿದ್ದುಗಾರರು** ಎಂದು ಕರೆಯಬಹುದು. ಸಾಮಾನ್ಯವಾಗಿ ಮುದ್ರಣಾಲಯದವರೇ ತಿದ್ದಿಸುತ್ತಾರೆ. ಅಚ್ಚು ಮಾಡಿಸುವವರಿಗೆ ಕರಡಚ್ಚು ತಿದ್ದುವುದು ತಿಳಿದಿರುವುದಿಲ್ಲ. ಆದರೆ ಕೆಲವರು ಅನುಭವ ಇಲ್ಲದ ಅಧ್ಯಾಪಕರು, ಇತರರು ಮನಬಂದಂತೆ ತಿದ್ದುವುದು ಉಂಟು. ಮುದ್ರಣಾಲಯದವರು ಬಿಡಿ ಪ್ರಕಟನೆಗಳನ್ನು ವೈವಿಧ್ಯಮಯವಾಗಿ ಮಾಡಿರುತ್ತಾರೆ. ಆ ಕಡತವನ್ನು ತೋರಿಸಿದಾಗ ನಮ್ಮ ಆಹ್ವಾನ ಪತ್ರಿಕೆಯನ್ನು ಈ ರೀತಿ ಮಾಡಿಸಿ ಎಂದು ವಿಷಯ ನೀಡುತ್ತಾರೆ. ಆಗ ಆಯ್ಕೆ ಸಂಪ್ರದಾಯಾನುಸಾರವಾಗಿರುತ್ತದೆ. ಲಗ್ನಪತ್ರಿಕೆಗಳು ಇದಕ್ಕೊಂದು ನಿದರ್ಶನ. ಕನ್ನಡದಲ್ಲಿ ಇಂಗ್ಲಿಷಿನಲ್ಲಿ ಪ್ರಕಟಿಸುವಾಗ ಆಯ್ಕೆ ಮಾಡುವವರು ಇಂಗ್ಲಿಷ್ ಗೊತ್ತಿಲ್ಲದಿದ್ದರೂ ಇಂಗ್ಲಿಷಿನಲ್ಲಿ ಆಹ್ವಾನಪತ್ರಿಕೆ ಮಾಡಿಸಿದಾಗ ಕರಡಚ್ಚುಗಾರರು ಪ್ರೆಸ್ಸಿನಲ್ಲಿ ತಿದ್ದಿರುವುದೇ ಅಂತಿಮವಾಗಿರುತ್ತದೆ. ಕನ್ನಡದಲ್ಲಿ ಆಹ್ವಾನಪತ್ರಿಕೆ ತಿದ್ದುವಾಗ ಕೆಲವೊಮ್ಮೆ ಭಾಷಾ ಸಮಸ್ಯೆ ಕರಡಚ್ಚುಗಾರನಿಗೆ ಬರುತ್ತದೆ. ಅದೆಂದರೆ ಅನ್ಯಭಾಷಾ ಬಳಕೆ. ಉದಾಹರಣೆಗೆ ಹೇಳುವುದಾದರೆ ಕೆಲವರು ಸಂಪ್ರದಾಯಸ್ಥರು ತಮಿಳು ಭಾಷೆಯ ಮದುವೆಯ ಆಹ್ವಾನಪತ್ರವನ್ನು ಕನ್ನಡ ಲಿಪಿಯಲ್ಲಿ ಅಚ್ಚು ಮಾಡಿಸುತ್ತಾರೆ. ಗ್ರಂಥಗಳೂ ಕನ್ನಡ ಲಿಪೀಕರಣವಾಗಿ ಪ್ರಕಟವಾಗುವುದುಂಟು. ಕುರಾನನ್ನು ಕನ್ನಡ ಲಿಪಿಯಲ್ಲಿ ಪ್ರಕಟಿಸಿರುವುದನ್ನು ಕಾಣಬಹುದು. ಕ.ಲ. ಲಕ್ಷ್ಮೀನರಸಿಂಹ ಶಾಸ್ತ್ರಿ ಅವರು ದಾಸುಲ ತೆಲುಗು ಪಾಟಲು ಗ್ರಂಥವನ್ನು ಕನ್ನಡಲಿಪಿಯಲ್ಲಿ ಪ್ರಕಟಿಸಿದ್ದಾರೆ. ಇಂಗ್ಲಿಷ್ ಪದ ವಾಕ್ಯಗಳು ಕನ್ನಡಲಿಪಿಯಲ್ಲಿ ಕಾಣಿಸಿಕೊಳ್ಳುವುದು ಅನುವಾದದ ಗ್ರಂಥಗಳಲ್ಲಿ ಸಾಮಾನ್ಯ. ಇಂಥ ಸಂದರ್ಭಗಳಲ್ಲೆಲ್ಲಾ ಕರಡಚ್ಚು ತಿದ್ದುವವನಿಗೆ ಕನ್ನಡ ಭಾಷೆ/ಕನ್ನಡ ಲಿಪಿ ತಿಳಿದಿದ್ದರೆ ಸಾಲದು, ಅನ್ಯಭಾಷಾಜ್ಞಾನ ಅದಕ್ಕೆ ತಕ್ಕ ಚಿಹ್ನೆಗಳ ಬಳಕೆ ತಿಳಿದಿರಬೇಕು. ಇವರನ್ನು **ಸಂಕೀರ್ಣ ಬರಹಗಳ ಕರಡಚ್ಚುಗಾರರು** ಎಂದು ಹೇಳಬಹುದು.

ಇನ್ನು ಪತ್ರಿಕಾರಂಗದಲ್ಲಿ ಕರಡಚ್ಚು ತಿದ್ದುವರು ಕೆಲವು ವಿಚಾರಗಳಲ್ಲಿ ಉಳಿದವರೆಲ್ಲರಿಗಿಂತ ಭಿನ್ನರಾಗಿರುತ್ತಾರೆ. ಈಚೆಗೆ ವರ್ಣವಿನ್ಯಾಸವನ್ನು ಸಮಾಸ ಪದಗಳಲ್ಲಿ ಬಳಸುತ್ತಾರೆ. ಒಂದು ಪದದಲ್ಲಿರುವ ಕೆಲವು ಅಕ್ಷರಗಳಿಗೆ ಅಥವಾ ಪದಗಳಿಗೆ ಬೇರೆ ಬಣ್ಣವನ್ನು ನೀಡಿ ಶಬ್ದ ಚಮತ್ಕಾರ ನೀಡುವುದನ್ನು ಪತ್ರಿಕೆಗಳಲ್ಲಿ ಈಚೆಗೆ ಕಾಣುತ್ತಿದ್ದೇವೆ. ಕರಡಚ್ಚು ತಿದ್ದುವವರು ಈ ಅಂಶವನ್ನು ಗಮನಿಸಬೇಕಾಗುತ್ತದೆ. ಹಾಗೆಯೇ ಅಕ್ಷರಗಾತ್ರ, ಶೈಲಿ ಬಳಕೆಯನ್ನು ಗಮನಿಸಬೇಕು. ಉದಾಹರಣೆಗೆ ಓರೆ ಅಕ್ಷರಗಳು *ರಾಮಾಯಣ*, ಚೌಕಾಕ್ಷರಗಳು **ರಾಮಾಯಣ** ಇತ್ಯಾದಿ. ಫ್ಯಾಷನ್ ಡಿಸೈನರ್ಸ್

(ವಸ್ತ್ರವಿನ್ಯಾಸಕಾರರ) ವರ್ಗಕ್ಕೆ ಇವರನ್ನು ಸೇರಿಸಬಹುದು. ಅಕ್ಷರ ವಿನ್ಯಾಸಕಾರರು ಎಂದು ಕರೆಯಬಹುದು. ಕರಡಚ್ಚು ತಿದ್ದುವ ಕ್ಷೇತ್ರದಲ್ಲಿ ಹೊಸಬೆಳವಣಿಗೆ ಇದಾಗಿದೆ. ಪತ್ರಿಕಾ ವಿನ್ಯಾಸಕ್ಕೆ ಒಂದು ಉದಾಹರಣೆ : ಗುರುತರ ಹೊಣೆ ಮುಗಿಸಿದ ಮೂರ್ತಿ ಲವಲ VK (ವಿಜಯ ಕರ್ನಾಟಕ 21-8-2011) ಇಲ್ಲಿ 'ಗುರು' 'ಲವಲ' ಪದ ಅಕ್ಷರ ಸಮೂಹ ಕೆಂಪು ಶಾಯಿಯಲ್ಲಿ ಅಚ್ಚಾಗಿದೆ. ಹೀಗಾಗಿ ವರ್ಣವಿನ್ಯಾಸವನ್ನು ಕರಡಚ್ಚುಗಾರ ಪತ್ರಿಕೆ ತಿದ್ದುವಲ್ಲಿ ಗಮನಿಸಬೇಕಾಗುತ್ತದೆ.

ಹೀಗೆ ಇಂದು ಕರಡಚ್ಚುಗಾರ ಅನೇಕ ವಿಚಾರಗಳನ್ನೂ ವಿಷಯಗಳನ್ನೂ ತಿಳಿದಿರಬೇಕಾಗುತ್ತದೆ. ಈ ಪೈಕಿ ಅಂಕಿಗಳ ಬಳಕೆಯನ್ನು ಕುರಿತು ಕೆಲವು ವಿಷಯಗಳನ್ನು ಈ ಬರಹದಲ್ಲಿ ಪ್ರಸ್ತಾಪಿಸಲಾಗಿದೆ.

ಅಂಕಿಗಳ ಪ್ರಸ್ತಾಪವನ್ನು ಸಂಖ್ಯಾವಾಚಕ ಶಬ್ದಗಳ ಬಳಕೆ ವಿಚಾರದಲ್ಲಿ ವ್ಯಾಕರಣದಲ್ಲಿ ಗಮನಿಸುತ್ತಾರೆ. ಆದರೆ ಇಲ್ಲಿ ಕರಡಚ್ಚು ತಿದ್ದುವಿಕೆಯ ಹಿನ್ನೆಲೆಯಲ್ಲಿ ಗಮನಿಸಲಾಗಿದೆ. ಮೊದಲನೆಯದಾಗಿ, ಕನ್ನಡ ಗ್ರಂಥಗಳಲ್ಲಿ ನಾಲ್ಕು ಬಗೆಯ (ನಾಲ್ಕು ಭಾಷೆಗಳಲ್ಲಿ ಬಳಸುವ) ಅಂಕಿಗಳನ್ನು ಬಳಸುವುದನ್ನು ಕಾಣಬಹುದು.

1. ಅರಾಬಿಕ್ ಅಂಕಿಗಳು (ಇಂಗ್ಲಿಷ್ ಅಂಕಿಗಳು ಎಂದು ಸಾಮಾನ್ಯರು ಹೇಳುವುದುಂಟು): 1, 2, 3, 4, 5, 6, 7, 8, 9, 0
2. ಕನ್ನಡ ಅಂಕಿಗಳು : ೧, ೨, ೩, ೪, ೫, ೬, ೭, ೮, ೯, ೦
3. ದೇವನಾಗರಿ ಅಂಕಿಗಳು: १, २, ३, ४, ५, ६, ७, ८, ९, १०
4. ರೋಮನ್ ಅಂಕಿಗಳು(ದೊಡ್ಡದು): I, II, III, IV, V, VI, VII, VIII, IX, X
4. ರೋಮನ್ ಅಂಕಿಗಳು (ಸಣ್ಣದು): i, ii, iii, iv, v, vi, vii, viii, ix, x

ಅಂಕಿ ಯಾವ ಭಾಷೆಯದೇ ಆಗಿರಲಿ ಯಾವ ಸಂದರ್ಭದಲ್ಲಿ ಯಾವ ಅರ್ಥದಲ್ಲಿ ಹೇಗೆ ಬಳಸಬೇಕು ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಅಂಕಿಗಳ ಬಳಕೆ ವಿಚಾರದಲ್ಲಿ ಭಾಷಾಭಿಮಾನ ದೇಶಾಭಿಮಾನದ ಅಂಶವೂ ಅಡಗಿದೆ ಅನ್ನುವುದು ಗಮನಿಸಬೇಕಾದ ಅಂಶವಾಗಿದೆ. ಕನ್ನಡ ಗ್ರಂಥಗಳಲ್ಲಿ ಕನ್ನಡ ಪತ್ರಿಕೆಗಳಲ್ಲಿ ಕನ್ನಡ ಅಂಕಿಗಳನ್ನೇ ಬಳಸಬೇಕು ಎಂಬುದು ಅಭಿಮಾನಿಗಳ ವಾದ. ಆದರೆ ಅರಾಬಿಕ್ ಬಳಕೆಯೇ ಅನುಕೂಲ ಎಂದು ಕೆಲವು ಪತ್ರಿಕೆಗಳು ಬಳಸುತ್ತಿವೆ.

ಸಂಯುಕ್ತ ಕರ್ನಾಟಕದಂಥ ಪತ್ರಿಕೆಗಳು ಕನ್ನಡ ಮತ್ತು ಇಂಗ್ಲಿಷ್ ಎರಡೂ ಅಂಕಿಗಳನ್ನು ಬಳಸುತ್ತಿವೆ. ಸಂಯುಕ್ತ ಕರ್ನಾಟಕದ ಭಾನುವಾರದ ಪತ್ರಿಕೆಯಲ್ಲಿ

'ಸಾಪ್ತಾಹಿಕ ಸೌರಭ'ದ ಪುಟಗಳಲ್ಲಿ ಕನ್ನಡ ಅಂಕಿ ಬಳಸುತ್ತಾರೆ. ಉಳಿದ ಪುಟಗಳಲ್ಲಿ ಅರಾಬಿಕ್ ಅಂಕಿ ಬಳಸುತ್ತಾರೆ. (ನೋಡಿ ಸಂಯುಕ್ತ ಕರ್ನಾಟಕ ೨೧-೮-೨೦೧೧ ಭಾನುವಾರ) ಪುಸ್ತಕಲೋಕ ಕನ್ನಡ ಅಂಕಿಗಳನ್ನೇ ಬಳಸುತ್ತಿದೆ. ಇನ್ನು ಕನ್ನಡ ಗ್ರಂಥಗಳಲ್ಲಿ ಕನ್ನಡ ಅಂಕಿಗಳನ್ನು ಸಾಮಾನ್ಯವಾಗಿ ಹಿಂದಿನ ಕಾಲದಲ್ಲಿ ಬಳಸುತ್ತಿದ್ದರು. ಈಗ ಕೆಲವರು ಕನ್ನಡ ಅಂಕಿಗಳನ್ನು, ಅಧಿಕ ಜನ ಇಂಗ್ಲಿಷ್ ಅಂಕಿಗಳನ್ನು ಗ್ರಂಥಗಳಲ್ಲಿ ಪುಟಸಂಖ್ಯೆಗೆ ಬಳಸುತ್ತಾರೆ. ಈ ವಿಚಾರದಲ್ಲಿ ಏಕಾಭಿಪ್ರಾಯವಿಲ್ಲ ಅಥವಾ ಒಂದು ನೀತಿಯಿಲ್ಲ ಎನ್ನಬಹುದಾಗಿದೆ.

ಅಂಕಿಗಳ ಬಗ್ಗೆ ಹೇಳುವಾಗ 'ಸಿರಿಭೂವಲಯ' ಗ್ರಂಥದ ಬಗ್ಗೆ ಹೇಳಲೇಬೇಕು. ಸಿರಿಭೂವಲಯ ಜಗತ್ತಿನಲ್ಲೇ ವಿಶಿಷ್ಟವಾದ ಕನ್ನಡಗ್ರಂಥ. ಏಕೆಂದರೆ ಆ ಗ್ರಂಥ ಅಂಕಾಕ್ಷರ ಪದ್ಧತಿಯಲ್ಲಿ ರಚಿತವಾಗಿದೆ. ಅಂಕಾಕ್ಷರವೆಂದರೆ ಪ್ರತಿ ಅಕ್ಷರಕ್ಕೂ ಸಂಕೇತವಾಗಿ ಅಂಕಿಗಳನ್ನು ಕೊಡಲಾಗಿದೆ. ಅ=೧, ಆ=೨, ಅೀ=೩, ಇ=೪, ಈ=೫, ಈೀ=೬ ಇತ್ಯಾದಿ. ಇಡೀ ಕಾವ್ಯವನ್ನು ಅಂಕಿಗಳ ಚಕ್ರಬಂಧಗಳಲ್ಲಿ ಬರೆಯಲಾಗಿದೆ. ಅಂಕಿಗಳು ಅಕ್ಷರಗಳನ್ನು ಅಲ್ಲಿ ಪ್ರತಿನಿಧಿಸುತ್ತವೆ. ಈ ಅಂಕಿಗಳು ವಿವಿಧ ಬಂಧಗಳಲ್ಲಿ ಚೌಕಾಕಾರವಾದ ಮನೆಗಳಲ್ಲಿ ಬರೆಯಲ್ಪಟ್ಟಿವೆ. ಅವುಗಳನ್ನು ಚಿತ್ರಕವಿತ್ವದ ಮಾದರಿಯಲ್ಲಿ ಓದಿದರೆ ಕಾವ್ಯ ಹೊರಹೊಮ್ಮುತ್ತದೆ. (ವಿವರಗಳಿಗೆ ಸಿರಿಭೂವಲಯ ಗ್ರಂಥ ನೋಡಿ) ಈ ವಿಶಿಷ್ಟ ಗ್ರಂಥದ ಕರಡು ತಿದ್ದುವುದು ಒಂದು ಸವಾಲು ಸಂಪಾದಕರಿಗೇ ಆಗಿತ್ತು. ಈ ತರಹದ ಗ್ರಂಥ ಜಗತ್ತಿನ ಯಾವ ಭಾಷೆಯಲ್ಲೂ ಇಲ್ಲ. ಇದೊಂದು ಅತ್ಯಪರೂಪದಗ್ರಂಥ.

ಅಂಕಿ, ಅಂಕ, ಅಂಕೆ ಎಂಬ ಪದಗಳನ್ನು ನಾವು ಬಳಸುತ್ತೇವೆ. ಇವುಗಳನ್ನೊಳಗೊಂಡ ಸಮಾಸ ಪದಗಳು ಬೇರೆ ಬೇರೆ ಅರ್ಥ ನೀಡುತ್ತವೆ. ಈ ಬಗ್ಗೆ ಕೋಶಗಳ ಅರ್ಥ ಹೀಗಿದೆ.

ಅಂಕ = ಗುರುತು, ಚಿಹ್ನೆ, ಅಂಕೆ ಇತ್ಯಾದಿ.

ಅಂಕಲಿಪಿ = ಅಂಕಿಗಳನ್ನೂ ಅಕ್ಷರಗಳನ್ನೂ ಕಲಿಸುವ ಪುಸ್ತಕ. (ಮಗ್ಗಿಪುಸ್ತಕ) ಅಂಕೆಗಳನ್ನು ಬಳಸಿ ಬರೆಯುವ ಬರಹ.

ಅಂಕಪಟ್ಟಿ = ಪರೀಕ್ಷೆಯಲ್ಲಿ ವಿದ್ಯಾರ್ಥಿ ಪಡೆದ ಅಂಕಗಳನ್ನು ನಮೂದಿಸುವ ಪಟ್ಟಿ.

ಅಂಕಗಣಿತ = ಸಂಖ್ಯೆಗಳ ಮೂಲಕ ಮಾಡುವ ಗಣಿತ, ಗಣಿತಶಾಸ್ತ್ರದ ಒಂದು ಪ್ರಭೇದ.

ಅಂಕಮಾಲೆ = ಬಿರುದಾವಳಿ.

ಅಂಕ ಪರದೆ = ನಾಟಕದ ಅಂಕದ ಕೊನೆಯಲ್ಲಿ ಬಿಡುವ ತೆರೆ.

ಅಂಕವಾತು = ವೀರವಚನ, ಯುದ್ಧದ ಮಾತು.

ಅಂಕಿ = ಸಂಖ್ಯೆಯನ್ನು ಬರಹರೂಪದಲ್ಲಿ ತೋರಿಸುವ ಚಿಹ್ನೆ, ಅಂಕೆ.

ಅಂಕೆ = 1) ಸಂಖ್ಯೆಯನ್ನು ಬರಹದಲ್ಲಿ ತೋರಿಸುವ ಚಿಹ್ನೆ, 2) ಎಣಿಕೆ, ಲೆಕ್ಕ, 3) ಗುರುತು ಇತ್ಯಾದಿ.

(ಸಂಕ್ಷಿಪ್ತ ಕನ್ನಡ ನಿಘಂಟು ಪುಟ 1-2)

ಕಿಟ್ಟೆಲ್ಲರು ಅಂಕಿ ಎಂಬುದು ಅಂಕದ ತದ್ಭವ ಎಂದಿದ್ದಾರೆ. ಅಂಕಿ ಅಂಕೆ ಎರಡು ರೂಪಗಳನ್ನು ಒಂದೇ ಅರ್ಥದಲ್ಲಿ ಬಳಸುತ್ತಾರೆ.

ಉದಾ : ಅಂಕಿ, ಅಕ್ಷರದ ನಂತರ ಪೂರ್ಣ ವಿರಾಮದ ಚಿಹ್ನೆಯನ್ನು ಬಳಸಬೇಕು. ಅ. 1, ಅ. 2, ಅ. 3....

ಕೊನೆಯ ಅಂಕೆಯ ನಂತರ ಪೂರ್ಣವಿರಾಮ ಅನಗತ್ಯ 5.1, 5.2.4, 5.2.4.1

(ಕನ್ನಡ ಶೈಲಿ ಕೈಪಿಡಿ ಪುಟ. 15-16)

ಕಸಾಪದ ಕನ್ನಡ ನಿಘಂಟಿನಲ್ಲಿ ಅಂಕಿ ಅಂಕ ಅಂಕೆ ಬಗ್ಗೆ ಹೀಗೆ ಹೇಳಿದೆ.

ಅಂಕ = ಒಬ್ಬನ ಹೆಸರು : "ಕರುಣದಿಂದ ಅಂಕನು ತಂನ ಮನಸು ಹರ್ಷವಾಗಿ (ಎಕVII)

ಅಂಕ = ಅಂಕಿ: ಕೆಯಿ ಮತ್ತರಯ್ಯುತ್ತಾರು ಅಂಕದೊಳಂ ಮತ್ತರ್ (ಎಕXIX) ಸುಮಾರು 33 ಅರ್ಥಗಳನ್ನು ಕೊಟ್ಟಿದ್ದಾರೆ ಅಂಕ ಎಂಬ ಪದಕ್ಕೆ ಕನ್ನಡ ನಿಘಂಟುಕಾರರು. (ನೋಡಿ ಪುಟ 2 ಸಂಪುಟ 1 ಕಸಾಪ ಕನ್ನಡ ನಿಘಂಟು)

ಅಂಕಕರಣ = (ಗಣಿತ) ಅಕ್ಷರದಲ್ಲಿ ಬರೆದ ಅಥವಾ ಬಾಯಲ್ಲಿ ಹೇಳಿದ ಸಂಖ್ಯೆಯನ್ನು ಅಂಕಿಯಲ್ಲಿ ಬರೆಯುವುದು.

ಅಂಕಗಣಿತ = ಸಂಖ್ಯೆಗಳ ಮೂಲಕ ಮಾಡುವ ಗಣಿತ, ಗಣಿತಶಾಸ್ತ್ರದ ಒಂದು ಭೇದ.

ಅಂಕಟಂಕ = ತಮ್ಮ ಗುರುತಿನ ನಾಣ್ಯವನ್ನು ಮುದ್ರಿಸುವ ಅಧಿಕಾರ.

ಅಂಕ = ತತ್ಸಮ ಶಬ್ದವು ಎಂದರೆ ಸಂಸ್ಕೃತಕ್ಕೂ ಕನ್ನಡಕ್ಕೂ ಸಮಾನಶಬ್ದ (ಶಮದ ಅಪಭ್ರಂಶ ಪ್ರಕರಣ ನೋಡಿ)

ಅಂಕಿ = ಶಬ್ದಾರ್ಥಕ್ಕೆ ಅಂಕೆ ನೋಡಿ ಎಂದಿರುವುದು ಅಂಕಿ ಅಂಕೆ ಸಮಾನ ಶಬ್ದಗಳಾಗಿವೆ. (ಕನಿ ಸಂಪುಟ 1 ಪು. 5)

ಅಂಕೆ, ಅಂಕಿ = ಸಂಖ್ಯೆಯನ್ನು ಬರಹದಲ್ಲಿ ತೋರಿಸುವ ಚಿಹ್ನೆ, ಅಂಕ.
ಉದಾ : 589 ಎಂಬ ಸಂಖ್ಯೆಯಲ್ಲಿ 3 ಅಂಕೆಗಳಿವೆ.
ಈ ಪುಟದ ತುಂಬ ಅಂಕಿಗಳೇ ಇದೆ (ಸಂಸ್ಕೃತದಲ್ಲಿ 'ಅಂಕ' ಎಂದಿದೆ)

ಪುಟ ಸಂಖ್ಯೆಗಳಲ್ಲಿ ಅಂಕಿ ಬಳಕೆ

1. ಸಾಮಾನ್ಯವಾಗಿ ಅಂಕಿಗಳನ್ನು ಪುಟಗಳ ಮೇಲ್ಭಾಗದಲ್ಲಿ ಎಡತುದಿ, ಬಲತುದಿ ಮಧ್ಯದಲ್ಲಿ ಬಳಸಿದರೆ ಕೆಲವರು ಪುಟಗಳ ಕೆಳಗೆ ಮಧ್ಯಭಾಗ, ಬಲಭಾಗ (ತುದಿ)ಯಲ್ಲಿ ಮಾತ್ರ ಪುಟಸಂಖ್ಯೆ ತಿಳಿಸಲು ಬಳಸುತ್ತಾರೆ.



ಪುಟದ ಕೆಳಗೆ ಎಡಭಾಗದ ತುದಿಯಲ್ಲಿ ಪುಟಸಂಖ್ಯೆ ಹಾಕುವುದಿಲ್ಲ ಏಕೆಂದರೆ ಅಲ್ಲಿ ಪುಸ್ತಕದ ಹೊಲಿಗೆ ಬರುತ್ತದೆ, ಅಲ್ಲದೆ ಪುಟ ತಿರುವಿದಾಗ ಬೇಗ ಕಾಣುವುದಿಲ್ಲ.

ವಿಶೇಷ ಸಂದರ್ಭದಲ್ಲಿ ಪುಟದ ನಡುವೆ ಬಳಸುವುದುಂಟು. ಕನ್ನಡ ನಿಘಂಟಿನಲ್ಲಿ ಸಾಲುಗಳ ಸಂಖ್ಯೆ ಸೂಚಿಸಲು ಹಾಳೆ ಮಧ್ಯೆ ಸಂಖ್ಯೆ ಬಳಸಿದೆ.

ಅಂಕ	5	
	10	
ಅಂಕ	15	
	20	
	25	
	30	

ಇಲ್ಲಿ 5 ಸಾಲಿಗೆ ಒಂದರಂತೆ ಕ್ರಮಸಂಖ್ಯೆ ಬಳಸಿದ್ದಾರೆ

2. ಪದಗಳಿಗೆ ಬೇರೆ ಬೇರೆ ಅರ್ಥಗಳಿದ್ದಾಗ ಅವುಗಳಿಗೆ ಕ್ರಮಸಂಖ್ಯೆಗೆ ಅಂಕಿ ಬಳಸುತ್ತಾರೆ.
   ಅನವಸರ (ಗು) ೧. ವಿರಾಮವಿಲ್ಲದ ೨. ಉಚಿತವಲ್ಲದ ಸಮಯ
3. ಕ್ರಮಸಂಖ್ಯೆ ಬಳಸುವಾಗ ಅಂಕಿ ಬಳಕೆ ಆಗುತ್ತದೆ. ಪದ್ಯದ ಸಂಖ್ಯೆ, ಅಧ್ಯಾಯದ ಸಂಖ್ಯೆ, ಮೊದಲ ಸಾಲಿನ ಸಂಖ್ಯೆ ಯಾವುದೇ ಆಗಿರಬಹುದು. ಎಲ್ಲಾ ಬಗೆಯ ಸಂಖ್ಯೆಗಳಿಗೂ ಅಂಕಿ ಬಳಸುತ್ತಾರೆ. 1, 2, 3, 4, 5, 6, 7, 8 ಇತ್ಯಾದಿ.
4. ಅಕ್ಷರ ಗಾತ್ರಗಳನ್ನು ತಿಳಿಸುವಾಗ ಅಂಕಿಗಳನ್ನು ಬಳಸುತ್ತಾರೆ. 8 ಪಾಯಿಂಟ್ ಸಾದಾ ಅಕ್ಷರ, 10 ಪಾಯಿಂಟ್ ದಪ್ಪ ಅಕ್ಷರ ಇತ್ಯಾದಿ. (ಕನ್ನಡ ನಿಘಂಟು ಪುಟ XVIII) ಸಂ. - 1 ನೋಡಿ)
5. ಇಸವಿಗಳ ಮೂಲಕ ಕಾಲಾವಧಿಯನ್ನು ಸೂಚಿಸುವಾಗ ಅಂಕಿಗಳ ಬಳಕೆ ಆಗುತ್ತದೆ.

ಕನ್ನಡ ನಿಘಂಟು ಕಛೇರಿಯ ಸಿಬ್ಬಂದಿ
ಸಂಪಾದಕರು :

1) ಡಿ.ಎಲ್. ನರಸಿಂಹಾಚಾರ್, ಎಂ.ಎ., (೧೯೫೫-೫೬)

2) ಎಲ್. ಗುಂಡಪ್ಪ ಎಂ.ಎ., (೧೯೫೭-೬೩)

6. ಪುಸ್ತಕ ವಿವರದ ಪುಟದಲ್ಲಿ ಮುದ್ರಣದ ಇಸವಿ, ಪ್ರತಿಗಳ ಸಂಖ್ಯೆ, ಪುಸ್ತಕ ಬೆಲೆ, ಪುಟಗಳ ಸಂಖ್ಯೆ ಇತ್ಯಾದಿ ವಿವರಗಳನ್ನು ಸೂಚಿಸಲು ಅಂಕಿಗಳನ್ನು ಬಳಸಲಾಗುತ್ತದೆ.
ಮೊದಲನೆಯ ಮುದ್ರಣ: ೧೯೭೦
ಪ್ರತಿಗಳು: ೧೦,೦೦೦
ಪುಟಗಳು: ೬೦೦

7. ಪಿನ್‌ಕೋಡ್ (ಅಂಚೆ ಕಚೇರಿ ಸಂಖ್ಯೆ) ತೋರಿಸುವುದು ಅಂಕಿಗಳಲ್ಲೇ. ಜಯನಗರ, ಬೆಂಗಳೂರು-560 041. ವಿಜಯನಗರ, ಬೆಂಗಳೂರು-560 040.

8. ಪದ್ಯದ ಸಂಖ್ಯೆಗಳನ್ನು ಕೊಡುವಾಗ ಸಾಮಾನ್ಯವಾಗಿ ಪದ್ಯದ ಕೊನೆಯಲ್ಲಿ ಸಂಖ್ಯೆ ಕೊಡುತ್ತಾರೆ.

ಯಾಕಳುವೆಯೆಲೆರಂಗ। ಬೇಕಾದ್ದು ನಿನಗೀವೆ।
ನಾಕೆಮ್ಮೆ ಕರೆದ ನೊರೆಹಾಲು॥
ನೊರೆಹಾಲು ಸಕ್ಕರೆ ನೀ ಕೇಳಿದಾಗ ಕೊಡುವೆನು ॥ ೧ ॥
(ಕನ್ನಡ ಬಾಲಬೋಧೆ-ಚ. ವಾಸುದೇವಯ್ಯ)

ಆದರೆ ಕೆಲವರು ಪದ್ಯದ ಪ್ರಾರಂಭದಲ್ಲಿ ಕ್ರಮ ಸಂಖ್ಯೆಯನ್ನು ಕೊಟ್ಟಿದ್ದಾರೆ.
14. ಅಕ್ಕಿಯೋಗರ ಲೇಸು ಮೆಕ್ಕೆ ಹಿಂಡಿಯು ಲೇಸು.....
15. ಅಂಗನೆಯು ಬರೆಲೇಸು ಬಂಗಾರ ದೊರೆಯೆಲೇಸು
16. ಅಂಗನೆಯು ಗುಣಿಯಾಗಿ ಅಂಗಳದಿ ಹೊರತಾಗಿ.....

9. ಒಂದೇ ಶೀರ್ಷಿಕೆಯಡಿ ಹಲವಾರು ವಿಭಾಗಗಳನ್ನು ಹಾಗೂ ಉಪವಿಭಾಗಗಳನ್ನು ಸೂಚಿಸುವಾಗ ಮುಖ್ಯ ವಿಭಾಗಗಳಿಗೆ ಅಕ್ಷರಗಳನ್ನೂ ಉಪವಿಭಾಗಗಳಿಗೆ ಅಂಕಿಗಳನ್ನೂ ಬಳಸಿ ಎರಡೂ ಕಡೆ ಪೂರ್ಣ ವಿರಾಮ ಹಾಕಬೇಕು ಎಂದು ಕನ್ನಡ ಶೈಲಿ ಕೈಪಿಡಿಯಲ್ಲಿ ಹೇಳಲಾಗಿದೆ. ಉಪವಿಭಾಗಗಳಿಗೆ ಆವರಣ ಚಿಹ್ನೆ ಬಳಸುತ್ತಾರೆ.

ಅ. ೧ (೧)

(೨)

೨. (೧)

(೨)

ಆದರೆ ಆವರಣ ಚಿಹ್ನೆಗಳಲ್ಲಿ ಒಂದನ್ನೇ ಅಂಕಿಗಳಿಗೆ ಇತರರು ಬಳಸುತ್ತಾರೆ.

೧೫. ಕನ್ನಡ ನಿಘಂಟಿನ ಅರ್ಥಗಳೊಡನೆ ಸಂಕ್ಷಿಪ್ತ ನಿಘಂಟಿನ ಅರ್ಥಗಳನ್ನು ತಾಳೆ ನೋಡಿ ತಿದ್ದುವಲ್ಲಿ ಅನೇಕ ಶಬ್ದಗಳಂತೆಯೇ ಅರ್ಥಗಳನ್ನು ಸಹಾ ಪರಿಷ್ಕರಣದಲ್ಲಿ ಬಿಟ್ಟಿದೆ. ಅವುಗಳನ್ನು ತಿಳಿಸುವಲ್ಲಿ ಅಂಕಿಗಳನ್ನು ಬಳಸಲಾಗಿದೆ.

ಬಿಟ್ಟಿರುವ ಅರ್ಥಗಳಿಗೆ ಕೆಲವು ಉದಾಹರಣೆಗಳು:

1) **'ಅಂಟು'** ಉಲ್ಲೇಖದ 'ನಿಲ್ಲು' : ತಡೆ ಎಂಬ ೫ನೆಯ ಅರ್ಥ

2) **'ಗುಂಡು'** ಉಲ್ಲೇಖದ (ಗು) ದುಂಡಾದ; ದುಂಡಗೆ ಇರುವ ಎಂಬರ್ಥ

3) **'ಚುಚ್ಚು'** ಉಲ್ಲೇಖದ ಬಯ್ಗಳು; 'ನಿಂದೆ' ಎಂಬ ೫ನೆಯ ಅರ್ಥ

(ಸಂಕ್ಷಿಪ್ತ ಕನ್ನಡ ನಿಘಂಟು ಪುಟ xiii)

ಎಲ್. ಬಸವರಾಜು ಅವರು ಸರ್ವಜ್ಞ ವಚನಗಳ ಪರಮಾರ್ಥ ಗ್ರಂಥದಲ್ಲಿ ಪದ್ಯಗಳ ಕ್ರಮಸಂಖ್ಯೆಯನ್ನು ಆಯಾ ಪದ್ಧತಿಯದನ್ನು ಪ್ರಾರಂಭದಲ್ಲಿ, ಒಟ್ಟು ಕ್ರಮಸಂಖ್ಯೆಯನ್ನು ಕೊನೆಯಲ್ಲಿ ಕೊಟ್ಟಿದ್ದಾರೆ.

10. "ಆಧುನಿಕ ಗ್ರಂಥಗಳಲ್ಲಿ ಅಧ್ಯಾಯ, ಉಪ ಅಧ್ಯಾಯ, ಕಂಡಿಕೆಗಳ ಸಂಖ್ಯೆಯನ್ನು ಸೂಚಿಸುವಾಗ ಸಂಖ್ಯೆಯ ನಂತರ ಪೂರ್ಣವಿರಾಮ ಅಗತ್ಯ. ಆದರೆ ಕಡೆ ಅಂಕೆಗೆ ಪೂರ್ಣ ವಿರಾಮ ಅನಗತ್ಯ" (ಕನ್ನಡ ಶೈಲಿ ಕೈಪಿಡಿ ಪುಟ ೧೬)

೫.೧

೫.೨.೪

೫.೨.೪.೧

11. ಪೂರ್ಣ ಆವರಣ ಚಿಹ್ನೆ ಅಥವಾ ಅರ್ಧಾವರಣ ಚಿಹ್ನೆಯಲ್ಲಿ ಅಂಕಿಯನ್ನು ಬಳಸಿದಾಗ, ಪೂರ್ಣ ವಿರಾಮ ಚಿಹ್ನೆ ಬಳಸುವುದಿಲ್ಲ.

(೧) (೨) (೩) ೧) ೨) ೩)

12. ಅಧ್ಯಾಯ, ವಿಭಾಗ, ಉಪವಿಭಾಗಗಳನ್ನು ತಿಳಿಸುವಾಗ ಕೇವಲ ಅಂಕಿಗಳನ್ನು ಬಳಸುವುದಿಲ್ಲ. ಜತೆಗೆ ಅಕ್ಷರಗಳನ್ನು ಬಳಸುತ್ತಾರೆ. ಇದು ಉತ್ತಮ. 3-2 ಎನ್ನುವ

ಬದಲು ಸಂಧಿ 3 ಪದ್ಯ 2 ಎಂದರೆ ಹೆಚ್ಚು ಸ್ಪಷ್ಟ. ಸಂ3. ಪ2 ಎಂದು ಸಂಕ್ಷಿಪ್ತಾಕ್ಷರ ಬಳಸಿಯೂ ಹೇಳಬಹುದು.

13. ದಿನಾಂಕವನ್ನು ಕೇವಲ ಅಂಕಿಗಳಲ್ಲಿ ಸಾಮಾನ್ಯವಾಗಿ ಬಳಸುತ್ತಾರೆ. 30.1.2011

14. ದಿನಾಂಕಗಳನ್ನು ನಮೂದಿಸುವಾಗ ಅಂಕಿಗಳ ಜತೆಗೆ ಬಳಸುವ ವಿರಾಮ ಚಿಹ್ನೆಗಳು ಏಕರೂಪವಿಲ್ಲ.

    30/1/2011 30-1-2011 30.1.2011

15. ಅಕ್ಷರ ಅಥವಾ ಪದಗಳೊಡನೆ ಬಳಸುವುದು ಉತ್ತಮ 30 ಜ 2011, ಜನವರಿ 30, 2011, 30 ಜನವರಿ 2011.

16. ಯಾವುದೇ ವಿಷಯದ ಸಂಖ್ಯೆಯನ್ನು ಇಷ್ಟರಿಂದ ಇಷ್ಟರವರೆಗೆ ಎಂದು ತಿಳಿಸುವಾಗ ಸಣ್ಣಗೆರೆ '-' ಬಳಸುತ್ತಾರೆ. ಅಧ್ಯಾಯ 3-5 ಪುಟ, 18-21 ಸಾಲು, ಇಸವಿ 1923-1924, ಪತ್ರ ಸಂಖ್ಯೆ 93-94.

17. ಎಸ್.ಟಿ.ಡಿ. ಕೋಡ್‌ಗಳನ್ನು ಸೂಚಿಸುವುದರೊಂದಿಗೆ, ಫೋನಿನ ಸಂಖ್ಯೆ ಸೂಚಿಸುವಾಗ ಆವರಣ ಚಿಹ್ನೆಯಿಂದ ಎಸ್.ಟಿ.ಡಿ. ಅಂಕಿಗಳನ್ನು ಬಳಸುತ್ತಾರೆ. ಬೆಂಗಳೂರು (080) 26637783, ಕೆಲವರು ಕೋಡ್ 080-26637783 ಎಂದೂ ಸೂಚಿಸುತ್ತಾರೆ. ಮತ್ತೆ ಕೆಲವರು 080 26637783 ಎಂದು ಜಾಗ ಬಿಟ್ಟು ಪ್ರಕಟಿಸುತ್ತಾರೆ. ( ) ಚಿಹ್ನೆ ಅಥವಾ - ಇಲ್ಲದೆ ಬಳಸುವುದು ಸೂಕ್ತವಲ್ಲ. (ಪುಸ್ತಕಲೋಕ ಜ-ಮಾ 2011 ಪುಟ 10 ನೋಡಿ)

18. ಮುಖ್ಯವಿಭಾಗ, ಉಪವಿಭಾಗ ಮುಂತಾದುವನ್ನೂ ಅಧ್ಯಾಯ, ಸಂಧಿ ಮತ್ತು ಪದ್ಯ ಹೀಗೆ ಎರಡು ಅಂಶಗಳನ್ನೂ ಅಂಕಿಗಳಲ್ಲಿ ಸೂಚಿಸುವಾಗ ನಡುವೆ ಕಿರುಗೆರೆ ಬಳಸಲಾಗುವುದು. ಬೆಂಗಳೂರು-41, ಅಧ್ಯಾಯ-9, ಸಂ9-ಪದ್ಯ8.

19. ಎಷ್ಟನೆಯದು ಎಂದು ತಿಳಿಸುವಾಗ ನೇ ಅಥವಾ ನೆಯ ಪ್ರತ್ಯಯವನ್ನು ಅಂಕಿಯೊಂದಿಗೆ ಬಳಸುತ್ತೇವೆ. 8ನೆಯ ಪಾಠ, 5ನೇ ಅಧ್ಯಾಯ, 20ನೇ ಪುಟ, 3ನೇ ಸಲ, 15ನೇ ಮಾರ್ಚ್ 1920ರಲ್ಲಿ ಜನಿಸಿದರು ಇತ್ಯಾದಿ. ಇವುಗಳಲ್ಲಿ ಕೆಲವನ್ನು ಪಾಠ-8, ಸಂಧಿ-3, ಅಧ್ಯಾಯ-5, ಪುಟ-20, ಎಂದೂ ಬರೆಯಬಹುದು.

20. ವಸ್ತುಗಳ ದರವನ್ನು ಸಂಖ್ಯೆಯಲ್ಲಿ ಹೇಳುವಾಗ ಒಂದಕ್ಕೆ ಎಂಬ ಮಾತನ್ನು ಸಂಖ್ಯೆಗೆ ಸೇರಿಸುತ್ತೇವೆ.

    ಗುಂಟೂರು ಮೆಣಸಿನಕಾಯಿ ಕಿಲೋ ಒಂದಕ್ಕೆ 90 ರೂ.
    ಬ್ಯಾಡಗಿ ಮೆಣಸಿನಕಾಯಿ ಕೆ.ಜಿ. ಒಂದಕ್ಕೆ 120 ರೂ.

ಕೆಲವೊಮ್ಮೆ ಒಂದಕ್ಕೆ ಪದವನ್ನು ಬಳಸದೇ ಇರುವುದೂ ಉಂಟು.
ಅವರೆಕಾಯಿ ಕಿಲೋ 20 ರೂ., ಹುರುಳಿಕಾಯಿ ಕಿಲೋ 30 ರೂ.

21. ಸಾಮಾನ್ಯವಾಗಿ ಒಂದರಿಂದ ಹತ್ತರವರೆಗೆ ಅಂಕಿಗಳನ್ನು ಅಕ್ಷರಗಳಲ್ಲಿ ನಮೂದಿಸುತ್ತೇವೆ. ಉದಾಹರಣೆ :

ಮೂರನೇ ತರಗತಿ ವಿದ್ಯಾರ್ಥಿಗಳು.
ಐದು ರೂಪಾಯಿ ಕೊಡಿ.
ಹತ್ತು ದಿನ ರಜೆ ಹಾಕಿದ್ದಾರೆ.
ಏಳನೇ ದಿನ ಬಂದರು.
ಈ ಕೆಲಸಕ್ಕೆ ಅವಧಿ ಎಂಟು ವಾರ ಬೇಕು.

ಹತ್ತಕ್ಕಿಂತ ಹೆಚ್ಚಿನ ಸಂಖ್ಯೆ ಹೇಳುವಾಗ ಅಂಕಿಗಳನ್ನು ಬಳಸಬೇಕು. 100 ದಿನಗಳು ಪ್ರವಾಸ ಮಾಡಿದರು. 30 ರೂ. ಕೊಡಬೇಕು. 383 ಪುಸ್ತಕಗಳು ಬಂದಿವೆ.

ಕಾಲವಾಚಕಗಳಲ್ಲಿ ಅಂಕಿಬಳಕೆ

22. ಗಡಿಯಾರದ ವೇಳೆಯನ್ನು ಹೇಳುವಾಗ ಗಂಟೆ ನಿಮಿಷಗಳಿಗೆ ಅಂಕಿಗಳನ್ನು ಬಳಸುತ್ತೇವೆ. ಈಗ 5 ಗಂಟೆ 5 ನಿಮಿಷ. 11 ಗಂಟೆ 20 ನಿಮಿಷಕ್ಕೆ ನೀನು ಅಲ್ಲಿರಬೇಕು. 5 ಗಂಟೆಗೆ ಶಾಲೆ ಬಿಟ್ಟಿತು. ಇನ್ನು 30 ನಿಮಿಷದಲ್ಲಿ ಅಲ್ಲಿಗೆ ಬಾ. ಆದರೆ ಕಾಲು, ಅರ್ಧ, ವರೆ, ಮುಕ್ಕಾಲು ಗಂಟೆ ಅಥವಾ ನಿಮಿಷ ಹೇಳುವಾಗ ಅಂಕಿಗಳನ್ನು ಬಳಸುವುದಿಲ್ಲ.
ಕೆಲವರು ಅಂಕಿಗಳನ್ನು 1-10 ತರಹ ಹೇಳುವಾಗ ಬಳಸುತ್ತಾರೆ.
ಎರಡೂವರೆ ಗಂಟೆಗೆ ಬಂದನು (2.30)
ಒಂದೂಕಾಲು ಗಂಟೆ (1 ಗಂಟೆ 15 ನಿ. ಅಥವಾ 1 1/4 ಗಂಟೆ) ಊರು ಸೇರಲು ಬೇಕಾಯಿತು.
ಮೂರೂ ಮುಕ್ಕಾಲು ಗಂಟೆಗೆ ಬಸ್ ನಿಲ್ದಾಣದಲ್ಲಿರು. (3 3/4 ಅಥವಾ 3 ಗಂಟೆ 45 ನಿಮಿಷ)

23. ವೇಳಾಪಟ್ಟಿಯಲ್ಲಿ ಅಂಕಿಗಳೇ ಬಳಕೆ ಆಗುತ್ತವೆ. 3-15, 4-30, 2.30, 1.17 ಇತ್ಯಾದಿ. ಪೂರ್ಣವಿರಾಮ ಅಥವಾ ಅಡ್ಡಗೆರೆಯನ್ನು ಘಂಟೆ ನಿಮಿಷಗಳನ್ನು ಬೇರ್ಪಡಿಸಲು ಅಕ್ಷರಗಳೊಂದಿಗೆ ಬಳಸುತ್ತಾರೆ. 3 ಘಂಟೆ-15ನಿ, 4ಘಂ-30ನಿ, 2ಘಂ-30ನಿ, 1ಘಂ-17ನಿ ಎಂದೂ ಬರೆಯುತ್ತಾರೆ.

24. ಕಾರ್ಯಕ್ರಮದ ಪ್ರಕಟನೆಗಳಲ್ಲಿ ವೇಳೆ ತಿಳಿಸುವಾಗ ಅಂಕಿ ಬಳಸುತ್ತಾರೆ. ಸಭೆ, ಸಂಜೆ 5.30ಕ್ಕೆ ಪ್ರಾರಂಭ. ಮಧ್ಯಾಹ್ನ 2.30ಕ್ಕೆ ಭೋಜನ ಏರ್ಪಡಿಸಲಾಗಿದೆ.

25. ಕೇವಲ ಘಂಟೆಗಳನ್ನು ಹೇಳುವಾಗ ಅಂಕಿಗಳನ್ನು ಎಲ್ಲರೂ ಬಳಸದಿರುವುದು ಉಂಟು. ಮೂರು ಘಂಟೆಗೆ ಸಭೆ ಪ್ರಾರಂಭ (3ಕ್ಕೆ 3ಘಂ.ಗೆ ಸಭೆ ಪ್ರಾರಂಭ) ಆರು ಘಂಟೆಗೆ ಸಭೆ ಮುಕ್ತಾಯವಾಯಿತು. (6ಕ್ಕೆ 6ಘಂಟೆಗೆ)

26. ಜನರ ಸಂಖ್ಯೆ ಹೇಳುವಾಗ ಅಂಕಿ ಬಳಸುತ್ತಾರೆ. ಸಭೆಗೆ 50 ಜನ ಬಂದರು. ಸೀಗೆಹಳ್ಳಿ ಜನಸಂಖ್ಯೆ 25,700.

27. ನೂರು, ಸಾವಿರ, ಲಕ್ಷ, ಕೋಟಿಗಳಲ್ಲಿ ಹೇಳುವಾಗ ಪೂರ್ಣ ಅಂಕಿಗಳನ್ನು ಬಳಸುವುದು ಉತ್ತಮ. ಆದರೆ ಅಂಕಿ ಅಕ್ಷರ ಎರಡನ್ನೂ ಬಳಸುತ್ತಾರೆ. 50 ಸಾವಿರ ಜನ ಸಭೆಗೆ ಬಂದಿದ್ದರು (50,000 ಜನ) ಈ ಸಲದ ಬಡ್ಜೆಟ್ಟಿನಲ್ಲಿ 7 ಕೋಟಿ ರೂ. ವೆಚ್ಚವಾಗಿದೆ. 7,00,00,000 ರೂ. ಬಳಸಿದರು. ದೊಡ್ಡಸಂಖ್ಯೆಗಳಿಗೆ ಪೂರ್ಣ ಅಂಕಿಗಳನ್ನಷ್ಟೇ ಬಳಸುವಾಗ ತಪ್ಪಾಗುವ ಸಂಭವ ಹೆಚ್ಚು. ಎಚ್ಚರವಿರಬೇಕು. (ಸೊನ್ನೆ ಬಿಟ್ಟು ಹೋಗುವುದುಂಟು ಆಗ 7 ಕೋಟಿ 70 ಲಕ್ಷ ಆಗಿಬಿಡುತ್ತದೆ)

28. ಆದರೆ ಲೆಕ್ಕಪತ್ರಗಳಲ್ಲಿ ಅಂದಾಜುಪಟ್ಟಿ, ಆಯವ್ಯಯ ಪಟ್ಟಿ ಅಂಕಿಅಂಶಗಳನ್ನು ಕೊಡುವಾಗ ಎಲ್ಲವನ್ನೂ ಅಂಕಿಗಳಲ್ಲೇ ನಮೂದಿಸುತ್ತಾರೆ.

ವಿದ್ಯುತ್ ವೆಚ್ಚ 70,000 ರೂ.ಗಳು

ಬಂಡವಾಳ ಹೂಡಿಕೆ 6,00,000 ರೂ.ಗಳು

ಒಟ್ಟು ಬಂದದ್ದು 1,10,000 ರೂ.ಗಳು

29. ಶೇಕಡಾವಾರು ಹೇಳುವಾಗ ಅಂಕಿಗಳನ್ನೇ ಶೇಕಡಾವಾರು ಎಂಬುದನ್ನು % ಚಿಹ್ನೆಯೊಂದರಿಂದ ಸೂಚಿಸುವುದಕ್ಕಿಂತ ಹೆಚ್ಚಾಗಿ ಬಳಸುವುದು ವಾಡಿಕೆ. ಶೇಕಡ 60ಮಂದಿ (60%) ಆ ಹಳ್ಳಿಯಲ್ಲಿ ವಿದ್ಯಾವಂತರು. ಈ ಸಲ ಕಂಪನಿ 3% ಲಾಭಾಂಶ ಹರಡಿದೆ. ಎಣ್ಣೆ ಬೆಲೆ 40% ಹೆಚ್ಚಿದೆ.

30. ಸಾಮಾನ್ಯವಾಗಿ ರೂಪಾಯಿ ಪೌಂಡು, ಡಾಲರ್ ಇತ್ಯಾದಿ ಅಂತಾರಾಷ್ಟ್ರೀಯ ಹಣವನ್ನು ಅಂಕಿಗಳಿಂದ ಸೂಚಿಸುವಾಗ ಅಂತಾರಾಷ್ಟ್ರೀಯ ಚಿಹ್ನೆ ಬಳಸುತ್ತಾರೆ. £300, ₹400, $500 ಇತ್ಯಾದಿ. 300 ಡಾಲರು, 500 ಪೌಂಡುಗಳು, 200 ರೂ. ಎಂದೂ ಬರೆಯುವುದುಂಟು.

31. ಮನೆ ವಿಳಾಸ ಕೊಡುವಾಗ ಮನೆ ಸಂಖ್ಯೆಯನ್ನು ಮುಖ್ಯರಸ್ತೆ, ಅಡ್ಡರಸ್ತೆ ಸಂಖ್ಯೆಯನ್ನು ಅಂಕಿಗಳಲ್ಲೇ ಕೊಡಬೇಕು. ಹೀಗೆ ಕೊಡುವಾಗ ಕನ್ನಡ ಅಂಕಿಗಳನ್ನು

ಕೆಲವರು ಬಳಸುತ್ತಾರೆ. ಹಾಗೆಯೇ ಚೆಕ್ಕುಗಳನ್ನು ಬರೆಯುವಾಗ ಕನ್ನಡ ಅಂಕಿ ಬಳಸುತ್ತಾರೆ. ಹಣದ ವ್ಯವಹಾರವನ್ನು ಕನ್ನಡೇತರರೂ ಮಾಡುತ್ತಾರೆ. ಕಚೇರಿಗಳಲ್ಲಿ ಕನ್ನಡೇತರರು ಎಂದರೆ ಕನ್ನಡ ಭಾಷೆ ಅಂಕಿ ತಿಳಿಯದವರು ಬಹು ಮಂದಿ ಇರುತ್ತಾರೆ. ಆದ್ದರಿಂದ ಇಂಗ್ಲಿಷ್ ಅಂಕಿಗಳನ್ನೇ ಬಳಸುವುದು ಉತ್ತಮ. ಹಣದ ಮೊತ್ತ ಕನ್ನಡದಲ್ಲಿ ಉಲ್ಲೇಖಿಸುವಾಗ ೩ ಅಂಕಿ ಸ್ವಲ್ಪ ತಾಪತ್ರಯದ ಅಂಕಿ ಆಗಿದೆ. ಕನ್ನಡ ೩ನ್ನು ಇಂಗ್ಲಿಷಿನ 2ನ್ನಾಗಿ ತಿಳಿಯುವುದೇ ಹೆಚ್ಚು. ಆದ್ದರಿಂದ ನಮ್ಮ ಹಣ/ಪತ್ರ/ಚೆಕ್ ಕನ್ನಡ ತಿಳಿದವರಿಗೆ ಸೇರುತ್ತದೋ ಇತರರಿಗೆ ಸೇರುತ್ತದೋ ಎಂದು ತಿಳಿದು ಕನ್ನಡ ಅಥವಾ ಇಂಗ್ಲಿಷ್ ಅಂಕಿ ಬಳಸುವುದು ಮುಖ್ಯ.

32. ಸಾಮಾನ್ಯವಾಗಿ ಗ್ರಂಥಗಳಲ್ಲಿ ಪೀಠಿಕಾ ಪುಟಗಳಿಗೆ ಎಂದರೆ ವಿಷಯಸೂಚಿ ಪ್ರಸ್ತಾವನೆ ಮುನ್ನುಡಿ, ಪರಿವಿಡಿ ಇತ್ಯಾದಿ ಬರುವ ಪ್ರಾರಂಭದ ಪುಟಗಳಿಗೆ ರೋಮನ್ ಸಣ್ಣಂಕಿಗಳನ್ನು i, ii, iii, iv, ಇತ್ಯಾದಿ ಬಳಸುತ್ತಾರೆ. ಆದರೆ ಇವುಗಳಿಗೆ ಕನ್ನಡ ಸ್ವರಗಳಾದ ಅಆಇಈ ಅಥವಾ ಕಖಗಘ ಇತ್ಯಾದಿ ವರ್ಣಮಾಲೆ ಅಕ್ಷರಗಳನ್ನು ಯಶಸ್ವಿಯಾಗಿ ಹೊಸಕೆರೆ ಚಿದಂಬರಯ್ಯನವರು 1925ರ ಸುಮಾರಿಗೆ ತಮ್ಮ ಗ್ರಂಥಗಳಲ್ಲಿ ಬಳಸಿದ್ದಾರೆ. (ಉದಾ: ಅನುಭವಾಮೃತ ಟೀಕೆ ನೋಡಿ) ಆದರೆ ಬೇರೆ ಯಾವ ಲೇಖಕರೂ ಗಮನಿಸದೆ ಇರುವುದು ವಿಷಾದಕರ ಸಂಗತಿ.

33. ಪುಸ್ತಕಗಳ ಆವೃತ್ತಿಗಳನ್ನು ಸಾಮಾನ್ಯವಾಗಿ ಅಂಕಿಗಳನ್ನು ಬಳಸದೆ ಅಕ್ಷರಗಳಲ್ಲಿ ಸೂಚಿಸುತ್ತಾರೆ. ಹತ್ತನೆಯ ಮುದ್ರಣ, ಎರಡನೇ ಮುದ್ರಣ, ನಾಲ್ಕನೆಯ ಮುದ್ರಣ, 10ನೇ ಮುದ್ರಣ, 2ನೇ ಮುದ್ರಣ, 4ನೇ ಮುದ್ರಣ ಎಂದು ಹೇಳುವುದಿಲ್ಲ.

34. ಸಾಮಾನ್ಯವಾಗಿ ಪುಸ್ತಕದ ವಿಷಯಸೂಚಿ ಅಥವಾ ಪರಿವಿಡಿಗಳಲ್ಲಿ ವಿಷಯಗಳ ಪುಟಸಂಖ್ಯೆಯನ್ನು ಪ್ರತ್ಯೇಕವಾಗಿ ಪುಟದ ಬಲಭಾಗದಲ್ಲಿ ಕೊಡುತ್ತಾರೆ. ಆಯಾ ಅಧ್ಯಾಯದ ಅಥವಾ ವಿಷಯದ ಪುಟಸಂಖ್ಯೆಯನ್ನು ಕೊಡುತ್ತಾರೆ. ಕೆಲವರು ಇಂದ-ವರೆಗಿನ ಪುಟಗಳ ಸಂಖ್ಯೆ ಕೊಡುತ್ತಾರೆ.

ಉದಾ:

1.	ನಾದ ಪ್ರಪಂಚದಲ್ಲಿ ಛಂದಸ್ಸು	1-14
2.	ಭಾವ ಮತ್ತು ಛಂದಸ್ಸು	15-34
3.	ಛಂದಃ ಪ್ರಭೇದಗಳು	34-52

ಇತ್ಯಾದಿ (ಕನ್ನಡ ಛಂದೋವಿಚಾರ: ಡಿ.ಎಸ್. ಕರ್ಕಿ)

ಉದಾ: 1. ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ೧
2. ವಾಲ್ಮೀಕಿ ರಾಮಾಯಣ ಮತ್ತು ಮಧ್ವರಾಮಾಯಣದ ಪ್ರಮುಖ ಪ್ರಸಂಗಗಳು ೬
3. ಬಾಲಕಾಂಡ ಮತ್ತು ಅಯೋಧ್ಯಾಕಾಂಡದ ಪ್ರಸಂಗಗಳು ೧೨
ಇತ್ಯಾದಿ

(ದಾಸ ಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು-ಸೈಯದ್ ಮುಯಿನ್)

35. ವಿಷಯಸೂಚಿ ಜತೆಗೇ ಪುಟಸಂಖ್ಯೆಯನ್ನು ಓರೆಗೆರೆ ಹಾಕಿ ಕೊಡುವುದು ಈಚಿನ ಪದ್ಧತಿ ಆಗಿದೆ. ವಿಷಯಗಳ ಕ್ರಮಸಂಖ್ಯೆ ಬಿಟ್ಟಿದ್ದಾರೆ.
ಅಪೂರ್ವ ಕನ್ನಡ ಕಾವ್ಯಗ್ರಂಥ
ಕರ್ನಾಟಕದ ಭಾಗವತ / 5
ಅಂದು ಇಂದು / 12
ಭಾರತೀಯ ಚಿಂತನೆಯಲ್ಲಿ ಮನೋವೈಜ್ಞಾನಿಕ ತತ್ತ್ವಗಳು /13 ಇತ್ಯಾದಿ.
(ಅಲೆವಾಣಿ-ಅಮೆರಿಕಾದ ನಾವಿಕಸಂಸ್ಥೆಯ ಪ್ರಥಮ ಸಮ್ಮೇಳನ ಸಂಚಿಕೆ)

ಕೋಷ್ಟಕಗಳಲ್ಲಿ ಅಂಕಿಬಳಕೆ

36. ಕೋಷ್ಟಕಗಳಲ್ಲಿ ಅಂಕಿಗಳನ್ನು ಸಮಾನಾರ್ಥದಲ್ಲಿ ಬಳಸುವಾಗ = ಚಿಹ್ನೆ ಬಳಸುತ್ತೇವೆ. ದಶಮಾಂಶ, ಭಾಗಾಂಶಗಳಿಗೆ ಬಿಂದು ಬಳಸುತ್ತೇವೆ. ಜತೆಗೆ ಸಂಕೇತಾಕ್ಷರ ಬಳಸುತ್ತೇವೆ.
1 ಅಂಗುಲ = 25.4 ಮಿಲಿಮೀಟರ್ (ಮಿ.ಮೀ.)
1 ಅಡಿ = 12 ಅಂ = 0.3048 ಮೀ.

37. ತಾಪಮಾನದ ಡಿಗ್ರಿಗಳನ್ನೂ ಅಕ್ಷಾಂಶ ರೇಖಾಂಶಗಳ ಡಿಗ್ರಿಗಳನ್ನೂ ಸೂಚಿಸುವಾಗ ಅಂಕಿಗಳ ಬಲಮೇಲ್ಭಾಗದಲ್ಲಿ '0' ಚಿಹ್ನೆ ಬಳಸುತ್ತೇವೆ. 30^0 ಅಕ್ಷಾಂಶ 40^0 ರೇಖಾಂಶ. 90^0F, 65^0 F.

38. ಭಿನ್ನರಾಶಿಗಳನ್ನು ತೋರಿಸುವಾಗ ಅಡ್ಡಗೆರೆ ಬಳಸುತ್ತೇವೆ ಅಥವಾ ಬಿಂದು ಬಳಸುತ್ತೇವೆ.
103 4/20, 2 3/4, 3/8, 25/100, 40.25, 10.75, 7.50
ಹಳೇ ಪದ್ಧತಿಯಲ್ಲಿ ಅಡ್ಡ, ಹಾಗ, ವೀಸ ಎಂಬುದನ್ನು 1/4, 1/2, 3/4 ಗಳನ್ನು I II III ಗೆರೆಗಳಿಂದ ಸೂಚಿಸುತ್ತಿದ್ದರು.

39. ಸಂಕ್ಷೇಪಾಕ್ಷರಗಳನ್ನು ಅಥವಾ ಸಂಕೇತ ಚಿಹ್ನೆಗಳನ್ನು ಅಂಕಿಗಳೊಂದಿಗೆ ಬಳಸುತ್ತೇವೆ.

1. ಸೆಂ.ಮೀ. = 10 ಮಿ.ಮೀ.

1 ಡೆ.ಮೀ. = 10 ಮೀ.

40. ಗಣಿತಶಾಸ್ತ್ರದಲ್ಲಿ ಘಾತಸಂಖ್ಯೆಗಳನ್ನು ಅಂಕಿಗಳ ಮೇಲ್ಭಾಗದಲ್ಲಿ ತೋರಿಸುತ್ತೇವೆ.

4^3 X 8^4, 6^{11} X 2^{18}

41. ಉದ್ದ ಅಗಲಗಳ ಅಳತೆಗಳನ್ನು X ಚಿಹ್ನೆಯಿಂದ ತೋರಿಸುತ್ತೇವೆ. ಮನೆ ನಿವೇಶನ 60' X 40' ಇದೆ.

ಈ ಪುಟ 6' X 4' ಇದೆ.

42. ಮಗ್ಗಿಯ ಕೋಷ್ಟಕದಲ್ಲಿ X + –)(ನಾಲ್ಕು ಬಗೆಯ ಚಿಹ್ನೆಗಳನ್ನು ಬಳಸುತ್ತೇವೆ.

ಗುಣಾಕಾರ	ಸಂಕಲನ	ವ್ಯವಕಲನ	ಭಾಗಾಕಾರ
6 x 1 = 6	6 + 1 = 7	6 - 1 = 5	6) 18 (3 3
6 x 2 = 12	6 + 2 = 8	6 - 2 = 4	18 ⎾ 6 18
6 x 3 = 18	6 + 3 = 9	6 - 3 = 3	00
6 x 4 = 24	6 + 4 = 10	6 - 4 = 2	

43. ಛಂದಶ್ಶಾಸ್ತ್ರದ ಗ್ರಂಥಗಳಲ್ಲಿ ಗಣವಿಭಜನೆ ತೋರಿಸುವಾಗ ಮಾತ್ರಾ ಸಂಖ್ಯೆಗಳನ್ನು ತೋರಿಸುವಾಗ ಪದ್ಯಗಳ ಸಾಲಿನ ಮೇಲೆ ಅಂಕಿ ಹಾಕುತ್ತಾರೆ.

ಗಣ ವಿಭಜನೆ

1 2 3 1 2 4 1 2 3 1 2 3
ನಗೆ. ನೋ. ಟ; ಮೆ. ಲ್ಾ. ತು; ಮುನಿ. ಸು. ಮೋ; ಹನ. ಗ. ಳಿಂ;

(ಕನ್ನಡ ಛಂದೋವಿಕಾಸ-ಕರ್ಕಿ ಪು. 54)

ಮಾತ್ರಾ ವಿಭಜನೆಗೆ ಸಾಮಾನ್ಯವಾಗಿ - ∪ ಚಿಹ್ನೆಗಳನ್ನು ಬಳಸುತ್ತಾರೆ. ಅಂಕಿಗಳನ್ನು ಬಳಸುವುದೂ ಉಂಟು.

\- - - - - - - -
ನೀರ ಜೋತ್ಪಲ ವರ್ಣ ನಾಡಿದ ನಾಡಿ ದಂ ಕಮ ಲೇಕ್ಷಣಂ
೩ ೪ ೩ ೪ ೩ ೪ ೩ ಗು

(ಅಂಕಿಗಳನ್ನು ಇತರರು ಸಾಲಿನ ಮೇಲೆ ಹಾಕಿದರೆ ಇಲ್ಲಿ ಕರ್ಕಿ ಅವರು ಕೆಳಗೆ ಹಾಕಿದ್ದಾರೆ)

44. ಮಾತ್ರಾ ವಿಭಜನೆಯ ಸಂಖ್ಯೆಯನ್ನು ಪಕ್ಕದಲ್ಲಿ ಹಾಕುವುದೂ ಉಂಟು.

ಸಿರಿಗೌರಿಯಂತೆ ಬಂ; ದರು ತಾಯಿ; ಹಸೆಮಣೆಗೆ	5:5:5:5
ಸೆರಗಿನಲಿ: ಕಣ್ಣೀರ:ನೊರಸಿ	5:5:3
ಸುಖದೊಳಗೆ:ನಿಮ್ಮನೆನೆ:ದರುತಾಯಿ:ಗುಣವಂತೆ	5:5:5:5
ದೀಪದಲಿ:ಬಿಡುಗಣ್ಣ:ನಿಲಿಸಿ	5:5:3

(ಕೆ.ಎಸ್.ನ ಪದ್ಯ ಮೈಸೂರು ಮಲ್ಲಿಗೆ)

(ಕರ್ಕಿ-ಕನ್ನಡ ಛಂದೋವಿಕಾಸ ಪು. 215)

45. ಗ್ರಂಥಗಳಲ್ಲಿ ಪಠ್ಯಕ್ಕೆ ಸಂಬಂಧಿಸಿದ ಟಿಪ್ಪಣಿಗಳಿಗೆ ಅಂಕಿ ಕೊಟ್ಟು ಆಯಾ ಪುಟದ ಕೆಳಗೆ ಅಥವಾ ಅಧ್ಯಾಯದ ಕೊನೆಗೆ ಅಥವಾ ಗ್ರಂಥದ ಕೊನೆಗೆ ಅದೇ ಅಂಕಿ ಕೊಟ್ಟು ಟಿಪ್ಪಣಿ ಕೊಡುತ್ತಾರೆ.

"..........ಏಕೆಂದರೆ ಭಿನ್ನ ಸಂಪ್ರದಾಯದ ಪಾಠೈಕ್ಯ ಆಕಸ್ಮಿಕವಾದುದಲ್ಲ- 8.

ಟಿಪ್ಪಣಿ 8: ಇದೇ ಪೀಳಿಗೆಯನ್ನೇ ಒಂದು ಪ್ರತಿಯನ್ನು ಹೆಚ್ಚಾಗಿ ಸೇರಿಸಿಕೊಂಡು ಎಂಟು ಪ್ರತಿಗಳನ್ನಾಗಿ ಮಾಡಿ ಡಾ. ಎಸ್.ಎಂ. ಕತ್ರೆ ಅವರು ತಮ್ಮ ಗ್ರಂಥದಲ್ಲಿ ಅನುವಾದಿಸಿದ್ದಾರೆ.

46. ಗ್ರಂಥಸಂಪಾದನ ಶಾಸ್ತ್ರದ ಗ್ರಂಥಗಳಲ್ಲಿ ಪಾಠಾಂತರಗಳನ್ನು ಕೊಡುವಾಗ ಅಂಕಿಗಳನ್ನು ಪಠ್ಯದಲ್ಲಿ ಕೊಟ್ಟು ಅನಂತರ ಆ ಸಂಖ್ಯೆಯನ್ನು ನಮೂದಿಸಿ ಪಾಠಾಂತರ ಕೊಡುತ್ತಾರೆ. ಪಾಠಾಂತರದಲ್ಲಿ ಎಲ್ಲಿಂದ ಎಲ್ಲಿಯವರೆಗೆ ವ್ಯತ್ಯಾಸವಿರುತ್ತದೋ ಅಲ್ಲಿಯವರೆಗೆ ಕೊಡುತ್ತಾರೆ. ಮೊದಲು ಕೊನೆಗಳಲ್ಲಿ ಆ ಅಂಕಿ ಬಳಸುತ್ತಾರೆ.

ಲೀಲಾವತಿ ಕಾವ್ಯದ ಈ ಪದ್ಯವನ್ನು (10-3) ನಿದರ್ಶನವಾಗಿ ಗಮನಿಸಬಹುದು.

ಸೋವಾಗಕೆಜೆಯಳಿಂದೀವರ[1]ಲೋಚನೆ[1]
ದೇವಸ್ತ್ರೀ [2]ಚತುರ[2] ಪರಿವೃತ ಪಾದೆ ಪ
ದ್ಮಾವತಿ ವರದೆಯೆಮಗಕ್ಕೆ॥

ಪಾ: 1 ಲಾಂಛನೆ (ಕ) 2 ಚಿಕುರ (ಕ)

[ಕನ್ನಡ ಗ್ರಂಥ ಸಂಪಾದನೆ: ಡಿ.ಎಲ್.ಎನ್. ಪುಟ. 195]

47. ಅಂಕಿಯನ್ನು 1-1 2-2 ಈ ರೀತಿಯಾಗಿ ಟಿಪ್ಪಣಿಯಲ್ಲಿ ಗುರುತಿಸುವುದೂ ಉಂಟು.

ಧಾರುಣೀಪತಿ ಲಾಲಿಸೀ ಪರಿ
ಭೂರಿವೈಭವದಿಂದೆ ಸಾಂಗದಿ
ಪೂರವಾಯಿತು ವಿವಾಹಾ [1]ನಾಗೊಲ್ಯ ಪರಿಯಂತಾ[1]
ಆರು ಪೊ[2]ಗಳು ವರಮವ[2] ಭೂಸುರ
ವಾರ[3]ಶಡುರಸ ಭೋಜ್ಯ[3]ದಲಿ ಬಹು
ಭಾರ ದಕ್ಷಿಣೆ[4]ಗಳಲಿ[4] ದಣಿ[5]ದುದು [5] ತ್ರುಪ್ತರೆಂದೆನಿಸೀ॥

1-1 ಮಂಗಲಮಜ್ಜನದವರೆಗೇ (ಎ); 2-2 ಭೂರಿ ಸಂತಸಗೊಳುವಾ (ಮೈ)

3-3 ಷಡ್ರಸಭಕ್ಷ (ಉ) 4-4 ಯಿಂದ (ಉ) 5-5 ಸಿದರು (ಮೈ)

[ಯಕ್ಷಗಾನದ ಕನ್ನಡ ಹಸ್ತಪ್ರತಿಗಳ ವಿವರಣ ಸೂಚಿ ಪುಟ 300 ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ 1993]

ರಾಸಾಯನಿಕ ಮೂಲವಸ್ತುಗಳನ್ನು ನಿರ್ದೇಶಿಸುವಾಗ ಅಂಕಿಗಳನ್ನು ಇಂಗ್ಲಿಷ್ ಸಂಕೇತಾಕ್ಷರಗಳ ಕೆಳಗೆ ಕೊಡಲಾಗುತ್ತದೆ.

ಉದಾ: ಕ್ರಿಯೆಟಿನೀನ್ (ರ) ಸ್ನಾಯುಗಳಲ್ಲಿಯೂ ಮೂತ್ರದಲ್ಲಿಯೂ ಇರುವ ಕ್ರಿಯೇಟಿನ್‌ನಿಂದ ಉತ್ಪಾದಿತವಾದ ಒಂದು ಪದಾರ್ಥ.

$C_4H_1N_3O$

['ವಿಜ್ಞಾನ-ತಂತ್ರಜ್ಞಾನ ಪದ ಸಂಚಯ' ಪುಟ. 192]

49. ಒಂದೇ ಶಬ್ದರೂಪ ವ್ಯಾಕರಣಕ್ಕೆ ಅನುಸಾರವಾಗಿ ಬೇರೆ ಬೇರೆಯಾಗಿದ್ದರೆ ಅದನ್ನು ಕ್ರಿಯಾವಾಚಕ, ನಾಮವಾಚಕ, ಗುಣವಾಚಕ, ಸರ್ವನಾಮ, ಅವ್ಯಯ, ಪ್ರತ್ಯಯ- ಈ ಅನುಪೂರ್ವಿಯಲ್ಲಿ ಕನ್ನಡ ನಿಘಂಟಿನಲ್ಲಿ ಕೊಟ್ಟಿದೆ. ಇವುಗಳನ್ನು ಕ್ರಮವಾಗಿ 1, 2, 3, 4 ಇತ್ಯಾದಿ ಅಂಕಿಗಳಿಂದ ನಿರ್ದೇಶಿಸಿದೆ.

ಉದಾ : ಅಂದು1 ಅಂದು2 ಅಂದು3
(ಎಟುಕಿಸು) (ಆ ದಿನ) (ಆ ಸಂದರ್ಭದಲ್ಲಿ)

ಅತ್ತೆ + ಒಕ್ಕಲಿಸ = ಅತ್ತೆವೊಕ್ಕಲಿಸ

50. ಶಾಸನಗಳ ಪಠ್ಯದಲ್ಲಿ ಶತವರುಷಗಳನ್ನು ಅಂಕಿಗಳಲ್ಲಿ ಬರೆಯಲಾಗಿದೆ. ದಿನಾಂಕಗಳನ್ನು ಅಂಕಿಗಳಲ್ಲಿ ಹೇಳಲಾಗುತ್ತದೆ.

ಉದಾ: ಶಕವರುಷ ೧೪೪೭ ವರ್ತಮಾನ ತಾರಣ ಸಂವಛ್ಛರದ ಚಯಿತ್ರ ಶು10 ಮ-ಲೂ (ಸೌ.ಇಂ. ಇ. ಸಂಪುಟ 7 ಸಂಖ್ಯೆ 178)

51. ಮತ್ತರು, ಕೊಳಗ, ಬಳ್ಳ, ಖಂಡುಗ ಮೊದಲಾದ ಧಾನ್ಯಗಳ ಅಳತೆಗಳನ್ನು ಹೇಳುವಾಗ ಅಂಕಿ ಬಳಸುತ್ತಾರೆ. ಈ ಅಳತೆಗಳನ್ನು ಸಂಕ್ಷಿಪ್ತಾಕ್ಷರ ಮಾಡಿ ಬಳಸಲಾಗಿದೆ.

ಪಡುವ ಹಳ್ಳಗದ್ದೆ ಸ೧.....
ಮೂಡಮನೆಯ ಅಂಣಬಾಹಿರಿಗೆ ಬಳ೩೦
ಮಟ್ಟುಗೆಯ ಭೋಗದ ಭೂಮಿ ಮ ೬೦
ಬೋಳಗದ್ದೆ ಖ೧ ಕೋ (ಎಕಸಂ4 ಕೊಡಗು75)

52. ಶಾಸನಗಳಲ್ಲಿ ನಾಣ್ಯಗಳ ಮೌಲ್ಯವನ್ನು ಅಂಕಿಗಳ ಜತೆಗೆ ಸಂಕೇತ ಚಿಹ್ನೆಗಳನ್ನು ಹಾಗೂ ಪದಗಳನ್ನು ಬಳಸಲಾಗಿದೆ.

ಗುತ್ತಿಗೆ ಭೂಮಿ 2200 ಕ್ಕೆ ಸಿದ್ದಾಯ ಗ20
ಗ=ಗದ್ಯಾಣ (ಎ.ಕ.ಸಂ. 4)
ವರಹವನ್ನು ┌ ಚಿಹ್ನೆಯಿಂದ ಅಂಕಿಗಳೊಡನೆ ಬಳಸಿದ್ದಾರೆ.
೧೮ ┌ = 18 ವರಹ
೧ ┌೦ = 1 ವರಹ

52. 1/4 1/2 3/4 ಭಿನ್ನರಾಶಿಗಳನ್ನು ವೈದ್ಯಗ್ರಂಥದ ಕೋಷ್ಟಕಗಳಲ್ಲಿ ಹೀಗೆ ಬಳಸಲಾಗಿದೆ.

ವೀಸ - ಬೇಳೆ = ಮುವ್ವೀಸ
ಹಾಗ । ಅಡ್ಡ ।। ಮುಪ್ಪಾಗ ।||
ಬೇಳೆ ಶ್ರ ವೀಸ ⌣

ಹೀಗೆ ಶಾಸನ ಪತ್ರಗಳಲ್ಲಿ ಅಂಕಿ ಬಳಕೆ ವಿಶಿಷ್ಟ ರೀತಿ ಬಳಕೆ ಆಗಿರುವುದನ್ನು ಕರಡಚ್ಚು ತಿದ್ದುವಾಗ ಗಮನಿಸುವುದು ಅಗತ್ಯ.

54. ಸಿರಿಭೂವಲಯದಲ್ಲಿ ವರ್ಣಮಾಲೆಯನ್ನು ಅಂಕಿಗಳು ಪ್ರತಿನಿಧಿಸಿದಂತೆ ಶಾಸನಗಳಲ್ಲಿ ಕಟಪಯಾದಿಸೂತ್ರವನ್ನು ಶಕವರ್ಷ ಹೇಳುವಾಗ ಬಳಕೆ ಆಗುತ್ತದೆ. ಇಲ್ಲಿ 1, 2, 3, 4, 5, 6, 7, 8 ಇತ್ಯಾದಿ ಸಂಖ್ಯಾವಾಚಕ ಶಬ್ದಗಳನ್ನು ಸಂಕೇತಿಸುತ್ತವೆ. ಕ=1 ಚ=6 ಞ=0ಇತ್ಯಾದಿ ಸಂಕೇತಗಳಾಗಿವೆ.

1. ಚಂದ್ರ, ಸೂರ್ಯ, ಭೂಮಿ ಇತ್ಯಾದಿ.

2. ಯಮಳ ಅಶ್ವಿನಿ, ನೇತ್ರ, ಕಾಲಾಸ್ಯ ಇತ್ಯಾದಿ.

3. ಗುಣ, ಲೋಕ, ಅಗ್ನಿ.

4. ವೇದ, ಜಲಧಿ, ಚತುರ್ಮುಖ ಇತ್ಯಾದಿ.

ಈ ರೀತಿ ಪರಿಗಣಿಸಬೇಕು.

ರೋಮನ್ ಅಂಕೆಗಳ ಪರಿಚಯ ಅನೇಕ ಕರಡಚ್ಚು ತಿದ್ದುಗಾರರಿಗೆ ಇರುವುದಿಲ್ಲ. ಕೆಲವರಿಗೆ 1-20 ಅಂಕಿಗಳ ಚಿಹ್ನೆಗಳು ತಿಳಿದಿರುತ್ತವೆ. ಸುದೀರ್ಘ ಪೀಠಿಕೆಗಳಿರುವ ಗ್ರಂಥಗಳಲ್ಲಿ 50-100 ರವರೆಗೆ ರೋಮನ್ ಅಂಕಿಗಳ ಬಳಕೆ ಆಗಿರುತ್ತವೆ. ಆದಕಾರಣ ರೋಮನ್ ಅಂಕಿಗಳ ಪೂರ್ಣ ಪರಿಚಯ ಅಗತ್ಯವಾಗಿದೆ.

ರೋಮನ್ ಅಂಕಿಗಳ ಚಿಹ್ನೆಗಳು ಹೀಗಿವೆ

1	I	11	XI	30	XXX	200	CC
2	II	12	XII	40	XL	300	CCC
3	III	13	XIII	50	L	400	CD
4	IV	14	XIV	60	LX	500	D
5	V	15	XV	70	LXX	600	DC
6	VI	16	XVI	80	LXXX	700	DCC
7	VII	17	XVII	90	XC	800	DCCC
8	VIII	18	XVIII	100	C	900	CM
9	IX	19	XIX			1000	M
10	X	20	XX			2000	MM
						5000	V
						6000	VM
						10000	X
						20000	XX
						100000	C

ಕರಡಚ್ಚು ತಿದ್ದುವವರು ಯಾವ ವಿಷಯದ ಗ್ರಂಥವನ್ನು ತಿದ್ದುತ್ತಿದ್ದೇನೆ ಆ ವಿಷಯದ ಗ್ರಂಥದಲ್ಲಿ ಅಂಕಿಗಳನ್ನು ಹೇಗೆ ಬಳಸಬೇಕು ಎಂಬುದನ್ನು ಗಮನಿಸಿ ತಿದ್ದಬೇಕು. ಅಂಕಿಗಳನ್ನು ಬೇರೆ ಬೇರೆ ಶಾಸ್ತ್ರ, ಕಾವ್ಯಗ್ರಂಥಗಳಲ್ಲಿ ಲೇಖಕರು ತಮ್ಮದೇ ಆದ ರೀತಿ ಬಳಸಿರುತ್ತಾರೆ ಎಂಬುದನ್ನು ಗಮನಿಸಬೇಕು ಮತ್ತು ಅಂಕಿ ಅಕ್ಷರಗಳಲ್ಲಿ ಹಿಂದಿ ಸಂಸ್ಕೃತ ಕನ್ನಡ ಇಂಗ್ಲಿಷ್ ಭಾಷೆಗಳಲ್ಲಿ ಹೇಳುವ ಪದಗಳ ಪರಿಚಯ ಇರುವುದು ಅಗತ್ಯ.

ಆಕರ ಗ್ರಂಥಗಳು

1. ಕನ್ನಡ ನಿಘಂಟು, ಕಸಾಪ. ಮೊದಲನೆಯ ಸಂಪುಟ. 1970
2. ಸಂಕ್ಷಿಪ್ತ ಕನ್ನಡ ನಿಘಂಟು, ಕಸಾಪ.
3. ಪರಮಾರ್ಥ-ಎಲ್. ಬಸವರಾಜು, 1980, ಬೆಂವಿವಿ ಪ್ರಸಾರಾಂಗ.
4. ಸರ್ವಜ್ಞನ ವಚನಗಳು-ಕೆ.ಆರ್. ಗಣೇಶ್, ದೇಸಿ ಪುಸ್ತಕ ಪ್ರಕಾಶನ, 2010
5. ಕನ್ನಡ ಛಂಧೋವಿಕಾಸ-ಡಿ.ಎಸ್. ಕರ್ಕಿ, 1962, ಲೇಖಕರು, ಹುಬ್ಬಳ್ಳಿ.
6. ಅಲೆವಾಣಿ (ಅಮೆರಿಕಾದ ನಾವಿಕ ಸಂಸ್ಥೆಯ ಪ್ರಥಮ ಸಮ್ಮೇಳನದ ವಿಶೇಷಾಂಕ, 2010.
7. ದಾಸ ಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು-ಸೈಯದ್ ಮುಯಿನ್, ಓದುಬರಹ ಬಳಗ ಪ್ರಕಾಶನ, 2011.
8. ಕನ್ನಡ ಬಾಲಬೋಧೆ, (1ನೇ ಭಾಗ), ಚ. ವಾಸುದೇವಯ್ಯ, 1878.
9. ಕನ್ನಡ ಗ್ರಂಥ ಸಂಪಾದನೆ-ಡಿ.ಎಲ್.ಎನ್., ಶಾರದಾ ಮಂದಿರ, ಮೈಸೂರು, 1964.
10. ಯಕ್ಷಗಾನದ ಕನ್ನಡ ಹಸ್ತಪ್ರತಿಗಳ ವಿವರಣಾ ಸೂಚಿ (ಸಂಪುಟ 1), ಸಂ: ಗೌ.ಮ. ಉಮಾಪತಿಶಾಸ್ತ್ರಿ, ಧರ್ಮಸ್ಥಳ 1993.
11. ಅನುಭವಾಮೃತ-ಸಂ. ಹೊಸಕೆರೆ ಚಿದಂಬರಯ್ಯ, 1936. ಪರಿಷ್ಕರಣ: ಜಿ. ಅಶ್ವತ್ಥನಾರಾಯಣ 2103.
12. ಪುಸ್ತಕಲೋಕ (ಜ-ಮಾ 2011) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
13. ಕನ್ನಡ ಶೈಲಿ ಕೈಪಿಡಿ-ಕನ್ನಡ ವಿಶ್ವವಿದ್ಯಾಲಯ, ಹಂಪಿ, 1995.
14. ಇಂ-ಇಂ ಜೆಮ್ ಡಿಕ್ಷನರಿ-ಭಾರದ್ವಾಜ್ ಡಿ.ಕೆ., ರಾಮಾಶ್ರಯ ಬುಕ್ ಡಿಪೋ, ಧಾರವಾಡ, 1962.
15. ಮೈವಿವಿ ಇಂ-ಕ ನಿಘಂಟು (ಪರಿಷ್ಕೃತ)- ಪ್ರಸಾರಾಂಗ ಮೈವಿವಿ, 2007.
16. ಸಚಿತ್ರ ಕೋಷ್ಟಕಗಳು-ಪ್ರ: ಎ.ಆರ್. ಶಿವನಾಗಪ್ಪ ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ ಇ 1920?
17. ಶಾಸನಗಳಲ್ಲಿ ಸಂಕೇತ ಮತ್ತು ಸಂಕ್ಷೇಪಗಳ ಇತಿಹಾಸ ದರ್ಶನ ಗ್ರಂಥ-ಎಸ್. ಗೀತಾ.
18. ನವ ಕರ್ನಾಟಕ ವಿಜ್ಞಾನ-ತಂತ್ರಜ್ಞಾನ ಪದಸಂಪದ-2011.

ಇತ್ಯಾದಿ.

ಅಧ್ಯಾಯ : 3

ಕರಡಚ್ಚು ತಿದ್ದುವಿಕೆಯಲ್ಲಿ ಶುದ್ಧಾಶುದ್ಧ ಪದಗಳ ವಿಚಾರ

ಕನ್ನಡ ಬರಹಗಳಲ್ಲಿ ಇಂದು ಸಂಸ್ಕೃತ-ಕನ್ನಡ-ಇಂಗ್ಲಿಷ್-ತಮಿಳು, ತೆಲುಗು, ಮರಾಠಿ ಇತ್ಯಾದಿ ಅನ್ಯದೇಶೀಯ, ಫ್ರೆಂಚ್, ಜರ್ಮನ್, ರಷ್ಯನ್ ಇತ್ಯಾದಿ ಅನ್ಯರಾಷ್ಟ್ರೀಯ ಶಬ್ದಗಳನ್ನು ಬಳಸಲಾಗುತ್ತಿದೆ. ಈ ಪೈಕಿ ಸಂಸ್ಕೃತ ಪದಗಳು ಕನ್ನಡದಲ್ಲಿ ಮೂಲರೂಪದಲ್ಲಿ, ಕೆಲವೊಮ್ಮೆ ರೂಪಾಂತರದಲ್ಲಿ (ತದ್ಭವ ರೂಪದಲ್ಲಿ) ಬಳಕೆ ಆಗುತ್ತದೆ. ಸಂಸ್ಕೃತ ಪದವಿಲ್ಲದೆ ಕನ್ನಡ ಬಳಕೆ ವ್ಯಾವಹಾರಿಕವಾಗಿ ಸಾಧ್ಯವೇ ಇಲ್ಲ ಎಂಬಂತೆ ಸಂಸ್ಕೃತ ಬಳಕೆ ಆಗುತ್ತಿದೆ. ಕನ್ನಡ ಕರಡಚ್ಚುಗಾರರಿಗೆ ಸಂಸ್ಕೃತ ಸಂಧಿ ಪ್ರಕರಣ, ಸಮಾಸ ಪ್ರಕರಣ ಮೊದಲಾದ ವ್ಯಾಕರಣ ವಿಚಾರಗಳು ಪರಿಚಯವಿದ್ದರೆ ಸಾಕಷ್ಟು ಅಪಶಬ್ದಗಳ ರೂಪಗಳನ್ನು ತಿದ್ದಲು ಸಾಧ್ಯ. ಅನ್ಯದೇಶೀಯ, ಅನ್ಯರಾಷ್ಟ್ರೀಯ ಶಬ್ದಗಳ ಬಳಕೆ ವಿಶೇಷವಾಗಿ ೧೯-೨೦ನೇ ಶತಮಾನದಲ್ಲಿ ಬಳಕೆ ಆಗಿ ಈಗಂತೂ ಇಂಗ್ಲಿಷ್ ಬಳಕೆ ಅನಗತ್ಯವಾಗಿ ಬಳಸುವುದು ಅತಿಯಾಗಿದೆ. ಟಿವಿ, ರೇಡಿಯೋ, ಪತ್ರಿಕೆ ಮಾಧ್ಯಮಗಳು ಇದಕ್ಕೆ ಮುಖ್ಯ ಕಾರಣ ಎಂದರೆ ತಪ್ಪಲ್ಲ. ಕರಡಚ್ಚು ತಿದ್ದುವವರು, ಶಿಷ್ಟಭಾಷೆ-ಆಡುಭಾಷೆ ಬಳಸಿದ ಸಂದರ್ಭವನ್ನು ನೋಡಿ ಬರಹದ ರೂಪಗಳನ್ನು ತಿದ್ದಬೇಕು. ನಾಟಕ, ಸಂಭಾಷಣೆ, ಸಂದರ್ಶನ, ಕಥೆ ಕಾದಂಬರಿಗಳಲ್ಲಿ ಆಡುಮಾತಿನ ರೂಪ, ಅನ್ಯದೇಶೀಯ ಪದ ಬಳಕೆ ಬರೆದರೆ ತಪ್ಪಲ್ಲ. ಆದರೆ ಗ್ರಂಥದಲ್ಲಿ ಶಿಷ್ಟಭಾಷೆಯಲ್ಲಿ ಶಾಸ್ತ್ರ, ವಿಜ್ಞಾನ, ಕಲೆ ಬರಹಗಳಲ್ಲಿ ಪದರೂಪಗಳ ಶುದ್ಧತೆ ಬಗ್ಗೆ ಎಚ್ಚರವಿರಬೇಕು. ಈ ಲೇಖನದಲ್ಲಿ ಮುಖ್ಯವಾಗಿ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸುವ ರೀತಿಯನ್ನು ಕರಡಚ್ಚುಗಾರರ ದೃಷ್ಟಿಯಿಂದ ಗಮನಿಸಿದೆ. ಕೆಲವು ಶುದ್ಧಾಶುದ್ಧ ಪದಗಳನ್ನು ಕೊಟ್ಟಿದೆ. ಇದು ಪರಿಪೂರ್ಣ ಪಟ್ಟಿ ಅಲ್ಲ.

ಕರಡಚ್ಚು ತಿದ್ದುವಾಗ ಮುದ್ರಣಕಾಲದಲ್ಲಿ ಕೆಲವೊಮ್ಮೆ ನಾನಾ ಕಾರಣಗಳಿಂದ ತಿದ್ದಿದರೂಪಗಳು ಒಳಗೊಳ್ಳದೆ ಅಶುದ್ಧರೂಪಗಳೇ ಉಳಿದುಬಿಟ್ಟಿರುತ್ತದೆ. ಇದಕ್ಕೆ ಮುಖ್ಯ ಕಾರಣ ಅಂತಿಮಕರಡನ್ನು ತಿದ್ದಿದಾಗ ಅದರಲ್ಲಿ ಸೂಚಿಸಿದ ತಪ್ಪುಗಳನ್ನು ಬೆರಳಚ್ಚುಗಾರರು ಸರಿಪಡಿಸುವುದಿಲ್ಲ ಮತ್ತು ಮುದ್ರಣಕಾರರು ಅವಸರದ ಕಾರಣದಿಂದ ಒಂದೆರಡು ತಪ್ಪುಗಳಿದ್ದರೆ ಯಾರಿಗೆ ತಿಳಿಯುತ್ತೆ ಎಂಬ ಧೋರಣೆಯಲ್ಲಿ ಗಮನಿಸುವುದಿಲ್ಲ ಮತ್ತು ವಿಪರೀತ ತಪ್ಪುಗಳಿದ್ದಾಗ ಸಹಜವಾಗಿ ಒಂದೆರಡು ತಪ್ಪು ಉಳಿಯುವುದು

ಉಂಟು. ಆದಕಾರಣ ಎಷ್ಟೋ ವೇಳೆ ಅನಿವಾರ್ಯವಾಗಿ ತಪ್ಪುಗಳು ಉಳಿಯುತ್ತದೆ. ಇಂಥ ಸಂದರ್ಭಗಳಲ್ಲಿ ಹಿಂದಿನಕಾಲದಲ್ಲಿ ಅಂದರೆ ಸ್ವಾತಂತ್ರ್ಯಪೂರ್ವದಲ್ಲಿ ನವೋದಯ ಕಾಲದಲ್ಲಿ ಒಪ್ಪೋಲೆ, ತಿದ್ದೋಲೆಗಳನ್ನು ಗ್ರಂಥದ ಮೊದಲಲ್ಲೋ ಕೊನೆಯಲ್ಲೋ ಕೊಡುತ್ತಿದ್ದರು. ಈಗ ಆ ಪದ್ಧತಿ ಬಿಟ್ಟು ಹೋಗಿದೆ. ಓದುಗರು ತಪ್ಪುಗಳನ್ನೇ ಸರಿ ಎಂದು ಭಾವಿಸುವಂತಾಗಿದೆ. ಅಚ್ಚಾದ ಮೇಲೊಮ್ಮೆ ಗ್ರಂಥವನ್ನು ಪರಿಶೀಲಿಸಿ ತಪ್ಪು ಉಳಿದಿದ್ದರೆ ತಪ್ಪೋಲೆ ಕೊಡುವುದು ಆರೋಗ್ಯಕರ ಪದ್ಧತಿ. ಇದಕ್ಕೆ ಬೆರಳಚ್ಚುಗಾರರು ಮುದ್ರಣಕಾರರು, ಪ್ರಕಾಶಕರು ಮನಸ್ಸು ಮಾಡಬೇಕು. ಸಾಮಾನ್ಯವಾಗಿ ಮೂರು ಬಾರಿ ಕರಡಚ್ಚು ತಿದ್ದುತ್ತಾರೆ. ಕೆಲವೊಮ್ಮೆ ಒಂದೆರಡು ಬಾರಿ ತಿದ್ದುವುದೇ ಸಾಕಾಗಬಹುದು. ಆದರೆ ಕಾವ್ಯ, ಶಾಸ್ತ್ರ, ವಿಜ್ಞಾನ ಗ್ರಂಥಗಳನ್ನು ತಿದ್ದುವಾಗ ಮೂರಕ್ಕಿಂತ ಹೆಚ್ಚು ಬಾರಿ/ ಹತ್ತುಬಾರಿ ತಿದ್ದಿರುವುದುಂಟು. ಆದರೆ ಎಷ್ಟೋ ಪ್ರಕಾಶಕರು, ಮುದ್ರಕರು (ಕೆಲವರನ್ನು ಬಿಟ್ಟರೆ) ಮೂರಕ್ಕಿಂತ ಜಾಸ್ತಿ ಸಲ ತಿದ್ದಲು ಅವಕಾಶ ನೀಡುವುದಿಲ್ಲ. ಈ ಸಂದರ್ಭದಲ್ಲಿ ವಿಸೀ., ಎ.ಆರ್.ಕೃ., ತೀನಂಶ್ರೀ, ಮೊದಲಾದವರು ನೆನಪಾಗುತ್ತಾರೆ. ಕೊನೆಯ ಹಂತದವರೆಗೂ ಕರಡಚ್ಚನ್ನು ಅವರು ತಿದ್ದುತ್ತಿದ್ದರು. ಈ ಸಂದರ್ಭದಲ್ಲಿ ವಿಸೀ ಅವರ ಪ್ರಸಂಗವೊಂದು ನೆನಪಾಗುತ್ತದೆ. ವಿಸೀ ಅವರು ತಮ್ಮ ಅರಲು ಬರಲು ಕವನ ಸಂಕಲನವನ್ನು ಹಾಸನದ ಪ್ರೆಸ್ಸಿನಲ್ಲಿ ಅಚ್ಚು ಮಾಡಿಸುತ್ತಿದ್ದರು. ಅವರ ಬಂಧುಗಳೊಬ್ಬರ ಪ್ರೆಸ್ ಅದು. ಆಗ ನಾನು ಹಾಸನದ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೆ. ಪ್ರತಿವಾರ ಬೆಂಗಳೂರಿಗೆ ಬಂದು ಹೋಗುತ್ತಿದ್ದೆ.

ಪರಿಚಿತರಾಗಿದ್ದ ಸಿದ್ದೇಶ್ವರ ಪ್ರೆಸ್ಸಿನವರು ವಿಸೀ ಅವರ ಕವನ ಸಂಕಲನದ ಕರಡಚ್ಚನ್ನು ನನ್ನ ಕೈಲಿ ಕೊಟ್ಟು ವಿಸೀಗೆ ಕೊಟ್ಟು ತರಲು ತಿಳಿಸುತ್ತಿದ್ದರು. ವಿಸೀ ಅವರು ಪ್ರತಿ ಮುದ್ರಣದಲ್ಲೂ ತಿದ್ದುವುದರ ಜೊತೆಗೆ ಮಾರ್ಪಾಟುಗಳನ್ನು ಮಾಡುತ್ತಿದ್ದರು. ಹೊಸದನ್ನು ಸೇರಿಸುತ್ತಿದ್ದರು. ೮-೧೦ ಬಾರಿ ಕರಡು ತಿದ್ದಿದರೂ ಮತ್ತೆ ತಪ್ಪು ತಿದ್ದಿ ಕಳಿಸಿ ಎನ್ನುತ್ತಿದ್ದರು. ಮುದ್ರಕರು ೧೧ನೇ ಸಲ ಅಂತ ಕಾಣುತ್ತೆ ಎಲ್ಲೋ ಒಂದೆರಡು ತಪ್ಪು ಇತ್ತೋ ಇಲ್ಲವೋ ಗೊತ್ತಿಲ್ಲ ಅದನ್ನು ಮುದ್ರಣಕ್ಕೆ ಅವರ ಅಪ್ಪಣೆ ಇಲ್ಲದೇನೆ ಅಚ್ಚು ಮಾಡಿಬಿಟ್ಟರು. ವಿಸೀ ಅವರಿಗೆ ಪುಸ್ತಕ ಅಂದಚೆಂದವಾಗಿ ಬರಬೇಕು, ಒಂದೂ ತಪ್ಪಿಬಾರದೆಂಬುದು ಅವರ ಹಠ, ಛಲ, ವ್ರತ, ನಿಷ್ಠೆ ಆಗಿತ್ತು. ಅವರ ಕವನಸಂಕಲನದ 'ಕದಂಬ' ಬೆಂವಿವಿದಲ್ಲಿ ಪಠ್ಯವಾದಾಗ ಅವರೇ ಕರಡು ತಿದ್ದಿದ್ದರು. ಎಲ್ಲೋ ಒಂದೆರಡು ತಪ್ಪುಗಳಿದ್ದವು. ವಿಸೀ ಅವರು ಅದನ್ನು ಪಟ್ಟಿಮಾಡಿ ಒಂದು ಓಲೆಯನ್ನು-ಈ ತಪ್ಪುಗಳನ್ನು ತಿದ್ದಿಕೊಂಡು ಪಾಠ ಮಾಡಬೇಕಾಗಿ ಬಿನ್ನಹ ಅಂತ ತಿದ್ದೋಲೆಯನ್ನು-ಎಲ್ಲ ಕನ್ನಡ ಅಧ್ಯಾಪಕರಿಗೆ ತಾವೇ ಸ್ವಂತ ಖರ್ಚಿನಲ್ಲಿ ಕಳಿಸಿದ್ದರು. ಪರಿಪೂರ್ಣತೆಗೆ ಮಹತ್ವ ಕೊಡುತ್ತಿದ್ದರು ಅವರು.

ಇನ್ನೊಂದು ಪ್ರಸಂಗ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ತಿಳಿಸಿದ ಪ್ರಸಂಗ ನೆನಪಾಗುತ್ತದೆ. ಕರಡು ತಿದ್ದುವುದರಲ್ಲಿ ಮತ್ತು ಅಚ್ಚಿನದೋಷಗಳನ್ನು ಗಮನಿಸುವುದರಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ನಿಷ್ಣಾತರಾಗಿದ್ದರು ಎಂಬುದನ್ನು ಅದಕ್ಕೆ ವೆಂಕಟಾಚಲಶಾಸ್ತ್ರಿ ಅವರು ವಿಶ್ವೇಶ್ವರಯ್ಯನವರ ಪೂರ್ವಜರನ್ನು ಕುರಿತು ಬರೆದ ಪುಸ್ತಕದಲ್ಲಿ (ಪು. 122ರಲ್ಲಿ) 'ಚುಕ್ಕೆ ಮಾಯವಾಗಿಬಿಟ್ಟಿದೆ' ಎಂಬ ಪ್ರಸಂಗದಲ್ಲಿ ಉಲ್ಲೇಖಿಸಿದ್ದಾರೆ.

"1945ರಲ್ಲಿ ಅಖಿಲಭಾರತ ತಯಾರಿಕಾ ಸಂಸ್ಥೆ ತನ್ನ ವಾರ್ಷಿಕ ಅಧಿವೇಶನದ ಅಧ್ಯಕ್ಷಭಾಷಣವನ್ನು ಇಂಗ್ಲಿಷಿನಲ್ಲಿ ಸಿದ್ಧಪಡಿಸಿದ್ದರು. ಅದನ್ನು ಪಿ.ಎಲ್. ಬಾದಾಮಿ ಎಂಬುವರ ಕೈಗೆ ಅಚ್ಚು ಮಾಡಿಸಲು ಕೊಟ್ಟಿದ್ದರು. ಅವರು ಕಣ್ಣಲ್ಲಿ ಕಣ್ಣಿಟ್ಟು ಕರಡು ತಿದ್ದಿ ಅಚ್ಚು ಮಾಡಿಸಿ ಅದರ ಪ್ರತಿಗಳನ್ನು ಸರ್ ಎಂ.ವಿ. ಅವರಿಗೆ ತಲುಪಿಸಲು ಹೋದಾಗ ಅವರು ನಿದ್ರಿಸುತ್ತಿರುವುದನ್ನು ಕಂಡು ಅವರ ತಲೆದಿಂಬಿನ ಬಳಿ ಇಟ್ಟುಬಂದರು. ಬೆಳಿಗ್ಗೆ ಬಾದಾಮಿ ಅವರನ್ನು ಸರ್ ಎಂ.ವಿ. ಅವರು ಸಕಾಲಕ್ಕೆ ಮುದ್ರಿಸಿ ತಂದಿದ್ದಕ್ಕೆ ಅಭಿನಂದಿಸಿದರು. ಹಾಗೆಯೇ ಕೆಲವು ಅಚ್ಚಿನದೋಷ ಉಳಿದಿವೆ ಎಂದಾಗ ಅದೇನೆಂದು ಬಾದಾಮಿ ಅವರು ಕೇಳಿದಾಗ ಸರ್ ಎಂ.ವಿ. ಹೇಳಿದರು "ನೋಡಿ ......ನೇ ಪುಟದಲ್ಲಿ ......ನೇ ಪ್ಯಾರಾ ....ನೇ ಪಂಕ್ತಿಯಲ್ಲಿ ....ಪದ ಬಂದಿರುವ ಕಡೆ i ಎಂಬ ಅಕ್ಷರದ ಮೇಲಿನ ಚುಕ್ಕೆ ಮಾಯವಾಗಿಬಿಟ್ಟಿದೆ" ಎಂದರು. ಆಗ್ಗೆ ಸರ್ ಎಂ.ವಿ. ಅವರ ವಯಸ್ಸು 85 ವರ್ಷ."

ನಿಘಂಟು ಬಳಕೆ

ತಪ್ಪುಗಳನ್ನು ತಿದ್ದಲು ನಿಘಂಟುಗಳನ್ನು ಬಳಸುವುದು ಆವಶ್ಯಕ. ಆದರೆ ಅನೇಕರು ಅನುಮಾನ ಬಂದಾಗ ತಾವೇ ತೀರ್ಪುಗಾರರಾಗಿ ಇದೇ ಸರಿ ಎಂದು ತಿದ್ದಿರುವುದು ಉಂಟು. ಕನ್ನಡದಲ್ಲಿ ನೂರಾರು ನಿಘಂಟುಗಳಿವೆ. ಆದರೆ ಶಾಸ್ತ್ರೀಯವಾಗಿ ಪ್ರಮಾಣಬದ್ಧವಾದ ನಿಘಂಟುಗಳು ಕೆಲವೇ ಕೆಲವು. ಆದ್ದರಿಂದ ಪ್ರಮಾಣಭೂತ ನಿಘಂಟುಗಳನ್ನು ಬಳಸುವುದು ಸೂಕ್ತ. ಇಂಗ್ಲಿಷ್ ಪದಗಳ ಅರ್ಥ, ಉಚ್ಚಾರಗಳಿಗೆ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಇತ್ತೀಚಿನ ನಾಲ್ಕು ಸಂಪುಟಗಳ ನಿಘಂಟನ್ನು (ಈಚೆಗೆ ಒಂದೇ ಸಂಪುಟವಾಗಿ ಬಂದಿದೆ), ಕನ್ನಡ ಪದಗಳ ಅರ್ಥಗಳಿಗೆ ಶುದ್ಧ ರೂಪಗಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ ನಿಘಂಟು (೮ ಭಾಗ) ಗಳನ್ನು, ಕನ್ನಡ ಪದಗಳನ್ನು ಇಂಗ್ಲಿಷಿನ ಲಿಪಿಯಲ್ಲಿ ಬರೆಯುವಾಗ ಸಿ. ಕೃಷ್ಣ ಅವರ ಕ-ಇಂ ಬೃಹತ್ ನಿಘಂಟನ್ನು ಬಳಸುವುದು ಸೂಕ್ತ. ಸಂಸ್ಕೃತ ಪದಗಳ ರೂಪ, ಅರ್ಥಗಳಿಗೆ ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯರ

ಸಂಸ್ಕೃತ-ಕನ್ನಡ ಶಬ್ದಕೋಶ (೬ ಭಾಗ) ವನ್ನು ನೋಡುವುದು ಒಳ್ಳೆಯದು. ಪಾರಿಭಾಷಿಕ ಪದಗಳು ಬಂದಾಗ ಆಯಾ ಭಾಷೆಯ ನಿಘಂಟುಗಳನ್ನೂ ಕನ್ನಡದಲ್ಲಿ ಪ್ರಕಟವಾದ ಇಂಗ್ಲಿಷ್-ಕನ್ನಡ ನಿಘಂಟುಗಳನ್ನೂ ಪರಿಶೀಲಿಸುವುದು ಒಳ್ಳೆಯದು. ಉದಾಹರಣೆಗೆ, ಸಂಖ್ಯಾ ಶಬ್ದಗಳು ಬಂದಾಗ ಟಿ.ವಿ. ವೆಂಕಟಾಚಲಶಾಸ್ತ್ರಿಗಳ ಶ್ರೀವತ್ಸ ನಿಘಂಟು, ವಿಜ್ಞಾನದ ಪದಗಳು ಬಂದಾಗ ನವ ಕರ್ನಾಟಕ ಪ್ರಕಾಶಕರ 'ನವಕರ್ನಾಟಕ ವಿಜ್ಞಾನ-ತಂತ್ರಜ್ಞಾನ ಪದಸಂಪದ' (೨೦೧೧ರ ಮುದ್ರಣ), ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ವಿವಿಧ ಇಲಾಖೆಗಳ ಹತ್ತಾರು ಪಾರಿಭಾಷಿಕ ಪದಕೋಶಗಳು ಇತ್ಯಾದಿ ಬಳಸುವುದು ಒಳ್ಳೆಯದು.

ಅರ್ಥನಿರ್ಣಯದ ಸಂದರ್ಭದಲ್ಲಿ ಕೇವಲ ಪದಗಳ ಅರ್ಥಗಳನ್ನು ಕೊಟ್ಟಿರುವ ನಿಘಂಟುಗಳನ್ನು ನೋಡದೆ ಪ್ರಯೋಗಗಳನ್ನು ಕೊಟ್ಟ ನಿಘಂಟುಗಳನ್ನು (ಕ.ಸಾ.ಪ. ಕನ್ನಡ ನಿಘಂಟು, ಆಕ್ಸ್‌ಫರ್ಡ್ ಕೇಂಬ್ರಿಡ್ಜ್ ಮೊದಲಾದ ಸಂಸ್ಥೆಗಳ ಅಂತಾರಾಷ್ಟ್ರೀಯ ಮುದ್ರಣಗಳ ನಿಘಂಟುಗಳನ್ನು) ನೋಡಬೇಕು.

ಶ್ರೇಷ್ಠ ಕರಡಚ್ಚುಗಾರ ನಿಘಂಟು, ವ್ಯಾಕರಣ ಮೊದಲಾದ ಗ್ರಂಥಗಳ ಸಂಗ್ರಹ ಹೊಂದಿರುತ್ತಾನೆ. ಹಲವು ಭಾಷೆಗಳ - ಕನಿಷ್ಠಪಕ್ಷ ಕನ್ನಡದ ಜೊತೆಗೆ ಇಂಗ್ಲಿಷ್, ಸಂಸ್ಕೃತ - ಜ್ಞಾನವನ್ನಾದರೂ ಹೊಂದಿರಬೇಕು ಮತ್ತು ಆಧುನಿಕ ತಂತ್ರಜ್ಞಾನದ ಮುದ್ರಣವಿಧಾನದ ಪ್ರಾಥಮಿಕ ಪರಿಚಯ ಹೊಂದಿರಬೇಕು.

ಕನ್ನಡದಲ್ಲಿ ಕರಡಚ್ಚುಗಾರರ ತರಬೇತಿಗೆ ಪ್ರತ್ಯೇಕ ವ್ಯವಸ್ಥೆ ಇಲ್ಲ. ಏಕಲವ್ಯರಾಗಿ ಕಲಿತವರೇ ಹೆಚ್ಚು ಮತ್ತು ಕರಡಚ್ಚುಗಾರರಿಗೆ ಇಷ್ಟೇ ಅರ್ಹತೆಗಳಿರಬೇಕು ಎಂಬ ನಿಯಮವಿಲ್ಲ. ಯಾರು ಬೇಕಾದರೂ ತಿದ್ದಬಹುದು. ಕರಡಚ್ಚು ಚಿಹ್ನೆಗಳ ಅರಿವೇ ಇಲ್ಲದವರೂ ಕರಡನ್ನು ತಿದ್ದುವುದನ್ನು ಕಾಣುತ್ತೇವೆ. ಹೀಗಾಗಿ ಅಚ್ಚಿನ ತಪ್ಪುಗಳು ಅಸಂಖ್ಯಾತವಾಗಿ ಕಾಣಿಸಿಕೊಳ್ಳಲು ಅವಕಾಶವಾಗಿದೆ. ಕರಡಚ್ಚು ತರಬೇತಿ ಶಿಕ್ಷಣ ಪದ್ಧತಿಯನ್ನು ಪ್ರಕಾಶಕರ ಸಂಘವಾಗಲಿ, ಮುದ್ರಣಕಾರರ ಸಂಘವಾಗಲಿ, ಸರ್ಕಾರವಾಗಲಿ, ಪತ್ರಿಕೋದ್ಯಮ ಶಿಕ್ಷಣ ನೀಡುತ್ತಿರುವವರಾಗಲಿ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಬೇಕಾದ್ದು ಅತ್ಯಗತ್ಯವಾಗಿದೆ. ಅಚ್ಚಿನದೋಷಗಳಿಗೆ ತರಬೇತಿ ಇಲ್ಲದ ಅನುಭವವಿಲ್ಲದ ಕರಡಚ್ಚು ತಿದ್ದುಗಾರರೇ ಕಾರಣಕರ್ತರಾಗಿದ್ದಾರೆ. ಇದರ ಜತೆಗೆ ಈಚೆಗೆ ಕಂಪ್ಯೂಟರ್ ಬಂದ ಮೇಲೆ ಡಿಟಿಪಿ ಮಾಡುವ ಅನೇಕ ಬೆರಳಚ್ಚುಗಾರರಿಗೆ ಸರಿಯಾಗಿ ಕನ್ನಡ ಬರುವುದಿಲ್ಲ. ಯಾಂತ್ರಿಕವಾಗಿ ಕೀಲಿಮಣೆಯನ್ನು ಬಳಸುವುದಷ್ಟೆ ಅವರಿಗೆ ಗೊತ್ತು ಎನಿಸುತ್ತದೆ. ಮುದ್ರಕರು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಅವರು ಕಂಪ್ಯೂಟರ್

ಬಳಸುವುದನ್ನು ತಿಳಿದಿದ್ದಾರೆ ಎಂದಷ್ಟೆ ಗಮನಿಸುತ್ತಾರೆ. ಅವರ ಭಾಷಾತಜ್ಞತೆ ಎಷ್ಟಿದೆ ಎಂಬುದನ್ನು ಗಮನಿಸುವುದಿಲ್ಲ. ಅನೇಕ ಬೆರಳಚ್ಚುಗಾರರಿಗೆ ಕನ್ನಡಭಾಷೆಯ ಪ್ರಾಥಮಿಕ ಜ್ಞಾನವೂ ಇಲ್ಲದಿರುವುದರಿಂದ ಪ್ರತಿಸಲ ಕರಡಚ್ಚು ತಿದ್ದಿದಾಗಲೂ ಹೊಸ ತಪ್ಪುಗಳಾಗುವುದು, ಹಳೆಯ ತಪ್ಪುಗಳು ಉಳಿಯುವುದು ಸಾಮಾನ್ಯ ಸಂಗತಿಯಾಗಿದೆ. ಇದಕ್ಕೆ ಅಪವಾದವಾಗಿ ಬೆರಳಚ್ಚುಗಾರರು ಸಿಕ್ಕರೆ ಮುದ್ರಕರ ಪುಣ್ಯ, ಲೇಖಕರ ಭಾಗ್ಯ. ಲೇಖಕರೇ ಕಂಪ್ಯೂಟರಿನಲ್ಲಿ ಹಸ್ತಪ್ರತಿ ಸಿದ್ಧಪಡಿಸಿದಾಗ ಅಷ್ಟಾಗಿ ಈ ರೀತಿ ತಪ್ಪುಗಳು ಇರುವುದಿಲ್ಲ ಎಂದರೆ ತಪ್ಪಿಲ್ಲ. ಈ ದೃಷ್ಟಿಯಲ್ಲಿ ಕರಡಚ್ಚುಗಾರರಿಗೆ ನೆರವಾಗುವ ಹತ್ತಾರು ಗ್ರಂಥಗಳು ಕನ್ನಡದಲ್ಲಿ ಬಂದಿವೆ. ಅವುಗಳನ್ನಾದರೂ ಕರಡಚ್ಚುಗಾರರು ಗಮನಿಸುವುದು ಅಗತ್ಯ. ಉದಾಹರಣೆಗೆ ಕೆಲವನ್ನು ಇಲ್ಲಿ ಹೇಳಿದೆ:

ಕನ್ನಡ ಶೈಲಿ ಕೈಪಿಡಿ	ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ನಿಜಗನ್ನಡ	ಪೇರೂರು ಜಾರು
ನುಡಿಸಿರಿ-ನಡೆಸಿರಿ	ಸತ್ಯನಾರಾಯಣ ಮಲ್ಲಿಪಟ್ಟಣ
ಭಾಷಾ ದೀಪಿಕೆ	ಟಿ. ಕೇಶವಭಟ್ಟ
ಹೊಸಗನ್ನಡ ವ್ಯಾಕರಣ	ಎನ್. ರಂಗನಾಥಶರ್ಮಾ
ಹೊಸಗನ್ನಡ ವ್ಯಾಕರಣ	ಟಿ.ವಿ. ವೆಂಕಟಾಚಲ ಶಾಸ್ತ್ರೀ
ಶುದ್ಧಾಶುದ್ಧ ಕನ್ನಡ	ರಾಜಗೋಪಾಲಾಚಾರ್ಯ
ಕನ್ನಡಧ್ವನಿ	ಎನ್.ಪಿ. ಹೊನ್ನಾಕಟ್ಟಿ
ಕನ್ನಡ ಕಾಂಪೊಜಿಷನ್	ಡಿ.ಟಿ. ರಂಗಸ್ವಾಮಿ
ಇಗೋ ಕನ್ನಡ	ಜಿ. ವೆಂಕಟಸುಬ್ಬಯ್ಯ
ಪದಾರ್ಥ ಚಿಂತಾಮಣಿ	ಪಾವೆಂ ಆಚಾರ್ಯ

ಡಿ.ಎನ್. ಶಂಕರಭಟ್ಟರ ಕನ್ನಡ ಭಾಷಾ ಗ್ರಂಥಗಳು.

ಕೆ.ವಿ. ನಾರಾಯಣ ಅವರ 'ನಮ್ಮ ಸುತ್ತಮುತ್ತ' ಮೊದಲಾದ ಗ್ರಂಥಗಳು ಇತ್ಯಾದಿ.

(ಈ ಲೇಖನ ಬರೆಯಲು ಈ ಎಲ್ಲ ಗ್ರಂಥಗಳ ನೆರವನ್ನು ಪಡೆದಿದ್ದೇನೆ. ಅವರಿಗೆ ಕೃತಜ್ಞತೆಗಳು.)

ಸಂಸ್ಕೃತದ ಪುಲ್ಲಿಂಗ - ಸ್ತ್ರೀಲಿಂಗ ಪದಗಳ ರೂಪಗಳು

ಸಂಸ್ಕೃತದ ಪುಲ್ಲಿಂಗ ಶಬ್ದಗಳ ಸ್ತ್ರೀಲಿಂಗ ರೂಪಗಳನ್ನು ಅಶುದ್ಧರೂಪದಲ್ಲಿ ಬಳಸುವುದು ಹೊಸಗನ್ನಡದಲ್ಲಿ ಹೆಚ್ಚಾಗಿದೆ. ಆದಕಾರಣ, ಸಂಸ್ಕೃತ ಶಬ್ದಗಳ ಶುದ್ಧರೂಪಗಳನ್ನು ಲಿಂಗ ವಿಚಾರವಾಗಿ ಗಮನಿಸಬೇಕು.

ಪುಲ್ಲಿಂಗ	ಸ್ತ್ರೀಲಿಂಗ
ಅಧ್ಯಕ್ಷ	ಅಧ್ಯಕ್ಷೆ
ಸಚಿವ	ಸಚಿವೆ
ನಿರ್ದೇಶಕ	ನಿರ್ದೇಶಿಕೆ
ಸಹಾಯಕ	ಸಹಾಯಿಕೆ
ಅಧ್ಯಾಪಕ	ಅಧ್ಯಾಪಿಕೆ
ಉಪಾಧ್ಯಾಯ	ಉಪಾಧ್ಯಾಯಿನಿ, ಉಪಾಧ್ಯಾಯೆ, ಉಪಾಧ್ಯಾಯಿ
ಆಚಾರ್ಯ	ಆಚಾರ್ಯೆ
ಉಪನ್ಯಾಸಕ	ಉಪನ್ಯಾಸಿಕೆ
ಕವಿ	ಕವಯಿತ್ರಿ
ನಿರ್ಮಾತೃ	ನಿರ್ಮಾತ್ರಿ
ಅಧಿಕಾರಿ	ಅಧಿಕಾರಿಣಿ
ಕಾರ್ಯದರ್ಶಿ	ಕಾರ್ಯದರ್ಶಿನಿ
ರಚಯಿತೃ	ರಚಯಿತ್ರಿ
ಕರ್ತೃ	ಕರ್ತ್ರಿ
ಬಾಲಕ	ಬಾಲಿಕೆ
ಸಂಪಾದಕ	ಸಂಪಾದಿಕೆ
ಪರಿಶೀಲಕ	ಪರಿಶೀಲಿಕೆ
ಸಂದರ್ಶಕ	ಸಂದರ್ಶಿಕೆ
ನಿರ್ವಾಹಕ	ನಿರ್ವಾಹಿಕೆ
ವಾಹಕ	ವಾಹಿಕೆ
ಪ್ರೇಕ್ಷಕ	ಪ್ರೇಕ್ಷಿಕೆ
ಸಹಾಯಕಾರಿ	ಸಹಾಯಕಾರಿಣಿ
ರೂಪದರ್ಶಿ	ರೂಪದರ್ಶಿನಿ
ಶಿಕ್ಷಕ	ಶಿಕ್ಷಕಿ
ವಿದ್ಯಾರ್ಥಿ	ವಿದ್ಯಾರ್ಥಿನಿ
ನಿರ್ಮಾಪಕ	ನಿರ್ಮಾಪಿಕೆ

ಲೇಖಕ	ಲೇಖಿಕೆ
ವಾಚಕ	ವಾಚಿಕೆ
ಅಭಿನೇತೃ	ಅಭಿನೇತ್ರಿ
ಗಗನಚಾರಿ	ಗಗನಚಾರಿಣಿ
ಬ್ರಹ್ಮಚಾರಿ	ಬ್ರಹ್ಮಚಾರಿಣಿ
ಗೂಢಚಾರಿ	ಗೂಢಚಾರಿಣಿ

(ಅಧ್ಯಕ್ಷಿಣಿ, ಅಧ್ಯಾಪಕಿ, ಸೇವಕಿ, ಶಿಕ್ಷಕಿ, ಲೇಖಕಿ ಮುಂತಾದ ಸಂಸ್ಕೃತದ ಏಕಾರಾಂತ ಸ್ತ್ರೀಲಿಂಗ ಪದಗಳನ್ನು ಇಕಾರಾಂತ ಸ್ತ್ರೀಲಿಂಗ ಪದಗಳನ್ನಾಗಿ ಬಳಸುವುದು ತಪ್ಪು. ಇವು ಅಪಶಬ್ದಗಳು) ಆದರೆ ರೂಢಿರ್ಬಲೀಯಸೀ ಎಂಬಂತೆ ಕನ್ನಡದಲ್ಲಿ ಇಕಾರಾಂತ ಸ್ತ್ರೀಲಿಂಗ ಪದಗಳನ್ನು ಬಳಸುತ್ತಾರೆ.

ಅನುನಾಸಿಕ ಪದಗಳ ರೂಪಗಳು

ಸಂಸ್ಕೃತದಲ್ಲಿ ಆಯಾವರ್ಗದ ಅಕ್ಷರಗಳ ಹಿಂದೆ ಅನುಸ್ವಾರ ಬಂದಾಗ ಆಯಾ ವರ್ಗದ ಪಂಚಮಾಕ್ಷರವಾದ ಅನುನಾಸಿಕವನ್ನು ಬಳಸುತ್ತಾರೆ. ಕನ್ನಡದಲ್ಲಿ ಎಲ್ಲ ಅನುನಾಸಿಕಗಳಿಗೂ ಅನುಸ್ವಾರ ಬಳಸುತ್ತಾರೆ. ಇದರ ಪರಿಚಯ ಅನೇಕರಿಗಿಲ್ಲ. ಹೀಗಾಗಿ ಅಙ್ಕ, ಅಞ್ಚಿ, ಅಙ್ಗ, ಅಣ್ಬು, ಅಣ್ಣ, ಅನ್ತ, ಅಮ್ಬ ಎಂದು ಬರೆದಾಗ ಸಂಸ್ಕೃತದ ಶುದ್ಧರೂಪವನ್ನು ತಪ್ಪಾಗಿ ತಿಳಿದವರಿದ್ದಾರೆ. ವೈಜ್ಞಾನಿಕವಾಗಿ ಉಚ್ಚಾರಣಾ ರೀತಿಯಲ್ಲಿ ಸಂಸ್ಕೃತ ವಿಧಾನವೇ ಸರಿ. ಆದರೆ ಕನ್ನಡದಲ್ಲಿ ಅನುಕೂಲದ ದೃಷ್ಟಿಯಿಂದ ಎಲ್ಲ ಅನುನಾಸಿಕಗಳ ಉಚ್ಚಾರಕ್ಕೆ ಅನುಸ್ವಾರ ಬಳಕೆ ರೂಢಿಗೆ ಬಂದುಬಿಟ್ಟಿದೆ. ಆದ್ದರಿಂದ ಅದೂ ಸರಿ ಇದೂ ಸರಿ. ಆದರೆ ಎರಡೂ ರೂಪಗಳ ಪರಿಚಯ ಕರಡಚ್ಚು ತಿದ್ದುವವನಿಗೆ ಇರಬೇಕಷ್ಟೆ. ಕನ್ನಡ-ಕನ್ನಡ ನಿಘಂಟುಗಳಲ್ಲಿ ಕನ್ನಡ ರೂಪಗಳನ್ನು ಕಾಣುತ್ತೇವೆ ಎಂದರೆ ಅನುನಾಸಿಕ ಉಚ್ಚಾರ ಬಂದ ಕಡೆಯಲ್ಲೆಲ್ಲ ಸಂಸ್ಕೃತ-ಕನ್ನಡದ ಪದಗಳಿಗೆ ಅನುಸ್ವಾರ ಚಿಹ್ನೆ (ಸೊನ್ನೆ) ಬಳಸುತ್ತೇವೆ. ಬಂಧನ ಸಂಪುಟ ರಂಗ ಅಂದಣ ಸಂಗ ತಂಟೆ ಇತ್ಯಾದಿ. ಕಿಟೆಲ್ ನಿಘಂಟಿನಲ್ಲಿ ಕೆಲವೆಡೆ ಕನ್ನಡ ಪದಗಳಿಗೂ ಅನುನಾಸಿಕ ರೂಪಗಳನ್ನು ಬಳಸಿದೆ. ಸಂಸ್ಕೃತ ಪದಗಳಿಗೆ ಅನುನಾಸಿಕಗಳನ್ನೇ ಬಳಸಿದೆ. ಗುಣ್ಡು (ಗುಂಡು) ನಿಯನ್ತ್ರ (ನಿಯಂತ್ರ) ಪನ್ದೆ (ಪಂದೆ) ಅನ್ತು (ಅಂತು) ಬ್ರಹ್ಮಾನನ್ದ (ಬ್ರಹ್ಮಾನಂದ) ಕುಮ್ಭ (ಕುಂಭ) ಅನ್ತಹ (ಅಂತಹ). ಕನ್ನಡದ ಪದಗಳಲ್ಲಿ ಕೆಲವನ್ನು ಕೆಲವರು ಎರಡನೆಯ ರೂಪದಲ್ಲಿ ಬಳಸುತ್ತಾರೆ. ಅಣ್ಣ (ಅಂಣ) ತಮ್ಮ (ತಂಮ) ತಿಮ್ಮ (ತಿಂಮ) ಅಮ್ಮ (ಅಂಮ) ಇತ್ಯಾದಿ. ಇದು ಸೂಕ್ತವಲ್ಲ. ಅಣ್ಣ, ತಮ್ಮ, ತಿಮ್ಮ, ಅಮ್ಮ ರೂಪಗಳೇ ಸೂಕ್ತವಾದವು.

ಲಕಾರ ಮತ್ತು ಳಕಾರ ಪದಗಳು

ಸಂಸ್ಕೃತದ ಲಕಾರಯುಕ್ತ ಪದಗಳು ಕನ್ನಡದಲ್ಲಿ ಳಕಾರಯುಕ್ತ ಪದಗಳಾಗುತ್ತಿವೆ. ಎರಡೂ ರೂಪಗಳು ಸರಿ. ಆದರೆ ಕನ್ನಡದಲ್ಲಿ ಳಕಾರದ ಪದವೇ ಅನೇಕ ಸಂದರ್ಭಗಳಲ್ಲಿ ಸೂಕ್ತವಾಗಿರುತ್ತದೆ.

ಸಂಸ್ಕೃತ	ಕನ್ನಡ
ಮಂಜುಲ	ಮಂಜುಳ
ಮಂಗಲ	ಮಂಗಳ
ಕಮಲ	ಕಮಳ
ಮಂಡಲಿ	ಮಂಡಳಿ
ನಲಿನಿ	ನಳಿನಿ
ಕಲಂಕ	ಕಳಂಕ
ಸಂಕುಲ	ಸಂಕುಳ
ತಾಲ	ತಾಳ
ಪುಲಕ	ಪುಳಕ
ಪುಲಿನ	ಪುಳಿನ

ಸಂಸ್ಕೃತ ಪದಗಳಲ್ಲಿ ಮಾಡಿದಂತೆ ಕನ್ನಡ ಪದಗಳಲ್ಲಿ ಳಕಾರವನ್ನು ಲಕಾರಕ್ಕೆ ಬದಲು ಬಳಸಬಾರದ ಕೆಲವು ಪದಗಳಿವೆ. ಏಕೆಂದರೆ ಅರ್ಥ ವ್ಯತ್ಯಾಸವಾಗುತ್ತದೆ :

ಕಾಲ	ಕಾಳ
ಹಲಸು	ಹಳಸು
ಕಲಿಸು	ಕಳಿಸು
ಹೊಳೆ	ಹೊಲೆ
ಹುಲಿ	ಹುಳಿ

ಲಿಪ್ಯಂತರ ವಿಚಾರ: ಇಂದು ಕನ್ನಡ ಗ್ರಂಥಗಳಲ್ಲಿ ಇಂಗ್ಲಿಷ್ ಅವತರಣಿಕೆಗಳನ್ನು ಇಂಗ್ಲಿಷ್ ಲಿಪಿಯಲ್ಲಿ ಕೊಡುವ ಪರಿಪಾಠವನ್ನು ಈಗ ಎಲ್ಲೆಲ್ಲೂ ನೋಡುತ್ತೇವೆ. ಇಂಗ್ಲಿಷ್ ಪದಗಳನ್ನು ಇಂಗ್ಲಿಷ್ ಲಿಪಿಯಲ್ಲಿಯೇ ಕೊಡುತ್ತಾರೆ. ಇದು ಸರಿಯಲ್ಲ. ಕನ್ನಡ ಲಿಪಿ ಗೊತ್ತಿರುವವರಿಗೆಲ್ಲ ಇಂಗ್ಲಿಷ್ ಲಿಪಿ ಗೊತ್ತಿರುವುದಿಲ್ಲ. ಎಷ್ಟೋ ಸಲ ಪದಗಳ ಪರಿಚಯವಿರುತ್ತದೆ ಅಷ್ಟೆ. ಆದಕಾರಣ, ಇಂಗ್ಲಿಷ್ ಉಲ್ಲೇಖ ಪದಗಳನ್ನು

ಕನ್ನಡ ಲಿಪಿಯಲ್ಲೇ ಕೊಡಬೇಕು. (ಉಚ್ಚಾರದ ದೃಷ್ಟಿಯಲ್ಲಿ ಅರ್ಥದ ದೃಷ್ಟಿಯಲ್ಲಿ ಸ್ಪೆಲಿಂಗ್ ದೃಷ್ಟಿಯಲ್ಲಿ ವ್ಯತ್ಯಾಸ ಕಂಡುಬರುವಾಗ ಬೇಕಾದರೆ ಇಂಗ್ಲಿಷ್ ಲಿಪಿಯಲ್ಲಿ ಆವರಣ ಚಿಹ್ನೆಯಲ್ಲಿ ಕೊಡಬಹುದು.) ಲಿಪ್ಯಂತರ ವಿಚಾರಕ್ಕೆ ಕನ್ನಡ ಶೈಲಿ ಕೈಪಿಡಿ ಗ್ರಂಥ (ಪುಟ ೩೮-೫೨) ನೋಡಿ.

ಕಾಲವಾಚಕ ಪದಗಳ ಬಳಕೆ (ಆಡುಭಾಷೆ-ಬರಹದ ಭಾಷೆ) ವರ್ತಮಾನ ಕಾಲದ ರೂಪಗಳನ್ನು ಆಡುಮಾತಿನಲ್ಲಿ ಬರಹದಲ್ಲಿ ಬೇರೆಬೇರೆಯಾಗಿ ಬಳಸುತ್ತೇವೆ. ಆಡುಮಾತಿನ ರೂಪವನ್ನು ಸಾಮಾನ್ಯವಾಗಿ ಬರಹದಲ್ಲಿ ಬಳಸಬಾರದು.

ಆಡುಮಾತು	ಬರಹದ ರೀತಿ
ಬರೀತೀನಿ	ಬರೆಯುತ್ತೇನೆ
ಬರ್ತೀನಿ	ಬರುತ್ತೇನೆ
ತಿಂತೀನಿ	ತಿನ್ನುತ್ತೇನೆ
ಕುಡೀತೀನಿ	ಕುಡಿಯುತ್ತೇನೆ
ತಿಳ್ಕೊಳ್ತಾರೆ	ತಿಳಿದುಕೊಳ್ಳುತ್ತಾರೆ
ಬರ್ತಾರೆ	ಬರುತ್ತಾರೆ
ಹೋಗ್ತಾರೆ	ಹೋಗುತ್ತಾರೆ
ಕೂತ್ಕೊಂಡ	ಕುಳಿತುಕೊಂಡನು
ಕೂತ್ಕೊಳ್ಳಿ	ಕುಳಿತುಕೊಳ್ಳಿ
ಹೇಳ್ಕೊಂಡ	ಹೇಳಿಕೊಂಡನು

(ಕಾಲವಾಚಕ ಪದಗಳ ಆಡುಮಾತಿನ ರೂಪಗಳನ್ನು ನಾಟಕ, ಸಂಭಾಷಣೆ ಇತ್ಯಾದಿ ಸಂದರ್ಭಗಳಲ್ಲಿ ಬಳಸಬಹುದು, ತಪ್ಪಿಲ್ಲ.) ಗುಣವಾಚಕ ಪದಗಳ ರೂಪಗಳೂ ಬಳಕೆ ಮಾತಿನಲ್ಲಿ ಶಿಷ್ಟರೂಪಕ್ಕಿಂತ ಭಿನ್ನವಾಗುತ್ತದೆ.

ಒಳ್ಳೇ ಮಾತು - ಒಳ್ಳೆಯಮಾತು

ಎಲ್ಲಾ ಕೆಲಸ - ಎಲ್ಲ ಕೆಲಸ

ಅತೀಮಾತು - ಅತಿಮಾತು

ತುಂಬಾ ದಿವಸವಾಯ್ತು - ತುಂಬ ದಿವಸಗಳಾದವು

ಈಗ್ಲೇ ಬಾ - ಈಗಲೇ ಬಾ ಇತ್ಯಾದಿ.

ಅಂಕಿತನಾಮಗಳ ವಿಚಾರ

ಅಂಕಿತ ನಾಮಗಳನ್ನು ಬರೆಯುವಾಗ ಆಯಾ ವ್ಯಕ್ತಿಗಳು ಯಾವ ರೂಪ ಬಳಸುತ್ತಾರೋ ಅದನ್ನೇ ಬಳಸಬೇಕು. ಸರಿ ತಪ್ಪಿನ ಪ್ರಶ್ನೆ ಇಲ್ಲ. ಶಿಷ್ಟರೂಪಗಳಿಗೆ ತಿದ್ದಬೇಕಿಲ್ಲ. ಕ್ರಿಷ್ಣ - ಕೃಷ್ಣ, ಐಯ್ಯಂಗಾರ್ - ಅಯ್ಯಂಗಾರ್, ಆಚಾರ್ - ಆಚಾರ್ಯ ಏಕೆಂದರೆ ವ್ಯಕ್ತಿಯ ಅಂಕಿತನಾಮ ವೈಯಕ್ತಿಕ ಸಂಕೇತ ಆಗಿರುತ್ತದೆ. ಅದನ್ನು ನಾವು ಗೌರವಿಸಬೇಕು.

ಸರಿ **ತಪ್ಪು**

ರಾಮೈಯ್ಯಂಗಾರ್ - ರಾಮಯ್ಯಂಗಾರ್

ಮಾಸ್ತಿ ವೆಂಕಟೇಶ ಅಯ್ಯಂಗಾರ್ - ಮಾಸ್ತಿ ವೆಂಕಟೇಶ ಐಯ್ಯಂಗಾರ್

ಚಿತ್ರದುರ್ಗ - ಚಿತ್ರದುರ‍್ಗ

ಅನಂತಮೂರ್ತಿ - ಅನಂತಮೂರ‍್ತಿ

ನಳಿನಿ - ನಲಿನಿ

ಅಂಕಿತನಾಮಗಳಲ್ಲಿ, ವ್ಯಕ್ತಿಗಳ ಹೆಸರುಗಳಲ್ಲಿ ಕೆಲವೊಮ್ಮೆ ಸಂಸ್ಥೆ, ವಿಭಾಗ ಸ್ಥಳನಾಮಗಳ ಪದಗಳಲ್ಲಿ ಅಶುದ್ಧರೂಪಗಳು ಕಾಣಿಸಿಕೊಳ್ಳುತ್ತವೆ. ವ್ಯಕ್ತಿಗಳ ಹೆಸರಿನಲ್ಲಿ ಅಶುದ್ಧರೂಪಗಳ ಬಳಕೆ ಏಕಾಗುತ್ತವೆ ಎಂಬುದನ್ನು ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಕನ್ನಡ ಬರವಣಿಗೆ ದೋಷಗಳು ದೌರ್ಬಲ್ಯಗಳು ಗ್ರಂಥದಲ್ಲಿ (ಪುಟ 26-27) ಸೊಗಸಾಗಿ ವಿವರಿಸಿದ್ದಾರೆ. ಅವರು ಕೊಡುವ ಕಾರಣಗಳು ಹೀಗಿವೆ :

1. ಸಂಸ್ಕೃತ ಅಂಕಿತನಾಮಗಳನ್ನು ತಪ್ಪಾಗಿ ಉಚ್ಚರಿಸುವುದು ಮತ್ತು ಬರೆಯುವುದು. 2. ನಾಮಕರಣ ಮಾಡಿದಾಗ ತಪ್ಪಾಗಿ ಹೆಸರಿಡುವುದು. 3. ಶಾಲೆಗೆ ಸೇರಿಸುವಾಗ ದಾಖಲೆ ಪುಸ್ತಕಗಳಲ್ಲಿ ತಪ್ಪಾಗಿ ಹೆಸರು ಬರೆಸುವುದು ಅಥವಾ ಬರೆಯುವುದು. 4. ಸದೃಶರೂಪಗಳ ಅಂಧಾನುಕರಣೆಯ ಫಲ. 5. ಇಂಗ್ಲಿಷ್ ಭಾಷೆಯ ಅಕ್ಷರಗಳ ಸಂಯೋಜನೆಗಳು, ಉಚ್ಚಾರಭೇದಗಳು 6. ವಿಜಾತೀಯ ವ್ಯಂಜನಗಳ ಗುಚ್ಛಗಳ ಉಚ್ಚಾರಣೆಯ ಕಷ್ಟದ ಕಾರಣ.

ಉದಾ : ಅಂಕಿತನಾಮಗಳ ಸದೃಶರೂಪಗಳ ಅಂಧಾನುಕರಣೆಗೆ ನಿದರ್ಶನ

ಸರಿರೂಪ **ತಪ್ಪು** **ಸದೃಶರೂಪ**

ಕಾತ್ಯಾಯನೀ - ಕಾತ್ಯಾಯಿನಿ - (ಮೋಹಿನಿ)

ಗಾಯತ್ರೀ - ಗಾಯಿತ್ರಿ - (ಸಾವಿತ್ರಿ)

ಜಗದಂಬಾ - ಜಗದಾಂಬಾ - (ಬಾಲಾಂಬಾ)

ಜನಾರ್ದನ - ಜನಾರ್ಧನ - (ಗೋವರ್ಧನ)

ಪುರಂದರ - ಪುರಂಧರ - (ಯುಗಂಧರ)

ಮಧುಸೂದನ - ಮಧುಸೂಧನ - (ದುರ್ಯೋಧನ)

ರಘೂತ್ತಮ - ರಘೋತ್ತಮ - (ಪುರುಷೋತ್ತಮ)

ವಿಜಾತೀಯ ವ್ಯಂಜನಗಳ ಗುಚ್ಛಗಳ ಉಚ್ಚಾರಣೆಯಲ್ಲಿ ಉಂಟಾಗುವ ಕಾಠಿಣ್ಯದಿಂದ ಆದ ತಪ್ಪುಗಳು ಹಲವಾರು ಕಂಡು ಬರುತ್ತವೆ.

ಸರಿ		ತಪ್ಪು
ಸುಬ್ರಹ್ಮಣ್ಯ	-	ಸುಬ್ರಂಮಣ್ಯ / ಸುಬ್ರಮಣ್ಯ / ಸುಭ್ರಮಣ್ಯ / ಸುಭ್ರಹ್ಮಣ್ಯ
ಅಶ್ವತ್ಥ	-	ಅಶ್ವಥ / ಅಶ್ವತ್ / ಅಶ್ವತ್ತ / ಅಶ್ವಥ್ಥ

ರೇಫಸಹಿತವಾದ ಅಂಕಿತನಾಮಗಳನ್ನು ಋಕಾರಘಟಿತ ಅಂಕಿತನಾಮಗಳನ್ನಾಗಿ ತಿಳಿಯಬಾರದು.

ಸರಿ	ತಪ್ಪು
ಧ್ರುವ	ಧೃವ
ಶ್ರುತಿ	ಶೃತಿ

ದೇಶ್ಯ ಅಥವ ತದ್ಭವ ಶಬ್ದಗಳೊಂದಿಗೆ ಸಂಸ್ಕೃತ ಶಬ್ದಗಳು ಸೇರಿದಾಗ ಆಗುವ ರೂಪಗಳು ಸ್ವೀಕಾರಾರ್ಹ ಎನ್ನಬಹುದು.

ಕೃಷ್ಣಪ್ಪ - ಕಿಟ್ಟಪ್ಪ, ಲಕ್ಷ್ಮಮ್ಮ - ಲಕ್ಕಮ್ಮ

ಸಿದ್ಧರಾಮಯ್ಯ - ಸಿದ್ದಯ್ಯ, ಭೈರಪ್ಪ - ಬೈರಪ್ಪ

ಆದರೆ ಸಂಸ್ಕೃತ ಸಮಾಸಪದಗಳ ಭಿನ್ನರೂಪ ಒಪ್ಪಲಾಗದು.

ಸರಿ		ತಪ್ಪು
ಸಿದ್ಧೇಶ್ವರ	-	ಸಿದ್ದೇಶ್ವರ
ಶ್ರೀಕಂಠೇಶ್ವರ	-	ಸಿರಿಕಂಟೇಶ್ವರ
ಕೃಷ್ಣಯ್ಯ	-	ಕೃಷ್ಣೈಯ್ಯ
ರುದ್ರಯ್ಯ	-	ರುದ್ರೈಯ್ಯ

ಕನ್ನಡ ಪದಗಳ ಬಳಕೆ

ಬಹುವಚನ ಪ್ರತ್ಯಯಗಳ ಬಳಕೆ

ಬಹುವಚನದ 'ಗಳು' ಪ್ರತ್ಯಯವನ್ನು ಏಕವಚನದ ಪದದೊಂದಿಗೆ ಸೇರಿಸುವ ಬದಲು ಬಹುವಚನದ ಪದದೊಂದಿಗೆ ಅನಗತ್ಯವಾಗಿ ಸೇರಿಸುತ್ತಾರೆ.

ಸರಿ	ತಪ್ಪು
ಅವರು	ಅವರುಗಳು
ನಾವು	ನಾವುಗಳು
ತಾವು	ತಾವುಗಳು
ಜನರು	ಜನರುಗಳು
ಅಧ್ಯಾಪಕರು	ಅಧ್ಯಾಪಕರುಗಳು
ನೀವು	ನೀವುಗಳು
ಉಪಾಧ್ಯಾಯರು	ಉಪಾಧ್ಯಾಯರುಗಳು
ಮಹಾಸ್ವಾಮಿ ಅವರು	ಮಹಾಸ್ವಾಮಿಗಳವರು
ಅವರು	ಅವರುಗಳು
ಭಾವಂದಿರು	ಭಾವಂದಿರುಗಳು
ಸ್ತ್ರೀಯರು	ಸ್ತ್ರೀಯರುಗಳು
ಮಹಿಳೆಯರು	ಮಹಿಳೆಯರುಗಳು
ಇವು	ಇವುಗಳು
ಅವು	ಅವುಗಳು

ಆಹ್ವಾನ ಪತ್ರಿಕೆಗಳಲ್ಲಿ ಹೆಸರಿನ ಮುಂದೆ ರವರು ಎಂಬುದನ್ನು ಗೌರವ ಸೂಚಕವಾಗಿ ಸೇರಿಸುತ್ತಾರೆ. ಇಲ್ಲಿ ಅವರು ಎಂದು ಬಳಸುವುದು ಸಮಂಜಸ. ನರಸಿಂಹರವರು (ನರಸಿಂಹ ಅವರು) ರಾಮನ್‌ರವರು (ರಾಮನ್ ಅವರು) ಕೃಷ್ಣಶಾಸ್ತ್ರೀರವರು (ಕೃಷ್ಣಶಾಸ್ತ್ರೀ ಅವರು)

ಅಲ್ಪಪ್ರಾಣ - ಮಹಾಪ್ರಾಣ

(ವರ್ಗೀಯ ವ್ಯಂಜನಗಳ ಬಳಕೆ, ಸಂಸ್ಕೃತದ ಪದಗಳು)

ಅಲ್ಪಪ್ರಾಣ-ಮಹಾಪ್ರಾಣ ವ್ಯಂಜನಗಳನ್ನು ಸರಿಯಾಗಿ ಬಳಸದೆ ಇರುವುದನ್ನು ಅನೇಕ ಕಡೆ ನೋಡುತ್ತೇವೆ. ಕೆಲವು ಉದಾಹರಣೆಗಳನ್ನು ಗಮನಿಸಬಹುದು.

ಸರಿ (ಶುದ್ಧ)	ತಪ್ಪು (ಅಶುದ್ಧ)
ಸಂಬಂಧ	ಸಂಭಂದ
ಪ್ರಬಂಧ	ಪ್ರಭಂದ
ಆಸೆ	ಹಾಸೆ
ಭೀಕರ	ಬೀಕರ
ಸಂಘಟಿಸು	ಸಂಗಟಿಸು
ದುರ್ಯೋಧನ	ದುರ್ಯೋದನ
ಶುದ್ಧೋದನ	ಶುದ್ಧೋಧನ
ಭಾರತ ದೇಶ	ಭಾರತ ದೇಸ
ಮಧ್ಯ	ಮದ್ಯ
ಅಸಾಧ್ಯ	ಅಸಾದ್ಯ
ರಾಘವಾಂಕ	ರಾಗವಾಂಕ
ಭಗವಂತ	ಬಗವಂತ
ಹಾರ್ದಿಕ	ಹಾರ್ಧಿಕ
ಹರಿಶ್ಚಂದ್ರ	ಅರಿಶ್ಚಂದ್ರ
ವಿಶ್ವಾಮಿತ್ರ	ವಿಸ್ವಾಮಿತ್ರ
ಕ್ರೋಡೀಕರಣ	ಕ್ರೋಢೀಕರಣ
ಉಚ್ಚಾರಣೆ	ಉಚ್ಛಾರಣೆ
ಜನಾರ್ದನ	ಜನಾರ್ಧನ
ದಿಕ್ಸೂಚಿ	ಧಿಕ್ಸೂಚಿ
ದ್ಯುತಿ	ದ್ಯತಿ
ಧೃತರಾಷ್ಟ್ರ	ದೃತರಾಷ್ಟ್ರ

ಕನ್ನಡ ಪದಗಳ ಬಳಕೆ: ಅಲ್ಪಪ್ರಾಣ-ಮಹಾಪ್ರಾಣ ದೋಷಗಳು

ಕೆಲವು ಪದಗಳಲ್ಲಿ ಮಹಾಪ್ರಾಣಗಳ ಬದಲಾಗಿ ಅಲ್ಪಪ್ರಾಣಗಳನ್ನು ಬಳಸುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಅರ್ಥವ್ಯತ್ಯಾಸವಾಗದ ಸಂದರ್ಭದಲ್ಲಿ ಈ ರೀತಿ ಬಳಕೆ ತಪ್ಪಲ್ಲ. ಆದರೆ ಅರ್ಥವ್ಯತ್ಯಾಸವಾಗುವ ಸಂದರ್ಭದಲ್ಲಿ ಮಹಾಪ್ರಾಣದ ಬದಲಿಗೆ ಅಲ್ಪಪ್ರಾಣ ಬಳಸಬಾರದು.

ಅರ್ಥವ್ಯತ್ಯಾಸ ಆಗುವ ಪದಗಳು

ನಾಥ-ನಾತ ಶಾಖ-ಶಾಕ ಧನ-ದನ ಭಾವಿ-ಬಾವಿ

ಅಲ್ಪಪ್ರಾಣದ ಅಕ್ಷರಗಳನ್ನು ಅನವಶ್ಯಕವಾಗಿ ಮಹಾಪ್ರಾಣದ ಅಕ್ಷರಗಳಾಗಿ ಬಳಸಬಾರದು.

ಸರಿ	ತಪ್ಪು
ಡಿಕ್ಕಿ	ಢಿಕ್ಕಿ
ಡಿಲ್ಲಿ	ಢಿಲ್ಲಿ
ದಾಳಿ	ಧಾಳಿ
ನಿಗದಿ	ನಿಗಧಿ
ನಿರ್ದಿಷ್ಟ	ನಿರ್ಧಿಷ್ಟ
ಸದ್ಯ	ಸಧ್ಯ
ಒಂಬತ್ತು	ಒಂಭತ್ತು
ತೊಂಬತ್ತು	ತೊಂಭತ್ತು
ಬತ್ತ	ಭತ್ತ
ಗೋದಿ	ಗೋಧಿ
ಗರ್ಜನೆ	ಘರ್ಜನೆ

ಅಲ್ಪಪ್ರಾಣ-ಮಹಾಪ್ರಾಣ ದೋಷಗಳು

ಸರಿ	ತಪ್ಪು
ದೀಕ್ಷೆ	ಧೀಕ್ಷೆ
ದೊರೆ	ಧೊರೆ
ದೈನ್ಯ	ಧೈನ್ಯ
ಬೋಧೆ	ಭೋಧನೆ
ಬಾಧೆ	ಭಾದೆ
ಬೋಧಕ	ಭೋದಕ
ನಿರ್ದೇಶಕ	ನಿರ್ಧೇಶಕ
ಪುರಂದರ	ಪುರಂಧರ

ವಿದ್ಯಾರ್ಥಿ	ವಿಧ್ಯಾರ್ಥಿ
ಸಂಬೋಧನೆ	ಸಂಭೋದನೆ
ಬುದ್ಧಿ	ಬುದ್ದಿ
ಉದ್ಧಾರ	ಉದ್ದಾರ
ಷಷ್ಠ್ಯಬ್ದ	ಷಷ್ಟ್ಯಬ್ಧ
ಷಷ್ಠೀ	ಷಷ್ಟೀ
ಭಕ್ತಾದಿಗಳು	ಭಕ್ತಾಧಿಗಳು
ಭೀಭತ್ಸ	ಭೀಬತ್ಸ
ಅಂಬುಧಿ	ಅಂಭುಧಿ
ದುರದೃಷ್ಟ	ಧುರದೃಷ್ಟ
ಪ್ರಬಂಧ	ಪ್ರಭಂಧ
ಪ್ರಸಾಧನ	ಪ್ರಸಾಧನ
ಭೇದ	ಬೇಧ, ಭೇಧ
ಗದಾಯುದ್ಧ	ಗಧಾಯುದ್ಧ
ಅಚ್ಛೋದ	ಅಚ್ಚೋದ
ವಿದ್ಯುಚ್ಛಕ್ತಿ	ವಿದ್ಯುಚ್ಚಕ್ತಿ
ಇಚ್ಛೆ	ಇಚ್ಚೆ
ಸ್ವಚ್ಛತೆ	ಸ್ವಚ್ಚತೆ
ಕನಿಷ್ಠ	ಕನಿಷ್ಟ
ಗರಿಷ್ಠ	ಗರಿಷ್ಟ
ಸ್ವಾದಿಷ್ಠ	ಸ್ವಾದಿಷ್ಟ
ಇಷ್ಟ	ಇಷ್ಠ
ಅನಿರ್ದಿಷ್ಟ	ಅನಿರ್ಧಿಷ್ಟ
ಅನಿಷ್ಟ	ಅನಿಷ್ಠ
ವೃಷ್ಟಿ	ವೃಷ್ಠಿ
ಮೃಷ್ಟಾನ್ನ	ಮೃಷ್ಠಾನ್ನ

ಅನುಸ್ವಾರ ವಿಸರ್ಗದ ಪದಗಳು

ಸರಿ	ತಪ್ಪು
ಮನಃಶಾಂತಿ	ಮನೋಃಶಾಂತಿ
ಮನಃಕುಂಠಿತ	ಮನೋಕುಂಠಿತ
ಮನೋಮಂಥನ	ಮನಮಂಥನ
ಮನೋರಂಜನ	ಮನರಂಜನ
ಯಶಸ್ಕಾಮನೆ	ಯಶೋಕಾಮನೆ
ರೂಪಿಣಿ-ರೂಪವತಿ	ರೂಪಸಿ
ಲೇಖಿಕೆ, ಲೇಖಕಳು	ಲೇಖಕಿ
ವೈದುಷ್ಯಪೂರ್ಣ	ವಿದ್ವತ್‌ಪೂರ್ಣ
ಶೋಭಮಾನ	ಶೋಭಾಯಮಾನ
ಸಂಮಾನ (ಆದರ, ಗೌರವ)	ಸನ್ಮಾನ
ಸಂಮಾನ್ಯರು, ಸಂಮಾನನೀಯರು	ಸನ್ಮಾನಿತರು
ನಿಃಸ್ವಾರ್ಥ	ನಿಸ್ವಾರ್ಥ
ದುಃಸ್ವಪ್ನ	ದುಸ್ವಪ್ನ
ಪ್ರಾಯಶಃ	ಪ್ರಾಯಶಹ
ಬಹುಶಃ	ಬಹುಶ, ಬಹುಶಹ
ಮುಖತಃ	ಮುಕ್ತ, ಮುಖತಾ
ಮನಃಸ್ಥೈರ್ಯ	ಮನೋಸ್ಥೈರ್ಯ
ಮನಃಶುದ್ಧಿ	ಮನೋಶುದ್ಧಿ

ದೀರ್ಘಲೋಪದಿಂದ ಸಂಸ್ಕೃತ ಪದಗಳು

ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬರೆಯುವಾಗ ಅನೇಕರು ದೀರ್ಘಲೋಪ ಮಾಡುತ್ತಾರೆ. ಇದು ಸರಿಯಲ್ಲ.

ಸರಿ	ತಪ್ಪು
ಫಲಾಹಾರ	ಫಲಹಾರ
ಉಪಾಹಾರ	ಉಪಹಾರ
ಸಮಾಧಾನ	ಸಮಧಾನ

ವಿದ್ಯಾಭ್ಯಾಸ	ವಿದ್ಯಭ್ಯಾಸ
ಅಂತಾರಾಷ್ಟ್ರೀಯ	ಅಂತರಾಷ್ಟ್ರೀಯ
ಮಧ್ಯಾಂತರ	ಮಧ್ಯಂತರ
ಶಾಖಾಹಾರ	ಶಾಖಹಾರ
ಮಾಂಸಾಹಾರ	ಮಾಂಸಹಾರ

ಅನಗತ್ಯ ದೀರ್ಘ ಬಳಸುವುದು ತಪ್ಪು, ಸಂಸ್ಕೃತದ ಮೂಲ ಪದ ಸ್ವರೂಪದ ಅರಿವಿರಬೇಕು. ಸಂಸ್ಕೃತದ ವ್ಯಾಕರಣ ನಿಯಮಗಳು ತಿಳಿಯದಿರುವುದು ತಪ್ಪಿಗೆ ಕಾರಣವಾಗಿದೆ.

ಅನಗತ್ಯ ದೀರ್ಘ

ಸರಿ	**ತಪ್ಪು**
ನಾಗರಿಕ	ನಾಗರೀಕ
ಆಗಮಿಕ	ಆಗಮೀಕ
ಸ್ಥಾನಿಕ	ಸ್ಥಾನೀಕ
ಕರಣಿಕ	ಕರಣೀಕ

ಉಕಾರ ವ್ಯಂಜನಗಳ ಪದಗಳ ಸರಿ ರೂಪಗಳನ್ನು ಗಮನಿಸುವುದು ಮುಖ್ಯ.

ಸರಿ	**ತಪ್ಪು**
ಮುಹೂರ್ತ	ಮಹೂರ್ತ
ಕೂಲಂಕಷ	ಕೂಲಂಕುಷ

ದ್ವಿತ್ವಾಕ್ಷರ ಲೋಪ: ಸಂಸ್ಕೃತದಲ್ಲಿ ಕೆಲವು ಒತ್ತಕ್ಷರ ಪದಗಳು ದ್ವಿತ್ವಾಕ್ಷರದ ಒತ್ತಕ್ಷರದ ಪದಗಳಾಗಿರುತ್ತವೆ. ಅದು ಸಂಸ್ಕೃತದ ಪದ. ಆ ಪದಗಳನ್ನು ಕನ್ನಡದ ಜಾಯಮಾನಕ್ಕೆ ತಕ್ಕಂತೆ ಬರೆದಾಗ ದೋಷ ಅನ್ನಿಸಿಕೊಳ್ಳಬೇಕಿಲ್ಲ. ಆದರೆ ಸಂಸ್ಕೃತದ ಗ್ರಂಥಗಳನ್ನು ಅನುವಾದಿಸುವಾಗ ಸಂಸ್ಕೃತ ರೂಪಗಳನ್ನೇ ಬಳಸುವುದು ಸೂಕ್ತ.

ಸಂಸ್ಕೃತರೂಪ	**ಕನ್ನಡರೂಪ**
ಯೌವ್ವನ	ಯೌವನ
ಉಜ್ಜ್ವಲ	ಉಜ್ವಲ
ತತ್ತ್ವ	ತತ್ವ

ಸತ್ತ್ವ ಸಾತ್ತ್ವಿಕ	ಸತ್ವ ಸಾತ್ವಿಕ
ತತ್ತ್ವ ತಾತ್ತ್ವಿಕ	ತತ್ವ ತಾತ್ವಿಕ
ಮಹತ್ತ್ವ	ಮಹತ್ವ
ಮಾನವತ್ತ್ವ	ಮಾನವತ್ವ
ವಿರುದ್ಧತ್ತ್ವ	ವಿರುದ್ಧತ್ವ

ರೂಢಿಯಲ್ಲಿರುವ ಅಶುದ್ಧ ರೂಪಗಳು

ಸರಿ (ಶುದ್ಧ ರೂಪ)	**ತಪ್ಪು (ಅಶುದ್ಧ ರೂಪ)**
ವಿನಾ	ವಿನಃ, ವಿನಹ, ವಿನಹಾ
ವಿದ್ವತ್ತೆ	ವಿದ್ವತ್ತು, ವಿದ್ವತ್ತ್ವ, ವೈದುಷ್ಯ
ವಿದ್ವತ್ಸಮೂಹ	ವಿದ್ವಾಂಸ ಸಮೂಹ
ಶಕುಂತಲಾ	ಶಾಕುಂತಲಾ
ಸಂಗೀತ ವಿದುಷಿ	ಸಂಗೀತ ವಿದೂಷಿ
ಮಾತೃಶ್ರೀ	ಮಾತೋಶ್ರೀ
ಮಹದೀಶ್ವರ	ಮಹದೇಶ್ವರ
ಅಂಗೋಪಾಂಗ	ಅಂಗಾಂಗ
ಉಪದ್ರವ	ಉಪದ್ರ
ದೇವಾಧಿದೇವತೆ	ದೇವಾನುದೇವತೆ
ಸಮಕ್ಷ	ಸಮಕ್ಷಮ
ಪ್ರೇರಣ	ಪ್ರೇರೇಪಣ
ಮಹಾಕಾರ್ಯ	ಮಹತ್ಕಾರ್ಯ
ದಾಯವಾದಿ / ದಾಯಾದ	ದಾಯಾದಿ
ಪರಾಮರ್ಶಿಸು	ಪರಾಂಬರಿಸು
ಕೋಟ್ಯಂತರ	ಕೋಟ್ಯಾಂತರ
ದುರದೃಷ್ಟ	ದುರಾದೃಷ್ಟ
ಜಾತ್ಯತೀತ	ಜಾತ್ಯಾತೀತ
ಧಾರವಾಹೀ	ಧಾರವಾಹಿ

ಅಗತ್ಯ	ಅಗತ್ಯತೆ
ತಿಳಿವಳಿಕೆ	ತಿಳುವಳಿಕೆ
ನಡೆವಳಿಕೆ	ನಡವಳಿಕೆ
ನಡೆವಳಿ	ನಡವಳಿ (ನಡಾವಳಿ)
ಅನವಶ್ಯಕ	ಅನಾವಶ್ಯಕ
ಅತ್ಯವಶ್ಯಕ	ಅತ್ಯಾವಶ್ಯಕ
ರೂಪರೇಖೆ	ರೂಪುರೇಷೆ

'ಈ'ಕರಣ ಪ್ರತ್ಯಯ ವಿಚಾರ

'ಈ ಕರಣ' ಪ್ರತ್ಯಯದ ಬಗ್ಗೆ ರಂಗನಾಥ ಶರ್ಮರು ಹೇಳುವ ಮಾತನ್ನು ಗಮನಿಸಬೇಕು.

"ಸಂಸ್ಕೃತ ಶಬ್ದಗಳನ್ನು ಕನ್ನಡದಲ್ಲಿ ಹೊಸದಾಗಿ ಬಳಸುವಾಗ ಮೊದಲು ತಜ್ಞರೊಡನೆ ಸಮಾಲೋಚಿಸುವುದು ಉತ್ತಮ. ಒಮ್ಮೆ ಅಪಶಬ್ದಗಳು ಭಾಷೆಯಲ್ಲಿ ಸೇರಿದುವೆಂದರೆ ರೂಢಮೂಲವಾಗಿ ಕುಳಿತುಬಿಡುತ್ತವೆ. ಯಾವ ಶಬ್ದವನ್ನಾಗಲಿ ಬಳಕೆಗೆ ತರುವ ಮೊದಲು ಸಾವಧಾನವಾಗಿ ಚಿಂತಿಸುವುದು ಒಳ್ಳೆಯದು."

ಸರಿ	ತಪ್ಪು
ಆಧುನಿಕೀಕರಣ	ಆಧುನೀಕರಣ (ಆಧುನಿಕೀಕತೆ)
ವೈಭವೀಕರಣ	ವೈಭವಕರಣ
ವಿದ್ಯುದೀಕರಣ	ವಿದ್ಯುತ್ಕರಣ
ರಾಷ್ಟ್ರಸಾತ್ಕರಣ	ರಾಷ್ಟ್ರೀಕರಣ

ರೂಢಿಯಲ್ಲಿರುವ ಅಶುದ್ಧ ರೂಪಗಳು

ಈಗ ಬಳಸುತ್ತಿರುವ ಅಶುದ್ಧ ರೂಪದ ಸಂಸ್ಕೃತ ಪದಗಳ ಶುದ್ಧರೂಪ ಹೀಗಿವೆ.

ಸರಿ	ತಪ್ಪು (ಬಳಕೆಯ ಅಶುದ್ಧ ರೂಪಗಳು)
ಅಧ್ಯಕ್ಷೆ, ಅಧ್ಯಕ್ಷಳು	ಅಧ್ಯಕ್ಷಿಣಿ
ಅಂತಾರಾಷ್ಟ್ರೀಯ	ಅಂತರಾಷ್ಟ್ರೀಯ, ಅಂತರ್‌ರಾಷ್ಟ್ರೀಯ, ಅಂತರರಾಷ್ಟ್ರೀಯ

ಚತುರುಪಾಯ	ಚತುರೋಪಾಯ
ನಮೋನಮಃ	ನಮೋನ್ನಮಃ
ಪಾಶ್ಚಾತ್ಯ	ಪಾಶ್ಚಿಮಾತ್ಯ
ಪೌರಸ್ತ್ಯ	ಪೌರ್ವಾತ್ಯ
ಪ್ರಸ್ತಾವ	ಪ್ರಸ್ತಾಪ
ಮನೋಮಂಥನ	ಮನಮಂಥನ
ಪುನಾರಚನೆ	ಪುನರ್ರಚನೆ / ಪುನರ‍್ರಚನೆ

ವಿಜಾತೀಯ ಒತ್ತಕ್ಷರಗಳು ತಪ್ಪು ರೂಪಗಳು

ವಿಜಾತೀಯ ಒತ್ತಕ್ಷರಗಳನ್ನು ಉಚ್ಚಾರಣೆಯನ್ನು ಗಮನಿಸದೆ ಕಿವಿತಪ್ಪಿನಿಂದ ತಪ್ಪಾಗಿ ಬರೆಯುತ್ತಾರೆ. ಅದನ್ನು ಗಮನಿಸಬೇಕು.

ಸರಿ	ತಪ್ಪು
ಪೂರ್ವಾಹ್ನ	ಪೂರ್ವಾನ್ಹ
ಚಿಹ್ನೆ	ಚಿನ್ಹೆ-ಚಿನ್ನೆ
ಪ್ರಹ್ಲಾದ	ಪ್ರಲ್ಹಾದ
ಆಹ್ಲಾದ	ಆಲ್ಹಾದ
ಸಿಂಹ	ಸಿಮ್ಹ, ಸಿಹ್ಮ
ಬ್ರಾಹ್ಮಣ	ಬ್ರಾಂಹಣ, ಬ್ರಾಮ್ಹಣ
ಅಪರಾಹ್ನ	ಅಪರಾನ್ಹ
ವೈದ್ಯ	ವ್ಯದ್ಯ
ವೈರುದ್ಧ್ಯ	ವೈರುಧ್ಯ
ಸತ್ತ್ವ, ಸಾತ್ತ್ವಿಕ	ಸತ್ವ, ಸಾತ್ವಿಕ
ಮಹತ್ತ್ವ	ಮಹತ್ವ
ಮಿಥ್ಯಾ	ಮಿತ್ಯಾ
ಕೃಷ್ಣ	ಕ್ರಿಷ್ಣ, ಕ್ರಿಷ್ಣ, ಕ್ರುಷ್ಣ
ಅಚ್ಛ	ಅಚ್ಚ
ಉಚ್ಛ	ಉಚ್ಚ

ಇಕ ಪ್ರತ್ಯಯ ಸೇರುವ ಸಂಸ್ಕೃತ ಪದರೂಪಗಳನ್ನು ಕನ್ನಡದಲ್ಲಿ ತಪ್ಪಾಗಿ ಬಳಸುತ್ತಾರೆ.

ಆಕಾರವು ಪ್ರಾರಂಭದ ಅಕ್ಷರದಲ್ಲಿದ್ದರೆ ಇಕ ಪ್ರತ್ಯಯ ಸೇರಿದಾಗ ಪ್ರಾರಂಭದ ಅಕ್ಷರ ಸ್ವರ ದೀರ್ಘವಾಗುತ್ತದೆ.

ಮೂಲಪದ ಸರಿ ತಪ್ಪು

ಅಲಂಕಾರ-ಆಲಂಕಾರಿಕ-ಅಲಂಕಾರಿಕ

ಸಮುದಾಯ-ಸಾಮುದಾಯಿಕ-ಸಮುದಾಯಿಕ

ಕರ್ಮ-ಕಾರ್ಮಿಕ-ಕರ್ಮಿಕ

ಸಂಸಾರ-ಸಾಂಸಾರಿಕ-ಸಂಸಾರಿಕ

ಸಮಾಜ-ಸಾಮಾಜಿಕ-ಸಮಾಜಿಕ

ವ್ಯವಹಾರ-ವ್ಯಾವಹಾರಿಕ-ವ್ಯವಹಾರಿಕ

ಪಂಚಭೂತ-ಪಾಂಚಭೌತಿಕ-ಪಂಚಭೌತಿಕ

ರಸಾಯನ-ರಾಸಾಯನಿಕ-ರಸಾಯಿನಿಕ

ನಗರ-ನಾಗರಿಕ-ನಾಗರೀಕ

ಧರ್ಮ-ಧಾರ್ಮಿಕ-ಧರ್ಮಿಕ

ಉಕಾರ ಮತ್ತು ಒಕಾರ ಪ್ರಾರಂಭದ ಅಕ್ಷರದಲ್ಲಿದ್ದಾಗ ಇಕ ಪ್ರತ್ಯಯ ಸೇರಿದರೆ ಔಕಾರ ಬರುತ್ತದೆ.

ಸರಿ ತಪ್ಪು

ಭೂತ+ಇಕ=ಭೌತಿಕ-ಭೂತಿಕ

ಮುಖ+ಇಕ=ಮೌಕಿಕ-ಮೋಖಿಕ

ಲೋಕ+ಇಕ=ಲೌಕಿಕ-ಲೋಕಿಕ

ಆದಿಯಲ್ಲಿ ಇಈಐ ಕಾರಗಳಿದ್ದಾಗ ಇಕ ಪ್ರತ್ಯಯ ಸೇರಿದಾಗ ಐಕಾರ ಆಗುತ್ತವೆ.

ದಿನ+ಇಕ=ದೈನಿಕ

ಜೀವ+ಇಕ=ಜೈವಿಕ

ದೈವ+ಇಕ=ದೈವಿಕ

ಶ-ಷ-ಸ ಅವರ್ಗೀಯ ವ್ಯಂಜನಗಳು

ಸಂಸ್ಕೃತ ಪದಗಳ ಬಳಕೆ (ಸಂಸ್ಕೃತ ಪದಗಳ ಮೂಲರೂಪ ಗ್ರಾಹ್ಯ)

ಸರಿ	ತಪ್ಪು
ದೇಶಾಂತರ ಕಥೆ	ದೇಷಾಂತರ ಕಥೆ
ಸಂತೋಷ	ಸಂತೋಸ
ಶತ್ರುಗಳು	ಸತ್ರುಗಳು
ದೇಶ	ದೇಸ
ಶುಭಾಶಯ	ಶುಭಾಷಯ
ವಿಷಯ	ವಿಶಯ
ವಿಶೇಷ	ವಿಷೇಶ
ಶೇಷಾದ್ರಿ	ಶೇಷದ್ರಿ
ಸಶೇಷ	ಸಷೇಶ
ಆದಿಶೇಷ	ಆದಿಶೇಶ
ವಿಶ್ವಾಮಿತ್ರ	ವಿಸ್ವಾಮಿತ್ರ
ಹರಿಶ್ಚಂದ್ರ	ಹರಿಚ್ಚಂದ್ರ
ವಾಕ್ಯ	ವ್ಯಾಕ್ಯ
ಸಂದರ್ಶನ	ಸಂದರ್ಷನ
ಸುದರ್ಶನ	ಸುದರ್ಷನ
ಶಿಷ್ಯ	ಶಿಶ್ಯ
ದೃಶ್ಯ	ದೃಷ್ಯ
ದುಷ್ಯಂತ	ದುಶ್ಯಂತ

ಋಕಾರಯುಕ್ತ ಶಬ್ದಗಳು

ಸಂಸ್ಕೃತದಲ್ಲಿ ಋಕಾರಯುಕ್ತ ಶಬ್ದಗಳು ಸಾಕಷ್ಟಿವೆ. ಅವುಗಳನ್ನು ಗಮನಿಸಬೇಕು. ರಕಾರದ ಬಳಕೆ ಮಾಡಿ ಕನ್ನಡದಲ್ಲಿ ಋಕಾರ ಶಬ್ದಗಳನ್ನು ತಪ್ಪಾಗಿ ಬರೆಯುತ್ತಾರೆ. ಇತ್ತೀಚೆಗೆ 'ಋ'ಕಾರವೇ ಬೇಡ ಎಂಬ ವಾದ ಎದ್ದಿದ್ದುಂಟು. ಆದರೆ ಸಂಸ್ಕೃತದ ಶಬ್ದಗಳಿಗೆ ಅದರದೇ ವ್ಯಾಕರಣ, ವೈಶಿಷ್ಟ್ಯ, ಸೊಗಸು, ಅರ್ಥವಿರುವುದರಿಂದ ಅದನ್ನು ಗಮನಿಸಿ

ಪುರಸ್ಕರಿಸಬೇಕು. ಸಾರಾಸಗಟಾಗಿ ತಿರಸ್ಕರಿಸುವುದು ಸರಿಯಲ್ಲ. ಕರಡಚ್ಚು ತಿದ್ದುವಲ್ಲಿ ಋಕಾರ ಶಬ್ದದ ರೂಪಗಳು ಸಾಕಷ್ಟು ತಪ್ಪಾಗಿ ಕಂಡುಬರುತ್ತವೆ.

ಸರಿ	ತಪ್ಪು
ಕೃಷ್ಣ	ಕ್ರಿಷ್ಣ
ತೃಪ್ತಿ	ತ್ರುಪ್ತಿ
ಪ್ರಕೃತಿ	ಪ್ರಕ್ರುತಿ
ಗೃಹ	ಗ್ರಹ
ಉತ್ಕೃಷ್ಟ	ಉತ್ಕ್ರುಷ್ಟ
ಜಾಗೃತಿ	ಜಾಗ್ರತಿ
ಪಿತೃ	ಪಿತ್ರು
ತೃಣ	ತ್ರುಣ

ಕೆಲವು ಪದಗಳ ರೇಫ ರೂಪ (ರಕಾರ ರೂಪವೆ) ಸರಿರೂಪವಾಗಿದೆ.

ಸರಿ	ತಪ್ಪು
ಧ್ರುವ	ಧೃವ
ಶ್ರುತಿ	ಶೃತಿ
ಶತ್ರು	ಶತೃ
ಶತ್ರುಘ್ನ	ಶತೃಘ್ನ

ಗುಣವಾಚಕಕ್ಕೆ ತೆ ಪ್ರತ್ಯಯ ಅಥವಾ ಯಕಾರ ಪ್ರತ್ಯಯ ಸೇರುವ ಸಂಸ್ಕೃತ ಶಬ್ದಗಳನ್ನು ಕನ್ನಡದಲ್ಲಿ ತಪ್ಪಾಗಿ ಬಳಸುವುದೇ ಹೆಚ್ಚಾಗಿದೆ. ಅವುಗಳನ್ನು ಗಮನಿಸುವುದು ಆವಶ್ಯಕ.

ಸರಿ	ತಪ್ಪು
ಪ್ರಮುಖತೆ/ಪ್ರಾಮುಖ್ಯ	ಪ್ರಾಮುಖ್ಯತೆ
ಪ್ರಚುರತೆ/ಪ್ರಾಚುರ್ಯ	ಪ್ರಾಚುರ್ಯತೆ
ಪ್ರಧಾನತೆ/ಪ್ರಾಧಾನ್ಯ	ಪ್ರಾಧಾನ್ಯತೆ
ಸದೃಶತೆ/ಸಾದೃಶ್ಯ	ಸಾದೃಶ್ಯತೆ
ಸ್ವತಂತ್ರತೆ/ಸ್ವಾತಂತ್ರ್ಯ	ಸ್ವಾತಂತ್ರ್ಯತೆ

ಮಲಿನತೆ/ಮಾಲಿನ್ಯ	ಮಾಲಿನ್ಯತೆ
ಸಫಲತೆ/ಸಾಫಲ್ಯ	ಸಾಫಲ್ಯತೆ
ನಿಪುಣತೆ/ನೈಪುಣ್ಯ	ನೈಪುಣ್ಯತೆ
ದೀನತೆ/ದೈನ್ಯ	ದೈನ್ಯತೆ
ಉದಾರತೆ/ಔದಾರ್ಯ	ಔದಾರ್ಯತೆ
ಏಕತೆ/ಐಕ್ಯ	ಐಕ್ಯತೆ
ಕುಶಲತೆ/ಕೌಶಲ	ಕೌಶಲ್ಯತೆ

ಅ - ಹ ವ್ಯಂಜನ ವ್ಯತ್ಯಾಸ ಪದಗಳು

ಕೆಲವು ಉಚ್ಚಾರಣೆಯಲ್ಲಿ ಹ = ಅ ಹಕಾರದ ಪದಗಳನ್ನು ಅಕಾರದ ಪದಗಳನ್ನಾಗಿ ಬಳಸುತ್ತಾರೆ. ಆದರೆ ಬರಹದಲ್ಲಿ ಅಕಾರದ ಪದಗಳು ಹಕಾರದ ಪದವಾದರೆ / ಅಥವಾ ಅಕಾರದ ಪದ ಹಕಾರದ ಪದವಾದರೆ ಅರ್ಥ ವ್ಯತ್ಯಾಸವಾಗುತ್ತದೆ. ಪದದೋಷ ಆಗುವುದಿಲ್ಲ. ಆದಕಾರಣ ಪದಗಳ ಅರ್ಥ ತಿಳಿದು ಪದಗಳನ್ನು ಗಮನಿಸಬೇಕು.

ಅರ್ಥವ್ಯತ್ಯಾಸದ ಪದಗಳು

ಅಕ್ಕು (ಜೀರ್ಣವಾಗು)	ಹಕ್ಕು (ಅಧಿಕಾರಯುತ)
ಅಕ್ಕಿ (ದವಸ)	ಹಕ್ಕಿ (ಹಾರುವ ಪಕ್ಷಿ)
ಅಗ (ಬೆಟ್ಟ)	ಅಘ (ಪಾಪ)
ಅಗಲು (ತೊಲಗು)	ಹಗಲು (ದಿವಸ)
ಅಗ್ಗ (ಸುಲಭ ಬೆಲೆ)	ಹಗ್ಗ (ಹುರಿ)
ಅಣಿ (ಸಿದ್ಧವಾಗು)	ಹಣಿ (ಹೊಡೆ)
ಅತ್ತು (ದುಃಖಿಸಿ)	ಹತ್ತು (ಸಂಖ್ಯೆ)
ಅರಿದು (ತಿಳಿದು)	ಹರಿದು (ಚೂರುಮಾಡಿ)
ಅರಿತ (ತಿಳಿದ)	ಹರಿತ (ಚೂಪಾದ)
ಆಡು (ಮೇಕೆ)	ಹಾಡು (ಸಂಗೀತ)
ಆದರ (ಪ್ರೀತಿ)	ಹಾದರ (ವ್ಯಭಿಚಾರ)
ಆರಿಸು (ಒಣಗಿಸು)	ಹಾರಿಸು (ಮೇಲಕ್ಕೇರಿಸು)
ಆರು (ಸಂಖ್ಯೆ)	ಹಾರು (ಜಿಗಿ)

ಆಸನ (ಪೀಠ)	ಹಾಸನ (ಜಿಲ್ಲೆ)
ಆಳು (ಮನುಷ್ಯ)	ಹಾಳು (ನಾಶ)
ಉರಿ (ತಾಪ)	ಹುರಿ (ಹಗ್ಗ)
ಅರ್ಥಿ (ಬೇಡುವವನು)	ಅರ್ತಿ (ದುಃಖ)
ಕೃತಜ್ಞತೆ (ಉಪಕಾರಸ್ಮರಣೆ)	ಕೃತಘ್ನತೆ (ಉಪಕಾರ ಮರೆಯುವುದು)

ಅ-ಹ ಸ್ವರ ವ್ಯತ್ಯಾಸದ ದೋಷಗಳು

ಉಲಿ (ಕೂಗು)	ಹುಲಿ (ಕಾಡುಪ್ರಾಣಿ)
ಎಸರು (ಅಕ್ಕಿಗೆ ನೀರು)	ಹೆಸರು (ನಾಮಧೇಯ)
ಏಡಿ (ನೀರಿನ ಪ್ರಾಣಿ)	ಹೇಡಿ (ಅಂಜುಬುರುಕ)
ಏನು (ಪ್ರಶ್ನೆ)	ಹೇನು (ಕೊಳೆಯ ಕ್ರಿಮಿ)
ಏರು (ಹತ್ತು)	ಹೇರು (ರಾಶಿ, ಹೊರೆ)
ಏಳು (ಸಂಖ್ಯೆ)	ಹೇಳು (ಉತ್ತರಿಸು)
ಒಟ್ಟು (ಸಮೂಹ)	ಹೊಟ್ಟು (ತೌಡು)
ಒಂದು (ಸಂಖ್ಯೆ)	ಹೊಂದು (ಕೂಡು)
ಅಂಸ (ಹೆಗಲು)	ಹಂಸ (ಪಕ್ಷಿ)

ಅವರ್ಗೀಯ ವ್ಯಂಜನಗಳ ದೋಷಗಳು

ಶ, ಷ, ಸ ಗಳನ್ನು ಎಲ್ಲೆಂದರಲ್ಲಿ ಹೇಗೆಂದರಲ್ಲಿ ಬಳಸುವುದನ್ನು ಕಾಣುತ್ತೇವೆ. ಏಕೆಂದರೆ ಇವುಗಳಲ್ಲಿ ಶ, ಷ ಅಕ್ಷರದ ಪದಗಳೆಲ್ಲ ಸಾಮಾನ್ಯವಾಗಿ ಸಂಸ್ಕೃತ ಪದಗಳು ಇಲ್ಲವೇ ಅನ್ಯಭಾಷಾ ಪದಗಳು. ಅವು ಕನ್ನಡಕ್ಕೆ ಬರುವಾಗ, ಶ ಉಚ್ಚಾರಣೆ ಷ ಆಗಿ ಅಥವಾ ಷ ಉಚ್ಚಾರಣೆ ಶ ಆಗಿ ಪರಿಣಮಿಸುವುದಲ್ಲದೆ ಸಕಾರವೂ ಆಗುವುದುಂಟು. ಹೆಚ್ಚು ತಪ್ಪುಗಳು ಶಷಸ ಅಕ್ಷರದ ಪದಗಳಲ್ಲಿ ಕಾಣುತ್ತವೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಶ, ಷಕಾರ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬರೆಯುವಾಗ ಸಂಸ್ಕೃತದಲ್ಲಿ ಆ ಪದಗಳಲ್ಲಿ ಇರುವ ರೀತಿಯಲ್ಲಿಯೇ ಶ, ಷ ಬಳಸಬೇಕು. ಆದರೆ ಇಂಗ್ಲಿಷ್ ಮೊದಲಾದ ಸಂಸ್ಕೃತೇತರ ಭಾಷಾ ಪದಗಳನ್ನು ಬಳಸುವಾಗ ಶ-ಷ ಯಾವುದನ್ನು ಬೇಕಾದರೂ ಬಳಸಬಹುದು.

ಅ) ಇಂಗ್ಲಿಷ್ ಪದಗಳ ಬಳಕೆ (ಎರಡೂ ಸರಿ)

ರೇಶ್ಮೆ	ರೇಷ್ಮೆ
ಸುಶ್ಮಿತಾ ಸೇನ್	ಸುಷ್ಮಿತಾ ಸೇನ್
ನ್ಯಾಷನಲ್	ನ್ಯಾಶನಲ್
ಸ್ಪೆಶಲ್	ಸ್ಪೆಷಲ್
ಶಿಕಾರಿಪುರ	ಷಿಕಾರಿಪುರ
ಶಿಕಾಗೊ	ಷಿಕಾಗೋ

ಎರಡೂ ರೂಪಗಳು ಸರಿ-೧ (ಸಂಸ್ಕೃತ ಪದಗಳು)

ಸಂಸ್ಕೃತ ಪದಗಳಲ್ಲಿ ಕೆಲವು ಪದಗಳಿಗೆ ಎರಡು ರೂಪಗಳಿವೆ. ಈ ಶಬ್ದಗಳಲ್ಲಿ ಕಾಗುಣಿತ ವ್ಯತ್ಯಾಸ ಕಾಣುತ್ತದೆಯೇ ಹೊರತು ಅರ್ಥ ವ್ಯತ್ಯಾಸವಿಲ್ಲ. ಹಾಗಾಗಿ ಎರಡೂ ರೂಪಗಳು ಸರಿ. ಆದರೆ ನಾವು ಕನ್ನಡದಲ್ಲಿ ಬಳಸುವಾಗ ಯಾವುದಾದರೂ ಒಂದು ರೂಪವನ್ನು ಇಡೀ ಗ್ರಂಥದುದ್ದಕ್ಕೂ ಬಳಸುವುದು ಸೂಕ್ತ.

ಚರ	ಚಾರ
ಪರಿಭವ	ಪರೀಭವ
ಸಂತತ	ಸತತ
ಮಂಟಪ	ಮಂಡಪ
ಡೋಲಾಯನ	ಡೋಲಾಯಮಾನ
ಮಸೀ	ಮಷೀ
ಕೋಶ	ಕೋಷ
ಷಂಡ	ಶಂಡ
ಅಂಗಾರ	ಇಂಗಾಲ
ಕವಲ	ಕಬಲ
ಕಮಿ	ಕ್ರಿಮಿ
ಕೋನ	ಕೋಣ
ಘಾತಕ	ಘಾತುಕ
ದಾಡಿಮ	ದಾಳಿಮ

ದೋಲಾ	ಡೋಲಾ
ನಾಳಿಕೇರ	ನಾರಿಕೇಳ
ನೀರಜ	ನೀರೇಜ
ಪಂಕರುಹ	ಪಂಕೇರುಹ
ಪತ್ತನ	ಪಟ್ಟಣ
ಪ್ರಜ್ಞ	ಪ್ರಾಜ್ಞ
ಪ್ರತಿಹಾರ	ಪ್ರತೀಹಾರ
ಪಾಷಂಡ	ಪಾಖಂಡ
ಮತ್ಸರ	ಮಾತ್ಸರ್ಯ
ಮಹೀಪತಿ	ಮಹಿಪತಿ
ಮಂದೋದರಿ	ಮಂಡೋದರಿ
ಶಾದ್ವಲ	ಶಾಡ್ವಲ
ಸಂತಾಪ	ಸಲ್ಲಾಪ
ಚಂದ್ರ	ಚಂದಿರ, ಚಂದರ
ಮಂದ್ರ	ಮಂದರ
ಚೂಲ	ಚೂಡ
ನಾಡೀಜಂಘ	ನಾಳೀಜಂಘ
ರಶನಾ	ರಸನಾ
ವೃಂದಾವನ	ಬೃಂದಾವನ

ಅನ್ಯದೇಶೀಯ ಪದಗಳು (ಎರಡೂ ರೂಪಗಳು ಸರಿ)

ಪಂಚಾಯತ್	ಪಂಚಾಯಿತಿ
ಪಂಚಾಯಿತಿ	ಪಂಚಾಯ್ತಿ
ತಾಲೂಕು	ತಾಲ್ಲೂಕು-ತಾಲೂಕ
ನಾಲ್ಕು	ನಾಲಕ್ಕು-ನಾಕು

ಇಂಗ್ಲಿಷ್ ಪದಗಳ ರೂಪಗಳು

ಸಂಸ್ಕೃತೇತರ ಅನ್ಯಭಾಷಾ ಪದಗಳನ್ನು ಪ್ರತ್ಯಯಗಳನ್ನು ಸೇರಿಸಿ ಬಳಸುವಲ್ಲಿ

ಕೆಲವೊಮ್ಮೆ ಹಲವು ರೂಪಗಳನ್ನು ಕಾಣುತ್ತೇವೆ. ಇಂಥ ಸಂದರ್ಭಗಳಲ್ಲಿ ಅನ್ಯಭಾಷೆಯ ಮೂಲ ರೂಪಕ್ಕೆ ಪ್ರತ್ಯಯ ಸೇರಿಸುವುದು ಹೆಚ್ಚು ಉಚಿತ.

ಬ್ಯಾಂಕ್‌ನಲ್ಲಿ-ಬ್ಯಾಂಕಿನಲ್ಲಿ-ಬ್ಯಾಂಕದಲ್ಲಿ

ಕೋರ್ಟ್‌ನಲ್ಲಿ-ಕೋರ್ಟಿನಲ್ಲಿ-ಕೋರ್ಟುಗಳಲ್ಲಿ

ಗುಜರಾತ್‌ನಲ್ಲಿ-ಗುಜರಾತದಲ್ಲಿ-ಗುಜರಾತಿನಲ್ಲಿ

ಮೂಲ ಪದಗಳಿಗೆ ಪ್ರತ್ಯಯ ಸೇರಿಸಿ ಬಳಸುವುದು ಉಚಿತ. ಬ್ಯಾಂಕ್‌ನಲ್ಲಿ ಬ್ಯಾಂಕ್‌ಗೆ ಗುಜರಾತ್‌ನಲ್ಲಿ ಎಂದು ಕನ್ನಡ ಶೈಲಿಯ ಕೈಪಿಡಿಯಲ್ಲಿ ಹೇಳಲಾಗಿದೆ. ಆದರೆ ಕನ್ನಡ ಇಂಗ್ಲಿಷಿನ ಹಾಗೆ ವ್ಯಂಜನಾಂತ ಪದಗಳ ಭಾಷೆ ಅಲ್ಲ. ಸ್ವರಾಂತ ಪದಗಳ ಭಾಷೆ ಆದಕಾರಣ ಬ್ಯಾಂಕಿನಲ್ಲಿ ಕೋರ್ಟಿನಲ್ಲಿ ಗುಜರಾತಿನಲ್ಲಿ ಎಂಬ ರೂಪಗಳು ಹೆಚ್ಚು ಸೂಕ್ತವಾದುದು.

ಎರಡೂ ಸರಿರೂಪದ ಪದಗಳು-೨ (ಕನ್ನಡ ಪದಗಳು)

ವ್ಯಾಕರಣದ ದೃಷ್ಟಿಯಲ್ಲಿ ವ್ಯತ್ಯಾಸ ಇರಬಹುದಾದರೂ ಸಮಾನವಾಗಿ ಕನ್ನಡದಲ್ಲಿ ಎರಡೂ ರೂಪಗಳು ಬಳಕೆ ಆಗುತ್ತಿವೆ ರೂಢಿಯ ಕಾರಣದಿಂದ ಎರಡೂ ಸರಿ.

ಗಿಳಿ	ಗಿಣಿ
ದಬ್ಬಣ	ದಬ್ಬಳ
ಗೋಳಿ	ಗೋಣಿ
ಪಾರಿವಾಳ	ಪಾರಿವಾಣ
ದಾಳಿಂಬೆ	ದಾಡಿಂಬೆ
ರಾವಣ	ರಾವಳ
ಸರಪಳಿ	ಸರಪಣಿ
ಮೊಳಕಾಲು	ಮೊಣಕಾಲು
ಹೂಳು	ಹೂಣು
ಹಿಣಿಲು	ಹಿಳಿಲು
ಮೊಣಕೈ	ಮೊಳಕೈ
ನೊಣ	ನೊಳ
ಮುಳುಗು	ಮುಣುಗು
ಲಿಂಬೆ	ನಿಂಬೆ

ನೆತ್ತ	ಲೆತ್ತ
ದುಮುಕು	ಧುಮುಕು
ದುಮ್ಮಿಕ್ಕು	ಧುಮ್ಮಿಕ್ಕು
ಗಳಿಗೆ	ಘಳಿಗೆ
ಚಾಡಿಕೋರ	ಚಾಡಿಖೋರ
ಹಾರೈಸು	ಹಾರಯಿಸು
ನಿಯಮಿಸು	ನೇಮಿಸು
ಬಿನ್ನವಿಸು	ಬಿನ್ನೈಸು
ಕ್ಷೌರ	ಚೌರ
ತಗರು	ಟಗರು
ನಾಳಿದ್ದು	ನಾಡಿದ್ದು
ನಂಬುಗೆ	ನಂಬಿಕೆ
ಬಿಸುಡು	ಬಿಸಾಡು
ಬಾಗು	ಬಗ್ಗು
ಬರೆಹ	ಬರಹ
ಬರವಣಿಗೆ	ಬರೆವಣಿಗೆ
ಬೆಳವಣಿಗೆ	ಬೆಳೆವಣಿಗೆ
ಬೆಳಿಗ್ಗೆ	ಬೆಳಗ್ಗೆ
ಮರುದನಿ	ಮಾರ್ದನಿ
ಮಲತಾಯಿ	ಬಲತಾಯಿ
ಮುದುಕ	ಮುದಕ
ಮಾರ್ಪಾಟು	ಮಾರ್ಪಾಡು
ಹೊಸತು	ಹೊಸದು
ಹಳತು	ಹಳೆಯದು
ಹಿಂದೆಗೆ	ಹಿಂತೆಗೆ
ಮೆಚ್ಚುಗೆ	ಮೆಚ್ಚಿಕೆ
ಮದದಾನೆ	ಮದ್ದಾನೆ

ಎರಡೂ ಸರಿರೂಪದ ಪದಗಳು-೩ (ದಿನ ಬಳಕೆಯ ಪದಗಳು)

ಅರಸ	ಅರಸು
ಒಗಟ	ಒಗಟು
ಗಂಡಸು	ಗಂಡುಸು
ಹೆಂಗಸು	ಹೆಂಗುಸು
ಜರಗು	ಜರುಗು
ನಿರತ	ನಿರುತ
ನಡಗು	ನಡುಗು
ಮುಸುಕು	ಮುಸಕು
ರೂಪ	ರೂಪು
ಸಲಹು	ಸಲುಹು
ಹಡಗು	ಹಡಗ
ಹಿತ್ತಿಲ	ಹಿತ್ತಿಲು
ಹುಳು	ಹುಳ
ಚೆಂಡು	ಚಂಡು
ಚೆನ್ನಾಗಿ	ಚನ್ನಾಗಿ
ಚೊಂಬು	ಚೆಂಬು, ಚಂಬು
ಜಾಡ	ಜೇಡ
ದಯಮಾಡಿ	ದಯೆಮಾಡಿ
ನೆಲಸು	ನೆಲೆಸು
ಮರೆವು	ಮರವು
ವೀಳ್ಯ	ವೀಳೆಯ
ಹಚ್ಚೆ	ಹೆಚ್ಚೆ
ಕಠಿನ	ಕಠಿಣ
ಕಾಠಿಣ್ಯ	ಕಾಠಿನ್ಯ
ಜತೆ	ಜೊತೆ
ಮೊರಡಿ	ಮರಡಿ

ಮಗ	ಮೊಗ
ಈವೊತ್ತು	ಈವತ್ತು
ಆಹೊತ್ತು	ಆವತ್ತು
ಬಿದಿರು	ಬಿದುರು
ಬಸಿರು	ಬಸುರು
ಬಿರಸು	ಬಿರಿಸು
ದಣವು	ದಣಿವು
ಉದರು	ಉದಿರು
ರಾತ್ರಿ	ರಾತ್ರೆ
ಹೊಡೆ	ಹೊಡಿ
ದೆಸೆ	ದಿಸೆ
ಕತ್ತಲೆ	ಕತ್ತಲು
ಬತ್ತಲೆ	ಬತ್ತಲು
ಹಸಿವೆ	ಹಸಿವು
ಕೊಯ್ಯು	ಕುಯ್ಯು
ಮುಮ್ಮಗ	ಮೊಮ್ಮಗ
ಸುಂಡಿಲು	ಸೊಂಡಿಲು
ತುಳಸಿ	ತೊಳಸಿ
ಓಲೆ	ವಾಲೆ
ಓರೆಗಣ್ಣು	ವಾರೆಗಣ್ಣು
ಒಲ್ಲಿ	ವಲ್ಲಿ
ಕುಂಬಳ	ಗುಂಬಳ
ಕೆಳೆಯ	ಗೆಳೆಯ
ಕುಳಿ	ಗುಳಿ
ಕೀರು	ಗೀರು
ಕಾಕ	ಕಾಗೆ
ಪ್ರಕಟನೆ	ಪ್ರಕಟಣೆ
ದಿನ್ನೆ	ದಿಣ್ಣೆ

ಎರಡೂ ರೂಪಗಳು ಸರಿ-೪

ಕನ್ನಡ ಪದಗಳು

ಅಂಕನ	ಅಂಕಣ
ಇಡುಕು	ಎಡುಕು
ಇದಿರು	ಎದುರು
ಕಂಬ	ಕಂಭ
ಗಳಿಗೆ	ಘಳಿಗೆ
ನೆವ	ನೆಪ
ತಾಯತ	ತಾಯಿತ
ಗೂಗೆ	ಗೂಬೆ
ಬಿಗು	ಬಿಗಿ
ಬೊಂಬೆ	ಗೊಂಬೆ
ಕಳವಳ	ಕಳಮಳ
ಸೂಟಿ	ಚೂಟಿ
ಸೆಕ್ಕೆ	ಚೆಕ್ಕೆ
ಸವುಳು	ಚವುಳು
ಸಿಬ್ಬು	ಚಿಬ್ಬು
ಸಪ್ಪೆ	ಚಪ್ಪೆ
ಮಡಿಸು	ಮಡಿಚು
ಬೆಮರು	ಬೆವರು
ನಮೆ	ನವೆ
ಅದುರು	ಅದಿರು
ಅಡಕೆ	ಅಡಿಕೆ
ತಿನಿಸು	ತಿನಸು
ತೊಟ್ಟಿಲು	ತೊಟ್ಟಲು
ಸಡಿಲು	ಸಡಲು
ಹಲಗೆ	ಹಲಿಗೆ
ಗದ್ದಿಗೆ	ಗದ್ದುಗೆ

ಎರಡೂ ರೂಪಗಳು ಸರಿ-೫

ಕನ್ನಡದಲ್ಲಿ ಪ್ರಥಮಾ ವಿಭಕ್ತಿಯ ಪದಗಳನ್ನು ಉಕಾರಾಂತವಾಗಿ ಅಥವಾ ಉಕಾರ ರಹಿತವಾಗಿ ಬಳಸುತ್ತಾರೆ.

ಮರ	ಮರವು
ಗಿಡ	ಗಿಡವು
ಮಗು	ಮಗುವು
ರಾಮ	ರಾಮನು
ಭೀಮ	ಭೀಮನು
ಅಕ್ಕ	ಅಕ್ಕನು
ಗೀತ	ಗೀತಳು
ಶಾರದೆ	ಶಾರದಳು (ಶಾರದೆಯು)
ರಾಧೆ	ರಾಧೆಯು

ಸಂಸ್ಕೃತದ ಸ್ತ್ರೀಲಿಂಗ ಪದಗಳು

ಸಂಸ್ಕೃತದ ಸ್ತ್ರೀಲಿಂಗ ಪದಗಳು ದೀರ್ಘಾಂತವಾಗಿರುತ್ತವೆ. ಕನ್ನಡದಲ್ಲಿ ಹ್ರಸ್ವಾಂತವಾಗಿರುತ್ತದೆ. ಸಮಾಸ ಪದಗಳಲ್ಲಿ ದೀರ್ಘಾಂತರೂಪಗಳನ್ನು ಬಳಸಬೇಕು. ಕೆಲವು ಸಂಸ್ಕೃತ ಈಕಾರಾಂತ ಸ್ತ್ರೀಲಿಂಗ ಪದಗಳು ಕನ್ನಡದಲ್ಲಿ ಏಕಾರಾಂತವಾಗುತ್ತವೆ.

ಸಂಸ್ಕೃತ	**ಕನ್ನಡ**	**ಸಮಾಸಪದ**
ಲಕ್ಷ್ಮೀ	ಲಕ್ಷ್ಮಿ	ಲಕ್ಷ್ಮೀದೇವಿ
ಗೌರೀ	ಗೌರಿ	ಗೌರೀಮಾತೇ
ಕಾವೇರೀ	ಕಾವೇರಿ	ಕಾವೇರೀಮಾತೆ
ಸರಸ್ವತೀ	ಸರಸ್ವತಿ	ಸರಸ್ವತೀಪುತ್ರ
ಶಾಸ್ತ್ರೀ	ಶಾಸ್ತ್ರಿ	ಶಾಸ್ತ್ರೀರಚಿತ
ಗಂಗಾ	ಗಂಗೆ	ಗಂಗಾಪುತ್ರ
ತುಂಗಾ	ತುಂಗೆ	ತುಂಗಾತೀರ
ಮಾಲಾ	ಮಾಲೆ	ಮಾಲಾಧರ
ಬಾಲಾ	ಬಾಲೆ	ಬಾಲಾಮಣಿ
ಲೀಲಾ	ಲೀಲೆ	ಲೀಲಾತರಂಗ

ಶಾಲಾ	ಶಾಲೆ	ಶಾಲಾಪತ್ಯ
ಉಮಾ	ಉಮೆ	ಉಮಾಸುತ
ರಮಾ	ರಮೆ	ರಮಾದೇವಿ

ಎರಡೂ ರೂಪಗಳು ಸರಿ-೬

ಎರಡು ರೂಪಗಳು ಸರಿ ಎನಿಸುವ ಅನೇಕ ಪದಗಳು ಕನ್ನಡದಲ್ಲಿ ಇವೆ. ಆದರೆ ಒಂದು ಗ್ರಂಥದಲ್ಲಿ ಸರಿರೂಪದಲ್ಲಿ ಒಂದೇ ರೂಪವನ್ನು ಬಳಸಬೇಕು. ಒಂದೊಂದು ಕಡೆ ಒಂದೊಂದು ರೂಪ ಬಳಸಬೇಕಿಲ್ಲ.

ಅಂತಹ, ಅಂಥ	ಅಂತಹ, ಅಂಥ, ಅಂತ
ಇಲ್ಲಿನ, ಅಲ್ಲಿನ, ಎಲ್ಲಿನ	ಇಲ್ಲಿಯ, ಅಲ್ಲಿಯ, ಎಲ್ಲಿಯ
ಮಾಡುವುದು, ಮಾಡವದು	ಮಾಡೋದು
ಒಳಿತು	ಒಳ್ಳೆಯದು, ಒಳ್ಳಿತು
ಓಲಗಿಸು	ಓಲಯಿಸು, ಓಲೈಸು
ಒತ್ತಾಯಿಸು, ಒತ್ತೈಸು	ಒತ್ತಾಯಿಸು
ಉಸಿರು	ಉಸುರು
ಬಸಿರಿ	ಬಸುರಿ
ಉದಾಹರಣೆ	ಉದಾಹರಣ
ಉಡುಗೆ	ಉಡಿಗೆ
ಇಣುಕು	ಇಣಿಕು
ಆನು	ನಾನು
ಅಹುದು	ಹೌದು
ಅಲ್ಪಸಂಖ್ಯಾತರು	ಅಲ್ಪಸಂಖ್ಯಾಕರು
ಅಲ್ಲಿವರೆಗೆ	ಅಲ್ಲಿಯವರೆಗೆ
ಅರಲು	ಅರಹು
ಅದುರು	ಅದಿರು
ಅಭಿನಂದನ	ಅಭಿನಂದನೆ
ಅಭಿವಂದನ	ಅಭಿವಂದನೆ

ನಾಲಗೆ	ನಾಲಿಗೆ
ಹಸಿರು	ಹಸುರು
ಜುಗುಪ್ಸೆ	ಜಿಗುಪ್ಸೆ
ಸಲಿಕೆ	ಸನಿಕೆ
ಅಂಗಳ	ಅಂಗಣ
ಮೆದುಳು	ಮಿದುಳು
ಚಳವಳಿ	ಚಳುವಳಿ
ಕಡಿಮೆ	ಕಡಮೆ
ತಂಗಳು	ತಂಗುಳು
ಚುಕ್ಕಿ	ಚುಕ್ಕೆ
ಅಂಕಿ	ಅಂಕೆ
ಸೂರ್ಯ	ಸೂರ್ಯ
ಅರ್ಥ	ಅರ್ಥ
ಕಾರ್ಯ	ಕಾರ್ಯ
ಸರ್ಕಾರ	ಸರ್ಕಾರ
ಪರ್ಯಾಯ	ಪರ್ಯಾಯ

(ಅರ್ಕಾವತ್ತಿನ ಬಳಕೆ ಬಗ್ಗೆ ವಾದ ವಿವಾದಗಳಿರುವುದರಿಂದ ಸೂರ್ಯ, ಕಾರ್ಯ, ಸರ್ಕಾರ, ಪರ್ಯಾಯ ಇತ್ಯಾದಿ ರೂಪಗಳನ್ನು ಬಳಸುವುದು ಉತ್ತಮ)

ಕೆಲವು ಪದಗಳಿಗೆ ಷಷ್ಠೀ ವಿಭಕ್ತಿಯ ಪ್ರತ್ಯಯ ಹಲವು ಬಗೆಯಲ್ಲಿ ಸೇರುತ್ತದೆ. ಯಾವುದಾದರೂ ಒಂದು ರೂಪವನ್ನು ಬರವಣಿಗೆಯಲ್ಲಿ ಮೊದಲಿನಿಂದ ಕೊನೆವರೆಗೆ ಬಳಸುವುದು ಒಳಿತು.

ಸೀತೆಯ-ಸೀತಳ-ಸೀತನ

ಗಿರಿಜೆಯ-ಗಿರಿಜಳ-ಗಿರಿಜನ

ಲತಾಳ-ಲತಳ-ಲತನ

ಗೀತಾಳ-ಗೀತಳ-ಗೀತನ

ವಿಜಯಾಳ-ವಿಜಯನ-ವಿಜಯಳ

ಅಕ್ಕನ-ಅಕ್ಕಳ

ಕೊನೆಯ ಮಾತು: ಇದುವರೆಗೆ ಪ್ರಸ್ತಾಪಿಸಿರುವ ಶುದ್ಧಾಶುದ್ಧ ಪದಗಳ ವಿಚಾರ ಕೇವಲ ದಿಕ್ಸೂಚಿ ಅಷ್ಟೆ. ಸಮಗ್ರಾವಲೋಕನ ಅಲ್ಲ. ಹೊಸ ಹೊಸ ಪದಗಳು ರಚನೆ ಆದಾಗ, ಪಾರಿಭಾಷಿಕ ಪದಗಳು ರಚನೆ ಆದಾಗ, ಪ್ರಾಚೀನ (ಗ್ರಂಥಸ್ಥ, ಶಾಸನಸ್ಥ) ಪದಗಳನ್ನು ಬಳಸಿದಾಗ, ಜಾನಪದ ರೂಪದ ಪದಗಳನ್ನು ಬಳಸಿದಾಗ, ಅನ್ಯಭಾಷಾ ಉಚ್ಚಾರದ ದೃಷ್ಟಿಯಿಂದ ಕನ್ನಡ ಭಾಷೆಯ ಜಾಯಮಾನ, ಕನ್ನಡ ಸಂಸ್ಕೃತಿ ದೃಷ್ಟಿಯಿಂದ ಎಷ್ಟರ ಮಟ್ಟಿಗೆ ಸರಿ ಎಂಬುದು ಚರ್ಚೆ ಆಗಬೇಕಾಗುತ್ತದೆ. ವಿದ್ವಾಂಸರು ನಿರ್ಧರಿಸಬೇಕು. ಇಲ್ಲದಿದ್ದಲ್ಲಿ ಅಶುದ್ಧರೂಪಗಳು ಬಳಕೆಗೆ ಬಂದು ಅವುಗಳನ್ನು ತೊಡೆದು ಹಾಕುವುದು ಕಷ್ಟವಾಗಿ ಅದೂ ಸರಿ ಇದೂ ಸರಿ ಎಂದು ಖಾಜಿನ್ಯಾಯಕ್ಕೆ ಬರಬೇಕಾಗುತ್ತದೆ. ಇದಕ್ಕೆ ನಮ್ಮ ನಿಘಂಟುಗಳೇ ಸಾಕ್ಷಿ. ಕೆಲವು ಶುದ್ಧರೂಪವನ್ನು ಕೊಡುತ್ತವೆ. ಅಶುದ್ಧ ರೂಪವನ್ನೂ ಕೊಡುತ್ತವೆ. ಅಶುದ್ಧ ರೂಪಗಳು ಬಳಕೆಗೆ ಬರಲು ಜನಬಳಕೆಗಿಂತ ಹೆಚ್ಚಾಗಿ ಇಂದು ಪತ್ರಿಕೆ-ವಿದ್ಯುನ್ಮಾನ ಮಾಧ್ಯಮಗಳು ಮುಖ್ಯ ಕಾರಣ ಅಥವಾ ಸಾಧನಗಳಾಗಿವೆ ಎಂದರೆ ತಪ್ಪಿಲ್ಲ. ದೂರದರ್ಶನದ ಬರಹಗಳಲ್ಲಿ ಕಾಣುವ ಕಾಗುಣಿತ ದೋಷಗಳು, ಉಚ್ಚಾರ ದೋಷಗಳು ಇದಕ್ಕೊಂದು ನಿದರ್ಶನ ಎಂದರೆ ತಪ್ಪಿಲ್ಲ. ಭಾಷಾಶುದ್ಧಿ ನಿರ್ಮಲಚಾರಿತ್ರ್ಯದಷ್ಟೇ ಮುಖ್ಯವಾದುದು ಎಂಬುದನ್ನು ನೆನಪಲ್ಲಿ ಇಟ್ಟುಕೊಂಡು ಕರಡಚ್ಚುಗಾರರು ಕರಡು ತಿದ್ದಿದರೆ ಬಹುಮಟ್ಟಿಗೆ ಭಾಷಾದೋಷಗಳು ಮಾಯವಾದಾವು ಮತ್ತು ಕರಡಚ್ಚುಗಾರರು ಭಾಷಾತಜ್ಞರಾದಂತೆಲ್ಲಾ ಭಾಷಾದೋಷಗಳು ತಾನೇತಾನಾಗಿ ತಗ್ಗುತ್ತವೆ. ಪದಗಳ ಶುದ್ಧಾಶುದ್ಧ ವಿಚಾರದಲ್ಲಿ ಸರಿರೂಪಗಳ ಬಗ್ಗೆ ವಿದ್ವಾಂಸರ ದೃಷ್ಟಿಯಲ್ಲಿ ವ್ಯಾಕರಣ ನಿಯಮಾನುಸಾರರೂಪಗಳೇ ಶುದ್ಧರೂಪದ ಪದಗಳಾಗಿರುತ್ತವೆ. ಆದರೆ ಇಂದು ಅನ್ಯಭಾಷಾಪದಗಳು ವಿಫುಲವಾಗಿ ಬಳಕೆ ಆಗುತ್ತವೆ. ವಿಶೇಷವಾಗಿ ಇಂಗ್ಲಿಷ್ ಪದಗಳ ಬಳಕೆ ಹೆಚ್ಚಾಗಿದೆ. ಸಾಂಪ್ರದಾಯಿಕ ವ್ಯಾಕರಣಗಳು ಸಂಸ್ಕೃತ ಪದಗಳ ಬಗ್ಗೆ ವಿಚಾರ ಮಾಡಿವೆ ಅಷ್ಟೆ. ಹೊಸಗನ್ನಡ ವ್ಯಾಕರಣಕಾರರು ಇದರೆ ಭಾಷೆಗಳ ಅನ್ಯದೇಶೀಯಗಳನ್ನು ಬೇರೆ ಬೇರೆ ದೃಷ್ಟಿಗಳಿಂದ ನೋಡಿದ್ದಾರೆ. ಈ ದೃಷ್ಟಿಯಿಂದ ಅನೇಕ ಪದಗಳು ವ್ಯಾಕರಣ ದೃಷ್ಟಿಯಲ್ಲಿ ಅಷ್ಟು ಸಮಂಜಸವಲ್ಲದಿದ್ದರೂ ರೂಢಿಯ ಕಾರಣದಿಂದ ಎರಡೂ ಸರಿರೂಪ ಎಂದು ಬಳಸಲಾಗುತ್ತಿದೆ.

ಅಧ್ಯಾಯ : 4

ಕರಡು ತಿದ್ದುವಿಕೆಯಲ್ಲಿ ಸಂಕ್ಷಿಪ್ತಾಕ್ಷರಗಳು ಮತ್ತು ಸಂಕೇತಾಕ್ಷರಗಳು

ಕರಡು ತಿದ್ದುವಿಕೆ ಒಂದು ಶಾಸ್ತ್ರವಾಗಿದೆ. ಅದರಲ್ಲಿ ಅಕ್ಷರ ಅಂಕಿ-ಸಂಕೇತಗಳು ಆ ಶಾಸ್ತ್ರದ ಲಿಪಿ ಎನ್ನಬಹುದು. ಇವುಗಳ ಆಳವಾದ ಪರಿಚಯವಿಲ್ಲದೆ ಕರಡು ತಿದ್ದಲು ಸಾಧ್ಯವಿಲ್ಲ. ಅಕ್ಷರಗಳು ಬಿಡಿಯಾಗಿ ಇಡಿಯಾಗಿ ಬಳಕೆ ಆದಾಗ ಅದು ಏನನ್ನು ಸಂಕೇತಿಸುತ್ತದೆ ಅಥವಾ ಯಾವ ಯಾವ ಪದಗಳ ಸಂಕ್ಷಿಪ್ತರೂಪ ಎಂಬುದನ್ನು ತಿಳಿದಿರಬೇಕು. ವ್ಯಾಕರಣಶಾಸ್ತ್ರದಲ್ಲಿ ನಾಮಪದಗಳಿಗೆ ಬದಲಾಗಿ ಬಳಸುವ ಪದಗಳನ್ನು ಸರ್ವನಾಮಗಳು ಎನ್ನುತ್ತೇವೆ. ಹಾಗೆಯೇ ನಾಮಪದಗಳನ್ನೂ ಅದರಲ್ಲಿರುವ ಪದಗಳ ಆದ್ಯಕ್ಷರಗಳನ್ನೂ ಸೇರಿಸಿ ಬರೆದಾಗ ಸಂಕ್ಷಿಪ್ತಾಕ್ಷರ / ಸಂಕ್ಷೇಪಾಕ್ಷರ ಎನ್ನುತ್ತೇವೆ. ನಿರ್ದಿಷ್ಟ ನಾಮಪದಗಳನ್ನು ಬೇರೆ ಅಕ್ಷರಗಳಿಂದ ನಿರ್ದೇಶಿಸಿದಾಗ ಅವುಗಳನ್ನು ಸಂಕೇತಾಕ್ಷರ ಗಳೆನ್ನುತ್ತೇವೆ. ಗ್ರಂಥ ಸಂಪಾದನಾಶಾಸ್ತ್ರದಲ್ಲಿ ನಿಘಂಟುಗಳಲ್ಲಿ ಸಂಕ್ಷಿಪ್ತಾಕ್ಷರ ಸಂಕೇತಾಕ್ಷರಗಳನ್ನು ಬಳಸುತ್ತೇವೆ. ಸಂಪಾದಿತ ಗ್ರಂಥಗಳಲ್ಲಂತೂ ಅನಿವಾರ್ಯ.

ಇತಿಹಾಸ, ಛಂದಸ್ಸು, ವ್ಯಾಕರಣ, ವಿಜ್ಞಾನ ಮೊದಲಾದ ಶಾಸ್ತ್ರ, ವಿಜ್ಞಾನ ಕಲಾಗ್ರಂಥಗಳಲ್ಲಿ ಸಾಕಷ್ಟು ಸಂಕ್ಷಿಪ್ತಾಕ್ಷರ ಸಂಕೇತಾಕ್ಷರಗಳನ್ನು ಕಾಣುತ್ತೇವೆ. ಇವುಗಳ ಪರಿಚಯ ಕರಡು ತಿದ್ದುಗಾರರಿಗೆ ಅಗತ್ಯವಿದೆ.

ಸಂಕ್ಷಿಪ್ತಾಕ್ಷರ ಎಂದರೇನು?

ಇಂಗ್ಲಿಷ್‌ನಲ್ಲಿ Abbreviation ಎಂಬುದಕ್ಕೆ ಸಂಕ್ಷಿಪ್ತ ಎಂಬ ಪದವನ್ನು ಸೂಚಿಸಲು ಬಳಸಿದೆ. ಸಂಕ್ಷಿಪ್ತ ಎಂಬ ಪದಕ್ಕೆ ಸಂಕ್ಷಿ ಎಂಬ ಸಂಕ್ಷಿಪ್ತ ರೂಪವನ್ನು ಸೂಚಿಸಿದೆ. ಅಬ್ರಿವಿಯೇಷನ್ ಎಂಬುದಕ್ಕೆ ಮೈವಿವಿನಿಘಂಟು. ೧. ಸಂಕ್ಷೇಪಣ, ಸಂಕ್ಷೇಪ ಮಾಡುವುದು ೨. ಸಂಕ್ಷೇಪ, ಸಂಕ್ಷಿಪ್ತಪದ, ರೂಪ. ಹ್ರಸ್ವಪದ ಎಂದು ಕೊಟ್ಟಿದೆ (ಪುಟ. ೫ ಮೈವಿವಿ ಇಂ.ಕ.ನಿ)

ಒಂದು ಅಥವಾ ಎರಡಕ್ಕಿಂತ ಹೆಚ್ಚು ಪದಗಳಲ್ಲಿ ಕೆಲವು ಅಕ್ಷರಗಳನ್ನು (ಸಾಮಾನ್ಯವಾಗಿ ಆದ್ಯಕ್ಷರಗಳನ್ನು) ತೆಗೆದುಕೊಂಡು ಅಡಕಗೊಳಿಸಿ ಆ ಪದಗಳನ್ನು ಪ್ರತಿನಿಧಿಸುವುದನ್ನು ಸಂಕ್ಷಿಪ್ತಾಕ್ಷರಗಳು ಎಂದು ಕರೆಯಬಹುದು.

ಉದಾ ೧. ರಾಮಾಯಣ - ರಾ.
೨. ವಾಲ್ಮೀಕಿ ರಾಮಾಯಣ - ವಾ.ರಾ.
೩. ಕನ್ನಡ ಸಾಹಿತ್ಯ ಚರಿತ್ರೆ - ಕ.ಸಾ.ಚ.

ಸಂಕ್ಷೇಪಗಳನ್ನು ಮಾಡುವಾಗ ಆದ್ಯಕ್ಷರಗಳನ್ನು ಸೇರಿಸುವಾಗ ಕಡ್ಡಾಯವಾಗಿ ಅಕ್ಷರಗಳ ನಡುವೆ ಬಿಂದುವಿಡುವುದು ಒಳ್ಳೆಯದು. ಆದರೆ ಇದನ್ನು ಐಚ್ಛಿಕವಾಗಿ ಬಳಸಲಾಗುತ್ತಿದೆ. ಹೀಗಾಗಿ ಸಂಕ್ಷೇಪಗಳಲ್ಲಿ ಎರಡು ರೂಪಗಳನ್ನು ಕಾಣುತ್ತೇವೆ. ಕು.ವೆಂ.ಪು. - ಕುವೆಂಪು, ಪು.ತಿ.ನ - ಪುತಿನ ಇತ್ಯಾದಿ. ಆದರೆ ಕೆಲವೊಮ್ಮೆ ಸಂಕ್ಷಿಪ್ತಾಕ್ಷರಗಳ ನಡುವೆ ಚುಕ್ಕೆ ಇಡದಿದ್ದರೆ ವ್ಯಕ್ತಿಯ ಹೆಸರು ಪದವಾಗಿ ಅರ್ಥ ಹಾಸ್ಯಾಸ್ಪದವಾಗಬಹುದು. ಉದಾಹರಣೆಗೆ ಕೋರಮಂಗಲದ ತಿಮ್ಮಪ್ಪ ಪದವನ್ನು ಸಂಕ್ಷೇಪಗೊಳಿಸಿದಾಗ ಕೋ.ತಿ. ಎಂದು ಬರೆಯದೆ ಕೋತಿ ಎಂದು ಬರೆದರೆ ತಪ್ಪಾಗುತ್ತದೆ. ಮಂಗಳೂರು ಗಣೇಶಯ್ಯ ಮಂಗ ಆದರೆ ಏನುಗತಿ. ಮಂ.ಗ. ಎಂದಿದ್ದರೆ ಸರಿ. ಆದ್ದರಿಂದ ಚುಕ್ಕೆ ಬಳಕೆ ಸಂಕ್ಷಿಪ್ತಾಕ್ಷರಗಳಲ್ಲಿ ಅಗತ್ಯವಿದೆ.

ಸಂಕ್ಷೇಪಗಳನ್ನು ವಿಭಜಿಸಬಾರದು.

ಕು ವೆಂ ಪು ಬಿ. ಎಸ್ಸಿ. ಎಂಬಿಬಿಎಸ್ ಇತ್ಯಾದಿ ಅಥವಾ ಸಾಲಿನ ಕೊನೆಗೆ ಬಂದಾಗಲೂ ವಿಭಜಿಸಬಾರದು..... ಬಿ..... ಎಸ್‌ಸಿ..... ಇತ್ಯಾದಿ ಎಂಬಿ ಬಿಎಸ್ ಇತ್ಯಾದಿ ಆದರೆ ಒಂದರ ಕೆಳಗೊಂದು ಪಟ್ಟಿ ಮಾಡಬಹುದು ಅಥವಾ ಸಾಲಾಗಿ ಬರೆಯಬಹುದು.

ಉದಾ: ರಾಮಚಂದ್ರ ಅವರ ಶೈಕ್ಷಣಿಕ ಅರ್ಹತೆ: ಬಿ.ಎಸ್‌ಸಿ.ಎಂ.ಬಿ.ಬಿ.ಎಸ್. ಡಿಪ್ಲೋಮಾ ಇನ್ ಎಪಿಗ್ರಾಫಿ.

ಅಥವಾ

ಉದಾ: ರಾಮಚಂದ್ರ ಅವರ ಶೈಕ್ಷಣಿಕ ಅರ್ಹತೆ

೧. ಬಿಎಸ್‌ಸಿ ೨. ಎಂಬಿಬಿಎಸ್ ೩. ಡಿಪ್ಲೋಮಾ ಇನ್ ಎಪಿಗ್ರಾಫಿ

ಅಥವಾ

ಉದಾ: ರಾಮಚಂದ್ರ ಅವರ ಶೈಕ್ಷಣಿಕ ಅರ್ಹತೆ

೧. ಬಿ.ಎಸ್‌.ಸಿ

೨. ಎಂ.ಬಿ.ಬಿ.ಎಸ್

೩. ಡಿಪ್ಲೋಮಾ ಇನ್ ಎಪಿಗ್ರಾಫಿ

(ನೋಡಿ ಪು. ೮೦-೮ ಕನ್ನಡಶೈಲಿ ಕೈಪಿಡಿ)

ಪದಗಳನ್ನು ಸಂಕ್ಷೇಪಿಸುವಾಗ ಅಕ್ಷರಗಳಲ್ಲಿರುವ ಕಾಗುಣಿತ ಅನುಸ್ವಾರಗಳನ್ನು ಉಳಿಸಿಕೊಳ್ಳಬೇಕು. ಬೆಂಗಳೂರು ನಗರ ಸಾರಿಗೆ ಸಂಸ್ಥೆ ಎಂಬುದನ್ನು ಬೆನಸಾಸ ಎಂದು ಮಾಡಬಾರದು. ಬೆಂ.ನ.ಸಾ.ಸಂ ಎಂದು ಮಾಡಬೇಕು. ವಿಸರ್ಗ ಸ್ವರಗಳೊಡನೆ ಅಕ್ಷರಗಳನ್ನು ಬಳಸಿಕೊಳ್ಳಬೇಕು.

ಉದಾ: ಕ.ಸಂ.ನಿ - ಕನ್ನಡ ಸಂಸ್ಕೃತಿ ನಿರ್ದೇಶನಾಲಯ

ಕ.ಪು.ಪ್ರಾ - ಕನ್ನಡ ಪುಸ್ತಕ ಪ್ರಾಧಿಕಾರ

ಸಂಕ್ಷಿಪ್ತಾಕ್ಷರಗಳು ಜನಪ್ರಿಯವಾದಾಗ ಅದರ 'ವಿಸ್ತೃತರೂಪಕ್ಕಿಂತ ಸಂಕ್ಷಿಪ್ತ ರೂಪವೇ ಹೆಚ್ಚು ಪ್ರಚಾರವಾಗಿ ವಿಸ್ತೃತ ರೂಪ ಜನಕ್ಕೆ ಮರೆತೇ ಹೋಗುತ್ತದೆ' (ಕನ್ನಡಪ್ರಭ ೨-೪-೨೦೧೨) ಎಂಬ ಮಾತು ನಿಜ. ವಿಸ್ತೃತರೂಪ ಮರೆತುಹೋಗುವುದಷ್ಟೇ ಅಲ್ಲ ಜ್ಞಾಪಿಸಿಕೊಂಡಾಗ ಪೂರ್ಣರೂಪ ಸರಿಯಾಗಿ ಹೊಳೆಯುವುದು ಕಷ್ಟವೇ ಆಗುತ್ತದೆ.

ಉದಾ : ಕುವೆಂಪು - ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ

ತೀ.ನಂ.ಶ್ರೀ - ತೀರ್ಥಹಳ್ಳಿ ನಂಜುಂಡಯ್ಯ ಶ್ರೀಕಂಠಯ್ಯ

ಪು.ತಿ.ನ - ಪುರೋಹಿತ ತಿರುನಾರಾಯಣ ನರಸಿಂಹಾಚಾರ್

ಡಿವಿಜಿ - ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ ಇತ್ಯಾದಿ.

ಈಗಿನ ಕಾಲದಲ್ಲಿ ಎಷ್ಟು ಜನಕ್ಕೆ ಈ ವಿಸ್ತೃತರೂಪಗಳು ತಿಳಿದಿದೆ?

ಕೆಲವು ಸಾಹಿತಿಗಳ ಸಂಕ್ಷಿಪ್ತಾಕ್ಷರಗಳು ಇಂಗ್ಲಿಷ್ ವರ್ಣಗಳ ಮೂಲಕವೂ ಪ್ರಸಿದ್ಧವಾಗಿವೆ. ಡಿವಿಜಿ, ಬಿ.ಜಿ.ಎಲ್. ಸ್ವಾಮಿ, ಡಿ.ಎಲ್.ಎನ್., ಆರ್.ಎಲ್ಎನ್., ಹೆಚ್.ಎನ್. (ಹೆಚ್. ನರಸಿಂಹಯ್ಯ) ಎಲ್.ಎಸ್.ಎಸ್. (ಎಲ್.ಎಸ್. ಶೇಷಗಿರಿರಾವ್) ಡಿ.ಆರ್. ಬೇಂದ್ರೆ (ದ.ರಾ. ಬೇಂದ್ರೆ) ವೈ.ಎನ್.ಕೆ., ಎ.ಆರ್.ಕೃ, ಟಿ.ಎಸ್. ವೆಂ....ಇತ್ಯಾದಿ.

ಏಕರೂಪದ ಸಂಕ್ಷಿಪ್ತಪದಗಳು

ಏಕರೂಪ ಸಂಕ್ಷೇಪಗಳಾದಾಗ ಗೊಂದಲವುಂಟಾಗುವುದು ಸಹಜ. ಉದಾ: ಕ.ವಿ.ವಿ. ಎಂದರೆ ಕರ್ನಾಟಕ ವಿಶ್ವವಿದ್ಯಾಲಯ ಆಗಬಹುದು. ಕನ್ನಡ ವಿಶ್ವವಿದ್ಯಾಲಯ ಆಗಬಹುದು. ಕವಿವಿಹಂ ಕವಿವಿಧಾ ಅಥವಾ ಕವಿಹಂ, ಕವಿಧಾ ಎಂಬ ಸಂಕ್ಷೇಪಗಳಿಂದ ಗೊಂದಲ ತಪ್ಪಿಸಿಕೊಳ್ಳಬಹುದು.

ಕನ್ನಡ ಶೈಲಿ ಕೈಪಿಡಿಯಲ್ಲಿ (ಪುಟ ೨೪೮) ಈ ಗೊಂದಲ ಪರಿಹಾರದ ಬಗ್ಗೆ ಹೀಗೆ ಹೇಳಿದೆ. "ಮೂಲ ರೂಪದಲ್ಲಿ ಒಂದಕ್ಕಿಂತ ಹೆಚ್ಚು ಪದಗಳಿದ್ದಾಗ ಪ್ರತಿಪದದ ಮೊದಲ

ಅಕ್ಷರಗಳನ್ನು ಸೇರಿಸಿ ಸಂಕ್ಷಿಪ್ತರೂಪವನ್ನು ರಚಿಸಲಾಗುತ್ತದೆ. ಇದು ಒಂದು ಕ್ರಮ. ಆದರೆ ಇನ್ನೊಂದು ಕ್ರಮದಲ್ಲಿ ಮೊದಲ ಪದದ ಎರಡು ಅಕ್ಷರಗಳು ಮತ್ತು ಎರಡನೆಯ ಪದದ ಮೊದಲ ಅಕ್ಷರವನ್ನು ಸೇರಿಸಿ ಸಂಕ್ಷೇಪ ಮಾಡಲಾಗುತ್ತದೆ. ಉದಾಹರಣೆಗೆ ಮೊದಲ ಕ್ರಮದಲ್ಲಿ ಮಲೆಗಳಲ್ಲಿ ಮದುಮಗಳು - ಮಮ ಎಂದಾಗುತ್ತದೆ. ಮರಳಿ ಮಣ್ಣಿಗೆ ಎಂಬುದೂ ಮಮ ಎಂದಾಗುತ್ತದೆ. ಆದರೆ ಇದನ್ನು ಎರಡನೇ ಕ್ರಮದಲ್ಲಿ ಸಂಕ್ಷೇಪ ಮಾಡಿದರೆ ಮಲೆಮ, ಮರಮ ಆಗುತ್ತದೆ. ಆದ್ದರಿಂದ ಇಂಥ ಗೊಂದಲಗಳು ಉಂಟಾಗದಿರುವ ಸನ್ನಿವೇಶಗಳಲ್ಲಿ ಮೊದಲಕ್ರಮವನ್ನು ಅನುಸರಿಸಿ ಪ್ರತಿಪದದ ಅಥವಾ ಮೊದಲ ಪದದ ಎರಡು ಅಕ್ಷರಗಳೊಂದಿಗೆ ಮೊದಲ ಅಕ್ಷರಗಳನ್ನು ಸೇರಿಸಿ ಸಂಕ್ಷಿಪ್ತ ರೂಪವನ್ನು ರಚಿಸಬಹುದು.

ಸಂಕ್ಷಿಪ್ತಗೊಳಿಸುವ ಬಗೆ (ಕಸಾಪ ವಿಧಾನ)

ಇನ್ನು ನೂರಾರು ಪುಸ್ತಕಗಳ ಸಂಕ್ಷಿಪ್ತರೂಪಗಳನ್ನು ಕೊಡಬೇಕಾದಾಗ ಸಾಕಷ್ಟು ಪುನರುಕ್ತಿ ಸಂಕ್ಷಿಪ್ತ ರೂಪಗಳು ಮಮ ಕವಿವಿ ಬರುವಂತೆ ಬರುತ್ತದಲ್ಲ, ಅದಕ್ಕೇನು ಮಾಡಬೇಕು? ಇದಕ್ಕೆ ಪರಿಹಾರವಾಗಿ ಕನ್ನಡ ನಿಘಂಟುಕಾರರು(ಕಸಾಪ) ಅನುಸರಿಸಿರುವ ಕ್ರಮಗಳನ್ನು ಗಮನಿಸುವುದು ಅಗತ್ಯವಾಗಿದೆ. ಎಂ.ಎಂ. ಕಲ್ಬುರ್ಗಿ ಅವರು 'ಕನ್ನಡ ಗ್ರಂಥ ಸಂಪಾದನಶಾಸ್ತ್ರ, ಗ್ರಂಥದಲ್ಲಿ ಸಂಕ್ಷೇಪಗಳ ನಿರ್ಮಾಣವಿಧಾನವನ್ನು ಕುರಿತು ಹೇಳಿರುವ ಮಾತುಗಳಿವು:

"ಈ ಸಂಕ್ಷೇಪ ಒಂದು ಅಕ್ಷರಯುಕ್ತವಾಗಿದ್ದರೆ ಕೃತಿಯ ಶಿರೋನಾಮೆ ತಟ್ಟನೆ ನೆನಪಿಗೆ ಬಾರದ ಕಾರಣ ಸಾಮಾನ್ಯವಾಗಿ ಎರಡಕ್ಷರಗಳಿಗೆ ಯುಕ್ತವಾಗಿರಬೇಕು. ಎರಡಕ್ಷರಗಳಿಗಿಂತ ಹೆಚ್ಚಾಗುತ್ತಾ ಹೋದಂತೆಲ್ಲಾ ಅದರ ಸಂಕ್ಷೇಪಗಳು ಕಡಿಮೆಯಾಗುತ್ತಾ ಹೋಗುತ್ತವೆ."

ಆದರೆ ಎರಡಕ್ಷರಗಳಿಗೆ ಸಂಕ್ಷೇಪಗಳು ಸೀಮಿತಗೊಳ್ಳಬೇಕಾದ ಅಗತ್ಯವೇನಿಲ್ಲ. ಸಂಕ್ಷಿಪ್ತಾಕ್ಷರಗಳು ಎರಡು, ಮೂರು, ನಾಲ್ಕು, ಐದು ಅಕ್ಷರಗಳಿಂದ ಕೂಡಿರಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ ಸಂಪಾದಕ ಮಂಡಳಿ ಬಹಳ ಚರ್ಚೆ ಮಾಡಿ ಮೂರಕ್ಷರ ಪದ್ಧತಿ ಬಳಸಿದ್ದಾರೆ. ಕನ್ನಡದಲ್ಲಿ ಸಾವಿರಾರು ಗ್ರಂಥಗಳನ್ನು ಸಂಕ್ಷಿಪ್ತ ರೂಪದಲ್ಲಿ ಸೂಚಿಸಿದಾಗ ಎರಡಕ್ಷರ ಮಾಡಿದರೆ ಅನೇಕವೇಳೆ ಬೇರೆಬೇರೆ ಗ್ರಂಥಗಳ ಸಂಕ್ಷಿಪ್ತರೂಪಗಳಾಗಿ ಬಿಡುತ್ತದೆ ಎಂಬ ಕಾರಣಕ್ಕೆ ಮೂರಕ್ಷರಗಳ ಸಂಕ್ಷಿಪ್ತಗಳನ್ನು ಬಳಸಿದ್ದಾರೆ. ಇದನ್ನು ಗ್ರಂಥ ಸಂಪಾದನಕಾರರು ಗಮನಿಸುವುದು ಒಳ್ಳೆಯದು.

ಉದಾ: ಕಾವ್ಯ ಸಂಗ್ರಹ-ಕಾಸಂ. ಕಾವ್ಯಸಂಚಯ-ಕಾಸಂ.

ಮುಪಾ - ಮುದ್ರಿತ ಪಾಠ, ಮುಪಾ - ಮುಖ್ಯಪಾಠ. ಹೀಗೆ ಎರಡಕ್ಷರ ಸಂಕ್ಷೇಪ ಸಮರೂಪವಾಗುತ್ತದೆ. ಮೂರಕ್ಷರಗಳಲ್ಲಿ ಸಂಕ್ಷೇಪ ಮಾಡಿದಾಗ ಮುದ್ರಿಪಾ ಮುಖ್ಯಪಾ ಎಂದಾಗ ಗೊಂದಲವಿಲ್ಲ.

ನೂರಾರು ಗ್ರಂಥಗಳನ್ನು, ಸಂಕ್ಷೇಪಿಸುವಾಗ ಬರುವ ಸಮಸ್ಯೆಗಳ ನಿವಾರಣೆಗೆ ಅವರು ಅನುಸರಿಸಿರುವ ಕ್ರಮಗಳನ್ನು ಸಂಕ್ಷಿಪ್ತವಾಗಿ ಹೀಗೆ ಕ್ರೋಡೀಕರಿಸಬಹುದು:

೧. ಕಸಾಪ ನಿಘಂಟುಕಾರರು ಮೂರಕ್ಷರದ ಒಂದೇ ಪದವಿದ್ದರೂ ಮೂರು ಅಕ್ಷರಗಳ ಸಂಕ್ಷೇಪವನ್ನೇ ಮಾಡಿದ್ದಾರೆ.

ಉದಾ : ಅಂಬಿಕೆ-ಅಂಬಿಕೆ, ಅಕ್ಕಾಜಿ-ಅಕ್ಕಾಜಿ (ಶರತ್‌ರ ಕಾದಂಬರಿ)
ಅನಾಥೆ-ಅನಾಥೆ (ಗೋ.ಕೃ ಅಡಿಗರ ಕಾದಂಬರಿ)
ಇಂದಿರೆ - ಇಂದಿರೆ (ಇವೆಲ್ಲ ಗ್ರಂಥಗಳ ಹೆಸರುಗಳು)

೨. ನಾಲ್ಕಕ್ಷರ ಪದಗಳನ್ನು ಮೂರಕ್ಷರಗಳ ಸಂಕ್ಷಿಪ್ತ ಮಾಡಿದ್ದಾರೆ.

ಅಗ್ನಿಹಂಸ-ಅಗ್ನಿಹಂ, ಅಂತಿಗೊನೆ -ಅಂತಿಗೊ, ಉಡುಗೊರೆ - ಉಡುಗೊ

೩. ಐದಕ್ಷರಗಳ ಪದವನ್ನು ಮೂರು ಅಕ್ಷರಗಳಲ್ಲಿ ಸಂಕ್ಷೇಪಗೊಳಿಸಿದ್ದಾರೆ.
ಆದಿಪುರಾಣ - ಆದಿಪು, ಪಂಪಭಾರತ - ಪಂಪಭಾ ಉದ್ಭಟಕಾವ್ಯ - ಉದ್ಭವ, ಉದಯರಾಗ-ಉದಯ

ಇವೆಲ್ಲ ಒಂದು ಪದದ ಸಂಕ್ಷಿಪ್ತ ರೂಪಗಳಾದರೆ ಇನ್ನು ಎರಡು ಪದಗಳ ಸಂಕ್ಷಿಪ್ತ ರೂಪಗಳನ್ನು ಕುರಿತು ಹೇಳುವುದು ಹೀಗೆ:-

೪. ಪದಗಳು ಎರಡು ಇದ್ದಾಗಲೂ ಮೂರಕ್ಷರಗಳಲ್ಲಿ ಸಂಕ್ಷಿಪ್ತಗಳನ್ನು ಮಾಡಿದ್ದಾರೆ.

೧. ಉತ್ತರ ರಾಮಾಯಣ - ಉತ್ತರಾ
ಕುಮಾರವ್ಯಾಸ ಭಾರತ - ಕುವ್ಯಾಭಾ

೫. ಮೂರು ಪದಗಳಿದ್ದಾಗ ಸಂಕ್ಷಿಪ್ತ ರೂಪ
ಇಳೆಯಾಂಡ ಗುಡಿಮಾರರಗಳೆ - ಇಳೆರ

೬. ಮೂರು ಪದಗಳಿದ್ದಾಗ ಅಥವಾ ಎರಡು ಪದಗಳಿದ್ದಾಗ ಕೆಲವು ಹಲವು ರೀತಿ ಸಂಕ್ಷಿಪ್ತಗಳು ಬಳಕೆಯಾಗಿವೆ.

ಉದಾ: ಪಂಪಭಾರತ - ಪಂಭಾ / ಪಂಪಭಾ
ವಿಕ್ರಮಾರ್ಜುನ ವಿಜಯ - ವಿವಿ / ವಿಕ್ರವಿ
ಇಳೆಯಾಂಡ ಗುಡಿಯಾರರಗಳೆ - ಇಳೆರ / ಇಳೆಯಾ ಇಳೆಗು, ಇತ್ಯಾದಿ.

೭. ನಾಲ್ಕು ಪದಗಳು ಇದ್ದಾಗ ಮೂರು ಅಕ್ಷರರೂಪಗಳು ಹೀಗಿವೆ.
ಆಗಸ್ಟ್ ಒಂಬತ್ತು ಮತ್ತು ಇತರ ಕಥೆಗಳು - ಆಗಸ್ಟ್

೮. ಐದು ಪದಗಳಿಗೆ ನಿದರ್ಶನ
ಆಯುರ್ವೇದೀಯ ಔಷಧ ಗುಣಧರ್ಮ ಶಾಸ್ತ್ರ ಭಾಗ ೧ - ಔಷಧಿ

೯. ಸಾಮಾನ್ಯವಾಗಿ ಪದಗಳ ಆದ್ಯಕ್ಷರಗಳನ್ನು ಸಂಕ್ಷಿಪ್ತಾಕ್ಷರಗಳನ್ನಾಗಿ ಮಾಡುವುದು ಪದ್ಧತಿ.
ಶಬ್ದಮಣಿದರ್ಪಣ - ಶಮದ, ಕನ್ನಡ ಸಾಹಿತ್ಯ ಚರಿತ್ರೆ - ಕಸಾಚ

ಕೋಷ್ಟಕ ಪದಗಳ ಸಂಕ್ಷಿಪ್ತಗಳು

ಅಳತೆ, ತೂಕ, ದೂರ, ಹಣ ಮೊದಲಾದವುಗಳ ಕೋಷ್ಟಕ ಪದಗಳ ಸಂಕ್ಷಿಪ್ತಗಳು ಬಹುಮಟ್ಟಿಗೆ ದ್ವ್ಯಕ್ಷರ ಅಥವಾ ಏಕಾಕ್ಷರವಾಗಿರುತ್ತದೆ.

ಮಿಲಿಮೀಟರ್ - ಮಿ.ಮೀ.

ಸೆಂಟಿಮೀಟರ್ - ಸೆಂ.ಮಿ.

ಮೀಟರ್ - ಮೀ.

ಕಿಮೀ-ಕಿಲೋಮೀಟರ್

ಕೆಜಿ-ಕಿಲೋಗ್ರಾಂ

ಅಡಿ-ಅ ಗ-ಗಜ ಅಂ-ಅಂಗುಲ

ಎ-ಎತ್ತರ ಉ-ಉದ್ದ ಅ-ಅಗಲ

ಗ್ರಾಂ-ಗ್ರಾಮುಗಳು

ಲೀಟರ್-ಲೀ ಹೆ.-ಹೆಕ್ಟೇರು ಫ.-ಫರ್ಲಾಂಗ್ ಮೈ-ಮೈಲಿ ಯೋ-ಯೋಜನ ರೂ-ರೂಪಾಯಿ ಪೌಂ-ಪೌಂಡು.

ಡಾ-ಡಾಲರ್, ಪೆ-ಪೆನ್ನಿ, ಪೈ-ಪೈಸೆ, ಆ-ಆಣೆ, ದಿ-ದಿನಾಂಕ, ವಾ-ವಾರ, ಡೆ-ಡೆಮ್ಮಿ, ರಾ-ರಾಯಲ್, ಕ್ರೌ-ಕ್ರೌನ್.

ಇಂಗ್ಲಿಷ್ ಹೆಸರುಗಳ ಸಂಕ್ಷಿಪ್ತಗಳು (ಕನ್ನಡದಲ್ಲಿ ಈಚೆಗೆ ಬಳಕೆಗೆ ಬಂದಿರುವವು)

ಎಐಆರ್-ಆಲ್ ಇಂಡಿಯಾ ರೇಡಿಯೋ

ಬಿಬಿಸಿ - ಬ್ರಿಟಿಷ್ ಬ್ರಾಂಡ್‌ಕ್ಯಾಸ್ಟಿಂಗ್ ಕಾರ್ಪೋರೇಷನ್

ಬಿಪಿ - ಬ್ಲಡ್ ಪ್ರಷರ್

ಬಿಇಎಲ್ - (ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್)

ಹೆಚ್.ಎ.ಎಲ್ - ಹಿಂದೂಸ್ತಾನ್ ಏರೋನ್ಯಾಟಿಕ್ಸ್ ಲಿಮಿಟೆಡ್

ಎಟಿಎಂ - ಆಟೋಮ್ಯಾಟಿಕ್ ಟೆಲ್ಲರ್ ಮಿಷನ್

ಆರ್.ಬಿ.ಐ - ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ

ಎಸ್‌ಬಿಎಮ್ - ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ಸಾಮಾನ್ಯವಾಗಿ ಇಂಥ ಅನ್ಯಭಾಷಾ ಅಂಕಿತನಾಮಗಳನ್ನು ಅನುವಾದಿಸದೆ ಹಾಗೆಯೇ ಬಳಸಲಾಗುತ್ತದೆ.

ಜನಪ್ರಿಯ ಇಂಗ್ಲಿಷ್ ಸಂಕ್ಷಿಪ್ತಾಕ್ಷರಗಳು

ಜನಪ್ರಿಯ ಸರ್ಕಾರಿ ಸಂಸ್ಥೆಗಳ ಹೆಸರು ಸಂಕ್ಷಿಪ್ತಾಕ್ಷರಗಳಿಂದ ಜನರಲ್ಲಿ ಜನಿಜನಿತವಾಗಿರುತ್ತದೆ. ಇವುಗಳ ಕನ್ನಡಾನುವಾದವಿದ್ದರೂ ಜನ ಇಂಗ್ಲಿಷ್ ಸಂಕ್ಷಿಪ್ತಾಕ್ಷರಗಳನ್ನೇ ಬಳಸುತ್ತಾರೆ. ಕರಡು ತಿದ್ದುಗರು ಅವುಗಳನ್ನು ಹಾಗೇ ಇಡಬೇಕು. ತಿದ್ದಲು ಹೋಗಬಾರದು, ಹೆಚ್ಚೆಂದರೆ ಆವರಣ ಚಿಹ್ನೆಯಲ್ಲಿ ಸೂಚಿತಪದ ಕೊಡಬಹುದು. ಬೇಕಿದ್ದರೆ ಸಂಕೇತಾಕ್ಷರಗಳನ್ನು ಕನ್ನಡ ಲಿಪಿಯಲ್ಲಿ ಕೊಡಬಹುದು.

LIC - ಲೈಫ್ ಇನ್ಶೂರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ (ಭಾರತೀಯ ಜೀವವಿಮಾ ನಿಗಮ)

BDA - ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ)

KSRTC- ಕರ್ನಾಟಕ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ (ಕರ್ನಾಟಕ ರಸ್ತೆ ಸಾರಿಗೆ ನಿಗಮ)

DC - ಡೆಪ್ಯುಟಿ ಕಮೀಷನರ್ (ಜಿಲ್ಲಾಧಿಕಾರಿ)

KGID - ಕರ್ನಾಟಕ ಗೌರ್ನಮೆಂಟ್ ಇನ್ಶ್ಯೂರೆನ್ಸ್ ಡಿಪಾರ್ಟ್‌ಮೆಂಟ್ (ಕರ್ನಾಟಕ ಸರ್ಕಾರಿ ವಿಮಾ ಇಲಾಖೆ)

ಗೌರವ ಸೂಚಕ ಪದಗಳನ್ನು ಸಂಕ್ಷಿಪ್ತಗಳನ್ನಾಗಿ ಬಳಸುತ್ತೇವೆ

ಡಾ|| ಡಾಕ್ಟರ್

ವೇ|| ಬ್ರ||ಶ್ರೀ (ವೇದಬ್ರಹ್ಮಶ್ರೀ) ಶಂಕರಶಾಸ್ತ್ರಿಗಳು

ಆ|| ವಿ|| (ಆಸ್ಥಾನ ವಿದ್ವಾನ್) ಬಸಪ್ಪ ಶಾಸ್ತ್ರಿಗಳು

ಕೀ|| ಶೇ|| (ಕೀರ್ತಿಶೇಷ) ಮಲ್ಲಪ್ಪನವರು

ಹ|| ವಿ|| (ಹರಿಕಥಾ ವಿದ್ವಾನ್) ಕೃಷ್ಣಭಾಗವತರು

ಚಿ॥ (ಚಿರಂಜೀವಿ) ಕಿಶೋರ ಕು॥ (ಕುಮಾರಿ) ಲಕ್ಷ್ಮಿ ಸೌ॥ (ಸೌಭಾಗ್ಯವತಿ) ಭಾಗ್ಯಮ್ಮ

ಹ॥ ಕುಂ॥ ಶೋ॥ (ಹರಿದ್ರಾ ಕುಂಕುಮ ಶೋಭಿತಳಾದ) ರೂಪಾದೇವಿ

ಕಾಲಮಾನ

ಕಾಲಮಾನದ ಪದಗಳಲ್ಲಿ ಏಕಾಕ್ಷರ ಸಂಕ್ಷಿಪ್ತೀಕರಣವೇ ಹೆಚ್ಚು. ಎರಡಕ್ಷರಗಳಲ್ಲೂ ಸಂಕ್ಷೇಪಿಸಲಾಗುತ್ತದೆ.

ಬೆ - ಬೆಳಿಗ್ಗೆ

ಸಂ-ಸಂಜೆ

ಸಾಯಂ-ಸಾಯಂಕಾಲ

ಗಂ-ಗಂಟೆ

ನಿ-ನಿಮಿಷ

ಶಾ.ಶ-ಶಾಲಿವಾಹನ ಶಕ

ಮು-ಮುಹೂರ್ತ

ಸೋ (ಸೋಮ)	-	ಸೋಮವಾರ
ಮಂ (ಮಂಗಳ)	-	ಮಂಗಳವಾರ
ಬು (ಬುಧ)	-	ಬುಧವಾರ
ಗು (ಗುರು)	-	ಗುರುವಾರ
ಶು (ಶುಕ್ರ)	-	ಶುಕ್ರವಾರ
ಶ (ಶನಿ)	-	ಶನಿವಾರ
ಭಾ (ಭಾನು)	-	ಭಾನುವಾರ
ಅಮಾ	-	ಅಮಾವಾಸ್ಯೆ
ಕೃಷ್ಣ	-	ಕೃಷ್ಣಪಕ್ಷ
ಶುಕ್ಲ	-	ಶುಕ್ಲಪಕ್ಷ

ತಿಂಗಳುಗಳ ಹೆಸರು

ತಿಂಗಳ ಹೆಸರುಗಳ ಸಂಕ್ಷಿಪ್ತಾಕ್ಷರಗಳನ್ನು ಏಕಾಕ್ಷರ ಅಥವಾ ದ್ವ್ಯಕ್ಷರಗಳಲ್ಲಿ ಸೂಚಿಸಲಾಗುತ್ತದೆ. ಆದರೆ ಏಪ್ರಿಲ್, ಮಾರ್ಚ್, ಮೇ ಎಂಬ ತಿಂಗಳ ಹೆಸರುಗಳನ್ನು ಪೂರ್ಣವಾಗಿ ಬರೆಯಲಾಗುತ್ತದೆ.

ಜ (ಜನ)	-	ಜನವರಿ
ಫೆ (ಫೆಬ್ರು)	-	ಫೆಬ್ರುವರಿ
ಮಾ (ಮಾರ್ಚಿ)	-	ಮಾರ್ಚಿ
ಏ (ಏಪ್ರಿಲ್)	-	ಏಪ್ರಿಲ್
ಮೇ (ಮೇ)	-	ಮೇ
ಜೂ (ಜೂನ್)	-	ಜೂನ್
ಸೆ (ಸೆಪ್ಟೆಂ)	-	ಸೆಪ್ಟೆಂಬರ್
ಅ (ಅಕ್ಟೋ)	-	ಅಕ್ಟೋಬರ್
ಡಿ (ಡಿಸೆಂ)	-	ಡಿಸೆಂಬರ್
ಕ್ರಿ.ಶ.	-	ಕ್ರಿಸ್ತ ಶಕ
ಕ್ರಿ.ಪೂ.	-	ಕ್ರಿಸ್ತಪೂರ್ವ

ಗ್ರಂಥಮಾಹಿತಿ ಸಂಕ್ಷಿಪ್ತಗಳು

ಪ್ರತಿ ಪುಸ್ತಕದ ಪ್ರಾರಂಭದಲ್ಲಿ ಶೀರ್ಷಿಕೆ ಪುಟವಾದ ಮೇಲೆ ಅನಂತರ ಮಾಹಿತಿ ಪುಟ ಇರುತ್ತದೆ. ಗ್ರಂಥದ ಹೆಸರು, ಲೇಖಕರು, ಮುದ್ರಿತವರ್ಷ, ಬೆಲೆ, ಪುಟಸಂಖ್ಯೆ, ಮುದ್ರಕರು, ಪ್ರಕಾಶಕರು ಇತ್ಯಾದಿ ಇವುಗಳನ್ನು ಪೂರ್ಣಪದಗಳಾಗಿಯೂ ಪ್ರಕಟಿಸುತ್ತಾರೆ ಏಕಾಕ್ಷರವಾಗಿ ಸಂಕ್ಷಿಪ್ತಾಕ್ಷರಗಳನ್ನಾಗಿಯೂ ಪ್ರಕಟಿಸುತ್ತಾರೆ.

ಪ್ರ - ಪ್ರಕಾಶಕ, ಮು-ಮುದ್ರಕರು, ಪು-ಪುಟ, ಬೆ-ಬೆಲೆ, ಇ-ಇಸವಿ, ಲೇ-ಲೇಖಕರು, ಸಂ-ಸಂಪಾದಕರು. ದೂ-ದೂರವಾಣಿ, ಮೊ-ಮೊಬೈಲ್. ಈಚೆಗೆ ಈ ವಿವರಗಳನ್ನು ಇಂಗ್ಲಿಷಿನಲ್ಲೂ ಪ್ರಕಟಿಸುತ್ತಾರೆ ಮೊದಲು ಕೇವಲ ಕನ್ನಡದಲ್ಲಿ ಮಾತ್ರ ಇರುತ್ತಿತ್ತು.

ಆಹ್ವಾನ ಪತ್ರಿಕೆಗಳು

ಸಾಮಾನ್ಯವಾಗಿ ಕಾರ್ಯಕ್ರಮಗಳಿಗೆ ಜನರನ್ನು ಆಹ್ವಾನಿಸುವ ಪತ್ರಿಕೆಗಳು ಬಗೆಬಗೆಯಾಗಿರುತ್ತವೆ. ಲಗ್ನಪತ್ರಿಕೆ, ಉಪನಯನಪತ್ರಿಕೆ, ಗೃಹಪ್ರವೇಶಪತ್ರಿಕೆ, ಉತ್ತರಕ್ರಿಯಾ ಆಹ್ವಾನಪತ್ರಿಕೆ, ಉದ್ಘಾಟನಾಸಮಾರಂಭ ಪತ್ರಿಕೆ, ಪುಸ್ತಕಪ್ರಕಟನೆ ಪತ್ರಿಕೆ ಇತ್ಯಾದಿ ಪ್ರಕಟನೆಗಳಲ್ಲೂ ಸಂಕ್ಷಿಪ್ತಪದಗಳನ್ನು ಕಾಣುತ್ತೇವೆ.

ವ್ಯಕ್ತಿಗಳ ಬಿರುದು, ಬಾವಲಿ, ಪ್ರಶಸ್ತಿಗಳು, ಪತ್ರಿಕೆಗಳ ಹೆಸರುಗಳನ್ನು ಸಾಹಿತ್ಯ ಪದಗಳು ಸಂಕ್ಷಿಪ್ತ ರೂಪಗಳಾಗಿ ಬಳಸಲಾಗುತ್ತದೆ.

ಪ್ರಶಸ್ತಿಗಳು

ಆಸ್ಥಾನವಿದ್ವಾನ್ = ಆ|| ವಿ||

ಪದ್ಮಭೂಷಣ = ಪ|| ಭೂ||

ಡಾಕ್ಟರ್ (ಡಾಕ್ಟರೇಟ್ ಪದವಿ) = ಡಾ||

ಕೀರ್ತನ ಕೇಸರಿ = ಕೀ|| ಕೇ||

(ಕೀರ್ತಿಶೇಷ ಎಂಬುದಕ್ಕೂ ಇದೇ ಸಂಕ್ಷಿಪ್ತಾಕ್ಷರಗಳನ್ನು ಬಳಸುತ್ತಾರೆ. ಆಗ ಸಂದರ್ಭಾನುಸಾರ ಅರ್ಥಯಿಸಬೇಕು.)

ಪತ್ರಿಕೆಗಳು

ಪ್ರ.ವಾ - ಪ್ರಜಾವಾಣಿ

ಸಂ.ಕ - ಸಂಯುಕ್ತ ಕರ್ನಾಟಕ

ವಿ.ಕ - ವಿಜಯ ಕರ್ನಾಟಕ

ವಿ.ವಾ - ವಿಜಯವಾಣಿ

ಪ್ರ.ಕ - ಪ್ರಬುದ್ಧ ಕರ್ನಾಟಕ

ಜ.ಕ - ಜಯಕರ್ನಾಟಕ

ಸಂಸ್ಥೆಗಳು

ಬೆಂ.ನ.ಸಾ - ಬೆಂಗಳೂರು ನಗರ ಸಾರಿಗೆ

ಬೃ.ಬೆಂ.ನ.ಪಾ - ಬೃಹತ್ ಬೆಂಗಳೂರು ನಗರ ಮಹಾಪಾಲಿಕೆ

ಕ.ರಾ.ರ.ಸಾ.ಸಂ - ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

ಕ.ಸಾ.ಪ - ಕನ್ನಡ ಸಾಹಿತ್ಯ ಪರಿಷತ್ತು

ನೂ.ಸ.ವಿ.ಕಾ - ನೂತನ ಸರ್ಕಾರಿ ವಿದ್ಯುಚ್ಛಕ್ತಿ ಕಾರ್ಖಾನೆ

ಕ.ವಿ.ಮಂ - ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ

ಸಾಹಿತ್ಯ ಪ್ರಕಾರಗಳು ಮತ್ತು ಛಂದಸ್ಸು

೧. ಕಾ (ಕಾದಂಬರಿ), ಕೀ (ಕೀರ್ತನೆ), ಜೀ.ಚ - 'ಜೀವನ ಚರಿತ್ರೆ' ಕ (ಕತೆ), ಪ್ರ (ಪ್ರಬಂಧ), ನಾ(ನಾಟಕ)

ವ್ಯಾಕರಣ ಪದಗಳ ಸಂಕ್ಷಿಪ್ತಗಳು

ಪ್ರ.ಪು (ಪ್ರಥಮ ಪುರುಷ) ಪ್ರ.ವಿ (ಪ್ರಥಮಾ ವಿಭಕ್ತಿ) ಮ.ಪು (ಮಧ್ಯಮ ಪುರುಷ) ದ್ವಿ.ವಿ (ದ್ವಿತೀಯಾ ವಿಭಕ್ತಿ) ಉ.ಪು (ಉತ್ತಮ ಪುರುಷ) ತೃ.ವಿ (ತೃತೀಯಾ ವಿಭಕ್ತಿ)

ಕ್ರಿ (ಕ್ರಿಯಾಪದ) ನಾ (ನಾಮಪದ) ಪ್ರ (ಪ್ರತ್ಯಯ) ಅ (ಅಧ್ಯಾಯ) ಗು (ಗುಣವಾಚಕ) ಇತ್ಯಾದಿ.

ಸ.ದೀ.ಸಂ (ಸವರ್ಣದೀರ್ಘಸಂಧಿ)

ಲೋ.ಸಂ (ಲೋಪಸಂಧಿ)

ಗು.ಸಂ (ಗುಣಸಂಧಿ)

ಅಂ.ಸ (ಅಂಶಿ ಸಮಾಸ)

ಷ.ತ.ಸ (ಷಷ್ಠಿ ತತ್ಪುರುಷ ಸಮಾಸ)

ಚ.ತ.ಸ (ಚತುರ್ಥೀ ಪೂರ್ವಪದ ಕರ್ಮಧಾರಯ ಸಮಾಸ)

ಅ.ಪೂ.ಕ.ಸ (ಅವಧಾರಣ ಪೂರ್ವಪದ ಕರ್ಮಧಾರಯ ಸಮಾಸ)

ವಿ.ಪೂ.ಕ.ಸ (ವಿಶೇಷಣ ಪೂರ್ವಪದ ಕರ್ಮಧಾರಯ ಸಮಾಸ)

ಹ.ಗ - ಹಳಗನ್ನಡ, ನ.ಗ - ನಡುಗನ್ನಡ, ಹೊ.ಗ-ಹೊಸಗನ್ನಡ, ಪೂರ್ವದ ಹಳಗನ್ನಡ - ಪೂ.ಹ.ಗ ಇತ್ಯಾದಿ.

ಛಂದಸ್ಸಿನ ಪದಗಳ ಸಂಕ್ಷಿಪ್ತರೂಪಗಳು

ಸಾಮಾನ್ಯವಾಗಿ ಏಕಾಕ್ಷರ ಅಥವಾ ಎರಡಕ್ಷರಗಳಿಂದ ಕೂಡಿರುತ್ತವೆ.

ಕಂ (ಕಂದ) ವೃ (ವೃತ್ತ) ಚಂ (ಚಂಪೂ) ಸಾಂ (ಸಾಂಗತ್ಯ) ಷ (ಷಟ್ಪದಿ) ಕೀ (ಕೀರ್ತನೆ) ವ (ವಚನ) ರ (ರಗಳೆ) ಗು - ಗುರು ಲ - ಲಘು ಯಗಣ - ಯ ಮಗಣ-ಮ ತಗಣ-ತ ರಗಣ-ರ ಜಗಣ-ಜ ಭಗಣ-ಭ ನಗಣ-ನ ಸ-ಸಗಣ ಉ.ಮಾ-ಉತ್ಪಲಾಮಾಲಾ ಮ.ವಿ-ಮತ್ತೇಭ ವಿಕ್ರೀಡಿತ ಚಂ.ಮಾ - ಚಂಪಕಮಾಲಾ ಮ.ಸ್ರ-ಮಹಾ ಸ್ರಗ್ಧರ

ಭಾಷೆಗಳು

ಬಹುಮಟ್ಟಿಗೆ ಭಾಷೆಗಳ ಹೆಸರುಗಳ ಸಂಕ್ಷಿಪ್ತಾಕ್ಷರಗಳು ಏಕಾಕ್ಷರವಾಗಿರುತ್ತವೆ.

ಕ-ಕನ್ನಡ, ತ-ತಮಿಳು, ತೆ-ತೆಲುಗು, ಮ-ಮಲೆಯಾಳ, ಗು-ಗುಜರಾತಿ, ಒ-ಒರಿಯಾ, ಕಾ-ಕಾಶ್ಮೀರ, ಬಂ-ಬಂಗಾಳಿ, ಪಂ-ಪಂಜಾಬಿ, ಇಂ-ಇಂಗ್ಲಿಷ್, ಲ್ಯಾ-ಲ್ಯಾಟಿನ್ ಇತ್ಯಾದಿ.

ಸ್ಥಳನಾಮವಾಚಕಗಳ ಸಂಕ್ಷಿಪ್ತರೂಪಗಳು

ಮೂರಕ್ಷರಗಳಿಂದ ಕೂಡಿರುವವೇ ಹೆಚ್ಚು.

ದೇವನಹಳ್ಳಿ - ದೇವನ

ದಾವಣಗೆರೆ - ದಾವಣ

ನಾಗಮಂಗಲ - ನಾಗಮಂ

ಹೊಳೆನರಸೀಪುರ - ಹೊಳೆನಂ

ಹೆಗ್ಗಡದೇವನ ಕೋಟೆ - ಹೆಗ್ಗಡ

ಕೆಲವು ಸ್ಥಳನಾಮಗಳನ್ನು ಸಂಕ್ಷೇಪ ಮಾಡದೆ ಹೆಸರಿನ ಭಾಗಗಳನ್ನು ಅಥವಾ ಪೂರ್ಣಪದಗಳನ್ನು ಸಂಕ್ಷಿಪ್ತರೂಪದಲ್ಲಿ ಬಳಸುತ್ತಾರೆ. ನಗರ (ಹೊಸನಗರ) ಪಟ್ಟಣ (ಶ್ರೀರಂಗಪಟ್ಟಣ) ಹಾಸನ, ಹಾವೇರಿ, ಇಂಡಿ, ಗುಬ್ಬಿ, ಶಿರಾ, ಸೀಬಿ.

ಇಂಗ್ಲಿಷ್ ಅಕ್ಷರಗಳ ಬಳಕೆ

ಕೆಲವರು ಇಂಗ್ಲಿಷ್ ಗ್ರಂಥಗಳ ಹೆಸರುಗಳಿಗೂ ಕನ್ನಡದಲ್ಲಿ ಸಂಕ್ಷಿಪ್ತಾಕ್ಷರ ಬಳಸಿದ್ದಾರೆ.

Karnataka Inscription - ಕಇಂ (ಕರ್ನಾಟಕ ಇನ್‌ಸ್ಕ್ರಿಪ್‌ಷನ್ಸ್)

Epigraphica carnatica - ಎಕ (ಎಪಿಗ್ರಾಫಿಕಾ ಕರ್ನಾಟಿಕಾ)

Kannada English Dictionary - ಕಇಂನಿ (ಕನ್ನಡ ಇಂಗ್ಲಿಷ್ ಡಿಕ್ಷನರಿ)

The Karnataka Inscriptions of Koppa - ಕೊಪ್ಪಳ (ದಿ ಕರ್ನಾಟಕ ಇನ್‌ಸ್ಕ್ರಿಪ್‌ಷನ್ಸ್ ಆಫ್ ಕೊಪ್ಪಳ)

ಕೆಲವು ಇಂಗ್ಲಿಷ್ ಸಂಕ್ಷಿಪ್ತಗಳನ್ನು ಪದಗಳ ರೂಪದಲ್ಲಿ ಕನ್ನಡದಲ್ಲಿ ಬಳಸುತ್ತಾರೆ.

Nimhans ನಿಮ್ಹ್ಯಾನ್ಸ್ (ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋಸೈನ್ಸ್)

ನ್ಯಾಟೊ (Nato) ನಾರ್ತ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಷನ್

ನಾಸಾ (Nasa) ನ್ಯಾಷನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್

ಯುನೆಸ್ಕೋ (Unesco) ಯುನೈಟೆಡ್ ನೇಷನ್ಸ್ ಎಜುಕೇಷನಲ್ ಸೈಂಟಿಫಿಕ್ ಅಂಡ್ ಕಲ್ಚರಲ್ ಆರ್ಗನೈಜೇಷನ್

ಇ-ಮೇಲ್ (E-mail) - ಎಲೆಕ್ಟ್ರಾನಿಕ್ ಮೈಲಿಂಗ್

ಕನ್ನಡ ಹಸ್ತಪ್ರತಿಗಳಿಗೆ ಇಂಗ್ಲಿಷ್ ಸಂಕ್ಷಿಪ್ತಗಳನ್ನು ಕಿಟೆಲ್, ಎಲ್. ಬಸವರಾಜು ಮುಂತಾದವರು ಕೊಟ್ಟಿದ್ದಾರೆ. ಹಾಗೆ ಕೊಡುವಾಗ, ಕೆಲವರು ಸ್ಥಳದ ಹೆಸರಿನ ಆದ್ಯಕ್ಷರ ಬಳಸಿದರೆ ಕೆಲವರು ಹಸ್ತಪ್ರತಿ ಒಡೆಯರ ಹೆಸರಿನ ಆದ್ಯಕ್ಷರ ಬಳಸಿದ್ದಾರೆ.

ಉದಾ : ಕಿಟೆಲ್ಲರು ನಾಗವರ್ಮನ ಛಂದೋಂಬುಧಿಗೆ ಬಳಸಿದ ೧೪ ಹಸ್ತಪ್ರತಿಗಳಿಗೆ ಇಂಗ್ಲಿಷ್ ಅಕ್ಷರಗಳನ್ನು ಬಳಸಿದ್ದಾರೆ B, D, H, K, Z, M, O - Ra, Rb, Rd, Rd ಇತ್ಯಾದಿ.

ಸ್ಥಳಗಳ ಹೆಸರು

ಬಿ-ಬೆಟಗೇರಿ ಪ್ರತಿ, ಡಿ-ಧಾರವಾಡ ಪ್ರತಿ, ಹೆಚ್-ಹುಬ್ಬಳ್ಳಿ ಪ್ರತಿ ಇತ್ಯಾದಿ.

ವ್ಯಕ್ತಿಗಳ ಹೆಸರು

MB ಮೈಸೂರು ಬಿ ಮಲ್ಲಪ್ಪ ಪ್ರತಿ B-ವೀಗಲ್ ಪ್ರತಿ

ORI ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟ್ ಓಲೆಯ ಪ್ರತಿ

ನಿಘಂಟುಗಳಲ್ಲಿ ಉಪಯುಕ್ತವಾದ ಸಂಕ್ಷಿಪ್ತಗಳು ಹಲವಾರಿವೆ.

ಗ್ರಾ - ಗ್ರಾಮ್ಯ ಪ್ರಯೋಗ, ಗ್ರಾಂ - ಗ್ರಾಂಥಿಕ ಪ್ರಯೋಗ, ಪ್ರಾ.ರೂ. - ಪ್ರಾಚೀನ ರೂಪ, ಆಮಾ-ಆಡುಮಾತು, ಅಕ್ರಿ-ಅಕರ್ಮಕ ಕ್ರಿಯಾಪದ, ಸಕ್ರಿ-ಸಕರ್ಮಕ ಕ್ರಿಯಾಪದ, ಅ-ಅವ್ಯಯ, ಗು-ಗುಣವಾಚಕ, ನಾ-ನಾಮಪದ, ಕ್ರಿ-ಕ್ರಿಯಾಪದ, ಅ.ದೇ-ಅನ್ಯದೇಶಿಯ (ಸಂ) ಸಂಸ್ಕೃತ (ತ್ಸ) ತತ್ಸಮ (ದ್ಭ) ತದ್ಭವ

ಈ ಸಂದರ್ಭದಲ್ಲಿ ಕನ್ನಡ ನಿಘಂಟು ರಚನೆಯ (ಪು. ೭೭-೭೮) ಎಸ್.ಎಸ್. ಅಂಗಡಿ ಅವರು "ಕೋಶತಜ್ಞರು ಅಥವಾ ವಿಷಯ ಪಂಡಿತರು ಒಪ್ಪಿಕೊಂಡ ರೂಪಗಳನ್ನೇ ಈ ವಿವರ ಕೊಡಲು ಬಳಸಬೇಕೇ ಹೊರತು ಮನಸ್ಸಿಗೆ ಬಂದಂತೆ ಅವುಗಳನ್ನು ಬದಲಾಯಿಸಿಕೊಳ್ಳಬಾರದು" ಎನ್ನುತ್ತಾರೆ.

ಏಕಾಕ್ಷರ ಸಂಕ್ಷಿಪ್ತಾಕ್ಷರಗಳು

ಒಂದೇ ಸಂಕೇತಾಕ್ಷರಕ್ಕೆ ಅನೇಕ ಪದಗಳು ಅನ್ವಯಿಸುವಾಗ ಅವುಗಳನ್ನು ಹಾಗೇ ಕೊಟ್ಟಾಗ ಸಂದರ್ಭಾನುಸಾರ ತಿಳಿಯಬೇಕು. ಉದಾಹರಣೆಗೆ ಅ-ಅಧ್ಯಾತ್ಮ, ಅದ್ವೈತ, ಸಂ-ಸಂಗೀತ, ಸಂಸ್ಕೃತ ಶ-ಶಕ್ತಿ, ಶಬ್ದ ಬ್ರ-ಬ್ರಹ್ಮ ಬ್ರಹ್ಮಾಂಡ, ಸೂ - ಸೂತ್ರ ಸೂಚನೆ ಈ ರೀತಿ ಒಂದೇ ಗ್ರಂಥದಲ್ಲಿ ಪ್ರಯೋಗವಾದಾಗ ಯಾವುದನ್ನು ಅರ್ಥೈಸುವುದು (ನೋಡಿ ಡಿ.ವಿ. ಹೊಳ್ಳ ಅವರ ಸಂಜ್ಞಾರ್ಥ ತತ್ವಕೋಶ ಪು viii) ಇಂಥ ಸಂದರ್ಭದಲ್ಲಿ ಅಚ್ಚಿನ ವಿನ್ಯಾಸದಿಂದ ತೆಳು ಅಕ್ಷರ, ದಪ್ಪಕ್ಷರ ಅಥವಾ ಓರೆಯಕ್ಷರ ಸಣ್ಣಗಾತ್ರ, ದೊಡ್ಡಗಾತ್ರ ವ್ಯತ್ಯಾಸದಿಂದ ಗುರುತಿಸುವಂತೆ ಮಾಡಬಹುದು. ಅ-ಅಧ್ಯಾತ್ಮ ಅದ್ವೈತ ಇತ್ಯಾದಿ. ಅಥವಾ ಅ ೧೧/೨ ೧೬/೨೩ ಎಂದು ಗುರುತಿಸಬಹುದು.

ಒಟ್ಟಿನಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಒಂದೇ ಸಂಕೇತಕ್ಕೆ ಅಥವಾ ಆದ್ಯಕ್ಷರಕ್ಕೆ ಒಂದೇ ಗ್ರಂಥದಲ್ಲಿ ಹಲವು ಸಮಪದಗಳಿರುವುದು ಸೂಕ್ತವಲ್ಲ.

ಅಹಂಬ್ರಹ್ಮಾಸ್ಮಿ (ಅ) ಆತ್ಮನೇ ಪರಬ್ರಹ್ಮ (ಅ) ಎಂದಾಗ - ಯಾವುದು ಅದ್ವೈತ ಯಾವುದು ಅಧ್ಯಾತ್ಮದ ಸಂಕೇತ ಯಾವುದೂ ತಿಳಿಯುವುದಿಲ್ಲ.

ಸಂಕೇತಾಕ್ಷರಗಳು

ಸಂಕೇತಾಕ್ಷರಗಳು - ೧

ಸಂಕೇತಾಕ್ಷರಗಳೂ ಒಂದು ರೀತಿಯಲ್ಲಿ ಸಂಕ್ಷಿಪ್ತಾಕ್ಷರಗಳೇ. ಸಂಕ್ಷಿಪ್ತಾಕ್ಷರಗಳು ಹಲವಾರು ಪದಗಳಲ್ಲಿರುವ ಅಕ್ಷರಗಳನ್ನು ಒಳಗೊಂಡಿರುತ್ತವೆ. ಸಂಕೇತಾಕ್ಷರಗಳು ಆ ಪದಗಳಲ್ಲಿ ಇರುವ ಒಂದೆರಡು ಅಕ್ಷರಗಳು ಆಗಿರಬಹುದು, ಆಗಿಲ್ಲದಿರಬಹುದು. ಬೇರೆ ಅಕ್ಷರಗಳಾಗಿರಬಹುದು, ಬೇರೆ ಭಾಷೆಯ ಅಕ್ಷರಗಳಾಗಿರಬಹುದು. ಆದರೆ ಅದರ ಕಾರ್ಯವೂ ಸಂಕ್ಷಿಪ್ತಾಕ್ಷರಗಳ ಕಾರ್ಯವೂ ಒಂದೇ - ಸಂಕ್ಷೇಪೀಕರಣ.

ಸಂಕೇತಾಕ್ಷರಗಳನ್ನು ಹೆಚ್ಚಾಗಿ ಗ್ರಂಥ ಸಂಪಾದನಾ ಶಾಸ್ತ್ರದಲ್ಲಿ ವಿಜ್ಞಾನಗ್ರಂಥಗಳಲ್ಲಿ ಗಣಿತ, ಜ್ಯೋತಿಷ್ಯ ಮೊದಲಾದ ಶಾಸ್ತ್ರಗಳಲ್ಲಿ ಬಳಸುತ್ತಾರೆ. ಗೂಢಲಿಪಿಗಳು, ಶೀಘ್ರಲಿಪಿಗಳು ಸಂಕೇತಾಕ್ಷರಗಳ ವಿದ್ಯೆಯೇ ಆಗಿದೆ.

ಸಂಕೇತಾಕ್ಷರಗಳು ಗ್ರಂಥಸಂಪಾದನಾಶಾಸ್ತ್ರದಲ್ಲಿ ಇಡೀ ಹಸ್ತಪ್ರತಿಯನ್ನು ಪ್ರತಿನಿಧಿಸುವ ಅಕ್ಷರ ಅಥವಾ ಅಕ್ಷರ ಸಮೂಹ ಆಗಿರುತ್ತದೆ.

ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ತಮ್ಮ ಗ್ರಂಥಸಂಪಾದನಾ ಪರಿಭಾಷಾ ಕೋಶದಲ್ಲಿ ಸಂಕೇತಾಕ್ಷರವನ್ನು ಹೀಗೆ ವಿವರಿಸಿದ್ದಾರೆ: "ಕೃತಿ ಪಠ್ಯದ ಹಲವು ಹಸ್ತಪ್ರತಿಗಳು ಇದ್ದಾಗ ಅವನ್ನು ಅವುಗಳ ಪ್ರತ್ಯೇಕ ವೈಲಕ್ಷಣ್ಯಗಳಿಗಾಗಿ ಸುಲಭವಾಗಿ ಗುರುತಿಸಲು ಮತ್ತು ಪಾಠಸಾಮಗ್ರಿಯನ್ನು ವಿಶದಪಡಿಸಲು ಗೊತ್ತುಮಾಡಿದ ಸಂಕೇತಾಕ್ಷರಗಳಾಗಿವೆ."

ಸಂಕೇತಾಕ್ಷರಗಳು - ೨

ಸಾಮಾನ್ಯವಾಗಿ ಹಸ್ತಪ್ರತಿಗಳ ವಿವರ ನೀಡುವಾಗ ಅದಕ್ಕೆ ಕನ್ನಡ ಅಥವಾ ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳನ್ನು ಸಂಕೇತಾಕ್ಷರಗಳನ್ನಾಗಿ ಬಳಸುತ್ತಾರೆ. ಸಂಕೇತಾಕ್ಷರಗಳು ಅನೇಕ ವೇಳೆ ಒಂದಕ್ಷರವಾಗಿರುತ್ತದೆ. ಕೆಲವು ವೇಳೆ ಒಂದಕ್ಕಿಂತ ಹೆಚ್ಚು ಅಕ್ಷರಗಳಿಂದ ಕೂಡಿರುತ್ತವೆ.

ಉದಾ: ವರ್ಣಮಾಲೆ ಅಕ್ಷರಗಳ ಬಳಕೆಗೆ

ಕ-ಮ್ಯೆ.ಗೌ.ಓ.ಲೈ ಕೆ (೩೫೮ ಸಂಖ್ಯೆಯಶರಣರ ರಗಳೆ ಹೆಸರುಳ್ಳ ಒಲೆಯ ಗರಿಯಲ್ಲಿ ದೊರೆಯುವ ಪಾಠ.)

ಖ-ಮ್ಯೆ.ಗೌ.. ಲೈ ಕೆಎ (೬೨ ಸಂಖ್ಯೆಯ ನಂಬಿಯಣ್ಣನ ರಗಳೆ.... ಎಂಬ ಹೆಸರುಳ್ಳ ಪುಲ್ಸ್‌ಕ್ಯಾಪ್ ಆಕಾರದ ಕಾಗದ ಪುಸ್ತಕದಲ್ಲಿ ದೊರೆಯುವ ಪಾಠ.)

ಗ-ಮೈ.ಗೌ.ಓ.ಲೈ.ಕೆವಿ (೧ಳಳ ಸಂಖ್ಯೆಯ ಪೂಲ್ಸ್‌ಕ್ಯಾಪ್ ಆಕಾರದ ಕಾಗದ ಪುಸ್ತಕದಲ್ಲಿ ದೊರೆಯುವ ಪಾಠ.)

ಒಂದೇ ಗ್ರಂಥದ ಭಿನ್ನಭಿನ್ನ ಕಾಲದ ಮುದ್ರಣ ಪ್ರತಿಗಳ ವಿವರವನ್ನು ಸೂಚಿಸಲು ತೀನಂಶ್ರೀ ಅವರು ಅಕ್ಷರಗಳ ಜತೆಗೆ ಅಂಕಿ ಬಳಸುತ್ತಾರೆ.

ಅ೧ - ಗದಾಯುದ್ಧ ಕಾವ್ಯದ ಪ್ರಥಮ ಮುದ್ರಣ. ಸಂ.ಎಸ್.ಜಿ ನ ಮತ್ತು ಮ.ಆ.ರಾ. ೧೮೬೫

ಅ೩ - ಗದಾಯುದ್ಧ ಕಾವ್ಯದ ತೃತೀಯ ಮುದ್ರಣ.ಸಂ.ಮಂ.ಆ.ರಾ ೧೯೨೫

ಸಂಕೇತಾಕ್ಷರಗಳು - ೩

ಇಂಗ್ಲಿಷ್ ವರ್ಣಮಾಲೆಯ ಸಂಕೇತಾಕ್ಷರಗಳನ್ನು ಹಸ್ತಪ್ರತಿಗಳಿಗೆ ಬಳಸಿರುವುದರಲ್ಲಿ ಭಾಷೆಯನ್ನು ಸಂಕೇತಿಸಲು ಸ್ಥಳವನ್ನು ಪ್ರತಿನಿಧಿಸಲು ವ್ಯಕ್ತಿಯನ್ನು ಪ್ರತಿನಿಧಿಸಲು ಸಂಕೇತಾಕ್ಷರವನ್ನು ಬಳಸಿದೆ.

k ೨೦೯ ಬೆಂ.ವಿ.ವಿ. ೧೧/೨ಲೆ. ಶಮದ

k ೨೨೩೧ ಮೈವಿವಿ ೧೧/೨ಲೆ ವೀರಶೈವ ಶಮದ

(ಇಲ್ಲಿ k ಎಂದರೆ ಕನ್ನಡ)

ಸಂಖ್ಯಾಶಬ್ದಗಳು - ೧

ಸಂಖ್ಯೆಯನ್ನು ಒಳಗೊಂಡ ಶಬ್ದಗಳನ್ನು ಟಿ.ವಿ.ವೆಂ ಅವರು ಸಂಖ್ಯಾವಿಶಿಷ್ಟ ಪದಗಳೆಂದು ಕರೆದಿದ್ದಾರೆ. "ಸಂಖ್ಯಾ ವಿಶಿಷ್ಟ ಪದಗಳು ವಿಷಯ ಪ್ರತಿಪಾದನೆಯ ಮಿತವ್ಯಯಾಕಾಂಕ್ಷೆ ಮತ್ತು ಸೂತ್ರೀಕರಣ ಫಲವಾಗಿ ಬಂದಿರುತ್ತವೆ" (ಅ.ಕೆ.ಟಿ.ವಿ.ವೆಂ.) ಎಲ್ಲಾ ಕಲೆ, ಸಾಹಿತ್ಯ ಸಂಸ್ಕೃತಿ ವಿಷಯಗಳಲ್ಲೂ ಸಂಖ್ಯಾಶಬ್ದಗಳು ಬಳಕೆಯಾಗುತ್ತವೆ.

ಸಂಖ್ಯಾಶಬ್ದಗಳಲ್ಲಿ ಸಂಖ್ಯಾಶಬ್ದ ಸಂಜ್ಞಾಪದವಾಗಿರುತ್ತದೆ. ಆದ್ದರಿಂದ ಸಂಖ್ಯಾಶಬ್ದಗಳನ್ನು ಸಂಕ್ಷಿಪ್ತಪದರೂಪವೆಂದು ಕರೆಯಬಹುದು. ಉದಾಹರಣೆಗೆ ತ್ರಿಮೂರ್ತಿ ಎಂದರೆ ಬ್ರಹ್ಮ ವಿಷ್ಣು ಮಹೇಶ್ವರರೆಂಬ ಮೂರು ವ್ಯಕ್ತಿಗಳ ಸಂಕ್ಷಿಪ್ತರೂಪಶಬ್ದ. (ತ್ರಿಮೂರ್ತಿ) ತ್ರಿ ಎಂಬುದು ಇಲ್ಲಿ ಮೂವರ ಸಂಕ್ಷಿಪ್ತರೂಪ ಸಂಖ್ಯೆ. ಆದ್ದರಿಂದ ಈ ಪದ ಸಂಕೇತವೂ ಹೌದು. ಆದಕಾರಣ ಸಂಖ್ಯಾಶಬ್ದವು ಸಂಕ್ಷಿಪ್ತಪದವೂ ಹೌದು; ಸಂಕೇತಪದವೂ ಹೌದು.

ಕರಡು ತಿದ್ದುವವರು ಈ ಸಂಖ್ಯಾ ಶಬ್ದಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. ಏಕೆಂದರೆ ಎಷ್ಟೋಸಲ ಸಂಖ್ಯಾಶಬ್ದದಲ್ಲಿ ಸೂಚಿತವಾದ ಸಂಖ್ಯೆಗೆ ತಕ್ಕಷ್ಟು ವಿವರಗಳು

ಸಿಗುವುದಿಲ್ಲ. ಉದಾಹರಣೆಗೆ ವಡ್ಡಾರಾಧನೆಯಲ್ಲಿ ಮೂವತ್ತೆರಡು ದಂಡಣೆಗಳು ಎಂಬ ಮಾತು ಬರುತ್ತದೆ ೩೨ ದಂಡಣೆಗಳು ಯಾವುವು ಎಂಬುದು ಖಚಿತವಾಗಿ ತಿಳಿಯದು.

ಸಂಖ್ಯಾಪದಗಳು - ೨

ಅನೇಕ ಗ್ರಂಥಗಳಲ್ಲಿ ಸಂಖ್ಯೆ ನಿರ್ದೇಶಿಸಿದ ಪದಗಳಲ್ಲಿ ಕೆಲವನ್ನು ಕೊಟ್ಟು ಮುಂತಾದವು ಎಂದು ಬಿಡುತ್ತಾರೆ. ಪೂರ್ವ ಪಶ್ಚಿಮ ಉತ್ತರ ದಕ್ಷಿಣ ನೈರುತ್ಯ ಇತ್ಯಾದಿ ದಿಕ್ಕುಗಳಿಂದ ಸ್ವಯಂವರಕ್ಕೆ ರಾಜರು ಬಂದರು ಎಂಬ ಮಾತಲ್ಲಿ ದಿಕ್ಕುಗಳು ಎಷ್ಟೆಂಬುದು ಖಚಿತವಿಲ್ಲ. ೮ ದಿಕ್ಕುಗಳ ಹೆಸರು ಹೇಳಿ ಅಷ್ಟದಿಕ್ಕುಗಳಿಂದ ರಾಜರು ಬಂದರು ಎಂದು ಹೇಳಿದಾಗ ಅದು ಪೂರ್ಣಾರ್ಥದ ವಾಕ್ಯವಾಗುತ್ತದೆ. ಈ ಅಂಶವನ್ನು ಕರಡು ತಿದ್ದುವವರು ಗಮನಿಸಬೇಕು.

ಸಂಖ್ಯಾವಿಶಿಷ್ಟ ಶಬ್ದಗಳನ್ನು ನಮ್ಮಲ್ಲಿ ಸಾಮಾನ್ಯ ನಿಘಂಟುಗಳಲ್ಲಿ ಕಾಣಬಹುದಾದರೂ ಅದು ಸಾಲದು, ಡಿ.ವಿ. ಹೊಳ್ಳ, ವೆಂಕಟಚಾಲಶಾಸ್ತ್ರೀಗಳಂಥ ವಿದ್ವಾಂಸರು ರಚಿಸಿರುವವರ ಕೋಶಗಳಿಗೇ ಮೊರೆ ಹೋಗಬೇಕು. ಒಟ್ಟಿನಲ್ಲಿ ಸಂಖ್ಯಾಶಬ್ದಗಳು ಸಂಕೇತಾಕ್ಷರಗಳ ಗುಂಪಿಗೆ ಸೇರುತ್ತವೆ. ಅರ್ಥದ ದೃಷ್ಟಿಯಲ್ಲಿ ಹತ್ತಾರು ಶಬ್ದಗಳನ್ನು ಅಡಕಗೊಳಿಸಿಕೊಂಡ ಒಂದು ಸಮಾನಪದವಾಗಿ ಸಂಕ್ಷಿಪ್ತರೂಪದ ಪದ ಎನ್ನಿಸಿಕೊಳ್ಳುತ್ತದೆ.

ವಿಶೇಷ ರೀತಿಯ ಸಂಕ್ಷಿಪ್ತಾಕ್ಷರಗಳು

ಕನ್ನಡ ಗ್ರಂಥ ಸಂಪಾದನ ಕ್ಷೇತ್ರದಲ್ಲಿ ಹಲವಾರು ವಿಷಯಗಳಲ್ಲಿ ತಮ್ಮದೇ ಆದ ವಿಧಾನಗಳನ್ನು ಪ್ರತಿಪಾದಿಸಿದವರು ಹಲವಾರು. ಡಿಎಲ್‌ಎನ್, ಕಲ್ಬುರ್ಗಿ, ಸೀತಾರಾಮ ಜಾಗೀರದಾರ, ಸಿ. ಮಹಾದೇವಪ್ಪ, ಎಲ್ ಬಸವರಾಜು, ಕಿಟೆಲ್ ಮೊದಲಾದವರು. ಇವರಲ್ಲಿ ಸಂಕೇತಾಕ್ಷರಗಳ ಬಗ್ಗೆ ಪ್ರೊ. ಸಿ. ಮಹಾದೇವಪ್ಪನವರು ತಮ್ಮದೇ ಆದ ವಿಧಾನವನ್ನು ಬಳಸಿಕೊಂಡಿದ್ದಾರೆ. ಜ್ಞಾನಸಾರಂ ಎಂಬ ಚಂದ್ರಚೂಡಾ ಮಣಿಶತಕದ ಪಂಡಿತ ಆವೃತ್ತಿಯ (ಪುಟ ೯೬ ನೋಡಿ) ಇಂಗ್ಲಿಷ್ ವಿವರವನ್ನು ಕೊಟ್ಟು ಅದಕ್ಕೆ ಕನ್ನಡಾನುವಾದ ಕೊಟ್ಟು, ಇಂಗ್ಲಿಷ್ ವಿವರಣೆಯ ಪದಗಳನ್ನು ಸಂಕ್ಷೇಪಿಸಿ ಸಂಕ್ಷಿಪ್ತಾಕ್ಷರಗಳನ್ನು ಕೊಡುವ ವಿಶಿಷ್ಟ ಪದ್ಧತಿಯನ್ನು ರೂಪಿಸಿಕೊಂಡಿದ್ದಾರೆ.

Or-reading - ವಾಚನ ಪಾಠ ಅಥವಾ

Or-reading - ಮೂಲಪಾಠ

ಇವರು ಸಂಕ್ಷೇಪಾಕ್ಷರಗಳನ್ನು ರೂಢಿಸಿದ ವಿಧಾನ ಮೆಚ್ಚುವಂಥಾದ್ದಾಗ್ಯೂ ಓದುಗರಿಗೆ ಜಟಿಲವೆನಿಸುತ್ತದೆ.

ಲಿಪೀಕರಣ ವಿಚಾರ

ಪ್ರತಿಯೊಂದು ಭಾಷೆಯಲ್ಲೂ ಇಂದು ಅನ್ಯಭಾಷಾ ಪದ-ವಾಕ್ಯಗಳ ಬಳಕೆಯನ್ನು ನೋಡುತ್ತೇವೆ. ಮೂಲಭಾಷಾಲಿಪಿಯಲ್ಲೇ ಉದ್ಧರಣಗಳನ್ನು ಕೊಡುವುದು ಒಂದು ಬಗೆ. ಲಿಪಿಯ ಪರಿಚಯ ಓದುಗರಿಗೆ ಇರುವುದಿಲ್ಲ (ಭಾಷೆಯ ಪರಿಚಯ ಇರಬಹುದು) ಅಂಥವರಿಗಾಗಿ ನಮ್ಮ ಭಾಷಾಲಿಪಿಯಲ್ಲೇ ಅನ್ಯಭಾಷಾ ಪದ-ವಾಕ್ಯಗಳನ್ನು ಕೊಡುವುದು ಇನ್ನೊಂದು ಬಗೆ. ಉದಾಹರಣೆಗೆ ಇಂಗ್ಲಿಷ್ ಪದ-ವಾಕ್ಯಗಳನ್ನು ಆಂಗ್ಲಲಿಪಿಯಲ್ಲೇ ಕೊಡಬಹುದು ಅಥವಾ ಕನ್ನಡಲಿಪಿಯಲ್ಲಿ ಕೊಡಬಹುದು. ಉದಾ: Bengaluru Nagara ಬೆಂಗಳೂರು ನಗರ, ಇಂಟರ್‌ನ್ಯಾಷನಲ್ ಏರ್‌ಪೋರ್ಟ್ International Airport ಇತ್ಯಾದಿ.

ಹೀಗೆ ಕನ್ನಡದ ಅಕ್ಷರ ಪದ ವಾಕ್ಯಗಳನ್ನು ಕನ್ನಡೋಚ್ಚಾರಣಾನುಸಾರ ಆಂಗ್ಲ ಲಿಪಿಯಲ್ಲಿ ಬರೆಯಬೇಕಾದಾಗ ಅಥವಾ ಸಂಸ್ಕೃತಭಾಷೆಯ ಇಲ್ಲವೇ ಇತರ ಭಾರತೀಯ ಭಾಷೆಯ ಪದ ವಾಕ್ಯಗಳನ್ನು ಇಂಗ್ಲಿಷಿನಲ್ಲಿ ಬರೆಯುವಾಗ ವಿಶಿಷ್ಟ ರೀತಿಯಲ್ಲಿ ಸಂಕೇತಾಕ್ಷರಗಳನ್ನು ಬಳಸುತ್ತೇವೆ. ಅವುಗಳನ್ನು ಅನುವಾದಿತ ಆಂಗ್ಲೀಕರಣಾಕ್ಷರಗಳು ಎನ್ನಬಹುದು. ಇಂಗ್ಲಿಷಿನಲ್ಲಿ Transliteration and Diacritical Marks ಎನ್ನುತ್ತಾರೆ. ವಿಶೇಷವಾಗಿ ಶಾಸನಗಳನ್ನು ಆಂಗ್ಲಾಕ್ಷರಗಳಲ್ಲಿ ಬಳಸುವಾಗ ಈ ಆಂಗ್ಲೀಕರಣಲಿಪಿ ಬೇಕಾಗುತ್ತದೆ. ಕನ್ನಡದ ಬೃಹತ್ ಹಾಗೂ ಮಹತ್ತಾದ ವಿ.ಕೃಷ್ಣ ಅವರ ಕ-ಇಂ ನಿಘಂಟಿನಲ್ಲಿ ಬಳಸಿರುವ ಲಿಪಿಪಟ್ಟಿಯನ್ನು ಮುಂದಿನಪುಟದಲ್ಲಿ ಕೊಡಲಾಗಿದೆ.

ಲಿಪೀಕರಣದ ಅಗತ್ಯ ಮತ್ತು ಮಹತ್ವ

ತೌಲನಿಕವಾಗಿ ಭಾಷೆಗಳನ್ನು ಅಭ್ಯಾಸ ಮಾಡುವ ಭಾಷಾವಿದ್ವಾಂಸರಿಗೆ ವಿವಿಧ ಭಾಷೆಗಳ ಪರಿಚಯ ಅನ್ಯಭಾಷೆಗಳ ಮೂಲಕ ಇರಬಹುದಾದರೂ ಲಿಪಿ ಪರಿಚಯ ಇರುವುದು ಕಷ್ಟ. ಎಂ. ಗೋವಿಂದಪೈ ಅಂಥ ಕೆಲವು ವಿದ್ವಾಂಸರಿಗೆ ಬಹುಲಿಪಿ ಪರಿಚಯ ಇರಬಹುದು ಅಷ್ಟೆ. ಇನ್ನು ಶಾಸನಲಿಪಿ ಅಧ್ಯಯನ ಮಾಡುವವರು ಶಾಸನಗಳನ್ನು ಅರ್ಥೈಸುವಾಗ ಶಾಸನದ ಪಾಠಗಳನ್ನು ಆಧುನಿಕಲಿಪಿಯಲ್ಲಿ ಲಿಪೀಕರಣ ಮಾಡಿ ಕೊಡದಿದ್ದರೆ ಅವರ ಬರಹ ಅರ್ಥವಾಗದು. ಆದಕಾರಣ ನಮ್ಮ ದ್ವಿಭಾಷಾ ಬಹುಭಾಷಾ ನಿಘಂಟುಗಳಲ್ಲಿ ಆಯಾ ಭಾಷೆಯ ಲಿಪಿಯಲ್ಲಿ ಪದ ವಾಕ್ಯಗಳನ್ನು ಕೊಡುವುದರ ಜತೆಗೆ ಆಂಗ್ಲಲಿಪಿಯಲ್ಲಿ ಅಥವಾ ಆಯಾ ಭಾಷಾಗ್ರಂಥದ ಲಿಪಿಯಲ್ಲಿ ಕೊಟ್ಟಿರುತ್ತಾರೆ.

ಕನ್ನಡದಲ್ಲಿ ಕಿಟೆಲ್ ನಿಘಂಟನ್ನು ದ್ವಿಭಾಷಾ ನಿಘಂಟಿಗೆ ಉದಾಹರಣೆ ಆದರೆ, ಲರ್ನರ್ಸ್ ಮಲ್ಟಿಲಿಂಗ್ಯುಯಲ್ ಡಿಕ್ಷನರಿ (ಕನ್ನಡ, ಮಲೆಯಾಳಿ, ತೆಲುಗು, ತಮಿಳು,

ಇಂಗ್ಲಿಷ್ ಭಾಷೆಗಳ ಲಿಪೀಕರಣವಿರುವ ಪಂಚಭಾಷಾ ನಿಘಂಟು) ಬಹುಭಾಷಾ ನಿಘಂಟಿಗೆ ನಿದರ್ಶನವಾಗಿದೆ. ಈ ಬಗೆಯ ನಿಘಂಟುಗಳು ಕನ್ನಡದಲ್ಲಿ ಇನ್ನೂ ಹಲವಾರಿವೆ. ಬರಹ ಸಾಫ್ಟ್‌ವೇರ್ ಅನೇಕ ಭಾಷೆಗಳ ಲಿಪಿಗಳ ಪರಿವರ್ತನೆಯನ್ನು ಆಂಗ್ಲಭಾಷೆಗೆ ಮಾಡುವ ಸೌಕರ್ಯವನ್ನು ನೀಡಿರುವುದರಿಂದ ಅದು ಅತ್ಯಂತ ಜನಪ್ರಿಯವಾಗಿದೆ.

ಬೇರೆ ಹಲವರು ಸ್ವಲ್ಪ ಭಿನ್ನ ರೀತಿಯ ಲಿಪಿಪಟ್ಟಿಯನ್ನು ಬಳಸುವುದುಂಟು.

ಉದಾ :

ಅ	ಆ	ಇ	ಈ	ಉ	ಊ
a	aa	i	ii	u	uu
ಋ	ಎ	ಏ	ಐ		
r	e	ee	ai		
ಒ	ಓ	ಔ	ಅಂ	ಅಃ	
o	oo	au	am	ah	
ಕ	ಖ	ಗ	ಘ	ಙ	
ka	kha	ga	gha	ṅa	
ಚ	ಛ	ಜ	ಝ	ಞ	
ca	cha	ja	jha	a	
ಟ	ಠ	ಡ	ಢ	ಣ	
ṭa	ṭha	ḍa	ḍha	ṇa	
ತ	ಥ	ದ	ಧ	ನ	
ta	tha	da	dha	na	
ಪ	ಫ	ಬ	ಭ	ಮ	
pa	pha	ba	bha	ma	
ಯ	ರ	ಲ	ವ		
ya	ra	la	va		
ಶ	ಷ	ಸ	ಹ	ಳ	ಕ್ಷ
sa	ṣa	sa	ha	la	ksa

ಕಿಟೆಲ್, ರೈಸ್, ಫ್ಲೀಟ್ ಮೊದಲಾದ ವಿದೇಶೀ ಕನ್ನಡ ವಿದ್ವಾಂಸರು ಕನ್ನಡ ಗ್ರಂಥಗಳನ್ನು ಅಥವಾ ಗ್ರಂಥಭಾಗಗಳನ್ನು ಆಂಗ್ಲಲಿಪೀಕರಣ ಮಾಡಿಕೊಡುವಾಗ ಮೊದಲಬಾರಿಗೆ ಒಂದು ನಿರ್ದಿಷ್ಟಕ್ರಮ ಅನುಸರಿಸಿದರು. ಕೆಲವು ಮಾರ್ಪಾಡುಗಳೊಂದಿಗೆ

ಆ ಪದ್ಧತಿಯೇ ಇಂದು ಕನ್ನಡ ಭಾಷೆಯ ಪದ ವಾಕ್ಯಗಳನ್ನು ಇಂಗ್ಲಿಷ್ ಲಿಪಿಯಲ್ಲಿ ಕೊಡುವಾಗ ಬಳಕೆ ಆಗುತ್ತಿವೆ ಎನ್ನಬಹುದು.

ಕನ್ನಡಾಕ್ಷರಗಳ ಆಂಗ್ಲೀಕರಣ (ಉಚ್ಚಾರಣಾನುಸಾರ)
ಕನ್ನಡಾಕ್ಷರಗಳಿಗೆ ಸಮಾನ ಆಂಗ್ಲ ಅಕ್ಷರ-ಚಿಹ್ನೆಗಳ ರೂಪಗಳ ಪಟ್ಟಿ
Transliteration & Diacritical Marks
(ಜಿ. ಕೃಷ್ಣ ಅವರು ಕ-ಇಂ ನಿಘಂಟಿನಲ್ಲಿ ಬಳಸಿರುವ ಲಿಪಿಪಟ್ಟಿ)

ಕನ್ನಡ	Special Diacritical marks		Normal Transliteration		Similar to the sound in English	
					sound of	as in
ಅ			A	a	a, oo, u	about, blood, gun,
ಆ	Ā	ā			a	father, star,
ಇ			I	i	i	pin, it, mirror,
ಈ	Ī	ī			e, ee, ea	even, meet, flea,
ಉ			U	u	u, oo	full, look,
ಊ	Ū	ū			u, oo	rule, tool,
ಋ	Ř	ř			no corresponding sound	
ೠ	Ř`	ř`			no corresponding sound	
ಎ			E	e	e, ay,	bend, pay,
ಏ	Ē	ē			a	ape, date,
ಐ			Ai	si	i, ai,	aisle, fine
ಒ			O	o	o, ow,	low (slightly shorter)
ಓ	Ō	ō			o	open, more,
ಔ			AU	au	ou,	cloud,
ಕ್			K	k	c, k,	candle, kill
ಖ್			Kh	kh	kh,	inkhorn
ಗ್			G	g	g	gun, get, log,
ಘ್			Gh	gh	gh (aspirated sound of previous consonant)	
ಙ	Ŋ	ŋ			n (before g - nasalised)	king, ring
ಚ್			C	c	ch, tch,	rich, match,
ಛ್			Ch	ch	ch (aspirated sound of previous consonant)	
ಜ್			J	j	g, j,	page, joy,
ಝ್			Jh	jh	jh (aspirated soundof previous consonant)	
ಞ		ñ			n (nasalised before ch)	inch,
ಟ್	Ṭ	ṭ			t	top, cattle, hat
ಠ್	□h	□h			th (aspirated sound of previous consonant)	
ಡ್	Ḍ	ḍ			d	dip, beadle, had, dodder
ಢ್	Ḍ h	ḍ h			d (aspirated sound of previous consonant)	

ಣ್	Ṇ	ṇ			no corresponding sound closer	
ತ್			T	t	th,	mathematics
ಥ್			TH	th	th (aspirated sound of previous consonant)	thunder
ದ್			D	d	th,	this, thine,
ಧ್			Dh	dh	dh,	adhere,
ನ್			N	n	n,	nine, no,
ಪ್			P	p	p,	put, cap,
ಫ್			Ph	ph	ph,	uphil,
ಬ್			B	b	b,	bear, cab,
ಭ್			Bh	bh	bh,	abhor,
ಮ್			M	m	m,	camera, man,
ಯ್			Y	y	y,	yet, year,
ರ್			R	r	r,	red, ring,
ಲ್			L	l	l, ll,	long, mill,
ವ್			V	v	v	van, pave,
ಶ್	Ś	ś			s	sure,
ಷ್	Ṣ	ṣ			sh	shoe, shun
ಸ್			S	s	s, ce,	sand, race,
ಹ್			H	h	h	hand, here,
ಳ್	Ḷ	ḷ			no corresponding sound	
ಱ್	Ṛ	ṛ			no corresponding sound	
ೞ್	Ł	ł			no corresponding sound	
ಮ್, ಂ	Ṁ	ṁ				nasal sound of m/v
ಯ್	Y'	y'				nasal sound of y

ಆಕರ ಗ್ರಂಥಗಳು

೧. ಶ್ರೀವತ್ಸ ನಿಘಂಟು - ಟಿ.ವಿ. ವೆಂಕಟಾಚಲಶಾಸ್ತ್ರೀ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೯

೨. ಕನ್ನಡ ರತ್ನಕೋಶ - ಕಸಾಪ, ಬೆಂಗಳೂರು ೨೦೧೧

೩. ಹಸ್ತಪ್ರತಿ ಅಧ್ಯಯನ, ಪ್ರಥಮ ಸಮಾವೇಶ ಸಂಪುಟ ೨೦೧೨ ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೪. ಕನ್ನಡ ವ್ಯಾಕರಣ ದರ್ಪಣ - ಎರೆಸೀಮೆ ಇತರರು; ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ೧೯೨೦.

೫. ಎರವಲು ಶಬ್ದಕೋಶ-ಪ್ರೊ. ಜಿ. ವೆಂಕಟಸುಬ್ಬಯ್ಯ; ೧೯೯೮ ನವಕರ್ನಾಟಕ ಪ್ರಕಾಶನ ಬೆಂಗಳೂರು.

೬. ಕನ್ನಡ ಕಯ್ಪಿಡಿ ಭಾಗ ೨ - ಧೋಂಡೋ ನರಸಿಂಹ ಮುಳಬಾಗಿಲ; ೧೯೫೮ ಪ್ರ. ಶಂಭುಲಿಂಗಪ್ಪ ಶಿವಲಿಂಗಪ್ಪ ಕುಲಕರ್ಣಿ, ಧಾರವಾಡ.

೭. ಹರಿಹರನ ಕೃತಿಗಳ ಪದಕೋಶ - ಡಾ. ಬಸವರಾಜ ಮಲಶೆಟ್ಟಿ; ೧೯೯೧ ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ, ಜಗದ್ಗುರು ಕೊಟ್ಟೂರು ಮಠ, ಹಂಪಿ.

೮. ಸಂಜ್ಞಾರ್ಥ ತತ್ತ್ವಕೋಶ-ಡಿ.ವಿ. ಹೊಳ್ಳ ವಿದ್ವಾನ್; ಪ್ರ. ಲೇಖಕರು ಕುಂದಾಪುರ ಅಂಚೆ, ತೆಕ್ಕಟ್ಟೆ, ಕರ್ನಾಟಕ, ೧೯೭೪.

೯. ನವಕರ್ನಾಟಕ ಆಡಳಿತ ಶಬ್ದಕೋಶ-ಸಂ. ಅಬ್ದುಲ್ ರಹಮಾನ್ ಪಾಷ/ಎಸ್ ನಾಗವೇಣಿ; ನವಕರ್ನಾಟಕ ಪ್ರಕಾಶನ, ೧೯೮೯.

೧೦. ಆಯುರ್ವೇದೀಯ ಶಾಸ್ತ್ರೀಯ ಶಬ್ದಕೋಶ ೧೯೮೩ ರಾ. ಕೃ ಕುಲಕರ್ಣಿ; ಪ್ರ: ಸಾಹಿತ್ಯ ಭಂಡಾರ, ಹುಬ್ಬಳ್ಳಿ.

೧೧. ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟು-ಜಿ.ವೆಂ., ಎಲ್ ಎಸ್ ಎಸ್, ಎಚ್ಚೆರಾ; ೧೯೮೨.

೧೨. ವಿಜ್ಞಾನ ಶಬ್ದಕೋಶ - ಸಂ. ಜೆ. ಆರ್. ಲಕ್ಷ್ಮಣರಾವ್; ಅಡ್ಯನಡ್ಕ ಕೃಷ್ಣಭಟ್ಟ ೧೯೯೦ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು.

೧೩. ಶಾಸನದ ಸಂಪಾದನೆಯಲ್ಲಿ ಬಳಸುವ ಚಿಹ್ನೆಗಳು (ಲೇ) ಎನ್ ಕಾರ್ತೀಕ್.

೧೪. ಪ್ರಿಸಂ ಕನ್ನಡ ಕ್ಲಿಷ್ಟ ಪದಕೋಶ : ಸಂ. ಜಿ. ವೆಂಕಟಸುಬ್ಬಯ್ಯ ಮತ್ತು ರಾಜ್ಯಶ್ರೀ ಸತೀಶ್; ಪ್ರಿಸಂ ಬುಕ್ಸ್ ಲಿ. ಬೆಂಗಳೂರು.

೧೫. ವೃಕ್ಷಾಯುರ್ವೇದ - ಡಾ.ಎಂ.ಎಸ್. ನಾಗೇಶರಾವ್ ೧೯೯೮, ಆಯುರ್ವೇದ ಪ್ರಗತಿ ಮತ್ತು ಸಂಶೋಧನಾ ಕೇಂದ್ರ - ಉಡುಪಿ.

೧೬. ಕ-ಕ-ಇಂ ನಿಘಂಟು - ಜಿ.ವಿ.ವೆಂ ಮತ್ತು ಇತರರು ೧೯೮೨ ಐಬಿಎಚ್ ಪ್ರಕಾಶನ ಬೆಂಗಳೂರು.

೧೭. ಕಸ್ತೂರಿ ಕನ್ನಡಕೋಶ - ಚೆ ಎ ಕವಲಿ ೧೯೫೭ ರಾಮಾಶ್ರಯ ಬುಕ್ ಡಿಪೋ ಧಾರವಾಡ.

೧೮. ಜ್ಞಾನಸಾರಂ - ಪ್ರೊ. ಸಿ. ಮಹಾದೇವಪ್ಪ ೨೦೦೬ ಪ್ರ. ಬೆಂಗಳೂರು ಸಂಶೋಧನ ಕೋಟಿ, ಬೆಂಗಳೂರು.

೧೯. ಅಕ್ಷರ ಮುದ್ರಣ - ಕೃಷ್ಣೋಜಿರಾವ್, ನಿರ್ದೇಶಕರು, ಸರಕಾರಿ ಮುದ್ರಣಾಲಯ ಬೆಂ ೧೯೮೫.

೨೦. ಕನ್ನಡ ವಾಕ್ಯ ರಚನಾಕ್ರಮ - ವೈ ಸುಬ್ಬರಾವ್ ೧೯೧೯ ಪ್ರ. ಅಧ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ.

೨೧. ಹೊಸಗನ್ನಡ ವ್ಯಾಕರಣ (ಪರಿಷ್ಕೃತ) ಡಾ. ಟಿ.ವಿ.ವೆಂ. ೨೦೦೭ ಪ್ರ. ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ.

೨೨. ವಾಕ್ಯ ಚಿಂತಾಮಣಿ - ಪಂಡಿತ ಎಚ್. ಕೇಶವ ಅಯ್ಯಂಗಾರ್ ೧೯೩೫ ಪ್ರ. ಭಾರತೀ ಪ್ರಕಟನಾಲಯ, ಬೆಂ.

೨೩. ಮೈ.ವಿ.ವಿ ಇಂ.ಕ. ನಿಘಂಟು - ಪ್ರ. ಮೈ.ವಿ.ವಿ. ಮೈಸೂರು.

೨೪. ಕನ್ನಡ-ಕನ್ನಡ ನಿಘಂಟು- ಕಸಾಪ ಬೆಂಗಳೂರು.

೨೫. ವಿ. ಕೃಷ್ಣ ಅವರ ಕ-ಇಂ ನಿಘಂಟು, (3 ಸಂಪುಟಗಳು) : ಪ್ರ. ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು - 2015

೨೬. ಲರ್ನರ್ಸ್ ಮಲ್ಟಿಲಿಂಗ್ಯುಯಲ್ ಡಿಕ್ಷನರಿ - ಪ್ರ. ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಇಂಗ್ಲಿಷ್, ಸೌತ್ ಇಂಡಿಯಾ - 2012

ಅಧ್ಯಾಯ : 5

ಕರಡಚ್ಚು ತಿದ್ದುವಿಕೆ ಮತ್ತು ಲೇಖನ ಚಿಹ್ನೆಗಳ ಬಳಕೆ

ಲೇಖನ ಚಿಹ್ನೆಗಳನ್ನು ಇಂಗ್ಲಿಷಿನಲ್ಲಿ ಪಂಕ್ಚುಯೇಷನ್ (Punctuation) ಎಂದು ಕರೆಯುತ್ತಾರೆ. ಕನ್ನಡದಲ್ಲಿ ಹಲವರು ಹಲವು ರೀತಿ ಕರೆದಿದ್ದಾರೆ.

ಬರವಣಿಗೆಯ ಚಿಹ್ನೆಗಳು

ವಿರಾಮಚಿಹ್ನೆಗಳು

ಗ್ರಂಥಸೂಚನೆಯ ಚಿಹ್ನೆಗಳು

ಲೇಖನ ವಿರಾಮಚಿಹ್ನೆ

ಭಾಷಾ ಸಂಕೇತಗಳು ಇತ್ಯಾದಿ.

ಕೆಲವರು ಲೇಖನಚಿಹ್ನೆಗಳು ಅಥವಾ ವಿರಾಮಚಿಹ್ನೆಗಳು ಎಂಬ ಎರಡೂ ಹೆಸರುಗಳನ್ನು ಬಳಸಿದ್ದಾರೆ. (ಕನ್ನಡ ಕಯ್ಪಿಡಿ-೨) ವಿಶಾಲಾರ್ಥದಲ್ಲಿ ಗ್ರಂಥಸೂಚನೆಯ ಚಿಹ್ನೆಗಳು, ಪಾರಿಭಾಷಿಕ ಚಿಹ್ನೆಗಳು ಎಂದೂ ಕರೆಯುವುದುಂಟು. ಆದರೆ ಬಹುಜನ ಲೇಖಕರು ಲೇಖನಚಿಹ್ನೆಗಳು ಎಂಬ ಮಾತನ್ನು ಪಂಕ್ಚುಯೇಷನ್ ಪದಕ್ಕೆ ಸಮಾನಾರ್ಥಕವಾಗಿ ಬಳಸಿದ್ದಾರೆ.

ಲೇಖನಚಿಹ್ನೆಗಳನ್ನು ಆಯಾ ವಿಭಾಗಕ್ಕೆ ಅನುಸಾರವಾಗಿ ಕರಡಚ್ಚು ಚಿಹ್ನೆಗಳು, ಮುದ್ರಣ ಚಿಹ್ನೆಗಳು, ವಿನ್ಯಾಸದ ಚಿಹ್ನೆಗಳು, ಅಡಿಟಿಪ್ಪಣಿ ಚಿಹ್ನೆಗಳು, ಗ್ರಂಥಸಂಪಾದನೆಯ ಚಿಹ್ನೆಗಳು, ಗಣಿತದ ಚಿಹ್ನೆಗಳು, ಛಂದಶ್ಶಾಸ್ತ್ರದ ಚಿಹ್ನೆಗಳು, ಕೋಶದ ಚಿಹ್ನೆಗಳು ಎಂದು ಕರೆಯುವುದುಂಟು.

ಲೇಖನಚಿಹ್ನೆಗಳು ಎಂದರೇನು?

"ನಾವು ಮಾತನಾಡುವಾಗ ವಾಕ್ಯಗಳ ಹಾಗೂ ವಾಕ್ಯಭಾಗಗಳ ನಡುವೆ ಸ್ವಲ್ಪ ವಿರಾಮವನ್ನು ಕೊಡುತ್ತೇವೆ. ಇದರಿಂದ ನಮ್ಮ ಆಲೋಚನೆ ಅಭಿಪ್ರಾಯಗಳು, ಕೇಳುವವರಿಗೆ ಸ್ಪಷ್ಟವಾಗಿ ಅರ್ಥವಾಗುತ್ತವೆ. ಕೆಲವೊಮ್ಮೆ ವಿಶಿಷ್ಟ ಅರ್ಥಛಾಯೆಗಳನ್ನು ಧ್ವನಿಯ ಏರಿಳಿತದಿಂದಲೇ ವ್ಯಕ್ತಪಡಿಸುತ್ತೇವೆ. ಅಂತೆಯೇ ಬರವಣಿಗೆಯಲ್ಲಿ ಈ ಉದ್ದೇಶಗಳಿಗಾಗಿ ಕೆಲವು ಚಿಹ್ನೆಗಳನ್ನು ಬಳಸುತ್ತೇವೆ. ಇವೇ ಲೇಖನಚಿಹ್ನೆಗಳು."

(ಕನ್ನಡ ಶೈಲಿ ಕೈಪಿಡಿ ಪು -೧೨)

ಆಡುವ ಮಾತಿನಂತೆ ಅರ್ಥಾನುಗುಣವಾದ ಸ್ವರ - ಭಾವಗಳನ್ನು ಹೊಳೆಯಿಸುವುದಕ್ಕಾಗಿಯೂ ಓದುವಾಗ ಅರ್ಥಾನುಗುಣವಾಗಿ ನಿಲ್ಲಿಸಿ, ಉಸಿರು ತೆಗೆದುಕೊಳ್ಳುವುದಕ್ಕಾಗಿಯೂ ಬರವಣಿಗೆಯಲ್ಲಿ ಕೆಲವು ಚಿಹ್ನೆಗಳನ್ನು ಬಳಸುತ್ತಾರೆ. ಇವುಗಳನ್ನು 'ಲೇಖನಚಿಹ್ನೆಗಳು' ಎನ್ನುತ್ತಾರೆ.

(ಭಾಷಾದೀಪಿಕೆ, ಟಿ. ಕೇಶವಭಟ್ಟ ಪು - 92)

ಬರವಣಿಗೆಯ ಮೂಲಕ ಆಲೋಚನೆ ಅಭಿಪ್ರಾಯಗಳ, ಸಂಗತಿ ಸಂದರ್ಭಗಳ ನಿರೂಪಣೆ ನಿವೇದನೆಗಳಲ್ಲಿ ಅರ್ಥ ವಿಶದತೆ ಉಂಟುಮಾಡಲು, ಪದಗಳ, ವಾಕ್ಯಭಾಗಗಳ ಮತ್ತು ವಾಕ್ಯಗಳ ಉಚಿತವಾದ ಎಡೆಗಳಲ್ಲಿ ಕಲ್ಪಿಸಲಾಗಿರುವ ವಿರಾಮಸ್ಥಾನಗಳನ್ನು ಸೂಚಿಸುವ ಲಿಖಿತ ಸಂಕೇತಗಳು 'ವಿರಾಮಚಿಹ್ನೆಗಳು' ಎನ್ನಿಸುತ್ತವೆ.

(ಹೊಸಗನ್ನಡವ್ಯಾಕರಣ-ಟಿ.ವಿ.ವೆಂ. ಪು -192)

ಕರಡಚ್ಚುತಿದ್ದುವಿಕೆ ಮತ್ತು ಲೇಖನಚಿಹ್ನೆಗಳು

ಕರಡಚ್ಚುತಿದ್ದುವಿಕೆ ಒಂದು ಭಾಷಾ ಕೌಶಲವಾದಂತೆಯೇ ತಾಂತ್ರಿಕ ಪರಿಭಾಷಾ ಕೌಶಲವೂ ಆಗಿದೆ. ನಾನಾ ಚಿಹ್ನೆಗಳ ಅಧ್ಯಯನಶಾಸ್ತ್ರವೂ ಆಗಿದೆ. ಕರಡಚ್ಚು ತಿದ್ದುವವರು ಮುಖ್ಯವಾಗಿ ಕಲಿಯಬೇಕಾದ ವಿಷಯದಲ್ಲಿ ಅಕ್ಷರ-ಸಂಖ್ಯೆ-ಸಂಕೇತ-ಸಂಕ್ಷಿಪ್ತ-ಲೇಖನ ವಿಶೇಷ ಚಿಹ್ನೆಗಳನ್ನು ತಿಳಿಯಬೇಕು, ಕಲಿಯಬೇಕು.

ಈ ಲೇಖನದಲ್ಲಿ ಪ್ರಧಾನವಾಗಿ ಲೇಖನಚಿಹ್ನೆಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಕರಡಚ್ಚುತಿದ್ದುವಿಕೆಯಲ್ಲಿ ಅಂಕಿಗಳು, ಅಕ್ಷರಗಳು, ಚಿಹ್ನೆಗಳು ಎಂದು ಮೂರು ವಿಧವಾದ ತಿದ್ದುವಿಕೆಯ ಭಾಗಗಳನ್ನು ಕಾಣುತ್ತೇವೆ. ಈ ಪೈಕಿ ಚಿಹ್ನೆಗಳಿಗೆ ಸಂಬಂಧಿಸಿದಂತೆ ಹಲವಾರು ವಿಭಾಗಗಳಿವೆ.

೧. ಲೇಖನ ಚಿಹ್ನೆಗಳು ೨. ಗ್ರಂಥಸಂಪಾದನೆ ಚಿಹ್ನೆಗಳು ೩. ಕರಡಚ್ಚು ಚಿಹ್ನೆಗಳು ೪. ಮುದ್ರಣಚಿಹ್ನೆಗಳು ೫. ಅಡಿಟಿಪ್ಪಣಿ ಚಿಹ್ನೆಗಳು ೬. ವಿನ್ಯಾಸದ ಚಿಹ್ನೆಗಳು ಎಂದು ಹಲವುಬಗೆಗಳಲ್ಲಿ ಗಮನಿಸುವ ಸಂಗತಿಗಳಿವೆ.

ವರ್ಗೀಕರಣ

ಸಾಧಾರಣವಾಗಿ ಲೇಖನ ಚಿಹ್ನೆಗಳನ್ನು ಸಾಮಾನ್ಯ ಚಿಹ್ನೆಗಳು ಮತ್ತು ವಿಶೇಷ ಚಿಹ್ನೆಗಳು ಎಂದು ವಿಂಗಡಿಸುತ್ತಾರೆ. ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆ, ಪ್ರಬಂಧ ಮೊದಲಾದ ಗದ್ಯಸಾಹಿತ್ಯದ ಪ್ರಕಾರಗಳಲ್ಲಿ ಬಳಸುವ ಚಿಹ್ನೆಗಳನ್ನು ಸಾಮಾನ್ಯ ಲೇಖನದ ಚಿಹ್ನೆಗಳು ಎಂದು ಕರೆಯಬಹುದು. ಗ್ರಂಥಸಂಪಾದನೆ, ಛಂದಶ್ಶಾಸ್ತ್ರ, ಸಂಗೀತ, ಗಣಿತ

ಮೊದಲಾದ ಶಾಸ್ತ್ರ-ವಿಜ್ಞಾನಗ್ರಂಥಗಳಲ್ಲಿ ಬಳಸುವ ಚಿಹ್ನೆಗಳನ್ನು ವಿಶೇಷ ಲೇಖನಚಿಹ್ನೆಗಳು ಎಂದು ಕರೆಯಬಹುದು. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ ವಿರಾಮಚಿಹ್ನೆಗಳು, ಕರಡಚ್ಚುತಿದ್ದುವಿಕೆಯಲ್ಲಿ ಬಳಸುವ ಲೇಖನಚಿಹ್ನೆಗಳು, ಮುದ್ರಣ ವಿನ್ಯಾಸದಲ್ಲಿ ಬಳಸುವ ಸಂಕೇತ ಚಿಹ್ನೆಗಳು ಎಂದು ವರ್ಗೀಕರಿಸಬಹುದು.

. , ; ಮೊದಲಾದ ವಿರಾಮಚಿಹ್ನೆಗಳು ಲೇಖನಚಿಹ್ನೆಗಳಾದರೆ / # ಇತ್ಯಾದಿ ಕರಡುತಿದ್ದುವ ಲೇಖನ ಚಿಹ್ನೆಗಳು

| ≠ + * ಮೊದಲಾದವು ಅಡಿಟಿಪ್ಪಣಿ ಚಿಹ್ನೆಗಳು ಅಥವಾ ಮುದ್ರಣವಿನ್ಯಾಸ ಚಿಹ್ನೆಗಳು ಎನ್ನಬಹುದು.

+ X V - ಇತ್ಯಾದಿ ಶಾಸ್ತ್ರಚಿಹ್ನೆಗಳು ಎನ್ನಬಹುದು.

ವರ್ಗೀಕರಣ - ೧

ಆಕಾರ ಸಾದೃಶ್ಯ ವರ್ಗೀಕರಣ

ಕನ್ನಡ ಶೈಲಿ ಕೈಪಿಡಿ ಗ್ರಂಥದಲ್ಲಿ ಮೊದಲಬಾರಿಗೆ ಲೇಖನಚಿಹ್ನೆಗಳ ಆಕಾರ ಸಾದೃಶ್ಯದ ಮೇಲೆ ಕೆಳಕಂಡಂತೆ ವರ್ಗೀಕರಿಸಲಾಗಿದೆ. ಇದನ್ನು ಆಕಾರಸಾದೃಶ್ಯವರ್ಗೀಕರಣ ಎಂದು ಕರೆಯಬಹುದು.

೧. **ವಿರಾಮಗಳು**
ಪೂರ್ಣವಿರಾಮ (.)
ಅಲ್ಪವಿರಾಮ (,)
ಅರ್ಧವಿರಾಮ (;)
ವಿವರಣವಿರಾಮ (:)
ಅಪೂರ್ಣ ವಿರಾಮ (.....)

೨. **ಸೂಚಕಗಳು**
ಪ್ರಶ್ನಸೂಚಕ (?)
ಭಾವಸೂಚಕ (!)

೩. **ಉದ್ಧರಣಗಳು**
ಒಂಟಿ ಉದ್ಧರಣ (‘)
ಜೋಡಿಉದ್ಧರಣ (“ ”)

೪. **ಗೆರೆಗಳು**

ಕಿರುಗೆರೆ (–)

ಉದ್ದಗೆರೆ (___)

ಲಂಬಗೆರೆ (|)

ಓರೆಗೆರೆ (/)

ಅಡಿಗೆರೆ (<u>ಪದಗಳು</u>)

೫. **ಆವರಣಗಳು**

ದುಂಡಾವರಣ (( ))

ಚೌಕಾವರಣ ([ ])

೬. **ಇತರ ಚಿಹ್ನೆಗಳು**

ನಕ್ಷತ್ರ ಚಿಹ್ನೆ (*)

ಪುನರಾವರ್ತನ ಚಿಹ್ನೆ (- “ -)

ಈ ವರ್ಗೀಕರಣದಲ್ಲಿ ಗ್ರಂಥಸಂಪಾದನೆಯ ಚಿಹ್ನೆಗಳು, ಛಂದೋಚಿಹ್ನೆಗಳು, ಕೋಶದಚಿಹ್ನೆಗಳು, ಪಾರಿಭಾಷಿಕ ಚಿಹ್ನೆಗಳು ಕಂಡುಬಂದಿಲ್ಲ. ಆವರಣಚಿಹ್ನೆಗಳಲ್ಲಿ ಪುಷ್ಪಾವರಣಚಿಹ್ನೆ ಸೇರಬೇಕು. ಚಿಕ್ಕಸೊನ್ನೆ, ದೊಡ್ಡಸೊನ್ನೆ ಚಿಹ್ನೆಗಳು, ಹಲವಾರು ಮುದ್ರಣಚಿಹ್ನೆಗಳು ಸೇರಬೇಕು.

ವರ್ಗೀಕರಣ - ೨

ಗ್ರಂಥಸಂಪಾದನಾಶಾಸ್ತ್ರ ಚಿಹ್ನೆಗಳು

ಗ್ರಂಥಸಂಪಾದನಾಶಾಸ್ತ್ರದಲ್ಲಿ ಬಳಸುವ ಚಿಹ್ನೆಗಳನ್ನು ಕರಡಚ್ಚು ತಿದ್ದುವವರು ವಿಶೇಷವಾಗಿ ಗಮನಿಸಬೇಕು. ಇವುಗಳ ವರ್ಗೀಕರಣ ಹೀಗೆ ಮಾಡಬಹುದು.

೧. **ಅಂಕಿಗಳು**

ಇಂಗ್ಲಿಷ್ ಅಂಕಿಗಳು, ಕನ್ನಡ ಅಂಕಿಗಳು, ರೋಮನ್ ಅಂಕಿಗಳು, ದೇವನಾಗರಿ ಅಂಕಿಗಳು ಇತ್ಯಾದಿ.

೨. **ಸಂಕೇತಚಿಹ್ನೆಗಳು**

(- = X + < > [ ] ಇತ್ಯಾದಿ)

೩. ಲೇಖನಚಿಹ್ನೆಗಳು

(. ; : । ॥ " " ಇತ್ಯಾದಿ)

೪. ಕರಡಚ್ಚು ಚಿಹ್ನೆಗಳು

(∼ ⊙ → ≠ ಇತ್ಯಾದಿ)

೫. ಮುದ್ರಣಚಿಹ್ನೆಗಳು

(+ # ◇ ▯ -- ,, -- ಇತ್ಯಾದಿ)

೬. ಸಂಕೇತಾಕ್ಷರಗಳು

('ಕ' ಪ್ರತಿ, 'ಗ' ಪ್ರತಿ, A ಪ್ರತಿ B ಪ್ರತಿ ಇತ್ಯಾದಿ)

೭. ಸಂಕ್ಷಿಪ್ತಾಕ್ಷರಗಳು

(ಪಂ.ಭಾ. ಶಮದ. ಕನಿ. ತೊ.ರಾ. ಇತ್ಯಾದಿ)

೮. ವಿಜ್ಞಾನದ ಚಿಹ್ನೆಗಳು

(ಗಣಿತಚಿಹ್ನೆಗಳು, ರಸಾಯನಶಾಸ್ತ್ರಚಿಹ್ನೆಗಳು ಇತ್ಯಾದಿ)


೯. ನಕ್ಷೆ ಚಿಹ್ನೆಗಳು

(ವಂಶಾವಳಿಚಿಹ್ನೆಗಳು, ರೇಖಾಚಿತ್ರಗಳು ಇತ್ಯಾದಿ)

೧೦. ತಾಳೆಗರಿ ಗ್ರಂಥದ ಚಿಹ್ನೆಗಳು

(। O ॥ ~ * ∧) ಇತ್ಯಾದಿ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಒಂದೇ ಚಿಹ್ನೆಯನ್ನು ಬೇರೆ ಬೇರೆ ವಿಭಾಗಗಳವರು ಬಳಸುತ್ತಾರೆ. ಆದಕಾರಣ ಒಂದು ಚಿಹ್ನೆಗೆ ಒಂದೇ ಅರ್ಥ ಎಂದು ಭಾವಿಸಬಾರದು. ಉದಾಹರಣೆ + ಗಣಿತದಲ್ಲಿ ಕೂಡುವ ಚಿಹ್ನೆ (೪+೬=೧೦) ವ್ಯಾಕರಣದಲ್ಲಿ ಸಂಧಿಪದಗಳನ್ನು ಸೇರಿಸುವ ಚಿಹ್ನೆ (ಮನೆ+ಇಂದ=ಮನೆಯಿಂದ) ನಕ್ಷೆಚಿಹ್ನೆಗಳಲ್ಲಿ ದಿಕ್ಕುಗಳನ್ನು ತೋರಿಸುತ್ತದೆ.



ವರ್ಗೀಕರಣ - ೩

ಕೆಳಕಂಡ ರೀತಿಯಲ್ಲೂ ಬರಹದ ಚಿಹ್ನೆಗಳನ್ನು ವಿಂಗಡಿಸಬಹುದು.

ಅ) ಸಾಮಾನ್ಯ ಲೇಖನಚಿಹ್ನೆಗಳು

(ವ್ಯಾಕರಣ ಗ್ರಂಥದಲ್ಲಿ ಬಳಸುವಂಥವು)

(. - , : ; ( ) ಇತ್ಯಾದಿ)

ಆ) ಶಾಸ್ತ್ರಗ್ರಂಥಗಳ ಚಿಹ್ನೆಗಳು

(ಸಂಗೀತ, ಛಂದಶ್ಯಾಸ್ತ್ರ, ನಿಘಂಟು, ಗಣಿತ ಇತ್ಯಾದಿ)

ಇ) ಕರಡಚ್ಚು ಚಿಹ್ನೆಗಳು

(~ ⊙ → ≠ ಇತ್ಯಾದಿ)

ಈ) ತಾಳೆಗರಿ ಚಿಹ್ನೆಗಳು

(। ॥ ○ ಇತ್ಯಾದಿ)

ಉ) ಮುದ್ರಣ ವಿನ್ಯಾಸ ಚಿಹ್ನೆಗಳು

(† ≠ ¶ ಇತ್ಯಾದಿ)

ಊ) ಅಕ್ಷರ ಚಿಹ್ನೆಗಳು

(ಸಂಕೇತಾಕ್ಷರಗಳು, ಸಂಕ್ಷಿಪ್ತಾಕ್ಷರಗಳು)

'ಕ' ಪ್ರತಿ; ಆದಿಪು ಇತ್ಯಾದಿ.

ಋ) ಇತರ ವಿಶೇಷ ಚಿಹ್ನೆಗಳು

ಮುಕ್ತಾಯ ಚಿಹ್ನೆಗಳು - ೦ - ▫~~ ಇತ್ಯಾದಿ.

ವರ್ಗೀಕರಣ - 4

ಪಂಡಿತ ಎಚ್. ಶೇಷಯ್ಯಂಗಾರ್ ವಾಕ್ಯಚಿಂತಾಮಣಿ (1935) ಗ್ರಂಥದಲ್ಲಿ ಲೇಖನಚಿಹ್ನೆಗಳನ್ನು 3 ಬಗೆಯಾಗಿ ವರ್ಗೀಕರಿಸಿದ್ದಾರೆ.

ವ್ಯಾಕರಣಚಿಹ್ನೆಗಳು

. ಪೂರ್ಣವಿರಾಮ

, ಅಲ್ಪವಿರಾಮ

: ವಿವರಣ ಚಿಹ್ನೆ

- ಉದಾಹರಣ ಚಿಹ್ನೆ

= ಸಮೀಕರಣ ಚಿಹ್ನೆ

ಅಲಂಕಾರಚಿಹ್ನೆಗಳು

? ಪ್ರಶ್ನೆಸೂಚಕ ಚಿಹ್ನೆ

! ಭಾವಸೂಚಕ ಚಿಹ್ನೆ

! ಸಂಯೋಜಕ ಚಿಹ್ನೆ

" " ಅನುಕರಣ ಚಿಹ್ನೆ

ವೈಶೇಷಿಕ ಚಿಹ್ನೆಗಳು

' ' ವಿಶೇಷಕ ಚಿಹ್ನೆ

( ) ಅಂತರಾವರಣ ಚಿಹ್ನೆ

ಲೇಖನಚಿಹ್ನೆಗಳ ಉಪಯೋಗ

ಲೇಖನ ಚಿಹ್ನೆಗಳ ಅಗತ್ಯ ಮಹತ್ವಗಳನ್ನು ಹಲವಾರು ವಿದ್ವಾಂಸರು ಹಲವಾರು ಬಗೆಯಲ್ಲಿ ವಿವರಿಸಿದ್ದಾರೆ. ಕೆಲವನ್ನು ಗಮನಿಸಬಹುದು.

ಮಾತನಾಡುವ ಕಾಲದಲ್ಲಿ ಮಾನವನು ಸಂದರ್ಭಗಳಿಗೆ ಅನುಸಾರವಾಗಿ ಧ್ವನಿಯಲ್ಲಿ ವ್ಯತ್ಯಾಸವನ್ನು ತೋರ್ಪಡಿಸುತ್ತಿರುವುದನ್ನು ಎಲ್ಲರೂ ಬಲ್ಲವರಾಗಿಯೇ ಇರುವರು.

ಬರವಣಿಗೆಯಲ್ಲೂ ಈ ವ್ಯತ್ಯಾಸವನ್ನು ತೋರಿಸುವುದಾದರೆ ಮಾತನಾಡುವವನ ಮನೋಭಾವ ಓದುವವನಿಗೂ ತಿಳಿಯಲು ಅವಕಾಶವನ್ನು ಕಲ್ಪಿಸಿಕೊಟ್ಟಂತಾಗುವುದು. ಇದಕ್ಕೆ ಅನುಸಾರವಾಗಿ ಪಾಶ್ಚಿಮಾತ್ಯರು ಕೆಲವರು ಲೇಖನಚಿಹ್ನೆಗಳನ್ನು ಏರ್ಪಡಿಸಿಕೊಂಡಿದ್ದಾರೆ. ಈಚೀಚೆಗೆ ಆ ಚಿಹ್ನೆಗಳು ಭಾರತೀಯರ ಭಾಷೆಯಲ್ಲಿಯೂ ತಲೆದೋರುತ್ತಿರುವುವು.

(ವಾಕ್ಯಚಿಂತಾಮಣಿ ಪುಟ 50)

(ಆ) ಭಾವನೆಗಳನ್ನು ಸೂಚಿಸಲು, ಮತ್ತೊಬ್ಬರ ಮಾತುಗಳನ್ನು ವಾಕ್ಯಗಳಲ್ಲಿ ಅಳವಡಿಸಲು, ವಿವರಣೆ ಮತ್ತು ಪೂರಕಮಾಹಿತಿ ನೀಡಲು ಲೇಖನಚಿಹ್ನೆಗಳನ್ನು ಬಳಸುತ್ತೇವೆ.

(ಕನ್ನಡ ಶೈಲಿ ಕೈಪಿಡಿ ಪುಟ 12)

ಲೇಖನ ಚಿಹ್ನೆಗಳ ಬಳಕೆಯ ಸ್ಥಾನ

ಲೇಖನಚಿಹ್ನೆಗಳನ್ನು ಗ್ರಂಥದಲ್ಲಿ ಎಲ್ಲೆಲ್ಲಿ ಬಳಸಬೇಕು? ಎಂದರೆ ಅಗತ್ಯವಿರುವೆಡೆ ಗಳಲ್ಲೆಲ್ಲಾ ಬಳಸಬೇಕು. ಎಂಬುದೇ ಉತ್ತರ. ಸಾಮಾನ್ಯವಾಗಿ ಪದಗಳ ಮೊದಲು ಮಧ್ಯ

ಕೊನೆಗಳಲ್ಲಿ ಮತ್ತು ವಾಕ್ಯಗಳ ಮೊದಲು ಮಧ್ಯ ಕೊನೆಗಳಲ್ಲಿ ಕೆಲವೊಮ್ಮೆ ವಾಕ್ಯಬೃಂದಗಳ ಮೊದಲು ಕೊನೆ ಮಧ್ಯಭಾಗಗಳಲ್ಲಿ ಬಳಸುತ್ತಾರೆ.

ಪದಗಳಲ್ಲಿ

ಪದಾದಿಯಲ್ಲಿ

1. ಅಕ್ಷರ ಸಂಜ್ಞಾಪ್ರಕರಣ, 2. ಕನ್ನಡನಾಡಿನ ವೈಭವ
(ಅಧ್ಯಾಯಗಳ ಶೀರ್ಷಿಕೆಗಳಲ್ಲಿ ಚಿಹ್ನೆಗಳ ಆದಿಬಳಕೆ ಕಾಣುತ್ತೇವೆ)

ಪದಗಳ ಮಧ್ಯದಲ್ಲಿ

ಗೋ + ಇಂದಂ = ಗೋವಿಂದಂ

ಸಂಜೆ + ಅಲ್ಲಿ = ಸಂಜೆಯಲ್ಲಿ

ಪದಾಂತ್ಯದಲ್ಲಿ

ಉಂಬಟುಯೆಂಬುದು, ಕೊಡುಗೆ

ಕಟುಲೆಯೆಂದು, ಬಿದಿರ ಕುಡಿ **(ಶಮದ-ಕಿಟೆಲ್ : ಪುಟ, 39)**

ವಾಕ್ಯಗಳಲ್ಲಿ

ವಾಕ್ಯಾದಿಯಲ್ಲಿ

"ಸೈರಿಸು, ಹೃದಯಮೆ ಸೈರಿಸು" (ಕಿಟೆಲ್-ಶಮದ, ಪುಟ 185)

ವಾಕ್ಯಮಧ್ಯದಲ್ಲಿ

ನಿಷ್ಟೂರ ನಂಜಯ್ಯನವರು (ನಿಟ್ಟೂರ ನಂಜಯ್ಯನವರು) ಬರೆದ ವ್ಯಾಖ್ಯಾನ ಸಹಿತವಾದುದು.

(ಕಿಟೆಲ್ - ಶಮದ, ಪುಟ 1)

ವಾಕ್ಯಾಂತದಲ್ಲಿ

ಈ ಶಬ್ದಮಣಿದರ್ಪಣದೊಳ್ ಸಂಧಿಯೆಂಟಕ್ಕುಂ.

(ಕಿಟೆಲ್ - ಶಮದ, ಪುಟ 9)

ಲೇಖನಚಿಹ್ನೆಗಳನ್ನು ಬಳಸಲೇಬೇಕೇ?

ತಾತ್ವಿಕವಾಗಿ ಈ ಪ್ರಶ್ನೆಗೆ ಉತ್ತರ ಸಾಮಾನ್ಯವಾಗಿ 'ಹೌದು' ಎನ್ನಬಹುದು. ಆದರೆ ವ್ಯಾವಹಾರಿಕವಾಗಿ ಒಪ್ಪದೇ ಇರುವವರು ಕೆಲವರು ಇದ್ದಾರೆ. ಆದರೆ ಇದು ಅಗತ್ಯ ಎಂದು ಹೇಳಿ ಕೆಲವರು ತಮ್ಮ ವ್ಯಾಕರಣಗ್ರಂಥಗಳಲ್ಲಿ ಲೇಖನಚಿಹ್ನೆಗಳು ಎಂಬ ಅಧ್ಯಾಯವನ್ನೇ ಅಳವಡಿಸಿದ್ದಾರೆ.

ಉದಾಹರಣೆ : ಟಿ.ವಿ. ವೆಂಕಟಾಚಲ ಶಾಸ್ತ್ರೀ, ಟಿ. ಕೇಶವಭಟ್ಟ, ಎಚ್. ಶೇಷಯ್ಯಂಗಾರ್ ಮೊದಲಾದವರು ಲೇಖನ ಚಿಹ್ನೆಗಳ ಬಗ್ಗೆ ತಮ್ಮ ವ್ಯಾಕರಣ ಗ್ರಂಥಗಳಲ್ಲಿ ಪ್ರತ್ಯೇಕವಾಗಿ ಪ್ರಸ್ತಾಪಿಸಿದ್ದಾರೆ.

ವಿರಾಮಚಿಹ್ನೆಗಳನ್ನು ಏಕೆ ಬಳಸಬೇಕು?

"ಇಂಗ್ಲಿಷ್ ಭಾಷೆಯ ಅಭ್ಯಾಸ ಹೆಚ್ಚಾದ ಹಾಗೆಲ್ಲ, ನಮ್ಮವರಿಗೂ ಆ ಭಾಷೆಯಲ್ಲಿ ಉಪಯೋಗಿಸುತ್ತಿದ್ದ ವಿರಾಮ ಚಿಹ್ನೆಗಳ ಪ್ರಯೋಜನ ಪರಿಚಯವಾಯಿತು. ಹೀಗಾಗಿ ಈಗ ಕನ್ನಡದಲ್ಲಿ ಬರಹ ಮಾಡುವವರು ಕೆಲವು ವಿರಾಮಚಿಹ್ನೆಗಳನ್ನು ಉಪಯೋಗಿಸುತ್ತಿದ್ದಾರೆ. ಆದರೂ ಈ ಚಿಹ್ನೆಗಳ ಉಪಯೋಗವು ಒಂದೇ ಬಗೆಯಾಗಿ ಆಗುತ್ತಿಲ್ಲ. ಆದುದರಿಂದ ಈ ಚಿಹ್ನೆಗಳ ಬಗ್ಗೆ ಸ್ಪಷ್ಟವಾದ ತಿಳಿವಳಿಕೆಯನ್ನು ಪಡೆದಿರುವುದು ಒಳ್ಳೆಯದು.

"ವಿರಾಮಚಿಹ್ನೆಗಳು ಓದುಗನಿಗೆಂದು ಲೇಖಕನು ನೀಡುವ ಮಾರ್ಗದರ್ಶನ ಎಂದು ತಿಳಿಯಬೇಕು. ಒಂದೊಂದು ವಿರಾಮಚಿಹ್ನೆಗೂ ಒಂದೊಂದು ಅರ್ಥವಿದೆ. ಅದನ್ನು ಉಪಯೋಗಿಸುವಾಗ ಲೇಖಕನು ಒಂದು ಉದ್ದೇಶವನ್ನು ಇಟ್ಟುಕೊಂಡಿರುತ್ತಾನೆ. ಆದುದರಿಂದ ಈ ಚಿಹ್ನೆಗಳ ಬಗ್ಗೆ ವಿವರವಾಗಿ ತಿಳಿವಳಿಕೆ ಹೊಂದಿರುವುದು ಲೇಖಕನ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ.

"ಪದಪದಕ್ಕೂ ವಾಕ್ಯಭಾಗಗಳಿಗೂ ಇರುವ ಸಂಬಂಧವನ್ನು ಸೂಚಿಸುವುದೇ ಲೇಖನಚಿಹ್ನೆಗಳ ಕೆಲಸ. ಯಾವ ಲೇಖನಚಿಹ್ನೆಯನ್ನೂ ಉಪಯೋಗಿಸದಿದ್ದಾಗ ಬರವಣಿಗೆಯನ್ನು ಓದಿ ಅರ್ಥಮಾಡಿಕೊಳ್ಳುವುದು ಕಷ್ಟ. ನಾವು ಮಾತನಾಡುವಾಗ ಅಭಿನಯದ ಸಹಾಯದಿಂದ, ಕಣ್ಣುಮಿಟುಕಿಸುವುದರಿಂದ, ಧ್ವನಿಯ ಏರಿಳಿತದಿಂದ, ಒತ್ತಿ ಹೇಳುವುದರಿಂದ, ತೇಲಿಸಿ ಹೇಳುವುದರಿಂದ ನಮ್ಮ ಅಭಿಪ್ರಾಯ ಸ್ಪಷ್ಟವಾಗುವಂತೆ ಮಾಡುತ್ತೇವೆ. ಆದರೆ ಬರವಣಿಗೆಯಲ್ಲಿ ಹೀಗೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಲೇಖನಚಿಹ್ನೆಗಳ ಉಪಯೋಗವು ಅನಿವಾರ್ಯವಾಗುತ್ತದೆ."

(ಲೇಖನಕಲೆ - ಎನ್. ಪ್ರಹ್ಲಾದರಾವ್ : ಪುಟ : ೩೪)

ಕನ್ನಡದಲ್ಲಿ ಲೇಖನಚಿಹ್ನೆಗಳು ಮೊದಲು ರೂಢಿಯಲ್ಲಿ ಇರಲಿಲ್ಲ. ಆಂಗ್ಲಭಾಷಾ ಪ್ರಭಾವದಿಂದ ಕೆಲವು ಚಿಹ್ನೆಗಳು ಕನ್ನಡ ಭಾಷೆಯಲ್ಲೂ ರೂಢಿಯಲ್ಲಿ ಬಂದಿವೆ.... ಬರವಣಿಗೆಯಲ್ಲಿ ಲೇಖನಚಿಹ್ನೆಗಳ ಪಾತ್ರ ಅತ್ಯಂತ ಪ್ರಮುಖವಾದುದು. ಲೇಖನ ಚಿಹ್ನೆಗಳಿಲ್ಲದ ಬರವಣಿಗೆಯು ಸ್ಪಷ್ಟಾರ್ಥವನ್ನು ಕೊಡದೆ ಅನೇಕ ತೊಡಕುಗಳಿಗೆ ಕಾರಣವಾಗುವುದುಂಟು. ಆದುದರಿಂದ ಲೇಖನಚಿಹ್ನೆಗಳ ಕಡೆಗೆ ಅತ್ಯಂತ ಲಕ್ಷ್ಯ ಅವಶ್ಯಕ.

(ಎರೆಸೀಮೆ ಚೆನ್ನಪ್ಪ ಮತ್ತು ಇತರರು-ಕನ್ನಡ ವ್ಯಾಕರಣ ದರ್ಪಣ, ಪುಟ ೨೯೧)

ಮಾತಿನ ಅಭಿಪ್ರಾಯ, ನಿಲುಗಡೆ, ಅರ್ಧವಿರಾಮ ಮೊದಲಾದುವನ್ನು ಸೂಚಿಸಲು ಬಳಸುವ ಕೆಲವು ಚಿಹ್ನೆಗಳನ್ನು ನಾವು <u>ಲೇಖನ ಚಿಹ್ನೆಗಳು</u> ಎಂದು ಕರೆಯುತ್ತೇವೆ.

ಮಾತಿನಲ್ಲಿ ನಿರ್ದಿಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಲು ಪೂರಕವಾಗಿ ಧ್ವನಿಯ ಉಚ್ಚಾರಣೆ, ಏರಿಳಿತ, ವಿರಾಮಗಳು ಎಷ್ಟು ಮುಖ್ಯವೋ ಬರೆವಣಿಗೆಯಲ್ಲೂ, ಸೂಕ್ತಲೇಖನ ಚಿಹ್ನೆಗಳನ್ನು ನಮೂದಿಸಿ ಅಭಿಪ್ರಾಯವನ್ನು ಸ್ಪಷ್ಟಪಡಿಸಬೇಕಾದುದು ಅವಶ್ಯಕ.

(ಲೇಖನ ಚಿಹ್ನೆಗಳು - ಟಿ.ಎಸ್. ಗೋಪಾಲ್ ಪುಟ 11)

ಲೇಖನ ಚಿಹ್ನೆಗಳ ಬಳಕೆ ಅಗತ್ಯ ಎಂಬುದು ನಿಜವಾದರೂ ಅವುಗಳನ್ನು ಅರ್ಥ ವ್ಯತ್ಯಾಸವಾಗದಂತೆ ಅರ್ಥಪೂರ್ಣವಾಗಿ ಬಳಸುವುದು ಅಗತ್ಯವಾಗಿದೆ. ನಿದರ್ಶನವಾಗಿ ಪ್ರಸಂಗವೊಂದನ್ನು ಉದಾಹರಿಸಬಹುದಾಗಿದೆ.

ಗೆಳೆಯನೊಬ್ಬ ತನ್ನ ಆಪ್ತಮಿತ್ರನ ಹೆಂಡತಿಯೊಂದಿಗೆ ಮಾತಾಡುತ್ತಿದ್ದಾಗ ಹೇಳಿದ: "ನೀನು ನನ್ನ ಹೆಂಡತಿ, ನಾನು ನಿನ್ನ ಗಂಡ, ನಾಳೆ ಭಾನುವಾರ ಸಿನಿಮಾಕ್ಕೆ ಹೋಗೋಣ" ಆ ಮಾತನ್ನು ಕೇಳಿ ಆಕೆ ಗಾಬರಿಗೊಂಡಳು.

ಎಲಾ ಇವನ, ನನ್ನನ್ನು ಇವನು "ನೀನು ನನ್ನ ಹೆಂಡತಿ" ಅಂತ ನನ್ನನ್ನು ಕರೀತಿದ್ದಾನೆ. ಅಷ್ಟೇ ಅಲ್ಲದೆ "ನಾನು ನಿನ್ನ ಗಂಡ" ಅಂತಾ ಇದ್ದಾನೆ. ಎಷ್ಟು ಧೈರ್ಯ ಇವನಿಗೆ ಅಂತ ಅವನನ್ನು ದಿಟ್ಟಿಸಿ ನೋಡಿದಳು.

ಆ ವೇಳೆಗೆ ಗಂಡ ಬಂದಾಗ ಅವನಿಗೆ ವಿಷಯ ಹೇಳಿದಾಗ ಅವನು ನಕ್ಕು ಹೇಳಿದ. ಅವನು ಹೇಳಿದ್ದು ಸರಿಯಾಗಿದೆ ನೀನು ಸರಿಯಾಗಿ ಕೇಳಿಸಿಕೊಂಡಿಲ್ಲ. ಅವನ ಮಾತಿದು: ನೀನು, ನನ್ನ ಹೆಂಡತಿ, ನಾನು, ನಿನ್ನ ಗಂಡ "ನಾವು ನಾಲ್ವರೂ ಸಿನಿಮಾಕ್ಕೆ ಹೋಗೋಣ" ಅಂತ ಹೇಳಿದ್ದು ಅಂದನು.

ಅಲ್ಪವಿರಾಮ ಚಿಹ್ನೆಯನ್ನು ನೀನು ನನ್ನ ಹೆಂಡತಿ, ಎಂಬುದಕ್ಕೆ ಪೂರ್ಣ ವಿರಾಮ ಚಿಹ್ನೆಯನ್ನು ನಾನು ನಿನ್ನ ಗಂಡ. ಎಂಬುದಕ್ಕೆ ಬಳಸಿದರೆ ಬರುವ ಅರ್ಥ ಬೇರೆ.

ನೀನು, ನನ್ನ ಹೆಂಡ್ತಿ, ನಾನು, ನಿನ್ನ ಗಂಡ ಎಂದು 3 ಅಲ್ಪವಿರಾಮ ಚಿಹ್ನೆಗಳನ್ನು ಬಳಸಿದಾಗ ಬರುವ ಅರ್ಥವೇ ಬೇರೆ ಆಗಿದೆ.

ಆದ್ದರಿಂದ ವಿರಾಮ ಚಿಹ್ನೆಗಳನ್ನು ಬಳಸುವುದೇ ಮುಖ್ಯವಲ್ಲ; ಸರಿಯಾದ ರೀತಿ ಬಳಸುವುದೂ ಮುಖ್ಯ.

ಲೇಖನ ಚಿಹ್ನೆಗಳು ವಿದೇಶಿಯರ ಕೊಡುಗೆ. ಆದರೂ ಇಂದು ಅವುಗಳ ಅಭ್ಯಾಸ ಅಳವಡಿಕೆ ಅನಿವಾರ್ಯವಾಗಿದೆ. ಅರ್ಥಪೂರ್ಣ ಅಭಿವ್ಯಕ್ತಿಗೆ ಲೇಖನಚಿಹ್ನೆಗಳ ಬಳಕೆ ಅತ್ಯಗತ್ಯ.

ಸ್ವಾತಂತ್ರ್ಯಪೂರ್ವದ ಲೇಖಕರು ಕ್ರಮಬದ್ಧವಾಗಿ ಅರ್ಥವತ್ತಾಗಿ ಲೇಖನ ಚಿಹ್ನೆಗಳನ್ನು ಬಳಸಲು ಅರಿತಿದ್ದರು. ಉದಾಹರಣೆಗೆ, ಕುವೆಂಪು ಅವರ ರಾಮಾಯಣ ದರ್ಶನಂ ಗಮನಿಸಿದರೆ ಅಥವಾ ಅದರ ಹಸ್ತಪ್ರತಿಯನ್ನು ವೀಕ್ಷಿಸಿದರೆ ಲೇಖನಚಿಹ್ನೆಗಳನ್ನು ಅಚ್ಚುಕಟ್ಟಾಗಿ ಬಳಸಿರುವುದನ್ನು ಕಾಣಬಹುದು. ಕನ್ನಡಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ವೈವಿಧ್ಯಮಯವಾಗಿ ಅಚ್ಚುಕಟ್ಟಾಗಿ ವೈಜ್ಞಾನಿಕವಾಗಿ ಬಳಸಿರುವಂತೆ ಲೇಖನಚಿಹ್ನೆಗಳನ್ನು ಮುದ್ರಣವಿನ್ಯಾಸಗಳನ್ನು ಇತರರು ಬಳಸಿದಂತೆ ಕಾಣುವುದಿಲ್ಲ.

ಕರಡಚ್ಚು ಚಿಹ್ನೆಗಳು Proof Reading Signs

ಕರಡಚ್ಚು ತಿದ್ದುವ ಚಿಹ್ನೆಗಳು ಲೇಖನಚಿಹ್ನೆಗಳ ಪರಿಧಿಯಲ್ಲಿ ಬರುತ್ತವೆ.

ಶಾಸ್ತ್ರಚಿಹ್ನೆಗಳು

ಶಾಸ್ತ್ರಚಿಹ್ನೆಗಳು ಎಂದರೆ ಆಯಾ ಶಾಸ್ತ್ರಕ್ಕೆ ಸಂಬಂಧಿಸಿದ ವಿಶಿಷ್ಟ ಚಿಹ್ನೆಗಳು ಎಂದರ್ಥ. ಕೆಲವು ಚಿಹ್ನೆಗಳು ಹೊಸರೀತಿಯದಾದರೂ ಮತ್ತೆ ಕೆಲವು ಇತರ ಲೇಖನ ಚಿಹ್ನೆಗಳನ್ನೇ ಭಿನ್ನಾರ್ಥದಲ್ಲಿ ಬಳಸಲಾಗುತ್ತದೆ.

ಉದಾಹರಣೆ

ಸಚಿತ್ರ ಮುದ್ರಣಚಿಹ್ನೆಗಳು (ವಿನ್ಯಾಸ ಚಿಹ್ನೆಗಳು) Typographical Signs

ಮುದ್ರಕರು ಗ್ರಂಥದ ಅಚ್ಚಿನವಿನ್ಯಾಸದ ಹಿನ್ನೆಲೆಯಲ್ಲಿ ತಮ್ಮದೇ ಆದ ವಿಶಿಷ್ಟ ಚಿಹ್ನೆಗಳನ್ನು ಬಳಸುತ್ತಾರೆ. ಒಂದು ರೀತಿಯಲ್ಲಿ ಸಚಿತ್ರ ಮುದ್ರಿತ ಚಿಹ್ನೆಗಳು ಎಂದು ಕರೆಯಬಹುದು.

ಉದಾಹರಣೆ : ☞ ಹಸ್ತ ಚಿಹ್ನೆ † ಕಠಾರಿಚಿಹ್ನೆ ‡ ಇಕ್ಕಠಾರಿ ಚಿಹ್ನೆ ▲■○ ತ್ರಿಭುಜ, ಚೌಕ, ಸೊನ್ನೆ, ಚಿಹ್ನೆಗಳು → ಬಾಣದ ಚಿಹ್ನೆ, ಮುಂತಾದ ಚಿಹ್ನೆಗಳನ್ನು ಬಳಸಲಾಗುತ್ತವೆ.

ವಿಜ್ಞಾನದ ಚಿಹ್ನೆಗಳು (Science Signs)

ವಿಜ್ಞಾನ ಕ್ಷೇತ್ರದಲ್ಲಿ ಪ್ರಗತಿಯಾದಂತೆ ನಾನಾ ಶಾಸ್ತ್ರಗಳ ಬೆಳವಣಿಗೆಯಾದಂತೆ ಹೊಸ ಹೊಸ ಚಿಹ್ನೆಗಳು ಸೃಷ್ಟಿಯಾಗುತ್ತವೆ. ಆಯಾಶಾಸ್ತ್ರದ ಪಾರಿಭಾಷಿಕಾರ್ಥಕ್ಕೆ ಸರಿಯಾಗಿ ಚಿಹ್ನೆಗಳನ್ನು ರಚಿಸುತ್ತಾರೆ. ಚಿಹ್ನೆಗಳನ್ನು ಒಂದು ರೀತಿ ಸಂಕೇತಚಿಹ್ನೆಗಳು ಎನ್ನಬಹುದು. ಇವುಗಳನ್ನು ಈ ರೀತಿ ಸ್ಥೂಲವಾಗಿ ವರ್ಗೀಕರಿಸಬಹುದು:

೧. ವಾಣಿಜ್ಯ ಸಂಕೇತಗಳು (Commercial Signs)

೨. ಬೀಜಗಣಿತದ ಸಂಕೇತಗಳು (Algebrical Signs)

೩. ಜ್ಯಾಮಿತ್ರೀಯ ಸಂಕೇತಗಳು (Geometrical Signs)

೪. ರಾಸಾಯನಿಕ ಚಿಹ್ನೆಗಳು (Chemical Signs)

೫. ಖಗೋಳ ವೈಜ್ಞಾನಿಕ ಸಂಕೇತಗಳು (Astronomical Signs)

೬. ಸಸ್ಯವೈಜ್ಞಾನಿಕ ಸಂಕೇತಗಳು (Botanical Signs)

೭. ವೈದ್ಯಕೀಯ ಸಂಕೇತಗಳು (Medical Signs)

೮. ಗಣಿತದ ಚಿಹ್ನೆಗಳು (Mathematical Signs)

೯. ಸಂಗೀತದ ಚಿಹ್ನೆಗಳು (Musical Signs)

ಉದಾಹರಣೆಗೆ ಗಣಿತದ ಚಿಹ್ನೆಗಳು ಯಾವರೀತಿ ಇರುತ್ತದೆ ಎಂಬುದನ್ನು ಗಮನಿಸಲು ಇಲ್ಲಿ ಪಟ್ಟಿಕೊಟ್ಟಿದೆ. ಇಲ್ಲಿರುವ ಹಲವಾರು ಚಿಹ್ನೆಗಳನ್ನು ಬೇರೆ ಅರ್ಥದಲ್ಲಿ ಲೇಖನ ಚಿಹ್ನೆಗಳನ್ನಾಗಿ ಬಳಸುವುದನ್ನು ಕಾಣುತ್ತೇವೆ.

+ – X = ॥ - - - - ಇವೇ ಮುಂತಾದ ಚಿಹ್ನೆಗಳನ್ನು ಇತರ ಶಾಸ್ತ್ರಗಳಲ್ಲಿ ಬಳಸುವುದನ್ನು ಕಾಣಬಹುದು.

ಗಣಿತದ ಸಂಜ್ಞೆಗಳು (Mathematical Signs)

+	ಧನಚಿಹ್ನೆ (Plus)
–	ಋಣಚಿಹ್ನೆ (Minus)
±	ಧನ ಯಾ ಋಣಚಿಹ್ನೆ (Plus or Minus)
E	(ಜೊತೆ) Member or Set
=	ಸಮ (Equal)
≡	ಸರ್ವಸಮ (Equal in all respects)
‖	ಜೋಡಿಲಂಬರೇಖೆ (Parallel)
<	ಅದಕ್ಕಿಂತ ಇದು ಕಮ್ಮಿ (less than)
>	ಇದಕ್ಕಿಂತ ಅದು ಜಾಸ್ತಿ (greater than)
∴	ಆದ್ದರಿಂದ (therefore)
√	ಮೂಲ (Root)
▭	ಆಯಾಕಾರ (Rectangle)
○	ವೃತ್ತ (Circle)
□	ಚೌಕ (Square) ಇತ್ಯಾದಿ

ಛಂದಶ್ಶಾಸ್ತ್ರದ ಚಿಹ್ನೆಗಳು

∪ ಲಘು – ಗುರು S ಅವಗ್ರಹಚಿಹ್ನೆ I ಪೂರ್ವಾರ್ಧ ಚಿಹ್ನೆ II ಉತ್ತರಾರ್ಧಚಿಹ್ನೆ * ನಕ್ಷತ್ರ ಚಿಹ್ನೆ (ಅಡಿಟಿಪ್ಪಣಿ ವಿವರಣ ಚಿಹ್ನೆ :- ಗಣವಿಭಾಗದ ಚಿಹ್ನೆ ಇತ್ಯಾದಿ.

ಗ್ರಂಥಸಂಪಾದನಚಿಹ್ನೆಗಳು

ಗ್ರಂಥಸಂಪಾದನ ಶಾಸ್ತ್ರವನ್ನು ಇಂಗ್ಲಿಷ್‌ನಲ್ಲಿ Textual criticism ಎನ್ನುತ್ತಾರೆ. ಕನ್ನಡದಲ್ಲಿ ತಾಳೆಗರಿಗಳಲ್ಲಿರುವ ಮತ್ತು ಕಾಗದಪ್ರತಿಗಳಲ್ಲಿರುವ ಕಾವ್ಯ, ಶಾಸ್ತ್ರಗ್ರಂಥ ಗಳನ್ನು ಅಚ್ಚಿಗೆ ಸಿದ್ಧಪಡಿಸಲು ಅನುಸರಿಸಬೇಕಾದ ಕಾರ್ಯವಿಧಾನ, ನಿಯಮಗಳನ್ನು ತಿಳಿಸುವ ಶಾಸ್ತ್ರವೆಂದು ಸ್ಥೂಲವಾಗಿ ಹೇಳಬಹುದು. ಹೀಗೆ ಗ್ರಂಥಸಂಪಾದನೆ ಮಾಡುವಾಗ ಹಲವಾರು ಹಸ್ತಪ್ರತಿಗಳು ಒಂದೇ ಗ್ರಂಥದ ಬಗ್ಗೆ ಲಭ್ಯವಾದಾಗ ಅವುಗಳನ್ನು ಕ್ರೋಡೀಕರಿಸಿ ಶುದ್ಧಪಠ್ಯವನ್ನು ಸಿದ್ಧಪಡಿಸಲು ಅನೇಕ ಕಾರ್ಯಹಂತಗಳಿವೆ. ಇವುಗಳನ್ನು ಕುರಿತು ವಿಸ್ತಾರವಾಗಿ, ಶಾಸ್ತ್ರೀಯವಾಗಿ ಪ್ರತಿಪಾದಿಸಿ ಡಿಎಲ್‌ಎನ್, ಕಲ್ಬುರ್ಗಿ, ಜಾಗೀರ್‌ದಾರ್ ಮೊದಲಾದವರು ಶ್ರೇಷ್ಠ ಪಠ್ಯಗ್ರಂಥಗಳನ್ನೇ ರಚಿಸಿದ್ದಾರೆ. ಅವುಗಳಲ್ಲಿ ವಿವಿಧ ಲೇಖನಚಿಹ್ನೆಗಳ ಪ್ರಸ್ತಾಪವನ್ನು ಕಾಣಬಹುದು.

ಅರಿಸ್ಟಾರ್ಕಸ್ ಬಳಸಿದ ಪಾಠಾಂತರ ಚಿಹ್ನೆಗಳು

೧. ಪ್ರಕ್ಷಿಪ್ತ ಪಂಕ್ತಿಗಳು ತೋರಿಸುವುದು
(ಕಠಾರಿ ಗುರುತು) †

೨. ಭಾಷೆ ವಿಷಯಗಳಲ್ಲಿ ಗಮನಾರ್ಹ ಅಂಶ ತೋರಿಸುವುದು
(ಬಾಣದ ಗುರುತು) >

೩. ಇಬ್ಬರ ಭಿನ್ನಾಭಿಪ್ರಾಯ ಸಂಕೇತ
(ಬಾಣದ ಗುರುತು ಮತ್ತು ವಿವರಣಚಿಹ್ನೆ) >:

೪. ಅನ್ಯತ್ರ ತಪ್ಪಾಗಿ ಪುನರುಕ್ತವಾಗಿರುವ ಪಾಠಗಳು
(ನಕ್ಷತ್ರ ಚಿಹ್ನೆ) *

೫. ಪ್ರಕ್ಷಿಪ್ತವೆಂಬುದು ಸಂದಿಗ್ಧವಾದಾಗ ಸೂಚಿಸುವುದು
(ಸಿಗ್ಮ E ಗುರುತು)

೬. ಪಾದದಲ್ಲಿ ಪದಗಳ ಕ್ರಮಪಲ್ಲಟ
(ವಿಪರೀತ ಸಿಗ್ಮ Ǝ ಗುರುತು)

ಪಾಲ್‌ಮಾಸ್ ಬಳಸಿದ ಚಿಹ್ನೆಗಳು

೭. ಊಹೆಯಿಂದ ಸೇರಿಸಿದ್ದು
(ಬಾಣಾವರಣ ಚಿಹ್ನೆ) < >

೮. ಊಹೆಯಿಂದ ಬಿಟ್ಟಿದ್ದು
(ಪುಷ್ಪಾವರಣ ಚಿಹ್ನೆ) { }

೯. ತ್ರುಟಿತ ಭಾಗವನ್ನು ತುಂಬಿದ್ದು
(ಚೌಕಕಂಸ) [ ]

೧೦. ಚಿಕಿತ್ಸಾರಹಿತ ಅಪಪಾಠ
(ಕಠಾರಿ ಚಿಹ್ನೆ)

ತೀ.ನಂ.ಶ್ರೀ. ಬಳಸಿದ ಚಿಹ್ನೆಗಳು

೧೧. ಸಂಪಾದಕನು ಮೂಲ ಹೀಗಿರಬಹುದೆಂದು ಯಥಾಮತಿಯಾಗಿ ನಿಯೋಜಿಸಿರುವ
(ಚೌಕಾವರಣ) [ ]

೧೨. ಮೂಲವನ್ನು ತಿದ್ದುವುದು ಸಾಹಸವೆಂದು ತೋರಿದಾಗ ಸಂಪಾದಕೀಯ ಸೂಚನೆಗಳನ್ನು ಅಡಿಟಿಪ್ಪಣಿಯಲ್ಲಿ ಕಾಣಿಸಿರುವ ರೀತಿ.
(ಚೌಕಾವರಣ ಪ್ರಶ್ನಾರ್ಥಕ ಚಿಹ್ನೆಸಹಿತ) [ ] ?

೧೩. ಅರ್ಥಮೊದಲಾದವುಗಳಲ್ಲಿ ಸಂದೇಹವುಂಟೆಂದು ತೋರಿಸುತ್ತದೆ
(ಪ್ರಶ್ನಾರ್ಥಕ ಚಿಹ್ನೆ ಆವರಣ ಚಿಹ್ನೆಯಲ್ಲಿ) (?)

೧೪. ಮಾತೃಕೆಗಳಲ್ಲಿ ಗ್ರಂಥಪಾಠವನ್ನು ತೋರಿಸುವ ಚಿಹ್ನೆ
(ಮೂರು ಗುಣಕ ಚಿಹ್ನೆಗಳು) X X X

೧೫. ಅಡಿಟಿಪ್ಪಣಿಯ ಪಾಠಾಂತರಗಳಲ್ಲಿ ಹೀಗೆ ತೋರಿಸಿರುವ ಭಾಗ ಇದರ ಹಿಂದೆ ಕೊಟ್ಟಿರುವ ಪಾಠಾಂತರಭಾಗಕ್ಕೆ ಸಮಾನವಾಗಿರುವುದನ್ನು ತೋರಿಸುತ್ತದೆ.
(ಮೂರು ಚುಕ್ಕೆಗಳು) ...

೧೬. ಒಂದು ಶಬ್ದರೂಪದಿಂದ ಅದೇ ಶಬ್ದದ ಇನ್ನೊಂದು ರೂಪ ಬಂದಿದೆ ಎಂಬುದನ್ನು ತೋರಿಸುತ್ತದೆ
(ಮುಮ್ಮುಖ ಬಾಣಚಿಹ್ನೆ) >

೧೭. ಒಂದು ಶಬ್ದರೂಪಕ್ಕೆ ಅದರ ಇನ್ನೊಂದು ರೂಪ ಮೂಲವೆಂದು ಸೂಚಿಸುತ್ತದೆ.
(ಹಿಮ್ಮುಖ ಬಾಣ ಚಿಹ್ನೆ) <

೧೮. ಸಮಾಸಗಳ ಒಂದು ಭಾಗವನ್ನು ಪ್ರತ್ಯೇಕಿಸಿ ಟಿಪ್ಪಣಿಗಳಲ್ಲಿ ಉದ್ಧರಿಸುವುದನ್ನು ತೋರಿಸುವ ಚಿಹ್ನೆ
(ಬಿಂದು) o

೧೯. ಮಾತೃಕೆಗಳಲ್ಲಿ ದೊರೆಯುವ ಅಧಿಕಪಾಠವನ್ನು ತೋರಿಸುತ್ತವೆ
(ಕಠಾರಿ ಚಿಹ್ನೆ) †

೨೦. ಎರಡು ಮಾತೃಕೆಗಳ ಪಾಠಾಂತರಗಳಿಗೆ ಅಲ್ಪ ಭೇದವಿದ್ದರೆ ಪಾಠಾಂತರವನ್ನು ಒಂದೇ ಬಾರಿ ಕೊಟ್ಟು ಭೇದವನ್ನು ತೋರಿಸುವ ಚಿಹ್ನೆ
(ಉಭಯಮುಖ ಬಾಣ ಚಿಹ್ನೆ) < >

೨೧. ಎರಡು ಅಥವಾ ಹಲವು ಮಾತೃಕೆಗಳ ಪಾಠಾಂತರಗಳಿಂದ ಅಲ್ಪಭೇದವನ್ನು ಗಮನಿಸಿಲ್ಲ ಎಂಬುದನ್ನು ತೋರಿಸುತ್ತದೆ.
(ವಿವರಣ ವಿರಾಮಚಿಹ್ನೆ) :

೨೨. ಪಾಠಾಂತರಗಳಲ್ಲಿ ಹೀಗೆ ಸೂಚಿಸಿರುವ ಭಾಗ ಅಂಗೀಕೃತ ಮೂಲಪಾಠಕ್ಕೆ ಸಮಾನವಾಗಿರುವುದನ್ನು ತೋರಿಸುವುದು.
(ಮೂರು ಚಿಕ್ಕ ಅಡ್ಡಗೆರೆಗಳು) – – –

೨೩. ಮಾತೃಕೆಯಲ್ಲಿ ದೊರೆಯುವ ಅಧಿಕಭಾಗವನ್ನು ತೋರಿಸುವುದು.
(ಸಂಕಲನಚಿಹ್ನೆ) +

ಸಾಮಾನ್ಯ ಲೇಖನ ಚಿಹ್ನೆಗಳ ಪಟ್ಟಿ (Common Signs)

I. ಬಿಂದು ಚಿಹ್ನೆಗಳು

೧. ಪೂರ್ಣವಿರಾಮಚಿಹ್ನೆ • (ಚುಕ್ಕೆ, ಬಿಂದು) Full Stop, Period

೨. ಅಲ್ಪವಿರಾಮಚಿಹ್ನೆ , (ಚುಕ್ಕೆ ಬಾಲ) Comma

೩. ಅರ್ಧವಿರಾಮಚಿಹ್ನೆ ; (ಚುಕ್ಕೆ ಮತ್ತು ಚುಕ್ಕೆಬಾಲ ಮೇಲೆ ಕೆಳಗೆ) Semi - colon

೪. ವಿವರಣವಿರಾಮಚಿಹ್ನೆ : (ಚುಕ್ಕೆ ಒಂದರ ಕೆಳಗೆ ಒಂದು) Colon

೫. ಅಪೂರ್ಣ ವಿರಾಮಚಿಹ್ನೆ (...) (ಸಾಲು ಚುಕ್ಕೆ)
   i) ಅನುಕ್ತಪಠ್ಯ ಸೂಚಕ ಚಿಹ್ನೆ
   ii) ಮುಂದುವರಿಕೆ ಚಿಹ್ನೆ

II. ಉದ್ಧರಣಚಿಹ್ನೆಗಳು (Quotation Marks)

೬. ಉದ್ಧರಣ ಚಿಹ್ನೆಗಳು (' ' " ,,) Inverted commas, Quotation Marks.

i) ಒಂಟಿ ಉದ್ಧರಣ ಚಿಹ್ನೆ (Single inverted commas) (' ')

ii) ಜೋಡಿ ಉದ್ಧರಣ ಚಿಹ್ನೆ (Double inverted commas) (" ,,)

III. ಸೂಚಕಗಳು (Indicators)

೭. ಖಾಲಿಜಾಗ ಸೂಚಕಚಿಹ್ನೆ (...........) Filling the gap marks

೮. ಪ್ರಶ್ನಾರ್ಥಕಚಿಹ್ನೆ (?) ಕೊಡಲಿಚಿಹ್ನೆ ಕೆಳಗೆ ಚುಕ್ಕೆ Question mark ಪ್ರಶ್ನಚಿಹ್ನೆ Interrogative mark (?)

೯. ಆಶ್ಚರ್ಯಚಿಹ್ನೆ-ಭಾವಸೂಚಕ ಚಿಹ್ನೆ (!) ಉದ್ದಗೀಟು ಕೆಳಗೆ ಬಿಂದು ಉದ್ಗಾರಸೂಚಕ Exclamatery Mark

IV. ಗೆರೆಗಳು (Line marks)

೧೦. ಲಂಬಗೆರೆ I II

(ಉದ್ದನೇ ಗೀಟು, ದಂಡಾಕಾರಚಿಹ್ನೆ) Perpendicular sign

[ಏಕದಂಡ ಚಿಹ್ನೆ (I), ದ್ವಿದಂಡ ಚಿಹ್ನೆ (II)]

೧೧. ಓರೆಗೆರೆ (/) (ಬಲಕ್ಕೆ ಬಾಗಿದ ಲಂಬರೇಖೆ) Oblique

೧೨. ಚಿಕ್ಕ ಅಡ್ಡಗೆರೆ (-) (ಸಣ್ಣ ಅಡ್ಡಗೀಟು) ನಿರ್ದೇಶಕ ಚಿಹ್ನೆ, ಪೂರಕಾರ್ಥದ ಚಿಹ್ನೆ Hyphen

೧೩. ದೊಡ್ಡ ಅಡ್ಡಗೆರೆ (–) (ದೊಡ್ಡ ಅಡ್ಡಗೀಟು) Dash

೧೪. ಸಮಗೆರೆ ಚಿಹ್ನೆ (– = ≡ ಏಕಸಮಚಿಹ್ನೆ, ದ್ವಿಸಮಚಿಹ್ನೆ, ತ್ರಿಸಮಚಿಹ್ನೆ, ಸಮಾನಾರ್ಥಕ ಚಿಹ್ನೆ) (Equal Mark)

೧೫. ಅಡಿಗೆರೆ, ಸೂಚನೆ ಗೆರೆ, ಕೆಳಗೆರೆ Under line

V ಆವರಣ ಚಿಹ್ನೆಗಳು (Bracket Signs)

೧೬. ಕಂಸಾವರಣ ( ) ಸೊನ್ನೆಯ ಅರ್ಧಭಾಗಗಳು ಅರ್ಧವೃತ್ತಾವರಣ, ದುಂಡಾವರಣ Round Brackets

೧೭. ಚೌಕಾವರಣ [ ] ಬಾಹ್ಯಾವರಣ ಚಿಹ್ನೆ, ಚೌಕಕಂಸ, ಹೊರಾವರಣ ಚಿಹ್ನೆ Square Brackets

೧೮. ಪುಷ್ಪಾವರಣ { } ಹೂವಿನ ಪಕಳೆರೀತಿಚಿಹ್ನೆ Flower Brackets

೧೯. ಆವರಣಚಿಹ್ನೆ E Ǝ ಇಂಗ್ಲಿಷ್ ಆಕಾರದ ಚಿಹ್ನೆ ಇ-ಕಂಸಚಿಹ್ನೆ

VI. ಮುಖ್ಯಾಂಶಚಿಹ್ನೆಗಳು (Summary Signs)

೨೦. ಚೌಕಳಿಚಿಹ್ನೆ □ Square Mark

೨೧. ದಟ್ಟ ತ್ರಿಭುಜ ಚಿಹ್ನೆ ▲ Triangle Signs

ಉಲ್ಟಾ ದಟ್ಟ ತ್ರಿಭುಜ ಚಿಹ್ನೆ ▼ Inverted Triangle Signs

೨೨. ದಪ್ಪ ವೃತ್ತಚಿಹ್ನೆ ● Thick Zero Sign

VII. ಅಡಿಟಿಪ್ಪಣಿಗಳು (Foot note Signs)

೨೩. + ಕಠಾರಿ ಚಿಹ್ನೆ Dagger Mark ಮತ್ತು + + or ಇಕ್ಕಟಾರಿ ಚಿಹ್ನೆ Double dagger mark

೨೪. ನಕ್ಷತ್ರಚಿಹ್ನೆ * ಶಿಥಿಲದ್ವಿತ್ವಚಿಹ್ನೆ Star Mark

VIII. ವಿಶೇಷ ಚಿಹ್ನೆಗಳು (Special Signs)

೨೫. ಕಾಕಪಾದಚಿಹ್ನೆ (ಹಂಸಪಾದಚಿಹ್ನೆ, ಅಧ್ಯಾಹಾರಚಿಹ್ನೆ) ︿ Caret

೨೬. ಅವಗ್ರಹಚಿಹ್ನೆ ಪ್ಲುತಚಿಹ್ನೆ = Elongated vowel mark (ಇಂಗ್ಲಿಷ್ S ಅಕ್ಷರಾಕಾರ) S

೨೭. ಧಾತುರೂಪಚಿಹ್ನೆ √ Square root mark

೨೮. ಬಾಣಚಿಹ್ನೆ < > → Arrow mark

೨೯. ಪುನರಾವರ್ತನೆ ಚಿಹ್ನೆ (--,,--) Ditto mark

೩೦. ವಿರುದ್ಧಾರ್ಥ ಚಿಹ್ನೆ (X) ಗುಣಕ ಚಿಹ್ನೆ ವಿಮುಖಚಿಹ್ನೆ Mark of Opposition

೩೧. ವಜ್ರಾಕಾರಚಿಹ್ನೆ ◆ Diamond Mark

ಲೇಖನ ಚಿಹ್ನೆಗಳ ವಿವರಣೆಗಳು

೧. ಪೂರ್ಣವಿರಾಮ ಚಿಹ್ನೆ (Period, Fullstop) ವಾಕ್ಯಾಂತ ಚಿಹ್ನೆ, ಬಿಂದುಚಿಹ್ನೆ

'ಪೂರ್ಣವಿರಾಮ' ಎಂದರೇನು ಎಂಬುದನ್ನು ಹೊಸಗನ್ನಡ ವ್ಯಾಕರಣಕಾರರು ಹಲವು ಬಗೆಗಳಲ್ಲಿ ಹೇಳಿದ್ದಾರೆ.

೧. **ಪೂರ್ಣವಿರಾಮಚಿಹ್ನೆ ಎಂದರೆ 'ಅರ್ಥಪೂರ್ಣ ವಾಕ್ಯದ ಕೊನೆಯನ್ನು ಸೂಚಿಸಲು ಬಳಸುವ ಚಿಹ್ನೆ'.**

ಪೂರ್ಣ ವಿರಾಮದ ನಂತರ ಮುಂದಿನ ವಾಕ್ಯ ಅಥವಾ ಪದವನ್ನು ಎರಡು ಅಕ್ಷರಗಳ ಅಂತರವನ್ನು ಬಿಟ್ಟು ಪ್ರಾರಂಭಿಸಬೇಕು.

೨. ಪ್ರಶ್ನೆಯನ್ನೂ ಭಾವವನ್ನೂ ಸೂಚಿಸುವ ವಾಕ್ಯಗಳನ್ನು ಬಿಟ್ಟು ಉಳಿದ ವಾಕ್ಯಗಳ ಕೊನೆಯಲ್ಲಿ ಬಳಸಬೇಕು.

೩. ಪೂರ್ಣಕ್ರಿಯಾಪದದಿಂದ ಕೂಡಿದ ವಾಕ್ಯದ ಕೊನೆಗೆ ಬರುವ ಚಿಹ್ನೆ
ಉದಾ: ಭರತದೇಶದಲ್ಲಿ ಶಂತನುವೆಂಬ ಪ್ರಸಿದ್ಧರಾಜನಿದ್ದನು.

೪. ಸಾಮಾನ್ಯವಾಗಿ ಇದು ವಾಕ್ಯದ ಕೊನೆಗೆ ಬಂದು ವಾಕ್ಯ ಪೂರ್ಣಗೊಂಡುದನ್ನು ಸೂಚಿಸುತ್ತದೆ.
ಉದಾ: ಮಕ್ಕಳು ಶಾಲೆಗೆ ಹೋದರು.

೫. ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಬರುವ ಚಿಹ್ನೆ

೬. ವಾಕ್ಯ ಪೂರ್ಣಗೊಂಡಿರುವುದಕ್ಕೆ ಸೂಚಕವಾದ ಚಿಹ್ನೆ
ಉದಾ: ಸೌಮ್ಯ ನಿನ್ನೆ ಬಂದಳು.

(ಕನ್ನಡ ವ್ಯಾಕರಣ ಪ್ರವೇಶ, ಪುಟ 98)

೭. ಸಂಪೂರ್ಣ ಅರ್ಥವನ್ನು ಕೊಡುವ ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯ ಮುಗಿದಿದೆ ಎನ್ನುವುದನ್ನು ಸೂಚಿಸುವಾಗ ಈ ಚಿಹ್ನೆಯನ್ನು (.) ಬಳಸಲಾಗುತ್ತದೆ.
ಉದಾ : ಮಗು ಊಟಮಾಡಿ ಮಲಗಿತು.

(ಕನ್ನಡ ವ್ಯಾಕರಣ ಕೈಪಿಡಿ, ಪುಟ 182)

೮. "ಮಾತುಗಳ ವ್ಯವಸ್ಥಿತ ರೂಪವೆ ವಾಕ್ಯ. ಈ ವಾಕ್ಯವು ಯಾ ಮಾತು ಪೂರ್ಣವಾದುದನ್ನು ಸೂಚಿಸಲು ಈ ಚಿಹ್ನೆಯನ್ನು ಬಳಸಲಾಗುತ್ತದೆ. ಇಲ್ಲಿ 'ಪೂರ್ಣ ವಿರಾಮ' ಎಂದರೆ ಪೂರ್ಣವಾಗಿ ನಿಲ್ಲಿಸುವದೆಂಬ ಅರ್ಥವಲ್ಲ.

ಓದುವಾಗ ಅರ್ಧವಿರಾಮ ಅಲ್ಪವಿರಾಮಕ್ಕೆ ಅನುಗುಣವಾಗಿ ನಿಲ್ಲಿಸುವಂತೆ ಪೂರ್ಣವಿರಾಮದಲ್ಲಿಯೂ ನಿಲ್ಲಿಸಿ ಮುಂದಿನ ವಾಕ್ಯಕ್ಕೆ ಬರಬೇಕಾಗುತ್ತದೆ. ಇದನ್ನು ವಾಕ್ಯದ ಕೊನೆಯ ಪದ ಬಲಪಕ್ಕದ ಕೆಳಭಾಗದಲ್ಲಿ ಒಂದು ಬಿಂದುವಿನ ಗುರುತಿನ ಮೂಲಕ ಸೂಚಿಸಲಾಗುತ್ತದೆ.

ಒಂದು ವಾಕ್ಯದ.ಮುಕ್ತಾಯವನ್ನು ಸೂಚಿಸಿ ಅಲ್ಲಿಯ ವಿರಾಮವನ್ನು ಸೂಚಿಸಲು ಬಳಕೆಯಾಗುವ ಚಿಹ್ನೆಗೆ ಪೂರ್ಣವಿರಾಮ ಚಿಹ್ನೆ ಎಂದು ಹೆಸರು.

(ಸಿರಿಗನ್ನಡಗನ್ನಡಿ, ಪುಟ 366)

ಪೂರ್ಣವಿರಾಮಗಳನ್ನು ಬಳಸಬೇಕಾದ ಸಂದರ್ಭಗಳು

1. **ಸಂಪೂರ್ಣ ಅರ್ಥ ಕೊಡುವ ವಾಕ್ಯದ ಕೊನೆಯಲ್ಲಿ ಪೂರ್ಣವಿರಾಮ ಇರಬೇಕು.**
(ಕನ್ನಡದ ಕೈಬರವಣಿಗೆ, ಪುಟ 55)
ಉದಾ: ರಕ್ತವು ದ್ರವರೂಪದ ಅಂಗಾಂಶ.

2. **ಹೆಸರುಗಳಲ್ಲಿರುವ (ಇನ್ಶಿಯಲ್ಸ್) ಆದ್ಯಕ್ಷರಗಳಿಗೆ ಪೂರ್ಣವಿರಾಮಚಿಹ್ನೆ ಬಳಸಬೇಕು.**
ಉದಾ: ಜಿ. ಅಶ್ವತ್ಥನಾರಾಯಣ, ಡಿ.ಆರ್. ಬೇಂದ್ರೆ ಇತ್ಯಾದಿ.

3. **ಸಂಕ್ಷಿಪ್ತಾಕ್ಷರ ಅಥವಾ ಸಂಕೇತಾಕ್ಷರಗಳ ಕೊನೆಯಲ್ಲಿ ಪೂರ್ಣವಿರಾಮಚಿಹ್ನೆ ಬಳಸಬೇಕು.**
ಉದಾ: ಕ್ರಿ.ಶ. ಕ್ರಿ.ಪೂ. ಪು.ತಿ.ನ. ಕು.ವೆಂ.ಪು.

4. **ಪದವಿಗಳ ಹೆಸರುಗಳನ್ನು ಸಂಕ್ಷಿಪ್ತಾಕ್ಷರಗಳಲ್ಲಿ ಸೂಚಿಸುವಾಗ ಪೂರ್ಣವಿರಾಮದ ನಂತರ ಅಲ್ಪವಿರಾಮವನ್ನು ಬಳಸಬೇಕು.**
ಉದಾ: ಎಂ.ಎ., ಪಿಎಚ್.ಡಿ.,
ಪೂರ್ಣವಿರಾಮವನ್ನು ಬಳಸದಿದ್ದಾಗ ಈ ಮಾದರಿಯನ್ನು ಅನುಸರಿಸಬಹುದು.
ಎಂಎ. ಪಿಎಚ್‌ಡಿ.
(ಕನ್ನಡ ಶೈಲಿ ಕೈಪಿಡಿ, ಪುಟ 235)

5. **ದೀರ್ಘವಾದ ವಾಕ್ಯವೊಂದರಲ್ಲಿ ಸಂಕೀರ್ಣವಾಕ್ಯದಲ್ಲಿ ಹಲವಾರು ವಿವರಗಳ ಅಪೂರ್ಣವಾಕ್ಯಗಳು ಒಂದೇ ವಾಕ್ಯದ ಭಾಗಗಳಾಗಿ ಮುಂದುವರೆಯುವಂತಿದ್ದರೆ, ಅವುಗಳ ಕೊನೆಯಲ್ಲಿ ಅಲ್ಪವಿರಾಮವನ್ನು ಬಳಸಿ, ಕೊನೆಯ ವಿವರದನಂತರ ಪೂರ್ಣವಿರಾಮವನ್ನು ಬಳಸಬೇಕು.**
ಉದಾ 2: ಭಾರತದಲ್ಲಿ ಅಭಿವೃದ್ಧಿ ವೈಫಲ್ಯಕ್ಕೆ ಹಲವಾರು ಕಾರಣಗಳಿವೆ : ಅನಕ್ಷರತೆ, ಜನಸಂಖ್ಯೆಯ ಸ್ಫೋಟ, ಸಾರ್ವತ್ರಿಕ ಅಪ್ರಾಮಾಣಿಕತೆ, ಭ್ರಷ್ಟಾಚಾರ ಇತ್ಯಾದಿ.
(ಕನ್ನಡ ಶೈಲಿ ಕೈಪಿಡಿ, ಪುಟ 27)

6. **ವಾಕ್ಯವೊಂದರ ನಡುವೆ ಆವರಣದೊಳಗೆ ಇನ್ನೊಂದು ಪೂರ್ಣವಾಕ್ಯ ಬಳಸಿದಾಗ, ಆ ವಾಕ್ಯಕ್ಕೆ ಪೂರ್ಣವಿರಾಮ ಚಿಹ್ನೆ ಬರುತ್ತದೆ. ಆದರೆ ಆವರಣದಲ್ಲಿ ಪದಗಳಿದ್ದಾಗ ಬರುವುದಿಲ್ಲ.**
ಆಕೆ ತೂಗಲಿಟ್ಟು ಬಾಗಲಾಡುತ್ತಾಳೆ (ಮೇಲೆ ಮೇಲೆ ಬಳುಕುತ್ತಾಳೆ.) ತಾತನಾದ (ತಾಯಿಯ ತಂದೆ) 'ಕವಿಸುಮನೋಬಾಣ' ಎಂಬುವನು ಮಹಾವಿದ್ವಾಂಸ.

7. **ವಿಷಯಸೂಚಿ ಇತ್ಯಾದಿ ಕಡೆಗಳಲ್ಲಿ ಕ್ರಮಸಂಖ್ಯೆ ಕೊಟ್ಟಾಗ ಅವುಗಳಿಗೆ ಪೂರ್ಣವಿರಾಮಚಿಹ್ನೆ ಬಳಸಲಾಗುತ್ತದೆ.**

ಉದಾ 1. ವಿವರಗಳನ್ನು (ಅಧ್ಯಾಯ, ಉಪ ಅಧ್ಯಾಯಗಳನ್ನು ಸೂಚಿಸುವಾಗ ಕೊನೆಯ ಅಂಕಿಗೆ ಪೂರ್ಣವಿರಾಮ ಇರದು)

ಸಂಕೇತಗಳ ನೆಲೆಗಳು.

0.0 – 1 0.0 – 2 0.0 – 3 ಇತ್ಯಾದಿ.

8. **ಆವರಣದಲ್ಲಿ ಅಂಕಿ ಅಥವಾ ಅಕ್ಷರಗಳನ್ನು ಸೂಚಿಸುವಾಗ ಪೂರ್ಣವಿರಾಮ ಬೇಕಿಲ್ಲ.**

(ಅ) (ಆ) (ಇ) ನಿಯಮಗಳನ್ನು ನೋಡಿ.

(ಅ.) (ಆ.) (ಇ.) ಈ ರೀತಿ ಬರೆಯಬೇಕಿಲ್ಲ.

9. **ವಿಭಾಗ, ಉಪವಿಭಾಗ, ಉಪವಿಭಾಗದ ಭಾಗಗಳನ್ನು ಸಂಖ್ಯೆಯಲ್ಲಿ ಸೂಚಿಸುವಾಗ ಉಪಭಾಗದ ಭಾಗಗಳಿಗೆ ಆವರಣಚಿಹ್ನೆ ಇರುವುದರಿಂದ ಅದಕ್ಕೆ ಬೇಡ. ಆದರೆ ಮೊದಲೆರಡು ವಿಭಾಗಗಳಿಗೆ ಪೂರ್ಣವಿರಾಮ ಬಳಸಬೇಕು.**

ಉದಾ: ಅ. 1. (1) 2. (2) 3. (ಇ)

10. **ಕನ್ನಡ ನಿಘಂಟಿನಲ್ಲಿ (ಕಸಾಪ) ಪೂರ್ಣವಿರಾಮಚಿಹ್ನೆಗಳನ್ನು ವಿಶೇಷರೀತಿಯಲ್ಲಿ ಬಳಸಿದೆ.**

(ಅ) ಮುಖ್ಯ ಉಲ್ಲೇಖಗಳ ವಾಚಕನಿರ್ದೇಶಕವಾದನಂತರ

ಉದಾ: ಅಂಟರಳೆ (ನಾ) - ಅಂಟವಾಳ.

ಅಂಟಿಕ್ಕು (ಕ್ರಿ). ಅಂಟಿಸು.

(ಆ) 'ನೋ' (ನೋಡಿ). 'ಪರಾ' (ಪರಾಮರ್ಶಿಸು). 'ಹೋ' (ಹೋಲಿಸು). ಮುಂತಾದ ಸಂಕೇತಾಕ್ಷರಗಳ ಮುಂದೆ -

ಅಟ್ಟ (ಗು). ಒತ್ತಾದ (?). 'ಅಟ್ಟಾಗು' ಪರಾ. ಹೋ. ಅಚ್ಚುಬೆಲ್ಲ (ನಾ). ಉಂಡೆಬೆಲ್ಲ

(ಇ) ಉದ್ಧರಿಸಿದ ಅಕ್ಷರಗಳ ಸಂಕೇತಾಕ್ಷರಗಳ ಮುಂದೆ ಮತ್ತು ಅಧ್ಯಾಯಸಂಖ್ಯೆ ಪದ್ಯಸಂಖ್ಯೆ ನಂತರ ಬಳಕೆ ಆಗುತ್ತದೆ.

ಪಂಪ ಭಾ. ೭-೯೪. ವ. ವಡ್ಡಾ - ಪು ೪೭-೬.

೨. ಅಲ್ಪವಿರಾಮಚಿಹ್ನೆ (ಚುಕ್ಕೆಬಾಲ ಚಿಹ್ನೆ)

ಅಲ್ಪವಿರಾಮ ಚಿಹ್ನೆಯನ್ನು ಕುರಿತು ಹೊಸಗನ್ನಡ ವ್ಯಾಕರಣಗಳ ವ್ಯಾಖ್ಯೆಗಳು ಹೀಗಿವೆ.

(ಅ) 'ಸಂಬೋಧನೆಯ ಮುಂದೆ ಅನೇಕ ಬೇರೆ ಬೇರೆ ವಿಶೇಷಣಗಳು ಕರ್ತೃಪದಕ್ಕಾಗಲಿ, ಕರ್ಮಪದಕ್ಕಾಗಲಿ, ಕ್ರಿಯಾಪದಕ್ಕಾಗಲಿ, ವಿಶೇಷಣಗಳಾಗಿದ್ದಾಗ ಕೊನೆಯ ವಿಶೇಷಣವನ್ನುಳಿದು ಉಳಿದವುಗಳ ಮುಂದೆ ಅಲ್ಪವಿರಾಮ ಚಿಹ್ನೆ ಬರೆಯಬೇಕು. ಅನೇಕ ಕರ್ತೃಗಳು ಅಥವಾ ಕರ್ಮಗಳು ಬಂದಾಗ, ಕೊನೆಯದನ್ನುಳಿದು ಉಳಿದವುಗಳ ಮುಂದೆ ಅಲ್ಪವಿರಾಮ ಬರೆಯಬೇಕು. ಇವು ಮುಖ್ಯವಾಗಿ ಅಲ್ಪ ವಿರಾಮ ಬರುವ ಸ್ಥಳಗಳು"

(ಕನ್ನಡ ವ್ಯಾಕರಣ ದರ್ಪಣ, ಪುಟ ೨೯೨)

(ಆ) "ಮಾತಿನಲ್ಲಿ ಧ್ವನಿವಿರಾಮ ಇರುವ ಕಡೆ, ವಾಕ್ಯಗಳಲ್ಲಿ ಅರ್ಥಸ್ಪಷ್ಟತೆಗಾಗಿ ದೀರ್ಘವಾಕ್ಯಗಳಲ್ಲಿ ಅರ್ಥಸಂದಿಗ್ಧತೆಯನ್ನು ಹೋಗಲಾಡಿಸಲು ಮತ್ತು ಓದುಗರ ದೃಷ್ಟಿಯಿಂದ ಅರ್ಥಗ್ರಹಣದ ಕೊರತೆ ಕಂಡುಬರುವಲ್ಲಿ ಅಲ್ಪವಿರಾಮದ ಅಗತ್ಯವಿದೆ.

ಅಲ್ಪವಿರಾಮದ ಅನಂತರ ಮುಂದಿನ ಪದ ಅಥವಾ ವಾಕ್ಯಾಂಶ clause ಅನ್ನು ಒಂದು ಅಕ್ಷರದ ಅಂತರ ಬಿಟ್ಟು ಪ್ರಾರಂಭಿಸಬೇಕು.

(ಕನ್ನಡ ಶೈಲಿ ಕೈಪಿಡಿ, ಪುಟ ೧೭)

(ಇ) ವಾಕ್ಯದಲ್ಲಿ ಹೇಳಹೊರಟ ವಿಷಯ ವಿಂಗಡಣೆಗೆ ಅವಶ್ಯವಾದ ಚಿಹ್ನೆ (,)

(ಕನ್ನಡ ಕೈಪಿಡಿ, ಪುಟ ೯೯)

(ಉ) ಅಲ್ಪ ಎಂದರೆ ಸ್ವಲ್ಪ; ವಿರಾಮ ಎಂದರೆ ಬಿಡುವು / ನಿಲುಗಡೆ ಎಂದರ್ಥ. ಮಾತುಗಳಲ್ಲಿ / ಓದುವಾಗ ಬಿಡದೆ ನಿಯತವಾಗಿ ಸಾಗದೆ ಸ್ವಲ್ಪ ನಿಲ್ಲಿಸುವುದು ಎಂಬುದು ಅರ್ಥ. ಓದುವಾಗ ಸ್ವಲ್ಪ ಪ್ರಮಾಣದ ನಿಲುಗಡೆಯನ್ನು ಸೂಚಿಸುವುದಕ್ಕಾಗಿ ಬಳಸುವ ಚಿಹ್ನೆಗೆ ಅಲ್ಪವಿರಾಮ ಚಿಹ್ನೆ ಎಂದು ಹೆಸರು.

(ಸಿರಿಗನ್ನಡಗನ್ನಡಿ, ಪುಟ 364)

(ಊ) "ಈ ಲೇಖನಚಿಹ್ನೆಯನ್ನು ಕನ್ನಡದ ಬರವಣಿಗೆಯಲ್ಲಿ ವಿಶೇಷವಾಗಿ ಬಳಸುತ್ತೇವೆ. ಇದು ಅತಿಮುಖ್ಯವಾದ ಚಿಹ್ನೆ. ಓದುವಾಗ, ಬರೆಯುವಾಗ ಅತ್ಯಲ್ಪಕಾಲ ವಿರಮಿಸಬೇಕಾದ ಸ್ಥಳಗಳಲ್ಲಿ ಅಲ್ಪವಿರಾಮದ ಚಿಹ್ನೆಯನ್ನು ಬಳಸುತ್ತೇವೆ.

(ಕನ್ನಡ ಕೈಬರವಣಿಗೆ, ಪುಟ 52)

ಅಲ್ಪವಿರಾಮಚಿಹ್ನೆ ಬಳಸಬೇಕಾದ ಸಂದರ್ಭಗಳು

1. **"ವಾಕ್ಯದಲ್ಲಿ ಒಂದಕ್ಕಿಂತ ಹೆಚ್ಚು ವಿಶೇಷಣಗಳು ಕ್ರಮವಾಗಿ ಬಂದಾಗ, ಕೊನೆಯ ವಿಶೇಷಣವನ್ನುಳಿದು (ಬಿಟ್ಟು) ಮಿಕ್ಕ ಪ್ರತಿಯೊಂದು ವಿಶೇಷಣ ಪದಗಳ ಅಂತ್ಯದಲ್ಲಿ ಈ ಚಿಹ್ನೆಯನ್ನು ಉಪಯೋಗಿಸುತ್ತೇವೆ.**

   ಉದಾ: ಇಂದು ಬೆಂಗಳೂರು ನಗರದ, ಚಾಮರಾಜಪೇಟೆ, ಶಂಕರಪುರಂ, ಬಸವನಗುಡಿ, ಜಯನಗರ ಬಡಾವಣೆಗಳಿಗೆ ಬೆಳಿಗ್ಗೆ 6 ರಿಂದ ಸಂಜೆ 6ರ ವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

2. **ಸಂಬೋಧನೆಯ ಪದದ ಅನಂತರ ಅಲ್ಪವಿರಾಮಚಿಹ್ನೆ ಬಳಸುತ್ತೇವೆ.**

   ಮಹನೀಯರೇ, ಮಹಿಳೆಯರೇ, ನಿಮಗೆಲ್ಲಾ ಉಗಾದಿಯ ಶುಭಾಶಯಗಳು.

   ಸಭಿಕರೇ, ದಯವಿಟ್ಟು ಶಾಂತವಾಗಿರಿ.

3. **"ಸಂಬಂಧ ಸೂಚಕಾವ್ಯದಿಂದ ಕೂಡಿದ ಪದಯುಗ್ಮಗಳು ಹಲವು ಬಂದಾಗ, ಅವನ್ನು ಪ್ರತ್ಯೇಕಿಸುವುದು.**

   ಉದಾ : ಆನೆ ಮತ್ತು ಕುದುರೆಗಳು, ತೇರು ಮತ್ತು ಕಾಲಾಳುಗಳು, ಕೂಡಿಯೇ ಚತುರಂಗಬಲವಾಗುವುದು.

4. **'ಊ' ಸಮುಚ್ಚಯವನ್ನು ಬಳಸಿದರೆ ಅಲ್ಪವಿರಾಮ ಚಿಹ್ನೆ ಅನಗತ್ಯ.**

   ಉದಾ: ಆನೆಕುದುರೆಗಳೂ ತೇರುಕಾಲಾಳುಗಳೂ ಕೂಡಿಯೇ ಚತುರಂಗ ಬಲವಾಗುವುದು.

5. **"ವಾಕ್ಯದ ಅರ್ಥ ಹಾಗೂ ರೂಪಗಳ ಸಮಗ್ರತೆಗೆ ಚ್ಯುತಿಬಾರದ ಹಾಗೆ ನಡುವೆ ಸೇರಿಸಿಕೊಳ್ಳಬಹುದಾದ ಕೆಲವು ಶಬ್ದ ಅಥವಾ ವಾಕ್ಯಾಂಶಗಳನ್ನು ಪ್ರತ್ಯೇಕಿಸಿ ತೋರಿಸುವುದು.**

   ಉದಾ 1 : ನಮ್ಮ ಮನೆಯ ಪರಿಸ್ಥಿತಿ, ಹೆಚ್ಚು ಹೇಳುವುದೇನು, ಸ್ವಲ್ಪವೂ ಉತ್ತಮವಾಗಿರಲಿಲ್ಲ.

   ಉದಾ 2 : ನಾನು 'ಕಳ್ಳ ಕಳ್ಳ' ಎಂದು ಕೂಗಿಕೊಂಡಾಗ, ಇನ್ನೇನೂ ಬೇಡ, ಒಬ್ಬನಾದರೂ 'ಓ' ಎನ್ನಲಿಲ್ಲ.

6. **ಒಂದು ಕ್ರಿಯೆಗೆ ಅನೇಕ ಕರ್ತೃಪದಗಳು ಇದ್ದಾಗ ಪ್ರತಿನಾಮಪದದ ನಂತರವೂ ಅಲ್ಪವಿರಾಮ ಚಿಹ್ನೆಯನ್ನು ಬಳಸಬೇಕು. ಆದರೆ ಕೊನೆಯ ನಾಮಪದಕ್ಕೆ ಬಳಸಬೇಕಿಲ್ಲ.**

ಉದಾ: ನಿನ್ನೆಯ ಸಭೆಗೆ ಸಾಹಿತಿಗಳು, ಕಲಾವಿದರು, ಗಣ್ಯರು, ಶ್ರೀಮಂತರು ಅಪಾರಸಂಖ್ಯೆಯಲ್ಲಿ ಸೇರಿದ್ದರು.

ಉದಾ: ಕನ್ನಡ, ತೆಲುಗು, ತಮಿಳು, ಮಲೆಯಾಳಂ ಮೊದಲಾದ ಭಾಷೆಗಳೂ ದ್ರಾವಿಡ ಭಾಷಾವರ್ಗಕ್ಕೆ ಸೇರಿವೆ.

7. **ಆಗಿ, ಆಗಲು, ಆದರೆ, ಆದ್ದರಿಂದ, ಆದಕಾರಣ, ಆದಮೇಲೆ ಎಂಬ ಸಾಪೇಕ್ಷಕ್ರಿಯಾಪದಗಳು ಬಂದಾಗ ಅಲ್ಪವಿರಾಮ ಬಳಸಬೇಕು.**

ಸದಾ ಸೋಮಾರಿ ಆಗಿ, ಕಾಲ ಕಳೆಯುವುದಾದರೆ, ಸಾಧಿಸುವುದು ಏನಿದೆ?

ನಾಳೆ ರಾಮರಾಯರು ಕಚೇರಿಗೆ ಬರುವುದಿಲ್ಲ; ಆದಕಾರಣ, ನಿಮಗೆ ರಜಾ ಕೊಡಲಾಗದು.

ಲಕ್ಷ್ಮಿ ನಿನ್ನ ಜೊತೆಗೆ ಹೋಗುವುದಾದರೆ, ನನಗೆ ಚಿಂತೆಯಿಲ್ಲ.

8. **ಸಂಕ್ಷೇಪಗಳನ್ನು ಬಳಸಿದಾಗ ಅಲ್ಪವಿರಾಮಚಿಹ್ನೆಯನ್ನು ಪ್ರತಿ ಸಂಕ್ಷೇಪದ ನಂತರ ಬಳಸಬೇಕು.**

ನಿತ್ಯವಾಣಿ ಉಪಸಂಪಾದಕರ ಹುದ್ದೆಗೆ ಎಂ.ಎ., ಬಿ.ಎಡ್., ಡಿಪ್.ಇನ್ ಇಡಿ ಅಥವಾ ಎಂ.ಎಸ್ಸಿ ಮಾಡಿದವರು ಅರ್ಜಿ ಗುಜರಾಯಿಸಬಹುದು.

ಕು.ವೆಂ.ಪು., ಡಿ.ಎಲ್.ಎನ್., ಕ.ವೆಂ.ರಾ., ವಿದ್ವಾಂಸರು ಬರೆದಂಥ ಗ್ರಂಥಗಳನ್ನು ಎಲ್ಲರೂ ಓದಲೇಬೇಕು.

9. **ಉದ್ಧೃತ ಭಾಗಗಳು ಮೊದಲಿಗೆ ಬರುವ ನಾಮಪದಕ್ಕೆ ಅಲ್ಪವಿರಾಮ ಚಿಹ್ನೆ ಬಳಸಬೇಕು.**

ಉದಾ: ಆಗ ನರಹರಿ, "ಕಾಪಾಡಿ, ಕಾಪಾಡಿ! ಶತ್ರುಗಳು ಅಟ್ಟಿಸಿಕೊಂಡು ಬರುತ್ತಿದ್ದಾರೆ" ಎಂದು ಕೂಗಿಕೊಂಡನು.

೧೦. **ಅಲ್ಪವಿರಾಮಚಿಹ್ನೆಯನ್ನು ಗಣಿತದಲ್ಲಿ ಅಂಕಿಗಳನ್ನು ಬಳಸುವಾಗ ಸ್ಥಾನದ ಬೆಲೆ ಸೂಚಕವಾಗಿ ಸಾವಿರ, ಹತ್ತುಸಾವಿರ, ಲಕ್ಷ, ಹತ್ತು ಲಕ್ಷ ಇತ್ಯಾದಿ ಅಂಕಿಗಳಿಗೆ ಅಲ್ಪವಿರಾಮಚಿಹ್ನೆ ಬಳಸಲಾಗುತ್ತದೆ.**

ಉದಾ : ೪,೮೬೪ (ನಾಲ್ಕುಸಾವಿರದ ಎಂಟುನೂರ ಅರವತ್ತನಾಲ್ಕು)

೧೦,೯೦೦ (ಹತ್ತುಸಾವಿರದ ಒಂಬೈನೂರು)

೧,೮೦,೦೨೧ (ಒಂದುಲಕ್ಷದ ಎಂಬತ್ತುಸಾವಿರದ ಇಪ್ಪತ್ತೊಂದು)

೩೪,೦೦,೦೬೦ (ಮೂವತ್ತುನಾಲ್ಕುಲಕ್ಷದ ಅರವತ್ತು)

ಸಾವಿರ, ಲಕ್ಷ, ಹತ್ತು ಲಕ್ಷದ ಸ್ಥಾನದ ಸಂಖ್ಯೆಗಳಿಗೆ ಅಂಕಿಗಳಿಗೆ, ಚಿಹ್ನೆ ಹಾಕುತ್ತೇವೆ ಆದರೆ ಆ ಮೊತ್ತವನ್ನು ಅಕ್ಷರಗಳಲ್ಲಿ ಬರೆವಾಗ ಷಷ್ಠಿ ವಿಭಕ್ತಿಯ ಪ್ರತ್ಯಯವನ್ನು ಚಿಹ್ನೆಗೆ ಬದಲಾಗಿ ಬಳಸುತ್ತೇವೆ.

೧೧. ದಿನಾಂಕಗಳನ್ನು ನಮೂದಿಸುವಾಗ, ಚಿಹ್ನೆ ಬಳಕೆ ಆಗುತ್ತದೆ.
ಉದಾ: ಆಗಸ್ಟ್ ೧೫, ೧೯೪೭ ಭಾರತಕ್ಕೆ ಸ್ವಾತಂತ್ರ್ಯ ದೊರಕಿತು.

<u>೩. ಅರ್ಧವಿರಾಮ ಚಿಹ್ನೆ ; (ಚುಕ್ಕಿ ಕೆಳಗೆ ಅಲ್ಪವಿರಾಮ ಚಿಹ್ನೆ) Semi-colon ಉಪವಾಕ್ಯ ಚಿಹ್ನೆ, ಬಿಂದುದ್ವಯಕಲ್ಪ ಚಿಹ್ನೆ</u>

೧. "ಇದು ಒಂದು ಬಗೆಯ ಹಗುರವಾದ ಪೂರ್ಣ ವಿರಾಮವೇ. ಅದಕ್ಕಿಂತ, ವಿವರಣವಿರಾಮಕ್ಕಿಂತ ಅಲ್ಪಬಲವುಳ್ಳದ್ದು; ಅಲ್ಪವಿರಾಮಕ್ಕಿಂತ ಅಧಿಕ ಬಲವುಳ್ಳದ್ದು. ಅಲ್ಪವಿರಾಮಕ್ಕಿಂತ, ಹೆಚ್ಚು ವಿರಾಮದ ಅಗತ್ಯವಿದ್ದಲ್ಲಿ ಇದನ್ನು ಬಳಸಲಾಗುತ್ತದೆ."

(ಟಿ.ವಿ.ವೆಂ. - ಹೊ.ಗ. ವ್ಯಾಕರಣ, ಪುಟ ೧೬೫)

೨. ಒಂದು ವಿಚಾರದ ಅಭಿವ್ಯಕ್ತಿಯಲ್ಲಿ ಪರಸ್ಪರ ಸಂಬಂಧವಿರುವ ಉಪವಾಕ್ಯಗಳ ಮುಂದೆ ಅರ್ಧವಿರಾಮದ ಸೂಚನೆಗಾಗಿ ಬಳಸುವ ಚಿಹ್ನೆಗೆ ಅರ್ಧವಿರಾಮಚಿಹ್ನೆ ಎಂದು ಹೆಸರು.

(ಸಿರಿಗನ್ನಡಗನ್ನಡಿ, ಪುಟ ೩೬೫)

೩. ಅನೇಕ ಉಪವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳ ಕೊನೆಗೆ ಬಳಸುವ ಚಿಹ್ನೆಯೇ ಅರ್ಧವಿರಾಮಚಿಹ್ನೆ.

(ಕನ್ನಡ ಭಾಷಾ ಕೈಪಿಡಿ, ಪುಟ ೭೮)

೪. ಈ ಚಿಹ್ನೆ ಅಲ್ಪವಿರಾಮಕಾಲಕ್ಕಿಂತ ಸ್ವಲ್ಪ ಹೆಚ್ಚುಕಾಲ ವಿರಮಿಸಬೇಕಾದ ಕಾಲದ ಗುರುತು. ಸ್ವತಂತ್ರವಾಕ್ಯಗಳು ಕೂಡಿರುವ ಒಂದು ಸಂಯೋಜಿತ ವಾಕ್ಯವಾದಾಗ ಪ್ರತಿಯೊಂದು ಉಪವಾಕ್ಯದ ಕೊನೆಯಲ್ಲಿ ಅರ್ಧವಿರಾಮಚಿಹ್ನೆ ಗುರುತು ಹಾಕಬೇಕು.

(ಕನ್ನಡದ ಕೈಬರವಣಿಗೆ, ಪುಟ ೫೪)

೫. ಒಂದೇ ಸಂಗತಿಯನ್ನು ವರ್ಣಿಸುವಂಥ ಅನ್ಯೋನ್ಯ ಸಂಬಂಧವುಳ್ಳ ಅನೇಕ ಸ್ವತಂತ್ರ ವಾಕ್ಯಗಳಿದ್ದರೆ ಅವುಗಳ ಕೊನೆಯಲ್ಲಿ ಅರ್ಧವಿರಾಮಚಿಹ್ನೆ ಬಳಸಲಾಗುತ್ತದೆ.

(ಕನ್ನಡ ಕೈಪಿಡಿ, ಪುಟ ೧೦೪)

೬. ಅನೇಕ ಉಪವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾದಾಗ ಉಪವಾಕ್ಯಗಳು ಮುಗಿದಲ್ಲೆಲ್ಲ ಅರ್ಧವಿರಾಮದ ಚಿಹ್ನೆಯನ್ನು ಬಳಸಬೇಕು.

(ಕನ್ನಡ ವ್ಯಾಕರಣದರ್ಪಣ, ಪುಟ ೨೯)

ಸೂರ್ಯನು ಬೆಳಗಿದನು; ತಾವರೆ ಅರಳಿತು; ತಂಗಾಳಿ ಬೀಸಿತು; ಜನ ಸಂಚರಿಸತೊಡಗಿದರು; ವಿದಿಶಾ ರಾಜ್ಯದಲ್ಲಿ ಎಲ್ಲರಿಗೂ ಹಬ್ಬದ ದಿನ ಬಂದಿತು.

ವಿವರಣ ವಿರಾಮಚಿಹ್ನೆ : (ಒಂದರ ಕೆಳಗೆ ಒಂದು ಚುಕ್ಕೆ) Colon ನ್ಯೂನಬಿಂದು, ದ್ವಿಬಿಂದು ಚಿಹ್ನೆ

ಇದನ್ನು ಮಧ್ಯವಿರಾಮಚಿಹ್ನೆ ಎಂದು ಆರ್.ಜಿ. ಶಾಮಣ್ಣ ಕರೆದಿದ್ದಾರೆ. ವಿವರಣಾತ್ಮಕ ಚಿಹ್ನೆ ಎಂದೂ ಲ. ರಾಘವೇಂದ್ರ ಅವರು ಕರೆದಿದ್ದಾರೆ.

೧. "ವಿವರಣವಿರಾಮವು ಬರೆದ ವಿಷಯಕ್ಕೆ ವಿವರಣೆಯನ್ನು ಸೂಚಿಸುವ ಸಂದರ್ಭದಲ್ಲಿ ಬಳಕೆಯಾಗುತ್ತದೆ. ವಿವರಣವಿರಾಮದ ನಂತರದ ಪದ ಅಥವಾ ವಾಕ್ಯವನ್ನು ಒಂದು ಅಕ್ಷರ ಅಂತರ ಬಿಟ್ಟು ಪ್ರಾರಂಭಿಸಬೇಕು. ವಿವರಣವಿರಾಮವು ಪೂರ್ಣವಿರಾಮ ದಂತೆಯೇ ವಾಕ್ಯದ ಕೊನೆಯಲ್ಲಿ ಬಳಕೆಯಾಗುತ್ತದೆ; ಆದರೆ ನಂತರ ಬರುವ ಪದ, ಪದಪುಂಜ, ವಾಕ್ಯಾಂಶ ಅಥವಾ ವಾಕ್ಯಗಳೂ ಮೂಲವಾಕ್ಯದ ವಿವರಣೆ ಗಳಾಗಿರುತ್ತವೆ.

(ಕನ್ನಡದ ಶೈಲಿ ಕೈಪಿಡಿ, ಪುಟ ೨೧)

೨. "ಇದು ಅರ್ಧವಿರಾಮಕ್ಕಿಂತ ಹೆಚ್ಚು ವಿಸ್ತಾರವಾದ ವಿರಾಮ ಸ್ಥಾನವನ್ನು ಸೂಚಿಸುವ ವಿವರಣಾತ್ಮಕ ಚಿಹ್ನೆ.

(ಹೊಸಗನ್ನಡ ವ್ಯಾಕರಣ, ಪುಟ ೧೬೫)

೩. **ವಿವರಣಾತ್ಮಕ ಚಿಹ್ನೆಗಳು ಮೂರು ಬಗೆಯಾಗಿವೆ.**

(:), (–), (: -)

ಯಾವುದೊಂದು ಮಾತಿನ ಅರ್ಥವನ್ನು ಅಥವಾ ಅಭಿಪ್ರಾಯವನ್ನು ವಿವರಿಸುವು ದಿದ್ದಾಗ ಆ ಮಾತಿನಲ್ಲಿಯ ಶಬ್ದ ಅಥವಾ ವಾಕ್ಯದ ಮುಂದೆ ಮೇಲ್ಕಾಣಿಸಿದ ವಿವರಣೆಯ ಚಿಹ್ನೆಗಳಲ್ಲಿ ಒಂದನ್ನು ಉಪಯೋಗಿಸುವುದುಂಟು.

೪. **ವಿವರಣವಿರಾಮ ಅಥವಾ ಮಧ್ಯವಿರಾಮ (ಕೋಲನ್) :**

ಅರ್ಧವಿರಾಮ ಅಥವಾ ಅಲ್ಪವಿರಾಮದ ಕಾಲಕ್ಕಿಂತ ಹೆಚ್ಚುಕಾಲ ವಿರಮಿಸಬೇಕಾದ ಗುರುತು ಮಧ್ಯವಿರಾಮ. ಒಂದು ವಿಚಾರದ ಬಗ್ಗೆ ವಿವರಣೆ ಅಥವಾ

ಉದಾಹರಣೆಗಳನ್ನು ಕೊಡುವ ಮೊದಲು ಆ ವಿಷಯದ ಕೊನೆಯಲ್ಲಿ (:) ಈ ಗುರುತನ್ನು ಹಾಕಬೇಕು.

(ಕನ್ನಡದ ಕೈಬರವಣಿಗೆ, ಪುಟ ೫೫)

೫. ವಿವರಣಚಿಹ್ನೆ : "ವಿವರಣೆ ಎಂದರೆ ವಿವರಿಸುವುದು ಎಂದರ್ಥ. ವಿವರಣೆ ನೀಡುವ ಸಂದರ್ಭದಲ್ಲಿ ಬಳಸುವ ಚಿಹ್ನೆಯೇ ವಿವರಣೆಚಿಹ್ನೆಯಾಗಿದೆ.

ಪದ, ಶೀರ್ಷಿಕೆ, ಅರ್ಥ ಮೊದಲಾದವುಗಳ ವಿವರಣೆ ನೀಡುವುದನ್ನು ಸೂಚಿಸುವುದಕ್ಕಾಗಿ ಬಳಕೆಯಾಗುವ ಚಿಹ್ನೆಗೆ ವಿವರಣ ಚಿಹ್ನೆ ಎಂದು ಹೆಸರು."

ಈ ಚಿಹ್ನೆಯನ್ನು ಈ ಎರಡು ಚುಕ್ಕೆಗಳ ಮುಂದೊಂದು ಅಡ್ಡಗೆರೆ ಬರುವಂತೆ (:-) ಹೀಗೂ ಬಳಸಬಹುದು.

(ಸಿರಿಗನ್ನಡಗನ್ನಡಿ : ಪುಟ : ೩೬೬

೬. ವಿವರಣಾತ್ಮಕ ಚಿಹ್ನೆ - (:) ಒಂದು ಅಭಿಪ್ರಾಯದ ವಿವರಣೆ ಮುಂದಿನಂತೆ ಇದೆ. ಎಂದು ತೋರಿಸುವಾಗ ಸಾಮಾನ್ಯವಾಗಿ (':') ಈ ಚಿಹ್ನೆ ಹಾಕುವುದುಂಟು.

(ಕನ್ನಡ ವ್ಯಾಕರಣದರ್ಪಣ : ಪುಟ : ೨೯೫)

ಈ ಚಿಹ್ನೆಯ ಅರ್ಥದಲ್ಲೇ - ಅಡ್ಡಗೀಟು (Dash) :- (ವಿವರಣ - ಗೀಟು ಚಿಹ್ನೆ Colon-Dash Mark) ಗಳನ್ನು ಬಳಸುತ್ತಾರೆ. ಇದನ್ನು ಕೆಲವರು ಒಟ್ಟಿಗೆ ಗುರುತಿಸಿದ್ದಾರೆ. ಕೆಲವರು ಪ್ರತ್ಯೇಕ ಚಿಹ್ನೆಗಳನ್ನಾಗಿ ಗುರುತಿಸಿದ್ದಾರೆ. ಧೋಂಡೋನರಸಿಂಹ ಮುಳಬಾಗಿಲು ಅವರು ಕನ್ನಡ ಕಯ್ಪಿಡಿ ಗ್ರಂಥದಲ್ಲಿ ':' ಚಿಹ್ನೆಯನ್ನು ಸೂಚಕ ಚಿಹ್ನೆಯೆಂದೂ '–' ಚಿಹ್ನೆಯನ್ನು ಸಂಯೋಗಚಿಹ್ನೆ ಅಥವಾ ಸಂಬಂಧಕ ಚಿಹ್ನೆ ಎಂದೂ ಕರೆದಿದ್ದಾರೆ ':-' ಚಿಹ್ನೆಯನ್ನು ಸೂಚಕ-ಸಂಯೋಗಚಿಹ್ನೆ ಎಂದಿದ್ದಾರೆ.

ಇತರರು – ಸಂಬಂಧಕ ಚಿಹ್ನೆಯನ್ನು ಅಡ್ಡಗೀಟು (Dash) ಎಂದು ಕರೆದಿದ್ದಾರೆ.

ಉದಾಹರಣೆಗಳು: ಅ) ಅರಣ್ಯ ಇಲಾಖೆಯ ಅಧಿಕಾರಿಗಳು ಸರ್ಕಾರಕ್ಕೆ ಸೂಚಿಸುವ ಉಪಾಯಗಳು ಯಾವುವೆಂದರೆ :- ಕಾದ ಅಡವಿಯ ಸುತ್ತಮುತ್ತಲಿನ ಹುಲ್ಲು ಕೊಯಿದು ಹೊರಗಿನ ಬೆಂಕಿಯು ಕಾದ ಅಡವಿಯಲ್ಲಿ ಬಾರದಂತೆ ಮಾಡಬೇಕು.

ಆ) ಈವೊತ್ತು ಮಾಸ್ತರು ಹೇಳಿದ್ದೇನೆಂದರೆ :- ರಾಮಾ, ನೀನೂ ಬೇಗನೆ ಮನೆಗೆ ಹೋಗಿ ಊಟ ತೀರಿಸಿಕೊಂಡು ನಮ್ಮ ಮನೆಗೆ ಬಾ.

ಪೂರ್ವವಾಕ್ಯದ ಕೊನೆಯಲ್ಲಿ ':' ಈ ಸೂಚಕ ಚಿಹ್ನೆ ಬರೆಯುತ್ತಾರೆ.

(ಕನ್ನಡ ಕಯ್ಪಿಡಿ, ಪುಟ ೧೧೦)

೪. ಅಪೂರ್ಣವಿರಾಮಚಿಹ್ನೆ 'Ellipsis'

ಅಪೂರ್ಣವಿರಾಮಚಿಹ್ನೆಯನ್ನು ಇಂಗ್ಲಿಷ್‌ನಲ್ಲಿ Ellipsis ಎಂದು ಕರೆಯುತ್ತಾರೆ. ಸಾಲು ಚುಕ್ಕೆ ಚಿಹ್ನೆ .... ಎಂದು ಇದನ್ನು ಕರೆಯಬಹುದು.

ಮೈ-ಇಂ-ಕ ನಿಘಂಟಿನಲ್ಲಿ ಪದಲೋಪಚಿಹ್ನೆ, ವಾಕ್ಯಲೋಪಚಿಹ್ನೆ, ಲೋಪಚಿಹ್ನೆ, ಅಧ್ಯಾಹಾರಚಿಹ್ನೆ ಎಂದೆಲ್ಲಾ ಕರೆದಿದೆ. ಕನ್ನಡಶೈಲಿ ಕೈಪಿಡಿಯಲ್ಲಿ ಅಪೂರ್ಣವಿರಾಮ ಚಿಹ್ನೆ ಎಂದು ಕರೆದಿದ್ದಾರೆ.

ಈ ಪದಕ್ಕೆ ಮೈ-ಇಂ-ಕ ನಿಘಂಟಿನಲ್ಲಿ ಕೊಟ್ಟಿರುವ ವಿವರಣೆ ಹೀಗಿದೆ.

(೧) **"ಅಧ್ಯಾಹಾರ; ಪದಲೋಪ :** ಒಂದು ವಾಕ್ಯದಲ್ಲಿ ಅರ್ಥಕ್ಕೆ ಯಾ ಅನ್ವಯಕ್ಕೆ ಅವಶ್ಯವಾಗಿರುವ ಪದಗಳು ಬಿಟ್ಟುಹೋಗಿರುವುದು.

(೨) **ವಾಕ್ಯಲೋಪ :** ಪ್ಯಾರಾದ ಕೊನೆಯಲ್ಲಿ ವಾಕ್ಯವು ಬಿಟ್ಟು ಹೋಗಿರುವುದು.

(೩) **ಲೋಪಚಿಹ್ನೆ :** ವಾಕ್ಯಲೋಪ ಅಥವಾ ಪದಲೋಪವನ್ನು ಸೂಚಿಸುವ ಮೂರು ಬಿಂದುಗಳು (. . .) ಮೊದಲಾದವು.

(ಮೈ-ಇಂ-ಕ-ನಿ, ಪುಟ ೬೬೨)

ಮಾತಿನ ಅಪೂರ್ಣತೆಯನ್ನು ಬರವಣಿಗೆಯಲ್ಲಿ ಸೂಚಿಸಲು ಅಪೂರ್ಣ ವಿರಾಮವನ್ನು ಬಳಸುತ್ತೇವೆ. ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಚುಕ್ಕೆಗಳು ಅಪೂರ್ಣವಿರಾಮವನ್ನು ಸೂಚಿಸುತ್ತವೆ.

ಉದಾ: . . . . ಹಾಗಾದರೆ . . . ಹಾಗಾದರೆ . . . ನಾನೇನು ಮಾಡಲಿ

(ಕನ್ನಡ ಶೈಲಿ ಕೈಪಿಡಿ, ಪುಟ ೨೨)

"ಲೋಪಚಿಹ್ನೆ ಎಂದರೆ ಮೂರು ಅಥವಾ ನಾಲ್ಕು ಚುಕ್ಕೆಗಳ ಚಿಹ್ನೆಯನ್ನು ಉಲ್ಲೇಖಿಸಿದ ವಾಕ್ಯಭಾಗದ ಪದ / ಪದಗಳನ್ನು ಅಥವಾ ವಾಕ್ಯಭಾಗಗಳನ್ನು ಬಿಟ್ಟಿರುವುದನ್ನು ಸೂಚಿಸಲು ಬಳಸಲಾಗುತ್ತದೆ. ವಾಕ್ಯದ ಮೊದಲು ಅಥವಾ ಮಧ್ಯದಲ್ಲಿ ಲೋಪವಾಗಿದ್ದನ್ನು (. . .) ತ್ರಿಬಿಂದುಗಳಿಂದಲೂ ವಾಕ್ಯದ ಕೊನೆಯ ಭಾಗದಲ್ಲಿ ಲೋಪವಾದ ಭಾಗವನ್ನು ಸೂಚಿಸಲು (. . . .) ಚತುರ್ಬಿಂದು ಚಿಹ್ನೆ ಬಳಸಲಾಗುತ್ತದೆ"

ಅ) ವಾಕ್ಯದಾದಿಯಲ್ಲಿ ಅಪೂರ್ಣವಿರಾಮ ಚಿಹ್ನೆ ಬಳಕೆಗೆ

ಉದಾ: ಶ್ರೀ . . . ಅವರ ರಜೆಯ ಅವಧಿಯಲ್ಲಿ ಶ್ರೀ . . . ಅವರು ಕಾರ್ಯ ನಿರ್ವಹಿಸುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

ಆ) ವಾಕ್ಯದ ಮೊದಲು ಮತ್ತು ಮಧ್ಯದಲ್ಲಿ ೩ ಬಿಂದುಗಳನ್ನೂ ಕೊನೆಯಲ್ಲಿ ನಾಲ್ಕುಬಿಂದುಗಳನ್ನೂ ಬಳಸುವುದು ಉಚಿತ.

ಉದಾ: . . . ಏನಾದರೂ ಇರಲಿ ವಿಚಾರಿಸೋಣ ಪಕ್ಷಾಂತರಿಗಳಾದ ಸರ್ವಶ್ರೀ ... ಅವರೆಲ್ಲರಿಗೆ ಚುನಾವಣಾಟಿಕೆಟ್ಟನ್ನು ಪಕ್ಷವು ನೀಡುವುದಿಲ್ಲ.

ಇ) ಕೊನೆಯ ಲೋಪಚಿಹ್ನೆಗೆ ಬದಲಾಗಿ ಇತ್ಯಾದಿ ಪದಗಳನ್ನು ಬಳಸುವುದುಂಟು.

ಈ) ಲೋಪಚಿಹ್ನೆ ಬಳಸುವಾಗ ಕೊನೆಯಲ್ಲಿ ನಾಲ್ಕು ಅಥವಾ ಐದು ಚಿಹ್ನೆ ಹಾಕುವ ರೂಢಿ ಇದೆ ಎನ್ನುತ್ತಾರೆ ಕನ್ನಡಶೈಲಿ ಕೈಪಿಡಿಕಾರರು.

೫. ಉದ್ಧರಣ ಚಿಹ್ನೆಗಳು (' ') (" ") Quotation Marks

೧. ಉದ್ಧರಣ ಚಿಹ್ನೆಗಳು ಸಾಕಷ್ಟು ಬಳಕೆಯಾಗುವ ಲೇಖನಚಿಹ್ನೆಗಳಾಗಿವೆ. ಉದ್ಧರಣಚಿಹ್ನೆಗಳು ಎರಡು ವಿಧವಾಗಿವೆ.
ಒಂಟಿ ಉದ್ಧರಣಚಿಹ್ನೆ (' ') ಜೋಡಿ ಉದ್ಧರಣ ಚಿಹ್ನೆ (" ")

೨. ಉದ್ಧರಣಚಿಹ್ನೆಯನ್ನು ಬೇರೆ ಬೇರೆ ಹೆಸರುಗಳಲ್ಲಿ ಕರೆಯುವುದುಂಟು. ಇಂಗ್ಲಿಷ್‌ನಲ್ಲಿ Inverted Commans, Quotation marks ಎನ್ನುತ್ತಾರೆ.

ಕನ್ನಡದಲ್ಲಿ ಅವತರಣಚಿಹ್ನೆ, ಉದ್ಧರಣಚಿಹ್ನೆ, ಪ್ರತ್ಯಕ್ಷಕಥನಚಿಹ್ನೆ, ಉದ್ಧೃತ ಅಲ್ಪವಿರಾಮ ಚಿಹ್ನೆ, ತಳಕೆಳಗುಚಿಹ್ನೆ, ವಿಲೋಮಚಿಹ್ನೆ, ವಾಕ್ಯವೇಷ್ಟನಚಿಹ್ನೆ ಮೊದಲಾದ ಹೆಸರುಗಳಲ್ಲಿ ಕರೆಯುತ್ತಾರೆ.

೩. ಒಬ್ಬರಾಡಿದ ಮಾತುಗಳನ್ನು ಬೇರೊಬ್ಬರು ಉದಾಹರಿಸಿದಾಗ, ಅಂತಹ ಮಾತುಗಳಲ್ಲಿ ಬೇರೆಯವರು ಎಂಬುದನ್ನು ಸೂಚಿಸಲು ಆ ಬೇರೊಬ್ಬರ ಮಾತುಗಳನ್ನು ವಿಲೋಮಚಿಹ್ನೆಗಳ ಮಧ್ಯದಲ್ಲಿ ಬರೆಯಬೇಕು. ಆ ವಾಕ್ಯಗಳನ್ನು ಹೇಳಿದವರ ಹೆಸರನ್ನು ಬರೆಯಬೇಕು.

(ಕನ್ನಡದ ಕೈಬರವಣಿಗೆ, ಪುಟ 56)

೪. ಸಾಮಾನ್ಯವಾಗಿ ಮತ್ತೊಬ್ಬರ ವಾಕ್ಯಗಳನ್ನು ಬರವಣಿಗೆಯಲ್ಲಿ ಅಳವಡಿಸಿಕೊಂಡಾಗ ಅವುಗಳನ್ನು ಉದ್ಧರಣಚಿಹ್ನೆಯಲ್ಲಿ ತೋರಿಸಬೇಕು. ಬೇರೆ ಕೆಲವು ವಿಶಿಷ್ಟ ಸಂದರ್ಭಗಳಲ್ಲಿಯೂ ಉದ್ಧರಣಚಿಹ್ನೆ ಬಳಕೆಯಾಗುತ್ತದೆ.

(ಕನ್ನಡ ಶೈಲಿ ಕೈಪಿಡಿ, ಪುಟ 26)

೫. ಉದ್ಧರಣ ಎಂದರೆ "ಇತರರು ಹೇಳಿದ ಮಾತನ್ನು ಇದ್ದಕ್ಕಿದ್ದಂತೆ ಹೇಳುವುದು" ಎಂದರ್ಥ. ಅನೇಕ ಸಂದರ್ಭಗಳಲ್ಲಿ ಇನ್ನೊಬ್ಬರ ಎಂದರೆ ಮಹಾವ್ಯಕ್ತಿಗಳು, ಕವಿ, ಸಾಹಿತಿಗಳು, ಲೇಖಕರು, ವ್ಯಾಕರಣಕಾರರು, ವಿಮರ್ಶಕರು ಮೊದಲಾದವರು ಹೇಳಿದ ಮಾತುಗಳನ್ನು ಬರಹದಲ್ಲಿ ಗ್ರಂಥಗಳಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ, ಉದಾಹರಿಸಬೇಕಾಗುತ್ತದೆ, ಎತ್ತಿ ಹೇಳಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಹಾಗೂ ವಿಶೇಷತೆಯನ್ನು ಸೂಚಿಸುವ ಸಂದರ್ಭಗಳಲ್ಲಿ ಈ ಚಿಹ್ನೆಗಳನ್ನು ಬಳಸಲಾಗುತ್ತದೆ. ಈ ಚಿಹ್ನೆಯನ್ನು ವಾಕ್ಯವೇಷ್ಟನ ಚಿಹ್ನೆ ಎಂದೂ ಕರೆಯುತ್ತಾರೆ.

(ಸಿರಿಗನ್ನಡಗನ್ನಡಿ, ಪುಟ 368)

ಒಂದರೊಳಗೊಂದು ಒಂದು ಉದ್ಧರಿತ ಭಾಗ ಬಂದಾಗ ಹೊರಗಿನ ಉದ್ಧೃತ ಭಾಗಕ್ಕೆ ಜೋಡಿ ಚಿಹ್ನೆಯನ್ನು (“ ”) ಒಳಭಾಗದ ಉದ್ಧೃತಭಾಗಕ್ಕೆ (‘ ’) ಒಂಟಿ ಉದ್ಧರಣಚಿಹ್ನೆಯನ್ನು ಬಳಸಬೇಕು.

ಉದಾ: "ಮಹನೀಯರೇ 'ನಾವೆಲ್ಲಾ ಸತ್ಯವಂತರು' ಎಂದು ಭಾವಿಸಿದ್ದರೇ ಸಾಲದು, ನಿಜಜೀವನದಲ್ಲಿ ಹಾಗೆಯೇ ಬಾಳ್ವೆ ನಡೆಸಬೇಕು" ಎಂದು ಸ್ವಾಮಿಗಳು ಹೇಳಿದರು.

ಉದ್ಧೃತಪದ, ಪದಪುಂಜ, ವಾಕ್ಯ, ಸೂಕ್ತಿ ಗಾದೆಗಳನ್ನು ಇತರ ವಾಕ್ಯಗಳೊಂದಿಗೇ ಬಳಸುತ್ತೇವೆ. ಆದರೆ ಕೆಲವೊಮ್ಮೆ ಪ್ರತ್ಯೇಕ ವಾಕ್ಯಬೃಂದ (ಪ್ಯಾರಾಗಳಲ್ಲಿ) ಉಲ್ಲೇಖಿಸಿದಾಗ, ಕಾವ್ಯಭಾಗಗಳನ್ನು ಉದ್ಧರಿಸುವಾಗ ಉದ್ಧರಿತಭಾಗ ಎಂದು ತಿಳಿಯುವಹಾಗೆ ಪದ, ವಾಕ್ಯಗಳಾದರೆ ದಪ್ಪಕ್ಷರಗಳಲ್ಲಿ ಅಥವಾ ಕಪ್ಪಕ್ಷರಗಳಲ್ಲಿ ಅಚ್ಚುಮಾಡುವುದನ್ನು ಕಾಣಬಹುದು. ಗದ್ಯ, ಪದ್ಯ, ನಾಟಕ ಭಾಗಗಳನ್ನು ಉದ್ಧರಿಸುವಾಗ ಕಂಡಿಕೆ, ಸ್ಟಾಂಜ (ಕವನಭಾಗ) ವ್ಯವಸ್ಥೆಯನ್ನು ಮೂಲಭಾಗದಲ್ಲಿರುವಂತೆಯೇ ಇಲ್ಲಿಯೂ ಉಳಿಸಿಕೊಳ್ಳಬೇಕು.

(ಕ.ಶೈ. ಕೈಪಿಡಿ, ಪು. ೧೮೮)

ಉದ್ಧೃತಭಾಗಗಳನ್ನು ಕೊಟ್ಟಾಗ, ಅವುಗಳ ಮೂಲವನ್ನು ಆವರಣದಲ್ಲೋ ಅಡಿಟಿಪ್ಪಣಿಯಲ್ಲೋ ಅನುಬಂಧದಲ್ಲೋ ಕೊಡುವುದು ಮುಖ್ಯ. ಅದನ್ನು ನೋಡಿ ಉದ್ಧೃತಭಾಗವನ್ನು ಹೋಲಿಸಿನೋಡಲು ಸಾಧ್ಯವಾಗುತ್ತದೆ.

ಉದ್ಧೃತವಾಕ್ಯಗಳಲ್ಲಿ ವಾಕ್ಯದ ಪೂರ್ಣವಿರಾಮಚಿಹ್ನೆ ಅಥವಾ ಪ್ರಶ್ನಚಿಹ್ನೆ ಹಾಕಿದಮೇಲೆ ಉದ್ಧರಣ ಚಿಹ್ನೆಗಳನ್ನು ಬಳಸಬೇಕು. (ಮಾನ್ಯ ಸಚಿವರು ಹೇಳಿದಹಾಗೆ "ಇದೊಂದು ಐತಿಹಾಸಿಕ ಘಟನೆ.") ಆದರೆ ಕನ್ನಡದ ನಿಘಂಟಿನಲ್ಲಿ ಆವರಣಚಿಹ್ನೆಯಲ್ಲಿ ಬಳಸಿದ್ದ ಉದ್ಧೃತಭಾಗ ಆದಮೇಲೆ ಪೂರ್ಣವಿರಾಮ ಬಳಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ (ಪುಟ ೨೬೪ ಸಂ ೧) ಅನುವಾದ ಚಿಹ್ನೆಯ ವಿವರಣೆಯನ್ನು ಹೀಗೆ ಕೊಡಲಾಗಿದೆ.

ಅನುವಾದ ಚಿಹ್ನೆ (ನಾ.) ಉದ್ಧರಿಸಿದ ಭಾಗಗಳನ್ನು ಸೂಚಿಸಲು ಒಂದು ಕಡೆ ತಲೆಕೆಳಕಾಗಿಯೂ, ಇನ್ನೊಂದು ಕಡೆ ನೆಟ್ಟಗೂ ಹಾಕುವ ಅಲ್ಪವಿರಾಮಗಳು " " ಮತ್ತು ' ' ಗುರುತು.

(Comma ಇಂಕನಿ) (ಅನುವಾದ + ಚಿಹ್ನೆ)

ಒಂಟಿ ಉದ್ಧರಣ ಚಿಹ್ನೆ ಬಳಕೆ (' ') (Single inverted comma)

ಉದ್ಧರಣ ಅಥವಾ ವಾಕ್ಯವೇಷ್ಟನಚಿಹ್ನೆಗಳನ್ನು ಒಬ್ಬರು ಆಡಿದ ಅಥವಾ ಆಡಿದ್ದ ಮಾತನ್ನು ಉದ್ಧರಿಸಿ ಬರೆದ ವಾಕ್ಯದ ಆರಂಭಕ್ಕೆ ಮೇಲ್ಗಡೆ " ಮತ್ತು ಕೊನೆಗೆ " ಎಂಬ ಜೋಡಿ ಅಥವಾ ಒಂಟಿ ಅವತರಣಿಕೆ ಚಿಹ್ನೆಯನ್ನು ಸ್ವಗತ ಅಥವಾ ವಿಶೇಷಣಾರ್ಥ ಶಬ್ದಕ್ಕೆ ಕೊಡಬೇಕು.

ಉದಾ: ಕನ್ನಡದಲ್ಲಿ 'ಇಂಗ್ಲಿಷ್', 'ಮರಾಠಿ', 'ಫಾರಸಿ' ಪದಗಳು ಸೇರಿವೆ.

ಹರಿಹರ ಕವಿ ಅನೇಕ 'ರಗಳೆ'ಗಳನ್ನು ಮತ್ತು 'ಶತಕ'ಗಳನ್ನು ಬರೆದಿದ್ದಾನೆ.

(ಸಮಗ್ರ ಹೊ. ವ್ಯಾಕರಣ, ಪುಟ ೧೬)

ಕೆಲವೊಮ್ಮೆ ವಿಶೇಷಾರ್ಥದ ಅಕ್ಷರಗಳಿಗೂ ' ' ಚಿಹ್ನೆ ಬಳಸುತ್ತೇವೆ.

'ಓಂ' ಅಕ್ಷರ ಹಿಂದೂಗಳಿಗಷ್ಟೆ ಅಲ್ಲ ಜೈನರಿಗೂ ಪವಿತ್ರವಾದ ಅಕ್ಷರವಾಗಿದೆ.

ಉದಾ: ಉದ್ಧೃತಭಾಗದೊಳಗೇ ಬೇರೊಂದು ಉದ್ಧೃತ ಭಾಗವನ್ನು ಎತ್ತಿ ಕೊಡಬೇಕಾದರೆ, ಒಳಗಿನ ಭಾಗಕ್ಕೆ ಒಂಟಿ ಉದ್ಧರಣ ಚಿಹ್ನೆಗಳನ್ನು ಯೋಜಿಸಲಾಗುತ್ತದೆ.

"ಭರತನು ಷಟ್ಖಂಡಗಳ ಸ್ವಾಮಿಯೆಂಬ ವೈಭವವನ್ನು ದೂರದಿಂದಲೇ ಕೇಳಿ ಸಂತೋಷಪಡುತ್ತೇನೆ. ಅಷ್ಟು ನೆಂಟಸ್ತಿಕೆಯೇ ಸಾಕು. ಕರೆದಾಗಲೆಲ್ಲ 'ಅಪ್ಪಣೆಯೇನು' ಎನ್ನುತ್ತ 'ಜೀಯಾ, ದೇವಾ' ಎನ್ನುತ್ತ ಇರಲಾರೆ"

ಉದಾ: ವಾಕ್ಯದಲ್ಲಿ ಲೇಖನ, ಪುಸ್ತಕ, ಪತ್ರಿಕೆ ಮುಂತಾದವುಗಳ ಹೆಸರುಗಳನ್ನೂ ಪಾರಿಭಾಷಿಕವಾದ ಪ್ರಾಮುಖ್ಯ ಶಬ್ದಗಳನ್ನೂ ಉಲ್ಲೇಖಿಸುವಾಗ ಒಂಟಿ ಉದ್ಧರಣಚಿಹ್ನೆ ಬಳಸಲಾಗುತ್ತದೆ.

ಉದಾ: ಅನಕೃ ಅವರ 'ಸಂಧ್ಯಾರಾಗ', 'ಗೃಹಲಕ್ಷ್ಮಿ', 'ನಟಸಾರ್ವಭೌಮ' ಮೊದಲಾದವು ಪ್ರಸಿದ್ಧ ಕಾದಂಬರಿಗಳಾಗಿವೆ.

ಉದಾ: 'ಆಕಾಶವಾಣಿ' ಪದವನ್ನು ಕೊಟ್ಟವರು ಕನ್ನಡಿಗರು.

ಜೋಡಿ ಉದ್ಧರಣಗಳ ಬಳಕೆ (" ") (Double inverted comma)

ಉದಾ: ವಾಕ್ಯವೇಷ್ಟನ ಚಿಹ್ನೆಯನ್ನು ಅನ್ಯರು ಆಡಿದ ಮಾತನ್ನು ಸೂಚಿಸುವುದಕ್ಕೆ ಉಪಯೋಗಿಸುತ್ತಾರೆ.

'ರಾಜನು, "ಎಲೆಗೆ, ನೀನಾರು? ನಿನ್ನ ಹೆಸರೇನು? ನೀನಾರ ಮಗಳು?" ಎಂದು ಕೇಳಿದನು.'

III ಸೂಚಕಗಳು

ಖಾಲಿಜಾಗ ಸೂಚಿಸುವ ಚಿಹ್ನೆ (ಸಾಲು ಚುಕ್ಕೆಗಳ ಚಿಹ್ನೆ) .....

ಅಪೂರ್ಣವಿರಾಮಚಿಹ್ನೆಯನ್ನು ಮಿತಸೂಚಕ, ಅಮಿತಸೂಚಕ ಎಂದು ಎರಡು ಬಗೆಯಾಗಿ ವರ್ಗೀಕರಿಸಬಹುದು.

ಮಿತಸೂಚಕಗಳು

... . 3, 4, 5 ಚುಕ್ಕೆಗಳನ್ನಿಡುವ ಚಿಹ್ನೆಯನ್ನು ಮಿತಸೂಚಕಚಿಹ್ನೆ ಎನ್ನಬಹುದು. ಸ್ಥಳಾವಕಾಶ ಸಾಲಿನಲ್ಲಿ ಇರುವಷ್ಟನ್ನು ಭರ್ತಿಮಾಡದೆ ಬಿಡುವ ಸಾಲುಚುಕ್ಕೆ ಸಾಲನ್ನು ಖಾಲಿಜಾಗಸೂಚಕವೆಂದು ಕರೆಯಬಹುದು. ಅಥವಾ ಅಮಿತಸೂಚಕಚಿಹ್ನೆ ಎನ್ನಬಹುದು. ಉದಾಹರಣೆಗೆ ಗ್ರಂಥದ ವಿಷಯಗಳನ್ನು ಪಟ್ಟಿಮೂಲಕ ಪರಿವಿಡಿಯಲ್ಲಿ ಕೊಡುವಾಗ ಇದನ್ನು ವಿಶೇಷವಾಗಿ ಕಾಣುತ್ತೇವೆ.

ಅಮಿತಸೂಚಕಗಳು

ಪರಿವಿಡಿ

ಸೂಚಕಗಳು Indicators

ಪ್ರಶ್ನಸೂಚಕಚಿಹ್ನೆಗಳು (? !)

೧. "ಆಶ್ಚರ್ಯ, ಕೋಪ, ಸಂದೇಹ, ಪ್ರಶ್ನೆ ಮುಂತಾದವನ್ನು ಬರವಣಿಗೆಯಲ್ಲಿ ಸೂಚಿಸಲು ಕೆಲವು ಸೂಚಕಗಳನ್ನು ಬಳಸುತ್ತೇವೆ. ಮಾತಿನಲ್ಲಾದರೆ ಅವುಗಳನ್ನು ಧ್ವನಿಯ

ಏರಿಳಿತದಿಂದಲೇ ವ್ಯಕ್ತಪಡಿಸಬಹುದು. ಬರವಣಿಗೆಯಲ್ಲಿ ಇದೇ ಕೆಲಸವನ್ನು ಸೂಚಕಗಳು ಮಾಡುತ್ತವೆ. ಸೂಚಕದ ನಂತರ ಮುಂದಿನ ವಾಕ್ಯ ಅಥವಾ ಪದವನ್ನು ಎರಡು ಅಕ್ಷರಗಳ ಅಂತರವನ್ನು ಬಿಟ್ಟು ಆರಂಭಿಸಬೇಕು. ಪ್ರಶ್ನಾರ್ಥಕ ಚಿಹ್ನೆ ಆಶ್ಚರ್ಯಚಿಹ್ನೆಗಳನ್ನು ಸೂಚಕಗಳೆನ್ನುತ್ತಾರೆ.

(ಕನ್ನಡ ಶೈಲಿ ಕೈಪಿಡಿ, ಪುಟ ೨೩)

೨. ಭಾಷೆಯ ವ್ಯವಹಾರದಲ್ಲಿ ಪ್ರಶ್ನಾರ್ಥವನ್ನು ಸಂಕೇತಿಸಲು ಬಳಸುವ ಚಿಹ್ನೆಗೆ ಪ್ರಶ್ನಾರ್ಥಕದ ಚಿಹ್ನೆ ಎಂದು ಹೆಸರು. ಸಾಮಾನ್ಯವಾಗಿ ಏನು? ಏಕೆ? ಹೇಗೆ? ಯಾರು? ಎಲ್ಲಿ? ಯಾವಾಗ? ಯಾವುದು? ಮೊದಲಾದ ಪ್ರಶ್ನಾರ್ಥಕ ಪದಗಳ ಮುಂದೆ ಈ ಪ್ರಶ್ನಾರ್ಥದ ವಾಕ್ಯದ ಕೊನೆಯ ಪದದ ಬಲಪಕ್ಕದಲ್ಲಿ '?' ಈ ಮಾದರಿ ಸಂಕೇತವನ್ನು ಬಳಸಲಾಗುತ್ತದೆ.

(ಸಿರಿಗನ್ನಡಗನ್ನಡಿ, ಪುಟ ೩೭೦)

ಉದಾ: ಏಕೆ? ಏನು? ಎಲ್ಲಿ? ಎಷ್ಟು? ಯಾವಾಗ? ಮುಂತಾದ ಪ್ರಶ್ನಾರ್ಥಕ ಪದಗಳು ಇರುವ ವಾಕ್ಯಗಳ ಕೊನೆಯಲ್ಲಿ ಈ ಚಿಹ್ನೆ ಬಳಸಲಾಗುತ್ತದೆ.
ರಾಯರ ಮನೆ ಎಲ್ಲಿ?
ಯಾವಾಗ ಊರಿಂದ ಬಂದಿರಿ?
ನಿನ್ನೆ ಊರಿಗೆ ಯಾರು ಬಂದರು?
ತಡವಾಗಿ ಏಕೆ ಬಂದೆ?

ಉದಾ: ಪ್ರಶ್ನಾರ್ಥಕ ಪದಗಳು (ಎಲ್ಲಿ, ಏನು ಹೇಗೆ ಇತ್ಯಾದಿ) ಇಲ್ಲದಿದ್ದರೂ ವಾಕ್ಯಾರ್ಥ ಪ್ರಶ್ನಾರ್ಥ ರೂಪದಲ್ಲಿರುತ್ತದೆ.

ಉದಾ: ಮಕ್ಕಳೇ ನಿನ್ನೆ ಪಾಠವನ್ನು ಓದಿಕೊಂಡು ಬಂದಿದ್ದಿರಾ?

ನೀವು ಸಜ್ಜನರು, ಇಂಥಾ ಕೆಲಸ ಮಾಡಬಹುದೇ?

(ಸಿರಿಗನ್ನಡಗನ್ನಡಿ, ಪುಟ ೩೭೦)

ಉದಾ: "ಒಂದೇ ವಾಕ್ಯದಲ್ಲಿ ಪ್ರಶ್ನೆ ಹಾಗೂ ಆಶ್ಚರ್ಯ ಎರಡೂ ಭಾವಗಳು ವ್ಯಕ್ತವಾಗುವಂತಿದ್ದರೆ ವಾಕ್ಯದ ಕೊನೆಯಲ್ಲಿ ಬಳಸುವ ರೂಢಿಯಿದೆ.

"ಅದನ್ನು ನೋಡಿ ನುಗ್ಗೇಹಳ್ಳಿಯ ಸಿದ್ದೇಗೌಡರು, "ಯಾಕಯ್ಯಾ ಅಳ್ತೀಯಾ? ಏನಾಯ್ತೋ?!" ಎಂದು ಕೇಳಿದರು. ಆದರೆ ಇಂಥ ಸಂದರ್ಭಗಳಲ್ಲಿ ಸೂಕ್ತವಾದ ಯಾವುದಾದರೂ ಒಂದು ಚಿಹ್ನೆಯನ್ನು ಬಳಸುವುದು ಒಳ್ಳೆಯದು.

(ಕನ್ನಡ ಶೈಲಿ ಕೈಪಿಡಿ, ಪುಟ ೨೪)

೬. ಭಾವಸೂಚಕ ಚಿಹ್ನೆ (!) ಉದ್ದನೆಯ ಗೀಟು ಕೆಳಗಡೆ ಚುಕ್ಕೆ

ಇದನ್ನು ಆಶ್ಚರ್ಯಸೂಚಕಚಿಹ್ನೆ ಉದ್ಗಾರವಾಚಕಚಿಹ್ನೆ Exclamatory Mark ಎಂದೂ ಕರೆಯುತ್ತಾರೆ.

೧. "ಸಂತೋಷ, ದುಃಖ, ಆಶ್ಚರ್ಯ, ಕೋಪ, ಹೇಸಿಗೆ ಮೊದಲಾದ ಪದ ಅಥವಾ ವಾಕ್ಯದ ಕೊನೆಯಲ್ಲಿ ಭಾವಸೂಚಕ ಚಿಹ್ನೆಗಳನ್ನು ಬಳಸುತ್ತೇವೆ.

(ಕನ್ನಡ ಶೈಲಿ ಕೈಪಿಡಿ, ಪುಟ ೨೪)

೨. ಉತ್ಸಾಹ, ಆಶ್ಚರ್ಯ, ಸಂಕಟ, ದುಃಖ ಇತ್ಯಾದಿ ಭಾವಸೂಚಕ ಪದ ಅಥವಾ ವಾಕ್ಯಗಳ ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸುವುದು.

(ಕನ್ನಡ ಕೈಬರವಣಿಗೆ, ಪುಟ ೫೬)

೩. ಹರ್ಷ, ವಿಷಾದ, ಆಶ್ಚರ್ಯ, ಕ್ರೋಧ ಮೊದಲಾದ ಭಾವಗಳನ್ನು ಪ್ರಕಟಿಸುವ ಪದ ಇಲ್ಲವೇ ವಾಕ್ಯದ ಮುಂದೆ ಹಾಕುವ ಚಿಹ್ನೆ. ಸಂಬೋಧನೆಯಲ್ಲಿರುವ ಕರ್ತೃಕಾರಕದ ಎದುರಿನಲ್ಲಿ ಸಹ ಇದನ್ನು ಬಳಸಬಹುದು.

(ಹೊ.ವ್ಯಾ. (ಟಿವಿವೆಂ.) ಪುಟ ೧೬೭)

೪. "ಹರ್ಷ, ಖೇದ, ಸೋಜಿಗ ಮುಂತಾದ ಮನೋಭಾವಗಳನ್ನು ತಿಳಿಸುವ ವಾಕ್ಯಗಳ ಅಥವಾ ಪದಗಳ ಕೊನೆಯಲ್ಲಿ ಉದ್ಗಾರಚಿಹ್ನೆಯನ್ನು ಬರೆಯಬೇಕು. ಉದ್ಗಾರಚಿಹ್ನೆ ಇರುವ ವಾಕ್ಯವನ್ನು ಅಥವಾ ಪದವನ್ನು ಆಯಾ ಮನೋಭಾವ ಗಳನ್ನು ಪ್ರಕಟಿಸುವ ಸ್ವರಗಳಿಂದ ಓದಬೇಕು. ಒಮ್ಮೊಮ್ಮೆ ಉದ್ಗಾರ ಮನೋಭಾವಗಳ ಅತಿರೇಕವನ್ನು ಹೇಳುವುದಾದರೆ ಎರಡು ಮೂರು ಉದ್ಗಾರಚಿಹ್ನೆಗಳನ್ನು ಬರೆಯುತ್ತಾರೆ.

(ಕನ್ನಡ ಕಯ್ಪಿಡಿ ಪುಟ ೧೧೫)

೫. "ನಾವು ಭಾಷಾಮಾಧ್ಯಮದ ಮೂಲಕ ನಮ್ಮ ಭಾವನೆಗಳನ್ನು ಅಭಿವ್ಯಕ್ತಿಸುವಲ್ಲಿ ಆಯಾ ಸಂದರ್ಭಕ್ಕನುಗುಣವಾಗಿ ವಿಶೇಷಾರ್ಥ, ಖೇದ, ಸಂದೇಹ, ಭಯ, ಸಂಕಟ, ಖುಷಿ, ಅಚ್ಚರಿ, ನಿರಾಸಕ್ತಿ ಇನ್ನೂ ಮೊದಲಾದ ಅರ್ಥಗಳಲ್ಲಿ ಅಭಿವ್ಯಕ್ತಿಸಲು ಈ ಭಾವಸೂಚಕಚಿಹ್ನೆಯನ್ನು ಬಳಸುತ್ತೇವೆ. ಇದಕ್ಕೆ ಉದ್ಗಾರವಾಚಕಚಿಹ್ನೆ ಅಥವಾ ಆಶ್ಚರ್ಯಸೂಚಕಚಿಹ್ನೆ ಎಂಬ ಹೆಸರು ಇದೆ.

ನಮ್ಮ ಭಾವನೆಗಳು ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಳ್ಳುವಂತೆ ಆಯಾ ಸಂದರ್ಭದ ಭಾವನೆಯನ್ನು ಸೂಚಿಸುವಂತೆ ಬಳಸುವ ಚಿಹ್ನೆಗೆ ಭಾವಸೂಚಕ ಚಿಹ್ನೆ ಎಂದು ಹೆಸರು".

(ಸಿರಿಗನ್ನಡಗನ್ನಡಿ, ಪುಟ ೩೬೯)

ಉದಾ: ಕೆಲವು ಸಲ ಭಾವನೆಗಳು ಮತ್ತೆ ಮತ್ತೆ ಒತ್ತರಿಸಿಕೊಂಡು ಬಂದಾಗ ೨, ೩ ಬಾರಿ ಭಾವಸೂಚಕ ಚಿಹ್ನೆ ಬಳಸುತ್ತಾರೆ.

ಒಲವಿಲ್ಲದ ಪೂಜೆ ! ನೇಹವಿಲ್ಲದ ಊಟ!!
ಆ ಪೂಜೆಯು, ಆ ಮಾಟವು
ಚಿತ್ರದ ರೂಹು ಕಾಣಿರಣ್ಣಾ! ಚಿತ್ರದ ಕಬ್ಬು ಕಾಣಿರಣ್ಣ!!

(ಬಸವಣ್ಣನವರ ವಚನ ೧೨೬)

ಸಂಬೋಧನೆಯಲ್ಲಿರುವ ಕರ್ತೃಕಾರಕದ ಹೆಸರಿನಲ್ಲಿ ಸಹ ಭಾವಸೂಚಕ ಚಿಹ್ನೆ ಬಳಸುತ್ತಾರೆ.

ಉದಾ: **ಸಂಬೋಧನೆಭಾವದಲ್ಲಿ**
ಶಂಕರಾ! ಈ ಕಷ್ಟದಿಂದ ಪಾರುಮಾಡು

ದುಃಖದ ಭಾವದಲ್ಲಿ
ಅಯ್ಯೋ! ಸೀತೆಯ ಗೋಳು ಕೇಳುವವರಾರು?

ಆಶ್ಚರ್ಯಭಾವದಲ್ಲಿ
ಅಮ್ಮಾ! ಅಣ್ಣನಿಗೆ ಬಹುಮಾನ ಬಂತು
ಅಯ್ಯೋ! ಬೆಂಕಿ! ಬೆಂಕಿ! ಬೇಗಬನ್ನಿ

IV ಗೆರೆಚಿಹ್ನೆಗಳು

ಲಂಬಗೆರೆ (I II ಉದ್ದನೆಗೀಟು, ದಂಡಾಕಾರ ಚಿಹ್ನೆ) Perpendicular Sign

೧. ಸಾಮಾನ್ಯವಾಗಿ ಲಂಬಗೆರೆ, ಓರೆಗೆರೆ, ಅಡ್ಡಗೆರೆ, ಉದ್ದಗೆರೆ, ಅಡಿಗೆರೆ, (ಅಡಿಟಿಪ್ಪಣಿಗೆರೆ) ಕಿರುಗೆರೆ, ಸಮಗೆರೆ, ಕೂಡುಚಿಹ್ನೆ, (ಸಂಕಲನಚಿಹ್ನೆ)ವ್ಯವಕಲನ (ಚಿಹ್ನೆ), ಸರ್ವತ್ರಸಮಗೆರೆ, ಸಾಲುಗೆರೆ ಮೊದಲಾದವು ಲೇಖನಚಿಹ್ನೆಗಳಲ್ಲಿ ಪ್ರಮುಖಗೆರೆಚಿಹ್ನೆಗಳಾಗಿವೆ.

ಈ ಚಿಹ್ನೆಗಳು ಗಣಿತಶಾಸ್ತ್ರ ಮೊದಲಾದ ಇತರ ಶಾಸ್ತ್ರಗಳಲ್ಲೂ ಬೇರೆ ಬೇರೆ ಅರ್ಥಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಬಳಕೆ ಆಗುತ್ತವೆ.

೨. ಲಂಬಗೆರೆಗೆ ಸಮಾನಾರ್ಥಕ ಪದಗಳ ಹೆಸರುಗಳು ಇತರ ಚಿಹ್ನೆಗಳಿಗಿಂತ ಹೆಚ್ಚಾಗಿವೆ.

೧. ಒಂಟಿಲಂಬಗೆರೆ ೨. ಒಂಟಿನಿಡುಗೀಟು ೩. ಜಂಟಿಲಂಬಗೆರೆ ೪. ಜೋಡಿಲಂಬಗೆರೆ ೫. ಬಿಡಿಲಂಬಗೆರೆ ೬. ನೇರಗೆರೆ ೭. ಸಂಕ್ಷಿಪ್ತಾರ್ಥಚಿಹ್ನೆ

೮. ಉದ್ದಗೆರೆ ೯. ಜೋಡಿನಿಡುಗೀಟು ೧೦. ದಂಡ ೧೧. ಸಿಂತಗೆರೆ ೧೨. ಸ್ತಂಭರೇಖೆ ೧೩. ದೀರ್ಘಸ್ವರಸೂಚಕ ೧೪. ನಿಡುಗೀರು ೧೫. ಲಂಬಗೆರೆ ೧೬. ಸರಳರೇಖೆ ೧೭. ಉದ್ದಗೀರು ೧೮. ಜೋಡಿಗೀರು ಇತ್ಯಾದಿ. ಒಂದುಗೀಟು ಎರಡುಗೀಟು ಋಜೂರ್ಧ್ವರೇಖೆ ಗೆರೆಗಳ ಲೇಖನ ಚಿಹ್ನೆಗಳು ಗಣಿತದಲ್ಲಿ ವಿಶೇಷ ಬಳಿಕೆಯಾಗುತ್ತದೆ. ವಿನ್ಯಾಸದಲ್ಲಿ ನಾನಾರೂಪಗಳಲ್ಲಿದೆ.

- / \ + ˙- -- - ---- =

೩. ಗೆರೆಚಿಹ್ನೆಗಳ ಬದಲು ಅಕ್ಷರಗಳನ್ನು, ಮುದ್ರಣವಿನ್ಯಾಸಗಳನ್ನು ಬಳಸುವುದು ಚಿಹ್ನೆಗೆ ಬದಲು ಮತ್ತು ಅಡಿಗೆರೆಗೆ ಬದಲು ದಪ್ಪಕ್ಷರಗಳಲ್ಲಿ ಬಣ್ಣದಕ್ಷರಗಳಲ್ಲಿ ಅಚ್ಚುಮಾಡುವುದು ಇತ್ಯಾದಿ ಕಾಣಬಹುದು. (ರೋಮನ್ ಅಂಕಿಗಳೆಲ್ಲ ಗೆರೆಗಳ ವಿನ್ಯಾಸದಲ್ಲಿವೆ ಎಂಬುದನ್ನು ಗಮನಿಸಬೇಕು. I II III IV.... ಇವುಗಳನ್ನೂ ಕನ್ನಡದಲ್ಲಿ ಬಳಸುತ್ತೇವೆ)

೪. ಪದಗಳನ್ನು ಸಂಕ್ಷೇಪಿಸಿರುವುದನ್ನು ಸೂಚಿಸಲು ಬಳಸುವ ನೇರಗೆರೆ ಚಿಹ್ನೆಗೆ ಸಂಕ್ಷಿಪ್ತಾರ್ಥಚಿಹ್ನೆ ಎಂದು ಹೆಸರು. ಇದು ಸಂಕ್ಷಿಪ್ತಗೊಳಿಸಿದ ಅಕ್ಷರದ ಪಕ್ಕದಲ್ಲಿ 'I' ಈ ರೀತಿ ಒಂದು ನೇರಗೆರೆ ಅಥವಾ ಈ ರೀತಿ 'II' ನೇರಗೆರೆಗಳಿರುವಂತೆ ಬಳಕೆ ಆಗುತ್ತದೆ. ಕೆಲವು ಕವಿತೆಗಳಲ್ಲಿ ಪಲ್ಲವಿಯನ್ನು ಸೂಚಿಸಲು, ಜನಪದ ಗೀತೆಗಳಲ್ಲಿ ಒಂದು ಸಾಲನ್ನು ಪುನರಾವರ್ತಿಸಬೇಕೆಂಬ ಅರ್ಥದಲ್ಲೂ ಇದನ್ನು ಬಳಸುವುದುಂಟು.

(ಸಿರಿಗನ್ನಡಗನ್ನಡಿ, ಪುಟ ೩೭೧)

೫. "ಕೆಲವು ಚಿಹ್ನೆಗಳಿಗೂ ಮಾತಿಗೂ ನೇರ ಸಂಬಂಧವಿದೆ (ಉದಾ: ಭಾವಸೂಚಕಚಿಹ್ನೆ, ಪ್ರಶ್ನಚಿಹ್ನೆ ಇತ್ಯಾದಿ) ಆದರೆ ಕೆಲವು ಚಿಹ್ನೆಗಳು ಬರವಣಿಗೆಯಲ್ಲಿ ಮಾತ್ರ ಬಳಕೆಯಲ್ಲಿವೆ. ಇಂತಹ ಕೆಲವು ಚಿಹ್ನೆಗಳು ವಿಶಿಷ್ಟ ಸಂದರ್ಭಗಳಲ್ಲಿ, ನಿರ್ದಿಷ್ಟ ಉದ್ದೇಶಗಳಿಗಾಗಿ ಬಳಕೆ ಆಗುತ್ತವೆ. (ಗೆರೆಗಳ ಚಿಹ್ನೆಗಳು ಆ ಗುಂಪಿಗೆ ಸೇರಿವೆ.)

(ಕನ್ನಡ ಶೈಲಿ ಕೈಪಿಡಿ, ಪುಟ ೨೮)

ಉದಾ: (ಅ) ವ್ಯಕ್ತಿಗಳ ವಿವಿಧ ವೃತ್ತಿ, ಪದವಿ, ಪ್ರಶಸ್ತಿಗಳನ್ನು ಸಂಕ್ಷಿಪ್ತವಾಗಿ ಅವರ ಹೆಸರುಗಳ ಹಿಂದೆ ಬಳಸುವಾಗ ಆ ಸಂಕ್ಷಿಪ್ತಾಕ್ಷರಗಳಿಗೆ ೧ ಒಂಟಿ ಲಂಬಗೆರೆ ಅಥವಾ ಜೋಡಿ ಲಂಬಗೆರೆಯನ್ನು ಬಳಸುತ್ತಾರೆ. ಈ ಕಾರಣದಿಂದ ಇದನ್ನು ಸಂಕ್ಷಿಪ್ತಾಕ್ಷರ ಚಿಹ್ನೆ ಎಂದು ಸಿರಿಗನ್ನಡಗನ್ನಡಿಕಾರರು ಕರೆದಿರುವುದು ಉಚಿತವಾಗಿದೆ.

೧. ಡಾ॥ (ಡಾಕ್ಟರ್), ೨. ಪ್ರೊ॥ (ಪ್ರೊಫೆಸರ್ ಅಥವಾ ಪ್ರೊಪ್ರೈಟರ್), ೩. ಸಂ॥ (ಸಂಪಾದಕರು) ಆ॥ ವಿ॥ (ಆಸ್ಥಾನವಿದ್ವಾನ್), ವಿ॥ (ವಿದ್ವಾನ್), ಪ.ಭೂ॥ (ಪದ್ಮಭೂಷಣ), ವೇ॥ ಬ್ರ॥ ಶ್ರೀ॥ (ವೇದಬ್ರಹ್ಮಶ್ರೀ), ಪ॥ ಪೂ॥ (ಪರಮಪೂಜ್ಯ), ಪಂ॥ ಪಂಡಿತ, ನಿ॥ (ನಿರ್ದೇಶಕರು), ಮು॥ ಮಂ॥ (ಮುಖ್ಯಮಂತ್ರಿ) ಇತ್ಯಾದಿ.

ಉದಾ: (ಆ) ಮೇಲ್ಕಂಡ ಸಂಕ್ಷಿಪ್ತಾಕ್ಷರಗಳಿಗೆ '॥' ಗೆರೆ ಬದಲಾಗಿ '।' ಗೆರೆ ಅಥವಾ ಪೂರ್ಣವಿರಾಮವನ್ನು ಬಳಸಲಾಗುತ್ತದೆ. ಡಾ। ಡಾ. ಪ್ರೊ. ಪ್ರೊ। ಸಂ। ಪ.ಪೂ. ಇತ್ಯಾದಿ.

ಉದಾ: (ಉ) ದಾಸರ ಕೀರ್ತನೆಗಳಲ್ಲಿ ಪಲ್ಲವಿ, ಅನುಪಲ್ಲವಿಯನ್ನು ಸೂಚಿಸುವಾಗ '।' ಅಥವಾ '॥' ಗೆರೆಯನ್ನು ಬಳಸುತ್ತಾರೆ.

ಅವತರಿಸುವನು । ಹರಿಯತಿ ದಯದೊಳು ॥ ॥ ಪ ॥
ಸುವಿಮಲ ಭಕ್ತರ । ಬವಣೆಯ ಬಿಡಿಸಲು ॥ ॥ಅ.ಪ॥

ಓರೆಗೆರೆ - (/) (ಬಲಕ್ಕೆ ಬಾಗಿದ ಲಂಬರೇಖೆ) Oblique
ವಕ್ರರೇಖೆ, ಬಾಗುರೇಖೆ, ಕುಟಿಲರೇಖೆ.

೧. ಪದ, ವಾಕ್ಯಗಳಲ್ಲಿ 'ಅಥವಾ' ಎಂಬರ್ಥವನ್ನು ಸಾಂಕೇತಿಸಲು ಬಳಸುವ ಚಿಹ್ನೆಗೆ ಓರೆಗೆರೆ ಚಿಹ್ನೆ (/) ಎಂದು ಹೆಸರು.

ಬಲಕ್ಕೆ ಓರೆಯಾಗಿರುವುದರಿಂದ ಬಲಓರೆಗೆರೆ ಎಂದು ಕರೆಯಬಹುದು. ಇದನ್ನು ಅಥವಾಗೆರೆ ಎಂದೂ ಕರೆಯಬಹುದು.

೨. ಪದ, ಪದಪುಂಜ ವಾಕ್ಯಾಂಶಗಳ ನಡುವೆ ಪರ್ಯಾಯವನ್ನು ಸೂಚಿಸಲು ಓರೆಗೆರೆ ಬಳಕೆಯಾಗುತ್ತದೆ.

(ಕನ್ನಡ ಕೈಪಿಡಿ, ಪುಟ ೩೧)

೩. ಆಹ್ವಾನ ಪತ್ರಿಕೆಗಳಲ್ಲಿ ಸ್ತ್ರೀ-ಪುರುಷರನ್ನು ಸಂಬೋಧಿಸುವಾಗ ಅಥವಾ ವಿಳಾಸಗಳಲ್ಲಿ ಪ್ರಾರಂಭದಲ್ಲಿ ಬಳಸುವ ಗೌರವಾರ್ಥಕ ಪದಗಳಿಗೆ ಈ ಚಿಹ್ನೆ (/) ಬಳಸುತ್ತಾರೆ. ಉದಾ : ಶ್ರೀ / ಶ್ರೀಮತಿ / ಕುಮಾರ / ಕುಮಾರಿ..... ಅವರಿಗೆ

೪. ಚಿ॥ ಸೌ॥ ಹ॥ ಕುಂ॥ ಶೋ॥ ಚಿರಂಜೀವಿ ಸೌಭಾಗ್ಯವತಿ ಹರಿದ್ರಾ ಕುಂಕುಮಶೋಭಿತೆ ಇತ್ಯಾದಿ ವಿಶೇಷಣಗಳಿಗೆ ಸಂಕ್ಷಿಪ್ತ ರೂಪ ಬಳಸಿದಾಗ '॥' ಚಿಹ್ನೆ ಬಳಸುತ್ತೇವೆ. ಉದಾ : ಕು॥ ಗಿರಿಜಾ

೫. ಸಮಾನಾರ್ಥಕ ಪದಗಳನ್ನು ಬಳಸಿದಾಗ / ಓರೆಗೆರೆಯನ್ನು ಬಳಸುತ್ತೇವೆ.

ಕನ್ನಡದಲ್ಲಿ ಮದುವೆ ಎಂಬುದಕ್ಕೆ ಕಲ್ಯಾಣ / ಪಾಣಿಗ್ರಹಣ / ಪರಿಣಯ / ವಿವಾಹ / ಲಗ್ನ ಎಂಬ ಪರ್ಯಾಯಪದಗಳಿವೆ.

೬. ಇಂಗ್ಲಿಷ್‌ನಲ್ಲಿ ಬಳಸುವ ಕೆಲವು ಓರೆಗೆರೆಚಿಹ್ನೆ ಪದಗಳನ್ನು ಹಾಗೇ ಕನ್ನಡದಲ್ಲಿ ಬಳಸುತ್ತಾರೆ.

C/o, W/o, S/o, D/o (Daughter of) (Care of) (Wife of) (Son of)

(ಕಛೇರಿ ಶಬ್ದಾವಳಿ, ಪುಟ ೩೯೩)

ಚಿಕ್ಕಅಡ್ಡಗೆರೆ (-) (ಹೈಫನ್) Hyphen

ಕೂಡುಗೆರೆ - ಪೂರಕಾರ್ಥಕಚಿಹ್ನೆ ನಿರ್ದೇಶಕಚಿಹ್ನೆ

ಚಿಕ್ಕ ಅಡ್ಡಗೆರೆಯನ್ನು ವಿಪುಲವಾಗಿ ಬಳಸುತ್ತಾರೆ. ಇದರ ಉದ್ದ ಸ್ಪಷ್ಟವಿಲ್ಲ ---- ಹಲವಾರು ಅಳತೆಯ ಉದ್ದಗಳಲ್ಲಿ ಅಚ್ಚಿಸುತ್ತಾರೆ. ದೊಡ್ಡ ಅಡ್ಡಗೆರೆಗಿಂತ ಚಿಕ್ಕದು ಎಂಬ ಕಾರಣಕ್ಕೆ ಇದನ್ನು ಚಿಕ್ಕ ಅಡ್ಡಗೆರೆ ಎನ್ನಬೇಕಾಗಿದೆ. ಇಂಗ್ಲಿಷ್‌ನಲ್ಲಿ ಚಿಕ್ಕ ಅಡ್ಡಗೆರೆ ಎಂದರೆ (ಹೈಫನ್) Hyphen ಮತ್ತು ದೊಡ್ಡ ಅಡ್ಡಗೆರೆಯನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬಳಸುತ್ತಾರೆ. ಆದಕಾರಣ ಅವುಗಳ ಬಗ್ಗೆ ಎಚ್ಚರದಿಂದಿರಬೇಕು.

ಚಿಕ್ಕ ಅಡ್ಡಗೆರೆಯನ್ನು ಕೂಡುಗೆರೆ ಎಂದೂ ಕರೆಯುತ್ತಾರೆ. ಏಕೆಂದರೆ ಪದಗಳ / ಮಾತುಗಳ ನಡುವೆ ಬಳಸಲಾಗುತ್ತದೆ. ಅವುಗಳ ನಡುವಿನ ಪರಸ್ಪರ ಸಂಬಂಧವನ್ನು ಸೂಚಿಸಲು ಬಳಸಲಾಗುತ್ತದೆ. ಇಂದ-ವರೆಗೆ ಎಂಬರ್ಥದಲ್ಲಿ ಬಳಸಲಾಗುತ್ತದೆ.

(ಸಿರಿಗನ್ನಡಗನ್ನಡಿ, ಪುಟ ೩೭೧)

1. ಜೋಡಿಪದಗಳನ್ನು ಬರೆಯುವಾಗ ಚಿಕ್ಕ ಅಡ್ಡಗೆರೆ ಬಳಸಲಾಗುತ್ತದೆ.

   ಉದಾ (ಅ) : ಮನೆ-ಮಠ, ಒಲವು-ಗೆಲುವು, ಅಕ್ಕ-ತಂಗಿ, ಅಚ್ಚು-ಮೆಚ್ಚು, ಅರಶಿನ-ಕುಂಕುಮ, ಊಟ-ಉಪಚಾರ, ಕಸ-ಕಡ್ಡಿ, ಕೆರೆ-ಬಾವಿ, ಕೈ-ಕಾಲು, ಗಾಳಿ-ಮಳೆ, ಛತ್ರ-ಚಾಮರ ಇತ್ಯಾದಿ.

(ಕಂನುಡಿಯ ಹುಟ್ಟು, ಪುಟ ೧೧೦)

2. ಈಚೆಗೆ ಕೆಲವರು ಪದಗಳ ನಡುವೆ ಚಿಕ್ಕಗೆರೆಯಿಲ್ಲದೆ ಜೋಡಿಪದಗಳನ್ನು ಬಳಸುತ್ತಾರೆ. ಮನೆಮಠ, ಒಲವುಗೆಲುವು, ಅಕ್ಕತಂಗಿ, ಅಚ್ಚುಮೆಚ್ಚು ಇತ್ಯಾದಿ. ದಿನಾಂಕವನ್ನು ತಿಳಿಸುವಾಗ ದಿನ ತಿಂಗಳು ವಾರಗಳ ನಡುವೆ - ಚಿಕ್ಕ ಅಡ್ಡಗೆರೆ ಬಳಸುತ್ತಾರೆ. ತಾ 4-8-2012, ದಿನಾಂಕ 30-12-2011 ಇತ್ಯಾದಿ.

3. ಎರಡು ಮಾತುಗಳ ನಡುವೆ ಸೂಚಕವು ಕೊಂಡಿಯಂತೆ ಎಂದರೆ ಮಾತಿಗೆ ಪೂರಕವಾಗಿ ಮಾತು ಬಂದಾಗ ಆ ಮಾತನ್ನು ಅಳವಡಿಸಲು ಬಳಸುವ ಚಿಹ್ನೆ.

ಉದಾ : "---- ಉತ್ತಮ ವರ್ಣದವರು ಎಂದೆನಿಸಿಕೊಂಡಿರುವ ನೀವೆಲ್ಲರೂ - ಸಪ್ರಾಣರೆಂದು ತಿಳಿದಿರುವಿರೇನು? ನೀವೆಲ್ಲ ಹೆಣಗಳಾಗಿದ್ದೀರಿ - ಶತಮಾನಗಳ ಮಮ್ಮಿಗಳಾಗಿದ್ದೀರಿ".

4. ತತ್ಸಮ - ತದ್ಭವ ಪದಗಳನ್ನು ಕೊಡುವಾಗ ಬಳಸಲಾಗುತ್ತದೆ.

ಉದಾ: ತ್ಸ - ತ್ಭ
ಕಬಲ-ಕವಳ

ತ್ಸ - ತ್ಭ
ವಾಪಿ - ಬಾವಿ

ತ್ಸ - ತ್ಭ
ದೀಪಿಕೆ - ದೀವಿಗೆ ಇತ್ಯಾದಿ.

5. ಒಂದೇ ವರ್ಗದ ಪದಗಳು (ಸಂಖ್ಯಾಪದಗಳು) ಒಟ್ಟಿಗೆ ಬಂದಾಗ ಅವುಗಳ ನಡುವೆ ಈ ಚಿಹ್ನೆ ಬಳಕೆ ಆಗುತ್ತದೆ.

ಉದಾ : ಅ, ಜಲ-ಕೂರ್ಮ-ಗಜ-ಫಣಿಯ-ಮೇಲೆ ಧರೆ ವಿಸ್ತರಿಸಿ ನಿಲ್ಲದಂದು, ಗಗನವಿಲ್ಲದಂದು...... ಭಾವದಲ್ಲಿ ಭರಿತ ಅಗಮ್ಯ ಗುಹೇಶ್ವರ ಲಿಂಗವು.

(ಅಲ್ಲಮನ ವಚನಚಂದ್ರಿಕೆ, ಪುಟ 2)

ದೊಡ್ಡ ಅಡ್ಡಗೆರೆ ___ ಉದ್ದಗೆರೆ, ದೀರ್ಘಅಡ್ಡಗೆರೆ Dash

ಲೇಖನಚಿಹ್ನೆಗಳಲ್ಲಿ ಓರೆಗೆರೆ, ಲಂಬಗೆರೆ, ಸಮಗೆರೆ ಮೊದಲಾದವುಗಳು ಗಾತ್ರದಲ್ಲಿ ಚಿಕ್ಕದು ಅಥವಾ ದೊಡ್ಡದಾದರೆ ಸಮಸ್ಯೆ ಇಲ್ಲ. ಆದರೆ ಅಡ್ಡಗೆರೆ ಚಿಹ್ನೆಗಳಲ್ಲಿ ಗಾತ್ರವೇ ಬಹುಮುಖ್ಯ ಸಂಗತಿ ಆಗಿರುತ್ತದೆ. ಚಿಕ್ಕಗೆರೆ ಎಷ್ಟು ಉದ್ದ, ದೊಡ್ಡಗೆರೆ ಎಷ್ಟು ಉದ್ದ ಇರಬೇಕು ಎಂಬುದನ್ನು ಖಚಿತವಾಗಿ ಹೇಳುವಂತಿಲ್ಲ. ಮುದ್ರಣಕಾರನ ವಿನ್ಯಾಸದ ಮೇಲೆ ನಿಂತಿರುತ್ತದೆ. ಚಿಕ್ಕಗೆರೆ ---- ಇದ್ದರೆ ದೊಡ್ಡಗೆರೆ ———— ಇರುತ್ತದೆ. ಒಂದೊಂದು ಗ್ರಂಥದಲ್ಲಿ ಒಂದೊಂದು ಉದ್ದದಲ್ಲಿರುತ್ತದೆ. ಉದ್ದವ್ಯತ್ಯಾಸದಿಂದ ಗೆರೆಯ ಅರ್ಥವೇ ಬೇರೆ ಆಗುತ್ತದೆ. ನಿಖರತೆ ಈ ಚಿಹ್ನೆಯಲ್ಲಿ ನಿರ್ಧರಿಸುವುದು ಕಷ್ಟ.

ಇದಕ್ಕೆ ಇಂಗ್ಲಿಷ್‌ನಲ್ಲಿ ಸ್ಪಷ್ಟವಾಗಿ ಎರಡು ಪ್ರತ್ಯೇಕ ನುಡಿಗಳಿವೆ. ಚಿಕ್ಕ ಅಡ್ಡಗೀಟು Hyphen ದೊಡ್ಡಅಡ್ಡಗೀಟು Dash ಕನ್ನಡದಲ್ಲಿ ಚಿಕ್ಕದೊಡ್ಡ ವಿಶೇಷಣಗಳಿಂದ ಪ್ರತ್ಯೇಕ

ಹೆಸರುಗಳಿವೆ. ಹೆಚ್ಚು ಉಪಯುಕ್ತವಾದ ಚಿಹ್ನೆಗಳು ಗೆರೆಚಿಹ್ನೆಗಳು. ಪದಗಳ ಸಂದರ್ಭಗಳಲ್ಲೂ ವಾಕ್ಯಗಳ ರಚನೆಯಲ್ಲೂ ಬಳಕೆಯಾಗುವ ಚಿಹ್ನೆಗಳಾಗಿವೆ. ದೊಡ್ಡ ಅಡ್ಡಗೀಟನ್ನು ಕೆಲವೇ ಸಂದರ್ಭಗಳಲ್ಲಿ ಬಳಸುತ್ತೇವೆ. "ವಾಕ್ಯದಲ್ಲಿ ಅದರ ಅರ್ಥವನ್ನು ಕೊಡುವ ಕೆಲವು ಮಾತುಗಳನ್ನು ಬರೆದು ಇದ್ದಕ್ಕಿದ್ದ ಹಾಗೆಯೇ ನಿಲ್ಲಿಸಿದಾಗ ಅಥವಾ ಆ ವಾಕ್ಯದಲ್ಲಿ ಬೇರೆ ಅರ್ಥವಿರುವ ವಾಕ್ಯಭಾಗಗಳೋ, ವಾಕ್ಯವೋ, ಬಂದು ಸೇರಿಕೊಂಡ ಅವುಗಳನ್ನು ಪ್ರತ್ಯೇಕಿಸಿ ತೋರಿಸಲು ದೊಡ್ಡಅಡ್ಡಗೀಟು Dash ಬಳಸುತ್ತೇವೆ.

1. ಕೆಲವೊಮ್ಮೆ ಕೆಲವರು ದೊಡ್ಡ ಅಡ್ಡಗೀಟಿಗೆ ಬದಲು ( ) ಆವರಣಚಿಹ್ನೆ ಬಳಸುತ್ತಾರೆ. ನಾಲ್ಕು ಚುಕ್ಕೆಯನ್ನು ಬಳಸುವುದೂ ಉಂಟು.

   ಉದಾ : ಒಂದು ವೇಳೆ ಚಿತ್ರಗಳಿಗೆ ಪುಟಸಂಖ್ಯೆ ಇಲ್ಲದಿದ್ದರೆ ಆಗ - - - ಪುಟದ ಎದುರುಬದಿಯಲ್ಲಿ ಎರಡೋ ಅಥವಾ .... ಪುಟದ ನಂತರದ ಆರುಪುಟಗಳು ಎಂದೋ ಅಚ್ಚುಮಾಡಬಹುದು.

   (ಕನ್ನಡ ಶೈಲಿ ಕೈಪಿಡಿ, ಪು. ೧೪೫)

2. ಒಂದು ದೊಡ್ಡ ವಾಕ್ಯದಲ್ಲಿ ಹಲವು ಪದಗಳು ಒಟ್ಟಿಗೆ ಸಾಲಾಗಿ ಬಂದಾಗ ಅವುಗಳ ನಡುವೆ – ಚಿಹ್ನೆಯನ್ನೂ ಕೊನೆಯದಕ್ಕೆ ದೊಡ್ಡ ಅಡ್ಡಗೆರೆಯನ್ನೂ ಬಳಸುತ್ತಾರೆ.

   ಉದಾ : ತಾಳ್ಮೆ, ನಗೆ, ಬೆಳೆಸು, ಉಣಿಸು, ದಾರಿ, ತಿಳಿವು, ಯಜಮಾನ – ಈ ಪದಗಳಲ್ಲಿ ತೋರುವ ಪ್ರತ್ಯಯಗಳು ಯಾವುವು?

   (ಕನ್ನಡ ಮೂಲವ್ಯಾಕರಣ, ಪುಟ ೪೨)

3. ವಿವರಣೆಗೆ ಮುಂಚೆ ಶೀರ್ಷಿಕೆಗಳನ್ನು ಬರೆದು ಅವುಗಳ ಸಂಕೇತಗಳನ್ನು ಕೊಡುವ ಮೊದಲಿಗೆ – ಚಿಹ್ನೆ ಬಳಸಲಾಗುತ್ತದೆ.

   ಉದಾ : ಪೂರ್ಣವಿರಾಮ – (.) – ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣ ವಿರಾಮಚಿಹ್ನೆಯನ್ನು ಬರೆಯಬೇಕು.

   (ಕನ್ನಡ ವ್ಯಾಕರಣ ದರ್ಪಣ, ಪುಟ ೨೯೧)

ವಿವರಣಾತ್ಮಕ ಚಿಹ್ನೆ – (:)

1. ಸಮಾನಾರ್ಥಕ ಶಬ್ದಗಳ ಬೇರೆ ಬೇರೆ ರೂಪಗಳನ್ನು ಬಳಸಲು '–' ಚಿಹ್ನೆ ಬಳಸಲಾಗಿದೆ.

ಉದಾ : ಸೊರೆ-ಸೋರೆ ಕಬ್ಬುನ-ಕಬ್ಬುಣ ರೂಪು-ರೂಹು-ರೂಪ ಪಂಜರ-ಹಂಜರ ಪುತ್ಥಳಿ-ಪುತ್ತಳಿ ಕ್ರಿ-ಕ್ರೀ-ಕ್ರೀಯೆ-ಕ್ರಿಯೆ ನಡು-ನೆಡು ಡಂಬ-ಡಂಬು-ಡಂಬ.

2. ವಾಕ್ಯ ಸರಣಿಯಲ್ಲಿ ಭಂಗದೋರಿದಾಗ ಅದನ್ನು ಸೂಚಿಸುವುದಕ್ಕೆಂದು Dash – ಎಂಬ ಸರಳರೇಖೆಯನ್ನು ಬಳಸಲಾಗಿದೆ.

ಉದಾ : ನಾದಪ್ರಿಯ ಶಿವನೆಂಬರು – ನಾದಪ್ರಿಯ ಶಿವನಲ್ಲಯ್ಯಾ;
ವೇದಪ್ರಿಯ ಶಿವನೆಂಬರು – ವೇದಪ್ರಿಯ ಶಿವನಲ್ಲವಯ್ಯಾ;

ಅಡಿಗೆರೆ (Underline)

1. ಇದು ಅತಿದೀರ್ಘ ಅಡ್ಡಗೆರೆ ಆಗಿದ್ದು ಇದನ್ನು ಬಳಸುವ ಸ್ಥಾನ ಬೇರೆ ಆಗಿದೆ. ಸಾಮಾನ್ಯ ದೊಡ್ಡಅಡ್ಡಗೆರೆಯನ್ನು ಪದಗಳ ವಾಕ್ಯಗಳ ಪಕ್ಕದಲ್ಲಿ ಬಳಸುತ್ತೇವೆ. ಆದರೆ ಈ ಚಿಹ್ನೆಯನ್ನು ಪದ, ವಾಕ್ಯಗಳ ಕೆಳಗೆ ಬಳಸುತ್ತೇವೆ.

ಉದಾ: <u>ನಿರ್ನಿಮಿತ್ತಂ</u> ಎಂಬುದು ಪ್ರ.ಪ್ರದಲ್ಲಿ <u>ನೀಂನಿಮಿತ್ತಂ</u> ಎಂದಾಗಿದೆ.

2. ಬರವಣಿಗೆಯಲ್ಲಿ ಮುಖ್ಯವಿಷಯವೊಂದನ್ನು ಗುರುತಿಸಲೂ ಓದುಗರ ಗಮನವನ್ನು ಯಾವುದಾದರೊಂದು ಪದ, ಪದಪುಂಜ ಅಥವಾ ವಾಕ್ಯದತ್ತ ಸೆಳೆಯಲೂ ಆ ಭಾಗದ ಕೆಳಗೆ ದೀರ್ಘಗೆರೆ ಹಾಕುವ ರೂಢಿ ಇದೆ. ಇದು ಬಹುಮಟ್ಟಿಗೆ ಹಸ್ತಪ್ರತಿಗಳಲ್ಲಿ ಬಳಕೆಯಿದೆ. ಆದರೆ ಮುದ್ರಣದಲ್ಲಿ ಈ ಅಂಶವನ್ನು ದಪ್ಪಕ್ಷರಗಳಲ್ಲಿ ಸೂಚಿಸುವುದುಂಟು.

ಉದಾ: ಇನ್ನು ಮುಂದಿನ ವಿಚಾರಣೆಗೆ ತಮ್ಮ ಖುದ್ದು ಹಾಜರಿ ಅಗತ್ಯ

ನನ್ನ ಮಟ್ಟಿಗೆ ಹೇಳುವುದಾದರೆ ಆ ಯೋಜನೆಯನ್ನು **ಸದ್ಯಕ್ಕೆ ಕೈ ಬಿಡುವುದು** ಒಳ್ಳೆಯದು.

(ಕನ್ನಡ ಶೈಲಿ ಕೈಪಿಡಿ : ಪುಟ. ೨೯೬)

ಸಮಚಿಹ್ನೆ ಅಥವಾ ಸಮಾನಾರ್ಥಕಚಿಹ್ನೆ = Equal Mark

- = ≡ ೩ ಬಗೆಗಳಲ್ಲಿ ೧, ೨, ೩ ಅಡ್ಡಗೀಟುಗಳ ಮೂಲಕ ಸೂಚಿಸಲಾಗುತ್ತದೆ. ಇದನ್ನು Equal Mark, Equal Marks, All Equal Marks ಹ್ರಸ್ವ ಸಮತಲ, ದ್ವಿರೇಖೆ ಅಥವಾ ಸಮೀಕರಣಚಿಹ್ನೆ, ಸರಿಸಮ ಚಿಹ್ನೆ ಎಂದು ಕರೆಯುವರು.

1. ಸಾಮಾನ್ಯವಾಗಿ ಗಣಿತದಲ್ಲಿ ಬಳಸುವ ಹಲವಾರು ಚಿಹ್ನೆಗಳನ್ನು + - = X ಮೊದಲಾದ ಲೇಖನಚಿಹ್ನೆಗಳಲ್ಲೂ ಬೇರೆ ಅರ್ಥಗಳಲ್ಲಿ ಬಳಸುತ್ತೇವೆ. - ಅನ್ನು ದೊಡ್ಡಗೀಟು = ಸಮಚಿಹ್ನೆ ≡ ಸರ್ವತ್ರಸಮಚಿಹ್ನೆ ಎಂದು ಬಳಸುತ್ತೇವೆ.

2. ವಿಭೂತಿ ಚಿಹ್ನೆಯಾಗಿ ≡ ಆಚಾರಸಂಹಿತೆಯಲ್ಲಿ ಬಳಸಲಾಗುತ್ತದೆ.

3. ವಿಶೇಷವಾಗಿ ಸಮಚಿಹ್ನೆಯನ್ನು = ಲೇಖನಚಿಹ್ನೆಯಾಗಿ ಬಳಸುತ್ತೇವೆ. ವಿಶೇಷವಾಗಿ ಕಠಿಣ ಪದಗಳಿಗೆ ಅರ್ಥ ಕೊಡುವಾಗ ಬಳಸುತ್ತೇವೆ.

ಸೌಜನ್ಯ = ವಿನಯ, ಶಿವ = ಹರ.

ಕೂಡುಚಿಹ್ನೆ + (ಗಣಿತದ ಚಿಹ್ನೆ, ಉದ್ದಗೆರೆ - ಅಡ್ಡಗೀಟು) Plus Mark

ಈ ಚಿಹ್ನೆಗೆ ಸಂಕಲನ ಚಿಹ್ನೆ, ಅಧಿಕಚಿಹ್ನೆ, ಹೆಚ್ಚುಚಿಹ್ನೆ, ಸೇರ್ಪಡೆಚಿಹ್ನೆ, ಧನಸೂಚಕಚಿಹ್ನೆ, ವಿಭಾಜಕಚಿಹ್ನೆ Plus Mark ಮೊದಲಾದ ಹೆಸರುಗಳಿವೆ.

ಎರಡು ಪದಗಳನ್ನು ಅಥವಾ ಪ್ರಕೃತಿ ಪ್ರತ್ಯಯಗಳನ್ನು ಕೂಡಿಸಿ ಸಂಧಿ ಮಾಡಿ ಹೇಳುವಾಗ, ಎರಡು ಪದಗಳನ್ನು ಸೇರಿಸಿ ಸಮಾಸಮಾಡುವಾಗ ಅಥವಾ ಎರಡು ಸಂಖ್ಯೆಗಳನ್ನು ಕೂಡಿಸಿದೆ ಎಂಬರ್ಥದ ಸೂಚನೆ ನೀಡುವಾಗ ಸಾಮಾನ್ಯವಾಗಿ + ಚಿಹ್ನೆ ಬಳಕೆ ಆಗುತ್ತದೆ.

ಉದಾ (ಅ) : ಸಂಧಿ ಮಾಡುವಾಗ

ಮನೆ + ಅಲ್ಲಿ = ಮನೆಯಲ್ಲಿ

ಅವನ + ಊರು = ಅವನೂರು

ಉದಾ (ಆ) : ಸಮಾಸ ಮಾಡುವಾಗ

ದೇವರ + ಮಂದಿರ = ದೇವಮಂದಿರ (ಷ.ತ.ಸ)

ಕೈಯ + ಮುಂದು = ಮುಂಗೈ (ಅಂಶಿ.ಸ)

ಉದಾ (ಇ) : ಸಂಖ್ಯೆಯನ್ನು ಕೂಡಿಸುವಾಗ

೪ + ೮ = ೧೨ ಇತ್ಯಾದಿ.

ಉದಾ (ಈ) : ಕಾಗುಣಿತ ಒತ್ತಕ್ಷರಗಳ ಸ್ವರ + ವ್ಯಂಜನಗಳನ್ನು ಬಿಡಿಸಿ ತೋರಿಸುವಾಗ

ಕ್ಷ = ಕ್ + ಷ್ + ಅ

ಕಾ = ಕ್ + ಅ

ತೃ = ತ್ + ಋ ಇತ್ಯಾದಿ.

(ಕನ್ನಡ ವ್ಯಾಕರಣ ದರ್ಪಣ : ಪುಟ. ೨೯೬)

V ಆವರಣಚಿಹ್ನೆಗಳು (Brockets)

ಕಂಸಾವರಣ ( ) ಸೊನ್ನೆಯ ಅರ್ಧಭಾಗಗಳು ಅರ್ಧವೃತ್ತಾವರಣ Round Brockets ದುಂಡಾವರಣ, ದುಂಡುಕಂಸ ಮೊದಲಾದ ಹೆಸರುಗಳು ಈ ಚಿಹ್ನೆಗಿದೆ.

ಆವರಣ ಚಿಹ್ನೆಗಳು ಹೆಚ್ಚಾಗಿ ಬಳಕೆಯಾಗುವ ಲೇಖನಚಿಹ್ನೆಗಳಲ್ಲಿ ಮುಖ್ಯವಾಗಿವೆ. ಇಂಗ್ಲಿಷಿನಲ್ಲಿ Brockets ಅನ್ನುತ್ತಾರೆ. ಕನ್ನಡದಲ್ಲಿ ಕಂಸ, ಅರ್ಧವೃತ್ತ ಚಿಹ್ನೆಗಳನ್ನು ಬಳಸಲಾಗುತ್ತದೆ.

ಆವರಣಚಿಹ್ನೆಗಳಲ್ಲಿ ಹಲವು ವಿಧಗಳಿವೆ. ದುಂಡಾವರಣ, ಪುಷ್ಪಾವರಣ, ಚೌಕಾವರಣ ಚಿಹ್ನೆ ಇತ್ಯಾದಿ.

ನಿಘಂಟು, ಸಂಪಾದಿತಗ್ರಂಥಗಳು, ವ್ಯಾಕರಣ ಆಕರಗ್ರಂಥಗಳು ಮೊದಲಾದ ಗ್ರಂಥಗಳಲ್ಲೂ ಕಥೆ, ಕಾದಂಬರಿ, ನಾಟಕ ಮೊದಲಾದ ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳಲ್ಲೂ ವಿಜ್ಞಾನ ಗ್ರಂಥಗಳಲ್ಲೂ ಆವರಣಚಿಹ್ನೆಗಳು ಬಳಕೆ ಆಗುತ್ತವೆ.

( ) [ ] ಕಂಸಾವರಣ, ಚೌಕಾವರಣ ಇವೆರಡನ್ನು ಒಂದರ ಬದಲು ಇನ್ನೊಂದನ್ನು ಬಳಸುವುದನ್ನು ಕಾಣುತ್ತೇವೆ. ಅನೇಕರು ( ) [ ] ಚಿಹ್ನೆಗಳನ್ನು ನಿರ್ದಿಷ್ಟವಾಗಿ ಅಥವಾ ಏಕರೂಪವಾಗಿ ಬಳಸುವುದಿಲ್ಲ.

1. ಉದಾ : ಪದ್ಯಗಳಿಗೆ ಅನ್ವಯಾರ್ಥವನ್ನು ಬರೆಯುವಾಗ ಪದ್ಯದ ಮೂಲಪದ ಗಳನ್ನು ಅಥವಾ ಅವುಗಳ ಅರ್ಥವನ್ನು ಆವರಣ ಚಿಹ್ನೆಯಲ್ಲಿ ಕೊಡುತ್ತಾರೆ.

ಪಂಪನು ಕದಳೀ (ಬಾಳೆಯ) ಗರ್ಭ (ಒಳಗಿನಭಾಗದಂತೆ) ಶ್ಯಾಮಂ (ಕಪ್ಪಾದವನು) ಮೃದು (ವೂ) ಕುಟಿಲ (ಉಂಗುರ, ಅಲೆಯಲೆ, ವಕ್ರ) ವು ಆದ ಶಿರೋರುಹ (ತಲೆಕೂದಲು ಉಳ್ಳವನು) ಸರೋರುಹ (ತಾವರೆಯಂತೆ) ವದನಂ (ಮುಖವುಳ್ಳವನು) ಮೃದು (ವೂ) ಮಧ್ಯಮ (ಅಷ್ಟು ಎತ್ತರವಲ್ಲ ಅಷ್ಟು ಕುಳ್ಳಲ್ಲದ, ಅಷ್ಟು ಕೃಶವಲ್ಲದ, ಅಷ್ಟು ಸ್ಥೂಲವಲ್ಲ)ದ ತನು (ಮೈಉಳ್ಳವನು) ಹಿತವೂ ಮಿತವೂ ಮೃದುವೂ ಆದ ವಚನಂ (ಮಾತಿನವನು) ಲಲಿತವೂ ಮಧುರವೂ ಸುಚರವೂ ಆದ ವೇಷದವನು.

(ಜಿ.ಪಿ. ರಾಜರತ್ನಂ, ಶ್ರೀಕವಿ ಪಂಪ, ಪುಟ ೨೦)

2. ಕ್ರಮಸಂಖ್ಯೆ ಸೂಚಿಸುವಾಗ ಸಾಮಾನ್ಯವಾಗಿ ಜೋಡಿ ಆವರಣ ಚಿಹ್ನೆ ( ) ಬಳಸುತ್ತಾರೆ. ಕೆಲವೊಮ್ಮೆ ಏಕಾವರಣಚಿಹ್ನೆ ಬಳಸುತ್ತಾರೆ.

ಉದಾ: (೧) (೨) (೩) ಇತ್ಯಾದಿ

೧) ೨) ೩) ೪) ಇತ್ಯಾದಿ

ಚೌಕಾವರಣ ಚಿಹ್ನೆ Square brackets

ಹೊರಗಿನ ಆವರಣ ಚಿಹ್ನೆ, ಬಾಹ್ಯಾವರಣ ಚಿಹ್ನೆ, ಚೌಕಕಂಸ, ಇತ್ಯಾದಿ ಹೆಸರುಗಳು ಈ ಚಿಹ್ನೆಗಿವೆ.

ಇದನ್ನು ದೊಡ್ಡಾವರಣ ಚಿಹ್ನೆ ಎಂದೂ ಕರೆಯುವರು. ಗ್ರಂಥಸಂಪಾದನಶಾಸ್ತ್ರದಲ್ಲಿ ಇದರ ಬಳಕೆ ಎಷ್ಟೋಕಡೆ ( ) ದುಂಡಾವರಣ ಚಿಹ್ನೆ ಸ್ಥಳದಲ್ಲಿ [ ] ಚೌಕಾವರಣವನ್ನು [ ] ಚೌಕಾವರಣಚಿಹ್ನೆ ಸ್ಥಳದಲ್ಲಿ ( ) ದುಂಡಾವರಣವನ್ನು ಬಳಸುತ್ತಾರೆ. ಇದೇನು ಎಂದು ಹೇಳುವುದು ಕೆಲವು ಸಂದರ್ಭಗಳಲ್ಲಿ ಕಠಿಣ. ಆದರೂ ನಿರ್ದಿಷ್ಟರೀತಿಯಲ್ಲಿ ಚೌಕಾವರಣ ಬಳಸಬೇಕು ಎಂಬುದನ್ನು ಸೂಚಿಸಬೇಕು. ದುಂಡಾವರಣ ಚಿಹ್ನೆ ಚೌಕಾವರಣಚಿಹ್ನೆಗಿಂತ ಹೆಚ್ಚಾಗಿ ಬಳಕೆ ಆಗುತ್ತದೆ.

೧. ಯಾವುದೇ ಕಾರಣದಿಂದ ತಪ್ಪುರೂಪ ಬಳಕೆಗೊಂಡಿದ್ದರೆ ಸಾಧ್ಯವಾದ ಕಡೆಗಳಲ್ಲಿ ಸರಿಯಾದರೂಪವನ್ನು ಚೌಕ ಕಂಸದಲ್ಲಿ ಕೊಡಲಾಗಿದೆ.

ಉದಾ: ಆಜ್ಯೆ [ಆಜ್ಯ] = ತುಪ್ಪ

(ವರ್ಣಾತ್ಮಕ ವಚನ ಪದಕೋಶ, ಸಂಗಮೇಶ ಸವದತ್ತಿಮಠ, ಪುಟ ೩೭)

ಪುಷ್ಪಾವರಣ ಚಿಹ್ನೆ { } Flower Brackets

ವಿಶೇಷವಾಗಿ ಗಣಿತದಲ್ಲಿ ಬಳಸುವ ಚಿಹ್ನೆ. ವ್ಯಾಕರಣ ಗ್ರಂಥದಲ್ಲೂ ಬಳಕೆ ಆಗುತ್ತದೆ. ಹಲವು ಪದಗಳನ್ನು ಹಲವು ಸಾಲುಗಳಲ್ಲಿ ಒಟ್ಟಿಗೆ ಇವೆಲ್ಲ ಒಂದೇ ಗುಂಪು ಎಂದು ತೋರಿಸುವಾಗ ಈ ಚಿಹ್ನೆ ಬಳಸಲಾಗುತ್ತದೆ. ಇದರ ಉದ್ದ ಅಗತ್ಯಕ್ಕೆ ತಕ್ಕಂತೆ ಇರುತ್ತದೆ.

ಉದಾ: ಕೆಂಜಂಜೆ
ಕಿಸುಸಂಜೆ   ಕೆಚ್ಚನೆ + ಸಂಜೆ

ಪಚ್ಚೆಲೆ
ಪಸೆರೆಲೆ   ಪಚ್ಚನೆ + ಎಲೆ

ಬ್ರಹ್ಮ
ವಿಷ್ಣು   ತ್ರಿಮೂರ್ತಿಗಳು
ಮಹೇಶ್ವರ

VI ವಿಶೇಷ ಚಿಹ್ನೆಗಳು

'ಇ' - ಕಂಸ ಚಿಹ್ನೆ E

(ಸಂಪಾದಕರ ಚಿಹ್ನೆ) (Editorial Bracket)

ಈ ಚಿಹ್ನೆಯನ್ನು ವಿಶೇಷವಾಗಿ ಕನ್ನಡ ನಿಘಂಟಿನಲ್ಲಿ ಬಳಸಲಾಗಿದೆ. ಇಂಗ್ಲಿಷ್‌ನ E ಇ ದೊಡ್ಡಕ್ಷರವನ್ನು ಚಿಹ್ನೆಯಾಗಿ ಬಳಸಿದೆ. ಈ ಕಂಸವು ನಿಘಂಟು ಸಂಪಾದಕರು ಸಂಯೋಜಿಸಿದ ಪಾಠವನ್ನು ಸೂಚಿಸುವಲ್ಲಿ ಬಳಸಿದೆ. ಇದನ್ನು ಸಾಮಾನ್ಯವಾಗಿ ಪ್ರಕೃತಶಬ್ದಕ್ಕೆ ಮಾತ್ರ ಹಾಕಿದೆ. ಶಾಸನಗಳಿಂದ ಪ್ರಯೋಗಗಳನ್ನು ಎತ್ತಿಕೊಂಡಾಗ ಅವುಗಳನ್ನು ತಿದ್ದಬೇಕಾದ ಸಂದರ್ಭಗಳಲ್ಲಿ E ಇ ಕಂಸವನ್ನು ಹಾಕಿದೆ.

ಉದಾ : ಅಚ್ಚವೂ Eವ3ತ್ತಳಿಕೆ, ಅಜ್ಜವ Eವೊ3ಡೆಯ, ಅಡಗು ಶೇ Eಸೇ3ವಕ ಇತ್ಯಾದಿ.

ಅಚ್ಚಿನ ಚಿಹ್ನೆಗಳು (Printed Marks)

ಮುದ್ರಣ ವಿನ್ಯಾಸದಲ್ಲಿ ಹಲವಾರು ಅಚ್ಚಿನ ಚಿಹ್ನೆಗಳನ್ನು ಲೇಖನಚಿಹ್ನೆಗಳಾಗಿ ಬಳಸುವ ಪರಿಪಾಟವನ್ನು ನಾವು ಕಾಣುತ್ತೇವೆ. ಇವುಗಳಲ್ಲಿ ಸಾಮಾನ್ಯವಾಗಿ ಕೈಬರಹದಲ್ಲಿ ಕೆಲವನ್ನು ಬಳಸುವುದಿಲ್ಲ. ಇಂತಹ ಚಿಹ್ನೆಗಳಲ್ಲಿ ಕೆಲವು ಹೀಗಿವೆ.

* ಇತ್ಯಾದಿ ಇನ್ನು ಕೆಲವನ್ನು ಕೈ ಬರಹಗಳಲ್ಲಿ ಬಳಸುತ್ತಾರೆ. * † ‡ ಇತ್ಯಾದಿ ಈ ಚಿಹ್ನೆಗಳಲ್ಲಿ ಕೆಲವನ್ನು ಅಡಿಟಿಪ್ಪಣಿ ಚಿಹ್ನೆಗಳೆಂದೂ ಮುಖ್ಯಾಂಶ ಚಿಹ್ನೆಗಳು ಎಂದೂ ಕರೆಯುವುದುಂಟು. ಮುಕ್ತಾಯದ ಚಿಹ್ನೆಗಳಾಗಿ _ . _ ಇತ್ಯಾದಿ ಬಳಸುತ್ತಾರೆ. ಚಿಹ್ನೆಯನ್ನು ಮುಖ್ಯಾಂಶದ ಚಿಹ್ನೆಯನ್ನಾಗಿಯೂ ಮುಕ್ತಾಯದ ಚಿಹ್ನೆಯನ್ನಾಗಿಯೂ ಬಳಸುತ್ತಾರೆ.

ಮುಖ್ಯವಾಗಿ ಚೌಕಳಿಚಿಹ್ನೆ ■ ವೃತ್ತಚಿಹ್ನೆ ● ದಟ್ಟ ತ್ರಿಭುಜ ಚಿಹ್ನೆ ▲ಗಳನ್ನು ಅಚ್ಚಿನ ಚಿಹ್ನೆಗಳೆಂದು ಕರೆಯಬಹುದು.

ಕಾಕಪಾದ ಚಿಹ್ನೆ ⌃ Caret

ಹಂಸಪಾದಚಿಹ್ನೆ, ಅಧ್ಯಾಹಾರಚಿಹ್ನೆ ಎಂದೂ ಇದನ್ನು ಕರೆಯುತ್ತಾರೆ.

ಬರಹದ ಕಾಲದಲ್ಲಿ ಏನಾದರೂ ಬಿಟ್ಟು ಹೋಗಿದ್ದರೆ ಆ ಪದ, ಪದಪುಂಜ, ವಾಕ್ಯ, ಪ್ಯಾರಾಗಳನ್ನು ಸೇರಿಸಲು ಪದಗಳ ನಡುವೆ ಬುಡದಲ್ಲಾಗಲಿ ಮಧ್ಯದಲ್ಲಾಗಲಿ ⌃ ಚಿಹ್ನೆಬಳಸಿ ಅಂಚಿನಲ್ಲಿ ಸೇರಿಸಬೇಕಾದ ಭಾಗವನ್ನು ಸೂಚಿಸುತ್ತಾರೆ. ಕರಡು ತಿದ್ದುವಿಕೆಯಲ್ಲಿ ಈ ಚಿಹ್ನೆ ವಿಶೇಷವಾಗಿ ಬಳಕೆ ಆಗುತ್ತದೆ.

ಅವಗ್ರಹ ಚಿಹ್ನೆ - S

೧. ಅವಗ್ರಹಚಿಹ್ನೆಯನ್ನು ಪದ್ಯಗಳಲ್ಲಿ ಪ್ಲುತವಾಗಿ ಉಚ್ಚರಿಸುವುದನ್ನು ಸೂಚಿಸಲು ಬಳಸಲಾಗುತ್ತದೆ.

ಉದಾ : ಹೇ ಗಿರಿಸುತೇ । ನಿನ್ನ ನಾಭಿ ಗಂಗಾನದಿಯ
ನೀರೊಳಲುಗದಿಹ ಸುಳಿ । ಮಾಲೆಮೊಗ್ಗುಗಳ ಬೆಟ್ಟ
ರೋಮಾವಳೀಲತೆಯಾಪಾತಿ । ಮನ್ಮಥನ ತೇಜೋSಗ್ನಿ
ಬೆಳಗುವ ಕುಂಡವು

(ಎಂ.ವಿ.ಸೀ. : ಸೌಂದರ್ಯಲಹರಿ ಪದ್ಯ : ೭೬)

೨. ಜಾನಪದದ ಸಾಹಿತ್ಯದಲ್ಲಿ ದೀರ್ಘ ಪ್ಲುತ, ಸುದೀರ್ಘಪ್ಲುತಗಳಿಗೆ S S S S ಎಂದು ಒಂದಕ್ಕಿಂತ ಹೆಚ್ಚಾಗಿ ಬಳಸಲಾಗುತ್ತದೆ.

ಲೇಲಾಲಿ ಲೇಸೋ S S ಲೈಲಾಲಿ ಲೇಸೋ S S S

೩. S ಜೋಡಿ ಅವಗ್ರಹಚಿಹ್ನೆಯನ್ನು ಅಡಿಟಿಪ್ಪಣಿ ಚಿಹ್ನೆಯಾಗಿಯೂ ಬಳಸುತ್ತಾರೆ. ಸಂಪಾದಕರ ಚಿಹ್ನೆಯಾಗಿಯೂ ಬಳಸುತ್ತಾರೆ.

ಶರಾಗ್ರ ಚಿಹ್ನೆ, ಬಾಣದ ತುದಿಚಿಹ್ನೆಗಳು (V ಚಿಹ್ನೆ) Arrowmarks < > ^ V

↓ ↑ ← → ಮೊದಲಾದ ರೀತಿಗಳಲ್ಲಿ ಬಾಣಚಿಹ್ನೆಗಳು ಗ್ರಂಥಗಳಲ್ಲಿ ನಕ್ಷೆಗಳಲ್ಲಿ ಬಳಕೆ ಆಗಿವೆ. ಭಾಷಾಶಾಸ್ತ್ರ ಗ್ರಂಥಗಳಲ್ಲಿ ಕೋಶಗಳಲ್ಲಿ ಬಾಣದ ತುದಿ ಚಿಹ್ನೆಗೆ ಬದಲಾಗಿ < > ಚಿಹ್ನೆಗಳು ವಿಶೇಷವಾಗಿ ಬಳಕೆ ಆಗುತ್ತವೆ.

೧. > ಮೊಮ್ಮೊನೆ ಬಾಣಚಿಹ್ನೆ (ಬಾಣದ ತುದಿ) ಕಡಿಮೆ ಸೂಚಕ ಚಿಹ್ನೆ ಇದು ಒಂದು ರೂಪದಿಂದ ಮತ್ತೊಂದು ನಿಷ್ಪನ್ನವಾಗಿದೆ ಎಂಬುದನ್ನು ಸೂಚಿಸುತ್ತದೆ.
ಲಕ್ಷ್ಮೀ > ಲಕುಮೀ, ಸಂಧ್ಯಾ > ಸಂಜೆ, ದಂಷ್ಟ್ರ > ದವಡೆ.

೨. < ಹಿಮ್ಮೊನೆ ಬಾಣಚಿಹ್ನೆ (ಹೆಚ್ಚು ಸೂಚಕಚಿಹ್ನೆ) ಒಂದು ರೂಪ ಮತ್ತೊಂದರಿಂದ ನಿಷ್ಪನ್ನವಾಗಿದೆ ಎಂಬುದನ್ನು ಸೂಚಿಸುತ್ತದೆ. ಮತ್ತು ಒಂದು ಶಬ್ದದ ರೂಪವನ್ನು ಮತ್ತೊಂದು ಮುಖ್ಯ ಶಬ್ದದ ರೂಪದ ಕೆಳಗೆ ವಿವೇಚಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ.
ಉದಾ: ಅಕ್ಕಿ (ನಾ) [ದೇ. < ಅರ್ಕಿ ॥ ತಮಿಳು ಅರಿ, ಅರಿಚಿ

೩. ಕನ್ನಡದಲ್ಲಿ ಬಳಕೆ ಇರುವ ಶಬ್ದರೂಪ ಮೂಲಭಾಷೆಯಿಂದ ನೇರವಾಗಿ ಬರದೆ ಬೇರೊಂದು ಭಾಷೆಯ ಮೂಲಕ ಬಂದಿರುವ ಸಂದರ್ಭದಲ್ಲಿ ನೇರಸಂಪರ್ಕವುಳ್ಳ ಭಾಷೆಯನ್ನು ನಿಷ್ಪತ್ತಿಚಿಹ್ನೆಯಿಂದ ಸೂಚಿಸಿ ಆ ಭಾಷೆಯ ಶಬ್ದರೂಪದ ಮುಂದೆ ಓರೆಯಾದ ಲಂಬಗೆರೆ (/) ಕೊಟ್ಟು ಮೂಲಭಾಷೆಯನ್ನು ಸೂಚಿಸಲಾಗುತ್ತದೆ.

ಉದಾ : ಅರಸ (<ತಮಿ ಅರಶನ್ / ಸಂ. ರಾಜನ್)

ಸಂಸ್ಕೃತದ ರಾಜನ್ ತಮಿಳಿನಲ್ಲಿ 'ಅರಶನ್' ಆಗಿ ತಮಿಳಿನ ಮೂಲಕ ಕನ್ನಡಕ್ಕೆ ಬಂದು 'ಅರಸ' ಆಯಿತು ಎಂದು ಅಭಿಪ್ರಾಯ.

೪. ಬಿಟ್ಟು ಹೋದ ಭಾಗವನ್ನು ಮೇಲ್ಮುಖಚಿಹ್ನೆ ∧ (ಹಂಸಪಾದ) ಇಂದ ಸೂಚಿಸಲಾಗುತ್ತದೆ.

ಉದಾ : ರಾಮನು ∧ ಕಾಡಿಗೆ ಹೋದನು

೫. ಕರಡಚ್ಚು ತಿದ್ದುವಾಗ ಕೆಳಮುಖಚಿಹ್ನೆ Vಯನ್ನು ಲೇಖನಚಿಹ್ನೆ ಸೂಚಿಸಲು ಬಳಸಲಾಗುತ್ತದೆ.

ಉದಾ : ರಮಣ ಕವಿಗೆ 6 ಸಾಹಿತ್ಯಧುರೀಣ V ಪ್ರಶಸ್ತಿ ನೀಡಲಾಯಿತು

ಪುನರಾವರ್ತನೆ (Ditto marks) - " -

- " - ಸಣ್ಣ ಅಡ್ಡಗೀಟುಗಳ ನಡುವೆ ಜೋಡಿ ಅಲ್ಪವಿರಾಮಚಿಹ್ನೆ ಒಂದು ಸಾಲಿನಲ್ಲೂ ಅದೇ ಸ್ಥಳದಲ್ಲಿ ಪುನರಾವರ್ತನೆ ಆಗಬೇಕಾದ ಸಂದರ್ಭಗಳಲ್ಲಿ ಅದನ್ನು ಮತ್ತೆ ಬರೆಯದೆ ಪುನರಾವರ್ತನೆ ಚಿಹ್ನೆ (ಡಿಟೋ ಚಿಹ್ನೆ) ಬಳಸಲಾಗುತ್ತದೆ. ಕೆಲವರು - ಡಿಟೋ - ಎಂಬುದಾಗಿ ಮುಂದೆ ಬರೆಯುತ್ತಾರೆ.

ಸಣ್ಣ ಅಡ್ಡಗೀಟುಗಳ ನಡುವೆ ಜೋಡಿ ಅಲ್ಪವಿರಾಮದ ಚಿಹ್ನೆಯೇ ಡಿಟೋ ಚಿಹ್ನೆ - " - ಸಾಮಾನ್ಯವಾಗಿ ಪಟ್ಟಿಗಳಲ್ಲಿ ಇದರ ಬಳಕೆ ಹೆಚ್ಚು.

ಉದಾ: ಈ ಕೆಳಗಿನ ಪುಸ್ತಕಗಳನ್ನು ನಮ್ಮ ಶಾಲೆಗೆ ಸರಬರಾಜು ಮಾಡಿ :-

ಕ್ರ.ಸಂ.	ಪುಸ್ತಕದ ಹೆಸರು	ತರಗತಿ	ಪ್ರತಿಗಳು
೧	ಗಣಿತಪಠ್ಯಗಳು	೫ನೇ ತರಗತಿ ಪಠ್ಯ	೪೦
೨	- " -	೬ನೇ ತರಗತಿ ಪಠ್ಯ	೩೦
೩	- " -	೭ನೇ ತರಗತಿ ಪಠ್ಯ	೬೦

ವಿರುದ್ಧಾರ್ಥಚಿಹ್ನೆ X ಗುಣಕಚಿಹ್ನೆ Mark of Opposition

ಉದಾ : ಗಣಿತದ ಗುಣಕಚಿಹ್ನೆಯನ್ನು ವ್ಯಾಕರಣಗಳಲ್ಲಿ ವಿರುದ್ಧಪದಗಳನ್ನು ಸೂಚಿಸಲು ಬಳಸುತ್ತಾರೆ.

ಹಗಲು x ರಾತ್ರಿ

ಸಜ್ಜನ x ದುರ್ಜನ

ಬಿಳಿ x ಕಪ್ಪು

ಉದಾ: ಮನೆ ಅಳತೆಯನ್ನು ಸೂಚಿಸುವಾಗ ಬಳಸುತ್ತಾರೆ ೪೦' x ೬೦' ಅಳತೆಯ ವಿಸ್ತೀರ್ಣದ ಬೆಲೆ ೨ ಲಕ್ಷ ರೂ.

ಉದಾ: ಗ್ರಂಥ ಸಂಪಾದನಶಾಸ್ತ್ರದಲ್ಲಿ ಮಾತೃಕೆಗಳಲ್ಲಿ ಗ್ರಂಥಪಾತವಾಗಿರುವುದನ್ನು ತೋರಿಸಲು (X X X ೩ ಸಲ) ಗುಣಕಚಿಹ್ನೆಯನ್ನು ಬಳಸುತ್ತಾರೆ.

ಸರಿ ತಪ್ಪು ಸೂಚಿಸುವಾಗ ತಪ್ಪನ್ನು ಸೂಚಿಸಲು X ಚಿಹ್ನೆಯನ್ನು ಬಳಸುತ್ತಾರೆ.

ವಿಶೇಷ ಚಿಹ್ನೆಗಳು

ಲೋಲಕ ಚಿಹ್ನೆ (Pendulum Mark)

(ಗೆರೆಸೊನ್ನೆ ಮೇಲೆ ಕೆಳಗೆ ಗಡಿಯಾರದ ಲೋಲಕದಂಥ) ಲೋಲಕಚಿಹ್ನೆ ಪೆಂಡ್ಯುಲಂ ಚಿಹ್ನೆ.

ವಂಶವೃಕ್ಷದ ನಕ್ಷೆಗಳಲ್ಲಿ ಸಂತತಿ ಮುಂದುವರಿಯಲಿಲ್ಲ ಎಂಬುದನ್ನು ತಿಳಿಸುವ ಚಿಹ್ನೆ. ಉದಾ :

ಮೋಕ್ಷಗುಂಡಂ ಕೃಷ್ಣಭಟ್ಟ (ಸು. 1650)

ಪುತ್ರ

ರಘುಪತಿಭಟ್ಟ

ಮೋಕ್ಷಗುಂಡಂ ಲಕ್ಷ್ಮೀಪತಿಭಟ್ಟ

೧. ತಿಪ್ಪಾಶಾಸ್ತ್ರಿ ೨. ರಾಮಭದ್ರಯ್ಯ ೩. ವಾಸುದೇವಯ್ಯ ೪. ಕಿಟ್ಟಯ್ಯ ೫. ವೆಂಕಟೇಶಯ್ಯ

ಗ್ರಂಥಋಣ

1. ಕನ್ನಡವ್ಯಾಕರಣ ಯಾಕೆ ಬೇಕು? - ಡಿ.ಎನ್. ಶಂಕರಭಟ್
   ಪ್ರ: ಭಾಷಾ ಪ್ರಕಾಶನ, ಹೆಗ್ಗೋಡು, ಸಾಗರ 2009 (1)
   (ಬರಹದ ಗುರುತುಗಳ ಬಳಕೆ ಪುಟ 79-85)
2. ಕನ್ನಡ ವ್ಯಾಕರಣ ಮತ್ತು ರಚನೆ - ಲೇ: ಎನ್. ಗೋಪಾಲಕೃಷ್ಣ ಉಡುಪ
   ಪ್ರ : ಎಂ.ಸಿ.ಸಿ. ಪಬ್ಲಿಕೇಷನ್ಸ್, ಬೆಂಗಳೂರು ೯ 2012 (5)
   (ಲೇಖನ ಚಿಹ್ನೆಗಳು ಪುಟ 131-149)
3. ಲೇಖನ ಚಿಹ್ನೆಗಳು : ಟಿ.ಎಸ್. ಗೋಪಾಲ್
   ಪ್ರ : ನವಕರ್ನಾಟಕ ಪ್ರಕಾಶನ 2015
4. ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಪೂರ್ವಜರು ಗ್ರಂಥ : ಡಾ.ಟಿ. ವಿ ವೆಂ ಶಾಸ್ತ್ರಿ 2014 ಪುಟ 89
5. ಕನ್ನಡರತ್ನಕೋಶ (ಪರಿಷ್ಕೃತ) ಪ್ರ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
   (ಬರವಣಿಗೆಯ ಚಿಹ್ನೆಗಳು ಪುಟ 399)
6. ಕನ್ನಡನಿಘಂಟು (ಸಂಪುಟ-1) ಪ್ರ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
7. ಶಂಕರನಾರಾಯಣ ಇಂ-ಇಂ-ತೆಲುಗು ನಿಘಂಟು ಪರಿಷ್ಕೃತ, ಪರಿವರ್ಧಿತ ಕರ್ತ. ಆನಂದ ಸತ್ಯನಾರಾಯಣ, ವಿಕ್ಟರಿ ಪಬ್ಲಿಷರ್ಸ್ 2008
   (ವಾಕ್ಯವಿರಾಮ ನಿಯಮಾಲು ಪುಟ 1315)

ಅಧ್ಯಾಯ : 6

ಕರಡು ತಿದ್ದುವಿಕೆ ಮತ್ತು ಗ್ರಂಥ ಸಂಪಾದನಶಾಸ್ತ್ರ

ಗ್ರಂಥಸಂಪಾದನೆ ಒಂದು ಕಲೆಯೂ ಹೌದು, ಒಂದು ಶಾಸ್ತ್ರವೂ ಹೌದು. ಕಲೆಯಾದಾಗ ಸಂಪಾದಕನ ಪ್ರತಿಭೆ ಹೊರಹೊಮ್ಮುತ್ತದೆ. ಶಾಸ್ತ್ರವಾದಾಗ ನಿಯಮಗಳ ಪರಿಪಾಲನೆಯಲ್ಲಿ ತಜ್ಞತೆ ಹೊರಹೊಮ್ಮುತ್ತದೆ. ವಿಜ್ಞಾನವಾದಾಗ ಸಂಶೋಧಕ ಗುಣ ಹೊರಹೊಮ್ಮಬೇಕು.

ಗ್ರಂಥ ಸಂಪಾದನಶಾಸ್ತ್ರದಲ್ಲಿ ಹಲವು ಅಂಗಗಳಿವೆ.

1. ಲೇಖನ ಚಿಹ್ನೆಗಳ ಬಳಕೆ
2. ಸಂಕೇತ ಚಿಹ್ನೆಗಳ ಬಳಕೆ
3. ಸಂಕ್ಷಿಪ್ತಾಕ್ಷರಗಳ ಬಳಕೆ
4. ಸಂಕೇತಾಕ್ಷರಗಳ ಬಳಕೆ
5. ಗ್ರಂಥಸಂಪಾದನಶಾಸ್ತ್ರದ ವಿಶೇಷ ಚಿಹ್ನೆಗಳ ಬಳಕೆ ಇತ್ಯಾದಿ.

ಈ ಲೇಖನದಲ್ಲಿ ಸಂಕ್ಷಿಪ್ತಾಕ್ಷರಗಳ ಮತ್ತು ಸಂಕೇತಾಕ್ಷರಗಳ ಬಳಕೆಯನ್ನು ಗ್ರಂಥಸಂಪಾದನೆಯ ಶಾಸ್ತ್ರದ ಹಿನ್ನೆಲೆಯಲ್ಲಿ ಪ್ರಸ್ತಾಪಿಸಲಾಗಿದೆ.

ಸಂಕ್ಷಿಪ್ತಾಕ್ಷರ ಅಥವಾ ಸಂಕ್ಷೇಪಾಕ್ಷರಗಳನ್ನು ಕುರಿತು ಎಂ.ಎಂ. ಕಲ್ಬುರ್ಗಿ ಅವರು ಹೇಳುವ ಮಾತಿದು, "ಪಾಠ ಪ್ರಸಂಗದಲ್ಲಿ ಸಂಕೇತಗಳನ್ನು ಬಳಸಿದರೆ ಹಸ್ತಪ್ರತಿ ಮತ್ತು ಸಹಾಯಕಕೃತಿ ಸೂಚನೆಗಾಗಿ ಸಂಕ್ಷೇಪಗಳನ್ನು ಬಳಸಬೇಕು." ಲೇಖನ ಚಿಹ್ನೆಗಳನ್ನು ಕಲ್ಬುಗಿ ಅವರು ಸಂಕೇತಗಳೆಂದೂ ಸಂಕ್ಷಿಪ್ತಾಕ್ಷರಗಳನ್ನು/ಸಂಕೇತಾಕ್ಷರಗಳನ್ನು ಸಂಕ್ಷೇಪಗಳೆಂದೂ ಕರೆದಿದ್ದಾರೆ.

ಸಂಕ್ಷಿಪ್ತಾಕ್ಷರ ಎಂದರೇನು?

ಮೈಸೂರು ವಿಶ್ವವಿದ್ಯಾನಿಲಯ ಇಂಗ್ಲಿಷ್-ಕನ್ನಡ ನಿಘಂಟಿನಲ್ಲಿ ಸಂಕ್ಷಿಪ್ತಾಕ್ಷರಗಳಿಗೆ Abbreviation ಸಂಕ್ಷಿಪ್ತ ಎಂಬುದನ್ನು ಸಮಾನಾರ್ಥವಾಗಿ ಕೊಟ್ಟಿದೆ. ಸಂಕ್ಷಿಪ್ತ ಎಂಬ ಪದವನ್ನು ಸೂಚಿಸಲು ಸಂಕ್ಷಿ ಎಂದು ಬಳಸಿದೆ. ಸಂಕೇತಾಕ್ಷರ ಎಂಬುದಕ್ಕೆ ಸಂಕೇ

ಎಂದು ಸೂಚಿಸಲಾಗಿದೆ. ಸಂಕೇತಗಳನ್ನು symbol ಎಂದು ಕರೆದಿದೆ. Abbreviation ಎಂಬುದಕ್ಕೆ 1) ಸಂಕ್ಷೇಪಣ; ಸಂಕ್ಷೇಪ ಮಾಡುವುದು, 2) ಸಂಕ್ಷೇಪ; ಸಂಕ್ಷಿಪ್ತ ಪದ, ರೂಪ, ಹ್ರಸ್ವಪದ ರೂಪ ಎಂದು ಕೊಟ್ಟಿದೆ. (ಪುಟ 5 ಮೈ.ವಿ.ವಿ.ಇಂಕ.ನಿ.)

ಸಂಕ್ಷಿಪ್ತಾಕ್ಷರಗಳು ಎಂದರೆ ಪದಗಳಲ್ಲಿರುವ ಕೆಲವು ಅಕ್ಷರಗಳನ್ನು ಅಡಕಗೊಳಿಸಿ ಸಂಕೇತಿಸುವ ಅಕ್ಷರಗಳನ್ನು ಸಂಕ್ಷಿಪ್ತಾಕ್ಷರಗಳು ಎನ್ನಬಹುದು. ಎರಡು ಅಥವಾ ಎರಡಕ್ಕಿಂತ ಹೆಚ್ಚಾಗಿರುವ ಪದಗಳ ಸಂಕ್ಷೇಪೀಕರಣವನ್ನು ಸಂಕ್ಷಿಪ್ತಾಕ್ಷರಗಳು ಎನ್ನಬಹುದು.

ಉದಾ : ವಾಲ್ಮೀಕಿ ರಾಮಾಯಣ-ವಾ.ರಾ.

ಕನ್ನಡ ಗ್ರಂಥ ಸಂಪಾದನೆ- ಕ.ಗ್ರ.ಸಂ.

ಸಂಕ್ಷೇಪಗಳ ನಿರ್ಮಾಣ ವಿಧಾನವನ್ನು ಕುರಿತು ಕಲ್ಬುರ್ಗಿ ಅವರು, "ಈ ಸಂಕ್ಷೇಪ ಒಂದುಅಕ್ಷರಯುಕ್ತವಾಗಿದ್ದರೆ ಕೃತಿಯ ಶಿರೋನಾಮೆ ತಟ್ಟನೆ ನೆನಪಿಗೆ ಬಾರದ ಕಾರಣ ಸಾಮಾನ್ಯವಾಗಿ ಎರಡಕ್ಷರಗಳಿಗೆ ಯುಕ್ತವಾಗಿರಬೇಕು. ಎರಡಕ್ಷರಗಳಿಗಿಂತ ಹೆಚ್ಚಾಗುತ್ತಾ ಹೋದಂತೆಲ್ಲಾ ಅದರ ಸಂಕ್ಷೇಪಗಳು ಕಡಿಮೆಯಾಗುತ್ತಾ ಹೋಗುತ್ತವೆ" ಎಂದಿದ್ದಾರೆ.

ಎರಡಕ್ಷರಗಳಿಗೆ ಸಂಕ್ಷೇಪಗಳು ಸೀಮಿತಗೊಳ್ಳಬೇಕಾದ ಅಗತ್ಯವೇನಿಲ್ಲ. ಸಂಕ್ಷಿಪ್ತಾಕ್ಷರಗಳು ಎರಡು, ಮೂರು, ನಾಲ್ಕು, ಐದು ಅಕ್ಷರಗಳಿಂದ ಕೂಡಿರಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ ಸಂಪಾದಕ ಮಂಡಳಿ ಬಹಳ ಚರ್ಚೆ ಮಾಡಿ ಮೂರಕ್ಷರ ಪದ್ಧತಿ ಬಳಸಿದ್ದಾರೆ. ಕನ್ನಡದಲ್ಲಿ ಸಾವಿರಾರು ಗ್ರಂಥಗಳನ್ನು ಸಂಕ್ಷಿಪ್ತ ರೂಪದಲ್ಲಿ ಸೂಚಿಸಿದಾಗ ಎರಡಕ್ಷರ ಮಾಡಿದರೆ ಅನೇಕವೇಳೆ ಬೇರೆ ಬೇರೆ ಪದಗಳ ಸಂಕ್ಷಿಪ್ತರೂಪಗಳಾಗಿ ಬಿಡುತ್ತವೆ ಎಂಬ ಕಾರಣಕ್ಕೆ ಮೂರು ಅಕ್ಷರಗಳ ಸಂಕ್ಷಿಪ್ತಗಳನ್ನು ಬಳಸಿದ್ದಾರೆ. ಇದನ್ನು ಗ್ರಂಥಸಂಪಾದನಕಾರರು ಗಮನಿಸುವುದು ಒಳ್ಳೆಯದು.

ಕಾವ್ಯ ಸಂಗ್ರಹ=ಕಾ.ಸಂ. ಇದನ್ನೇ ಕಾಸಂಚ, ಕಾಸಂಗ್ರ ಎಂದು ಮಾಡಿದಾಗ ಸಂಶಯಕ್ಕೆ ಎಡೆಯಿರುವುದಿಲ್ಲ. ಮುಪಾ-ಮುದ್ರಿತ/ಮುಖ್ಯ ಪಾಠ ಎಂದೂ ಎರಡು ಆಗುತ್ತದೆ. ಇದನ್ನು ಮುದ್ರಿಪಾ, ಮುಖ್ಯಪಾ ಎಂದಾಗ ಸಂಶಯಕ್ಕೆ ಎಡೆಯಿರುವುದಿಲ್ಲ.

1. ಕಸಾಪ ನಿಘಂಟುಕಾರರು ಮೂರಕ್ಷರದ ಒಂದೇ ಪದವಿದ್ದರೂ ಮೂರು ಅಕ್ಷರಗಳ ಸಂಕ್ಷಿಪ್ತವನ್ನು ಮಾಡಿದ್ದಾರೆ.

   ಅಂಬಿಕೆ=ಅಂಬಿಕೆ, ಅಕ್ಕಾಜಿ=ಅಕ್ಕಾಜಿ ಅನಾಥೆ=ಅನಾಥೆ, ಇಂದಿರೆ=ಇಂದಿರೆ, (ಇವೆಲ್ಲ ಗ್ರಂಥಗಳ ಹೆಸರುಗಳಾಗಿವೆ).

2. ನಾಲ್ಕಕ್ಷರ ಪದಗಳನ್ನು ಮೂರಕ್ಷರಗಳ ಸಂಕ್ಷಿಪ್ತ ಮಾಡಿದ್ದಾರೆ.
ಅಗ್ನಿಹಂಸ=ಅಗ್ನಿಹಂ, ಅಂತಿಗೊನೆ=ಅಂತಿಗೊ, ಉಡುಗೊರೆ=ಉಡುಗೊ

3. ಐದಕ್ಷರಗಳ ಪದವನ್ನು ಮೂರು ಅಕ್ಷರಗಳಲ್ಲಿ ಸಂಕ್ಷೇಪಗೊಳಿಸಿದ್ದಾರೆ.
ಆದಿಪುರಾಣ=ಆದಿಪು, ಪಂಪಭಾರತ=ಪಂಪಭಾ
ಉದ್ಭಟಕಾವ್ಯ=ಉದ್ಭಟ, ಉದಯರಾಗ=ಉದಯರಾ

ಎರಡು ಪದಗಳ ಸಂಕ್ಷಿಪ್ತಾಕ್ಷರಗಳು

4. ಪದಗಳು ಎರಡು ಇದ್ದಾಗಲೂ ಮೂರಕ್ಷರಗಳ ಸಂಕ್ಷಿಪ್ತಾಕ್ಷರಗಳಲ್ಲಿ ಮಾಡಿದ್ದಾರೆ.
ಉದಾ : ಉತ್ತರರಾಮಾಯಣ=ಉತ್ತರಾ
(ಒಮ್ಮೊಮ್ಮೆ ಒಂದು ಪದದ ಸಂಕ್ಷಿಪ್ತಾಕ್ಷರಗಳೂ ಇತರ ಪದಗಳ ಸಂಕ್ಷಿಪ್ತಾಕ್ಷರಗಳ ಸಮಾನವಾಗಿರುವುದುಂಟು. ಉತ್ತರರಾಮಾಯಣ=ಉತ್ತರಾ, ಆದಯ್ಯನ ವಚನಗಳು=ಆದವ (ಗ್ರಂಥದ ಹೆಸರು).

5. ಮೂರು ಪದಗಳಿದ್ದಾಗ ಅಥವಾ ಎರಡು ಪದಗಳಿದ್ದಾಗ ಹಲವು ಬಗೆಗಳಲ್ಲಿ ಸಂಕ್ಷಿಪ್ತಾಕ್ಷರ ಮಾಡುತ್ತಾರೆ. ಇಳೆಯಾಂಡ ಗುಡಿಮಾರ ರಗಳೆ = ಇಳೆರ

6. ಮೂರು ಪದಗಳಿದ್ದಾಗ ಅಥವಾ ಎರಡು ಪದಗಳಿದ್ದಾಗ ಹಲವು ಬಗೆಗಳಲ್ಲಿ ಸಂಕ್ಷಿಪ್ತಾಕ್ಷರ ಮಾಡುತ್ತಾರೆ. ಇವುಗಳಲ್ಲಿ ಏಕರೂಪತೆ ಇಲ್ಲ.

ಉದಾ : ಪಂಪಭಾರತ = ಪಂಭಾ / ಪಂಪಭಾ
ವಿಕ್ರಮಾರ್ಜುನವಿಜಯ = ವಿಕ್ರವಿ / ವಿವಿ
ಇಳೆಯಾಂಡ ಗುಡಿಮಾರ ರಗಳೆ = ಇಳೆರ / ಇಳೆಯಾ / ಇಳೆಗೂ / ಇಳೆರಾ ಇತ್ಯಾದಿ.

7. ನಾಲ್ಕು ಪದಗಳು ಇದ್ದಾಗಲೂ ಮೂರು ಅಕ್ಷರಗಳ ಸಂಕ್ಷಿಪ್ತ ಮಾಡಲಾಗಿದೆ. ಆಗಸ್ಟ್

8. ಐದು ಪದಗಳಿಗೆ ನಿದರ್ಶನ.
ಆಯುರ್ವೇದೀಯ ಔಷಧಿಗುಣಧರ್ಮಶಾಸ್ತ್ರ ಭಾಗ-1 = ಔಷಧಿ

9. ಸಾಮಾನ್ಯವಾಗಿ ಅದ್ಯಕ್ಷರಗಳನ್ನು ಸಂಕ್ಷಿಪ್ತಾಕ್ಷರಗಳನ್ನಾಗಿ ಮಾಡುವುದು ಪದ್ಧತಿ.
ಶಬ್ದಮಣಿದರ್ಪಣ = ಶ.ಮ.ದ
ಕನ್ನಡ ಸಾಹಿತ್ಯ ಚರಿತ್ರೆ = ಕಸಾಚ

10. ಆದರೆ ಅನೇಕ ವೇಳೆ ಗ್ರಂಥದ ಹೆಸರಿನ ಪದಗಳಲ್ಲಿ ಯಾವುದೋ ಒಂದು ಪದವನ್ನು ಮಾ.ವೆ. (ಮಾವೆಂ=ಮಾಸ್ತಿ ವೆಂಕಟೇಶ್ ಅಯ್ಯಂಗಾರ್), ತ.ರಾ.ಸು. (ತಳುಕಿನ ರಾಮಸ್ವಾಮಯ್ಯ ಸುಬ್ಬರಾವ್), ಅ.ನ.ಕೃ (ಅರಕಲಗೂಡು ನರಸಿಂಗರಾಯ ಕೃಷ್ಣರಾಯ).

ಕೆಲವು ಸಂದರ್ಭಗಳಲ್ಲಿ ಸ್ಥಳವಾಚಕ ಪದಗಳನ್ನು ಸಂಕ್ಷೇಪ ಮಾಡದೆ ಪೂರ್ಣರೂಪಿಗಳನ್ನೇ ಕೊಡುವುದುಂಟು. ನಗರ, ಪಟ್ಟಣ, ಹಾಸನ, ಹಾವೇರಿ, ಇಂಡಿ, ಗುಬ್ಬಿ, ಶಿರಾ.

ದೀರ್ಘ ಸ್ಥಳನಾಮವಾಚಕಗಳನ್ನು ಸಂಕ್ಷೇಪಗೊಳಿಸಿ ಬಳಸಲಾಗುತ್ತದೆ.

ದೇವನಹಳ್ಳಿ	=	ದೇವನ
ದಾವಣಗೆರೆ	=	ದಾವಣ
ನಾಗಮಂಗಲ	=	ನಾಗಮಂ
ಹೊಳೆನರಸೀಪುರ	=	ಹೊಳೆನ
ಹೆಗ್ಗಡದೇವನಕೋಟೆ	=	ಹೆಗ್ಗಡ

(ಕಸಾಪನಿ, ಪು56)

ಸಂಕ್ಷಿಪ್ತಾಕ್ಷರಗಳನ್ನು ಮಾಡುವಾಗ ಮೂಲಪದ ಅಥವಾ ಪದಗಳನ್ನು ನೆನಪಿಸುವಂತಿರಬೇಕು. ಸಂಕ್ಷಿಪ್ತಾಕ್ಷರಗಳನ್ನು ರೂಪಿಸುವಾಗ ಏಕರೂಪತೆ ಕನ್ನಡ ಲೇಖಕರಲ್ಲಿ ಇಲ್ಲ. ಉದಾ : ಆದಿಪು ಎಂದು ಆದಿಪುರಾಣಕ್ಕೆ ಬಳಸಿದಾಗ ಮತ್ತೆ ಕೆಲವರು ಆ.ಪು. ಎಂದು ಬರೆಯುತ್ತಾರೆ.

ಇನ್ನು ಕೆಲವರು ಒಂದೊಂದು ಕಡೆ ಒಂದೊಂದು ರೂಪ ಬಳಸುತ್ತಾರೆ. ತಾವು ಯಾವುದೇ ರೂಪ ಬಳಸಿದರೂ ಇಡೀ ಗ್ರಂಥದುದ್ದಕ್ಕೂ ಯಾವುದಾದರೂ ಒಂದು ರೂಪವನ್ನು ಬಳಸುವುದು ಉಚಿತ.

ಕಲ್ಬುರ್ಗಿ ಅವರು ಕ.ಗ್ರಂ.ಶಾ. ಪುಟ 193ರಲ್ಲಿ ಪಂಭಾ ಎಂದಿದ್ದಾರೆ. ಪುಟ 195ರಲ್ಲಿ ಪಂ.ಭಾ.3-27 ಎಂದಿದ್ದಾರೆ. ಇಲ್ಲಿ ಅಕ್ಷರ ವ್ಯತ್ಯಾಸವಿಲ್ಲದಿದ್ದರೂ, ರೂಪವ್ಯತ್ಯಾಸವಿದೆ. ಒಂದೆಡೆ ಲೇಖನ ಚಿಹ್ನೆ ಬಳಕೆ ಇದೆ; ಇನ್ನೊಂದೆಡೆ ಇಲ್ಲ.

ಇನ್ನು ಕಲ್ಬುರ್ಗಿ ಅವರು ಸಂಕ್ಷಿಪ್ತಾಕ್ಷರಗಳು ಸಾಮಾನ್ಯವಾಗಿ ಎರಡಕ್ಷರಯುಕ್ತ ವಾಗಿರಬೇಕು ಎನ್ನುತ್ತಾರೆ. ಎರಡಕ್ಕೆ ಹೆಚ್ಚಾಗುತ್ತಾ ಹೋದಂತೆ ಅದರ ಸಂಕ್ಷೇಪಗುಣ

ಕಡಿಮೆಯಾಗುತ್ತಾ ಹೋಗುತ್ತದೆ ಎಂದಿದ್ದಾರೆ (ಪುಟ 183 ಕ.ಗ್ರಂ.ಶಾ.). ಈ ಮಾತನ್ನು ಒಪ್ಪುವುದು ಕಷ್ಟ. ಸಂಕ್ಷೇಪದ ಗುಣ ಕಡಿಮೆಯಾಗದು ಮತ್ತು ಎರಡಕ್ಕಿಂತ ಹೆಚ್ಚು ಅಕ್ಷರಗಳನ್ನು ಸಂಕ್ಷೇಪಕ್ಕಾಗಿ ಬಳಸಲೇಬೇಕಾಗುತ್ತದೆ.

ಉದಾ : (ಕ.ಗ್ರಂ.ಶಾ.) ಕಲ್ಬುರ್ಗಿ ಅವರ ಗ್ರಂಥದ ಪುಟ 206ರಲ್ಲಿ ಶಮದ ಸೂ5 ಎಂದು ಗ್ರಂಥದ ಉಲ್ಲೇಖ ಮೂರು ಅಕ್ಷರಗಳಿಂದ ಪುಟ 95ರಲ್ಲಿ ಚೆಬವ19 ಎಂದಿದೆ. ಪುಟ 83ರಲ್ಲಿ ತೊ.ರಾ. ಬಾಲಕಾಂಡ 8-6-6 ಎಂದಿದ್ದಾರೆ. ತೊ.ರಾ.ಅ. ಎಂದು ಮೂರಕ್ಷರಗಳಲ್ಲಿ ಸಂಕ್ಷೇಪ ಮಾಡಿದ್ದಾರೆ. ತೊರವೆರಾಮಾಯಣ ಅರಣ್ಯಕಾಂಡವಾದರೂ ಆಗಬಹುದು ತೊರವೆರಾಮಾಯಣ ಅಯೋಧ್ಯಾಕಾಂಡವಾದರೂ ಆಗಬಹುದು. ಆದಕಾರಣ, ಸಂಕ್ಷೇಪಗುಣ ಕಡಿಮೆ ಆಗುತ್ತದೆ ಎಂಬ ಕಲ್ಬುರ್ಗಿ ಅವರ ಮಾತನ್ನು ಒಪ್ಪುವುದು ಕಷ್ಟ.

ಗ್ರಂಥ ಸಂಪಾದನೆಯ ಕಾವ್ಯಗಳಲ್ಲಿ ಸಂಕ್ಷೇಪಾಕ್ಷರಗಳ ವಿವರಣೆಯನ್ನು ಕೆಲವರು ಪದದ ಮೊದಲಿಗೆ ಕೊಟ್ಟರೆ ಮತ್ತೂ ಕೆಲವರು ಗ್ರಂಥದ ಕೊನೆಯಲ್ಲಿ ಅನುಬಂಧವಾಗಿ ಕೊಡುತ್ತಾರೆ. ಮೊದಲಿಗೆ ಕೊಡುವುದು ಹೆಚ್ಚು ಉಪಯುಕ್ತ.

ವ್ಯಾಕರಣ ಪದಗಳನ್ನು ಏಕಾಕ್ಷರ ಸಂಕ್ಷಿಪ್ತರೂಪದಿಂದ ಸೂಚಿಸುವ ಹಾಗೆ ಛಂದಶ್ಶಾಸ್ತ್ರಗ್ರಂಥಗಳಲ್ಲಿ ಛಂದೋರೂಪಗಳನ್ನು ಏಕಾಕ್ಷರ ಸಂಕೇತಗಳಿಂದ ಸೂಚಿಸುವ ಪರಿಪಾಠ ಇದೆ.

ಭಾಮಿನಿ (ಭಾ), ಕಂದ (ಕಂ), ವೃತ್ತ (ವೃ), ಸಾಂಗತ್ಯ (ಸಾಂ), ಚೌಪದಿ (ಚೌ), ಪಲ್ಲವಿ (ಪ), ಕೆಲವರು ಪಲ್ಲ ಎಂದು ಸೂಚಿಸುತ್ತಾರೆ. ಛಂದಸ್ಸು (ಛಂ) ಇತ್ಯಾದಿ.

ಲೇಖಕರು/ಸಂಪಾದಕರು ಪದವಿ ಪ್ರಶಸ್ತಿಗಳನ್ನು ಸೂಚಿಸುವಾಗ ಸಂಕ್ಷಿಪ್ತಾಕ್ಷರಗಳನ್ನು ಸೂಚಿಸುವ ರೂಢಿಯಿದೆ. ಡಾ|| (ಡಾಕ್ಟರ್), ಪ್ರೊ (ಪ್ರೊಫೆಸರ್), ಪ್ರಾ|| (ಪ್ರಾಧ್ಯಾಪಕ), ಪಂಡಿತ (ಪಂ), ನಿವೃತ್ತ (ನಿ), ಫಾ|| ಫಾದರ್, ರೆ|| ರೆವರೆಂಡ್ ಇತ್ಯಾದಿ.

ಸಾಂಪ್ರದಾಯಿಕ ಪತ್ರಗಳಲ್ಲಿ, ಲಗ್ನಪತ್ರಿಕೆಗಳಲ್ಲಿ ಬಳಸುವ ಸಂಕ್ಷಿಪ್ತಾಕ್ಷರಗಳೆಂದರೆ ಕು|| (ಕುಮಾರ ಅಥವಾ ಕುಮಾರಿ), ಚಿ|| (ಚಿರಂಜೀವಿ), ಸೌ|| (ಸೌಭಾಗ್ಯವತಿ), ಶಾಸನಗಳಲ್ಲಿ ಸಾಕಷ್ಟು ಸಂಕ್ಷೇಪಾಕ್ಷರಗಳ ಬಳಕೆ ಕಾಣಬಹುದು. ಮ=ಮತ್ತರು, ಗ=ಗದ್ಯಾಣ ಇತ್ಯಾದಿ. ಅಳತೆ, ತೂಕ, ಕಾಲ, ಮಾಪಕಗಳ ಕೋಷ್ಟಕಗಳಲ್ಲಿ ಸಂಕ್ಷಿಪ್ತ ರೂಪಗಳ ಬಳಕೆ ಸಾಮಾನ್ಯವಾಗಿದೆ.

ಉ=ಉದ್ದ, ಅ=ಅಗಲ, ಎ=ಎತ್ತರ, ರೂ=ರೂಪಾಯಿ, ಇ=ಇಸವಿ, ಪೌಂ=ಪೌಂಡ್ ಅ=ಅಡಿ, ಅಂ=ಅಂಗುಲ, ಇತ್ಯಾದಿ. ಘಂ=ಘಂಟೆ, ನಿ=ನಿಮಿಷ, ತಿಂ=ತಿಂಗಳು, ಇತ್ಯಾದಿ. ಪದವಿಗಳಲ್ಲಿ ಪರಿಪಾಠವಿದೆ. ಬಿ.ಎ. B.A. (ಬ್ಯಾಚುಲರ್ ಆಫ್ ಆರ್ಟ್ಸ್), ಎಂ.ಎ. (ಮಾಸ್ಟರ್ ಆಫ್ ಆರ್ಟ್ಸ್) ಇತ್ಯಾದಿ.

ಗೌರವಾರ್ಥ ಪದಗಳನ್ನು ಸಂಕ್ಷಿಪ್ತಾಕ್ಷರಗಳಲ್ಲಿ ಸೂಚಿಸುತ್ತಾರೆ. ಗೌ|| ಕಾರ್ಯದರ್ಶಿ (ಗೌ||ಕಾ||) ಪ್ರ.ಸಂ. (ಪ್ರಧಾನ ಸಂಪಾದಕ), ಉಪ.ಸಂ. (ಉಪಸಂಪಾದಕ), ವೇ||ಬ್ರ||ಶ್ರೀ (ವೇದ ಬ್ರಹ್ಮ ಶ್ರೀ), ಆ||ವಿ|| ಆಸ್ಥಾನ ವಿದ್ವಾನ್.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಬೇರೆ ಕಡೆ ಪೂರ್ಣ ವಿರಾಮ ಚಿಹ್ನೆಗಳನ್ನು (ಗ್ರಂಥದ ಹೆಸರು, ಹಸ್ತಪ್ರತಿ ಸಂಕೇತ), ಪೂರ್ಣವಿರಾಮ ಚಿಹ್ನೆಯಿಂದ ಸಂಕ್ಷೇಪಗಳನ್ನು ಸೂಚಿಸಿದರೆ ಇಲ್ಲಿ|| ಜೋಡಿಗೀಟು ಲೇಖನಚಿಹ್ನೆಯಿಂದ ಸಂಕ್ಷೇಪಗಳನ್ನು ಸೂಚಿಸಿದರೆ ಇಲ್ಲಿ|| ಜೋಡಿಗೀಟು ಲೇಖನ ಚಿಹ್ನೆಯಿಂದ ಗುರುತಿಸುತ್ತೇವೆ.

ದಿಕ್ಕುಗಳನ್ನು ಏಕಾಕ್ಷರಗಳಿಂದ ಸಂಕ್ಷೇಪಿಸುತ್ತೇವೆ. ಪೂ (ಪೂರ್ವ), ಪ (ಪಶ್ಚಿಮ), ಉ (ಉತ್ತರ), ದ (ದಕ್ಷಿಣ), ನೈ (ನೈಋತ್ಯ), ಈ (ಈಶಾನ್ಯ), ವಾ (ವಾಯವ್ಯ), ಆ (ಆಗ್ನೇಯ).

ಸಂಕ್ಷಿಪ್ತಾಕ್ಷರಗಳ ಬಳಕೆಯನ್ನು ಗ್ರಂಥಸಂಪಾದನೆಯ ದೃಷ್ಟಿಯಿಂದ ಈ ಲೇಖನದಲ್ಲಿ ಪ್ರಸ್ತಾಪಿಸಿದ್ದರೂ ಎಲ್ಲಾ ಬಗೆಯ ಗ್ರಂಥಗಳಲ್ಲೂ ಬಳಕೆ ಆಗುತ್ತದೆ. ಆಯಾ ಶಾಸ್ತ್ರಕ್ಕೆ ಅನುಗುಣವಾಗಿ ಸಂಕ್ಷಿಪ್ತಾಕ್ಷರಗಳು ರೂಪುಗೊಳ್ಳುತ್ತವೆ. ಒಂದೇ ಅಕ್ಷರ ಒಂದೊಂದು ಸಾಹಿತ್ಯ ಪ್ರಕಾರದಲ್ಲಿ ಅಥವಾ ಶಾಸ್ತ್ರಗ್ರಂಥದಲ್ಲಿ ಒಂದೊಂದು ಅರ್ಥದಲ್ಲಿ ಬಳಸಲಾಗುತ್ತದೆ.

ಉದಾ : ಅ ಎಂದರೆ ಅರಣ್ಯಕಾಂಡ, ಅಯೋಧ್ಯಾಕಾಂಡ, ಅಧ್ಯಾಯ, ಅಡಿ, ಇತ್ಯಾದಿ.

ವಿ.ಸೂ. = ವಿಶೇಷ ಸೂಚನೆ, ವಿಷಯ ಸೂಚನೆ

ಅಕಾನಿ (O O D) ಅನ್ಯಕಾರ್ಯನಿಮಿತ್ತ, ಅಧಿಕೃತಕಾರ್ಯ ನಿಮಿತ್ತ ಇತ್ಯಾದಿ. ಸಂಕ್ಷಿಪ್ತಾಕ್ಷರಗಳು ಬೇರೆ ಬೇರೆ ಅರ್ಥ ಕೊಡುತ್ತವೆ, ಆಗ ಸಂದರ್ಭಾನುಸಾರ ಅರ್ಥೈಸಬೇಕು.

ಸಮಗ್ರವಾಗಿ ಕನ್ನಡದಲ್ಲಿ ಸಂಕೇತಾಕ್ಷರಗಳ ನಿಘಂಟು ರಚನೆ ಆಗಬೇಕಾದ ಅಗತ್ಯವಿದೆ. ಸಾಧ್ಯವಾದಷ್ಟು ಏಕರೂಪ ಬಳಕೆಗೆ ಎಲ್ಲಾ ಲೇಖಕರೂ ವಿದ್ವಾಂಸರೂ ಪ್ರಯತ್ನಿಸಬೇಕು.

ಅಧ್ಯಾಯ : 7

ಕರಡಚ್ಚು ಮತ್ತು ವಾಕ್ಯದೋಷಗಳು

ಕರಡಚ್ಚು ತಿದ್ದುವಿಕೆ ಎಂದರೆ ಅಕ್ಷರದೋಷಗಳನ್ನು ಮತ್ತು ಪದದೋಷಗಳನ್ನು ತಿದ್ದುವುದು ಎಂಬುದು ಸಾಮಾನ್ಯಾರ್ಥ. ಆದರೆ ಸಮರ್ಪಕಾರ್ಥ ಅಥವಾ ಪೂರ್ಣಾರ್ಥವಲ್ಲ.

ಕರಡಚ್ಚು ತಿದ್ದುವಾಗ ಹಲವು ಹಂತಗಳಿವೆ. ಅಚ್ಚಿನ ಅಕ್ಷರದೋಷಗಳನ್ನು ತಿದ್ದುವುದು ಒಂದು ಹಂತ; ಪದದೋಷಗಳನ್ನು (ಶುದ್ಧಾಶುದ್ಧಪದಗಳ ನಿರ್ಣಯ) ಎರಡನೇ ಹಂತ; ವಾಕ್ಯರಚನಾರೀತಿಯನ್ನು ತಿದ್ದುವುದು (ವ್ಯಾಕರಣ ದೋಷಗಳು ವಾಕ್ಯರಚನಾ ಕ್ರಮಗಳು, ಶೈಲಿ ಇತ್ಯಾದಿ) ಮೂರನೆಯ ಹಂತ. ಇನ್ನು ಅಚ್ಚಿನವಿನ್ಯಾಸ ಶೀರ್ಷಿಕೆಗಳನ್ನು ಕೊಡುವರೀತಿ, ವಾಕ್ಯವೃಂದಗಳನ್ನು ಮಾಡುವರೀತಿ, ಪಟ್ಟಿಗಳನ್ನು, ನಕ್ಷೆಗಳನ್ನು ಕೊಡುವ ರೀತಿ, ಕ್ರಮ ವಿನ್ಯಾಸವನ್ನು ನಿರ್ಧರಿಸುವುದು ನಾಲ್ಕನೆಯ ಹಂತ... ಹೀಗೆ ಹಲವಾರು ಹಂತಗಳಿವೆ.

ಇವುಗಳ ಪೈಕಿ ವಾಕ್ಯರಚನಾ ದೋಷಗಳನ್ನು ಕರಡಚ್ಚುಗಾರರು ತಪ್ಪದೇ ಗಮನಿಸಬೇಕು.

ಸಾಮಾನ್ಯವಾಗಿ ಹೊಸಗನ್ನಡ ವ್ಯಾಕರಣಗಳಾಗಲಿ ಹಳಗನ್ನಡ ವ್ಯಾಕರಣಗಳಾಗಲಿ, ಅಕ್ಷರಪ್ರಕರಣ ಪದ ಪ್ರಕರಣಗಳಲ್ಲೇ ಮುಗಿಯುತ್ತವೆ. ವಾಕ್ಯ ಪ್ರಕರಣ ಇರುವುದೇ ಇಲ್ಲ. ಕೆಲವು ಹೊಸಗನ್ನಡ ವ್ಯಾಕರಣಗಳಲ್ಲಿ ವಾಕ್ಯರಚನೆಗೆ ಸಂಬಂಧಿಸಿದಂತೆ, ವಾಕ್ಯದ ವಿಶೇಷವಿಧಿಗಳು (ಕನ್ನಡಲೇಖನ ಲಕ್ಷಣ) ವಾಕ್ಯಪ್ರಯೋಗಗಳು(ಭಾಷಾದೀಪಿಕೆ) ಪದಪ್ರಯೋಗ ಮತ್ತು ವಾಕ್ಯರಚನೆಗಳು(ಕನ್ನಡಶೈಲಿ) ವಾಕ್ಯಪ್ರಕರಣ(ಕನ್ನಡ ವ್ಯಾಕರಣ) ವಾಕ್ಯಖಂಡ (ವಾಕ್ಯಚಿಂತಾಮಣಿ) ಇತ್ಯಾದಿ ಶೀರ್ಷಿಕೆಗಳಲ್ಲಿ ವಾಕ್ಯರಚನಾವಿಧಾನ, ವಾಕ್ಯದೋಷಗಳನ್ನು ಕುರಿತು ಹೇಳಲಾಗಿದೆ. ಹೊಸಗನ್ನಡದ ಅನೇಕ ಶಾಲಾ ವ್ಯಾಕರಣ ಗಳಲ್ಲಿ ಇಂಗ್ಲಿಷ್ ವ್ಯಾಕರಣದ ಅನುಕರಣೆಯಿಂದ ಸರಳವಾಕ್ಯರಚನೆ (ಸಿಂಪಲ್‌ಸೆಂಟೆನ್ಸ್) ಸಂಯೋಜಿತವಾಕ್ಯ(ಕಾಪೌಂಡ್‌ಸೆಂಟೆನ್ಸ್) ಮಿಶ್ರವಾಕ್ಯರಚನೆ (ಕಾಂಪ್ಲೆಕ್ಸ್ ಸೆಂಟೆನ್ಸ್) ಗಳನ್ನು ಅಧ್ಯಾಹಾರ, ಕರ್ತರಿ, ಕರ್ಮಣಿ ಪ್ರಯೋಗಗಳನ್ನು ಭಾವಾರ್ಥಕ ನಿಷೇಧಾಥಕ ವಾಕ್ಯಗಳ ಬಗ್ಗೆ ಹೇಳಿರುತ್ತಾರೆ.

ಆದರೆ ಕರಡಚ್ಚುಗಾರರಿಗೆ ಕರಡು ತಿದ್ದಲು ಇವುಗಳಷ್ಟೇ ಸಾಲದು. ಇದರ ಜತೆಗೆ ವಾಕ್ಯರಚನೆಗಳಲ್ಲಿ ಕಂಡುಬರುವ ದೋಷಗಳಾವುವು? ಅವುಗಳ ಸರಿರೂಪಗಳಾವುವು ಎಂಬುದು ತಿಳಿದಿರಬೇಕು. ಅಕ್ಷರದೋಷಗಳನ್ನು, ಪದದೋಷಗಳನ್ನು ಪ್ರತ್ಯೇಕ ರೂಪದಲ್ಲಿ ತಿಳಿಯುವುದರ ಜತೆಗೆ ವಾಕ್ಯರಚನೆ ಸಂದರ್ಭದಲ್ಲಿ ಅವುಗಳ ಸ್ವರೂಪ ಬಳಕೆ ವಿಧಾನಗಳನ್ನು ಅವುಗಳಲ್ಲಿ ಕಂಡುಬರುವ ದೋಷಗಳನ್ನು ತಿಳಿದಿರಬೇಕು. ಈ ದೃಷ್ಟಿಯಿಂದ ಶೈಲಿಯ ಅಂಗವಾಗಿ ಬರುವ ಕರಡಚ್ಚುಗಾರರಿಗೆ ಉಪಯುಕ್ತವಾದ ಕೆಲವಾರು ವಾಕ್ಯದೋಷಗಳನ್ನು ಸರಿರೂಪಗಳನ್ನು ಇಲ್ಲಿ ಪ್ರಸ್ತಾಪಿಸಿದೆ.

ಕನ್ನಡದಲ್ಲಿ ವಾಕ್ಯರಚನೆ ಬಗ್ಗೆ ವಿಶೇಷ ಗಮನ ಹರಿಸಿದವರೆಲ್ಲಾ ಡಿ.ಎನ್. ಶಂಕರಭಟ್ಟರು ಅಗ್ರಗಣ್ಯರು. ಅವರು ರಚಿಸಿರುವ ಭಾಷಾ-ವ್ಯಾಕರಣ ಗ್ರಂಥಗಳಲ್ಲಿ ಕನ್ನಡ ವಾಕ್ಯಗಳ ಒಳರಚನೆ (2004) ಕನ್ನಡ ಬರಹದ ಸೊಲ್ಲರಿಮೆ-2(2011) ಕನ್ನಡ ವಾಕ್ಯಗಳು (ಆಂತರಿಕ ರಚನೆ ಮತ್ತು ಅರ್ಥವ್ಯವಸ್ಥೆ) (1978) ಮುಂತಾದ ಗ್ರಂಥಗಳು ಅಧ್ಯಯನಯೋಗ್ಯ ಗ್ರಂಥಗಳಾಗಿವೆ.

ಇನ್ನು ವಾಕ್ಯಗಳ ನಿದರ್ಶನಗಳ ಮೂಲಕವೇ ವ್ಯಾಕರಣವನ್ನು ನಿರೂಪಿಸುವ ತೀನಂಶ್ರೀ ಅವರ ಕನ್ನಡ ಮಧ್ಯಮವ್ಯಾಕರಣ, ಪಂಜೆಮಂಗೇಶರಾಯರ ಕನ್ನಡಮೂಲ ವ್ಯಾಕರಣ ಗಮನಾರ್ಹ ಕೃತಿಗಳಾಗಿವೆ. ತೀನಂಶ್ರೀ ಅವರ ಶಾಲಾ ವ್ಯಾಕರಣದಲ್ಲಿ ಕಂಡುಬರುವ ನಿದರ್ಶನವಾಕ್ಯಗಳ ಶೈಲಿ, ವೈವಿಧ್ಯ, ವಿಷಯ ವೈಖರಿಗಳು ಇನ್ನಾವ ವ್ಯಾಕರಣಗಳ ಉದಾಹರಣೆ ವಾಕ್ಯಗಳಲ್ಲಿ ಆ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಈ ಮಾತಿಗೆ ನಿದರ್ಶನವಾಗಿ ತೀನಂಶ್ರೀ ಅವರು ತಮ್ಮ ವ್ಯಾಕರಣ ರಚನಾವಿಧಾನವನ್ನು ಕುರಿತು ಮುನ್ನುಡಿಯಲ್ಲಿ ಹೇಳಿರುವ ಮಾತುಗಳು ಲಕ್ಷ್ಯಾರ್ಹವಾಗಿವೆ.

ವ್ಯಾಕರಣ ಗ್ರಂಥವು ಕೇವಲ ಸೂತ್ರಗಳ ಪಟ್ಟಿಯಾಗಬಾರದು ಅದರಲ್ಲಿ ಸೂತ್ರಕ್ಕಿಂತ ಹೆಚ್ಚಾಗಿ ವಿವರಣೆಯೂ, ವಿವರಣೆಗಿಂತ ಹೆಚ್ಚಾಗಿ ಉದಾಹರಣೆಯು ಬಂದರೆ ಪಾಠವನ್ನು ಓದತಕ್ಕ ವಿದ್ಯಾರ್ಥಿಗಳಿಗೆ ಕ್ಲೇಶ ಕಡಿಮೆ ಆಗುತ್ತದೆ. ಆಸಕ್ತಿಯೂ ಬೆಳೆಯಬಹುದು. ಈ ಅಂಶವನ್ನು ಉದ್ದಕ್ಕೂ ದೃಷ್ಟಿಯಲ್ಲಿಟ್ಟುಕೊಂಡು ಕನ್ನಡ ಮಧ್ಯಮ ವ್ಯಾಕರಣವನ್ನು ರಚಿಸಲಾಗಿದೆ.

ಉದಾಹರಿಸಲು ಬೇಕಾದಷ್ಟು ಒಂದು ಪದವಾಗಿರಲಿ, ಒಂದು ಪ್ರತ್ಯಯವಾಗಿರಲಿ ಅದನ್ನು ಬಿಡಿಯಾಗಿ ಕೊಡದೆ ವಾಕ್ಯದಲ್ಲಿ ಹೊಂದಿಸಿ ಕೊಡುವುದೇ ಇಲ್ಲಿ ಸಾಮಾನ್ಯವಾಗಿ ಅನುಸರಿಸತಕ್ಕ ಪದ್ಧತಿಯಾಗಿದೆ. ಈ ಉದಾಹರಣೆಯ ವಾಕ್ಯಗಳಲ್ಲಿ ಸ್ವಾರಸ್ಯ, ವೈವಿಧ್ಯ ಗಳು ತಪ್ಪದಂತೆ ಆದಷ್ಟು ಮಟ್ಟಿಗೂ ನೋಡಿಕೊಳ್ಳಲಾಗಿದೆ. (ಮುನ್ನುಡಿ ಪುಟ 4)

ಇದಕ್ಕೆ ಒಂದು ಉದಾಹರಣೆಯನ್ನು ಆ ಗ್ರಂಥದಿಂದ ಇಲ್ಲಿ ಎತ್ತಿಕೊಡಲಾಗಿದೆ. (ಪುಟ 61)

ನಾಮ ಪ್ರಕೃತಿಯನ್ನು ಉಪಯೋಗಿಸುವಾಗ ಅದಕ್ಕೂ ವಾಕ್ಯದ ಮಿಕ್ಕ ಪದಗಳಿಗೂ ಇರುವ ಸಂದರ್ಭವನ್ನು, ಕೆಲವು ಪ್ರತ್ಯಯಗಳ ಮೂಲ ತೋರಿಸಬೇಕಷ್ಟೆ. ಈ ಪ್ರತ್ಯಯಗಳು ಯಾವುದೆಂಬುದನ್ನು ನೋಡೋಣ.

ಕೆಳಗಿನ ವಾಕ್ಯಗಳನ್ನು ಪರಿಶೀಲಿಸಿ.

ಅ) ಹೊಳೆ ವೇಗವಾಗಿ ಹರಿಯುತ್ತದೆ.

ಆ) ಜನರು ದೋಣಿಯಲ್ಲಿ ಕುಳಿತು ಹೊಳೆಯನ್ನು ದಾಟುತ್ತಾರೆ.

ಇ) ನಮ್ಮ ತಾಯಿ ನೀರನ್ನು ಹೊಳೆಯಿಂದ ತಂದಳು.

ಈ) ಇಲ್ಲಿಂದ ಹೊಳೆಗೆ ಹೋಗುವುದಕ್ಕೆ ದಾರಿ ಯಾವುದು?

ಉ) ಹೊಳೆಯ ದಡದಲ್ಲಿ ಮಾವಿನತೋಪು ಇದೆ.

ಊ) ಈ ಹೊಳೆಯಲ್ಲಿ ಮೀನುಗಳು ಹೆಚ್ಚು.

ವಿಭಕ್ತಿ ಪ್ರತ್ಯಯಗಳನ್ನು 'ಶಬ್ದಾದರ್ಶ'ದಲ್ಲಿ (ಬಹಳ ವರ್ಷ ಶಾಲೆಗಳಿಗೆ ಪಠ್ಯವಾಗಿದ್ದ ಗ್ರಂಥ) ಹೇಗೆ ವಿವರಿಸಲಾಗಿದೆ ಎಂಬುದನ್ನು ಗಮನಿಸಿದರೆ ತೀನಂಶ್ರೀ ವ್ಯಾಕರಣದ ವೈಶಿಷ್ಟ್ಯ ವಾಕ್ಯಗಳ ಸೊಗಸು ಅರಿವಾಗುತ್ತದೆ. ಶಬ್ದಾದರ್ಶ (ಪುಟ 14).

ವಿಭಕ್ತಿ-ಎಲ್ಲಾ ಪ್ರಾತಿಪದಿಕಗಳ ಮೇಲೂ ಎಂಟು ವಿಭಕ್ತಿ ಪ್ರತ್ಯಯಗಳು ಸೇರುವುವು. ಇದಕ್ಕೆ ವಿಭಕ್ತಿಗಳೆಂದು ಹೆಸರು.

ವಿಭಕ್ತಿ	ಪ್ರತ್ಯಯ	ಏಕ	ಬಹು
ಪ್ರಥಮಾ	ಉ	ಅರಸನು	ಅರಸರು
ದ್ವಿತೀಯಾ	ಅನ್ನು	ಅರಸನನ್ನು	ಅರಸರನ್ನು
ತೃತೀಯಾ	ಇಂದ	ಅರಸನಿಂದ	ಅರಸರಿಂದ
ಚತುರ್ಥೀ	ಇಗೆ	ಅರಸನಿಗೆ	ಅರಸರಿಗೆ
ಪಂಚಮೀ	ದೆಸೆಯಿಂದ	ಅರಸನದೆಸೆಯಿಂದ	ಅರಸರದೆಸೆಯಿಂದ
ಷಷ್ಠೀ	ಅ	ಅರಸನ	ಅರಸರ
ಸಪ್ತಮಿ	ಅಲ್ಲಿ	ಅರಸನಲ್ಲಿ	ಅರಸರಲ್ಲಿ
ಸಂಬೋಧನಾ	ಎ	ಅರಸನೇ	ಅರಸರೇ

ಮೇಲಿನ ನಿದರ್ಶನಗಳಿಂದ ವ್ಯಾಕರಣದಲ್ಲಿ ಭಾಷಾಕಲಿಕೆಯಲ್ಲಿ ವಾಕ್ಯಗಳ ಮಹತ್ವವನ್ನು ಕಾಣಬಹುದು.

ಇನ್ನು ವಾಕ್ಯದೋಷಗಳು ಏಕೆ ಉಂಟಾಗುತ್ತದೆ? ಎಂಬುದನ್ನು ಕುರಿತು ಕೆ.ವಿ. ನಾರಾಯಣರು ಹೇಳುವ ಮಾತುಗಳಿವು; "ಇನ್ನು ಬರವಣಿಗೆಯಲ್ಲಿ ಆಗುವ ತಪ್ಪುಗಳಿಗೆ ಬರೆಯುತ್ತಿರುವವರ ತಿಳಿವಳಿಕೆಯಲ್ಲಿ ಇರುವ ಕೊರತೆಗಳ ಜತೆಗೆ ತಾವು ಕಿವಿಯಲ್ಲಿ ಕೇಳಿರುವ ಪದರೂಪಗಳ ಬರಹರೂಪವನ್ನು ಕಣ್ಣಲ್ಲಿ ಕಂಡಿಲ್ಲದಿರುವುದು ಮತ್ತು ಹಾಗೆ ಕಂಡಿದ್ದರೂ ಅದರ ಕಾಗುಣಿತವನ್ನು ಸರಿಯಾಗಿ ಕಲಿತಿಲ್ಲದಿರುವುದು ಕಾರಣವಾಗುತ್ತದೆ. ಈ ಬಗೆಯ ತಪ್ಪುಗಳು ಬರೆಯುತ್ತಾ ಹೋದಂತೆ ಸರಿ ಹೋಗುವಂತಹವು ಅಲ್ಲದೆ ಓದುವಾಗ ಪದಗಳ ತಿರುಳು ಮಾತ್ರವಲ್ಲದೆ ರೂಪವನ್ನು ಸರಿಯಾಗಿ ತಿಳಿದು ಕೊಳ್ಳುವುದನ್ನು ಕಲಿಸಬೇಕಾಗಿಸುತ್ತದೆ."

(ತೊಂಡುಮೇವು ಕಂತೆ ಎಂಟು : ಪುಟ 192)

ವಾಕ್ಯದೋಷಗಳ ವರ್ಗೀಕರಣ

ವಾಕ್ಯಗಳಲ್ಲಿ ವ್ಯಾಕರಣ ನಿಯಮಗಳ ಹಿನ್ನೆಲೆಯಲ್ಲಿ ಕಂಡುಬರುವ ದೋಷಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿ ಮಾಡಿದೆ. ನಿದರ್ಶನಗಳನ್ನು ನೀಡಲಾಗಿದೆ.

ಕಾವ್ಯಗಳಿಗೆ ಸಂಬಂಧಿಸಿದಂತೆ ಕರಡಚ್ಚು ತಿದ್ದುವಾಗ ಛಂದೋದೋಷ, ಅಲಂಕಾರದೋಷಗಳನ್ನು ಗಮನಿಸಬೇಕಾಗುತ್ತದೆ (ಇಲ್ಲಿ ಅವುಗಳನ್ನು ಪ್ರಸ್ತಾಪಿಸಿಲ್ಲ). ಮುಖ್ಯವಾಗಿ ಗದ್ಯರಚನೆಯಲ್ಲಿ ಕಂಡುಬರುವ ದೋಷಗಳನ್ನಷ್ಟೇ ಇಲ್ಲಿ ಗಮನಿಸಲಾಗಿದೆ. ತಾಂತ್ರಿಕ ಭಾಷಾವಾಕ್ಯಗಳ ರಚನೆಯನ್ನು ಗಮನಿಸುವ ಅಗತ್ಯವಿದೆ. ಆದರೆ ಆ ಮಾತು ತಾಂತ್ರಿಕ ಗ್ರಂಥಗಳಿಗೆ ಅನ್ವಯಿಸುತ್ತವೆ.

ಭಾಷಾದೀಪಿಕೆಯಲ್ಲಿ ಕೇಶವಭಟ್ಟರು(ಲೇಖಕರು) ಪ್ರಸ್ತಾಪಿಸಿರುವ ವಾಕ್ಯರಚನಾ ದೋಷಗಳಲ್ಲಿ ಮುಖ್ಯವಾದ ಹತ್ತನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

1. ವಿಶೇಷಣ-ವಿಶೇಷ್ಯ ಸಂಬಂಧದೋಷ
2. ಪ್ರಕೃತಿ-ಪ್ರತ್ಯಯ ಸಂಬಂಧ ದೋಷ
3. ಪದವಿಭಜನೆಯ ದೋಷ
4. ವಿಭಕ್ತಿಯ ಪಲ್ಲಟ ದೋಷ

5. ಕರ್ತೃ-ಕ್ರಿಯಾ ಸಂಬಂಧ ದೋಷ
6. ಸಂಧಿಪದ ದೋಷ
7. ವಚನ ದೋಷ
8. ಲೇಖನಚಿಹ್ನೆಗಳ ಬಳಕೆ ದೋಷ
9. ಪದಾನುಕ್ರಮಣಿಕೆ ದೋಷ
10. ಪುನರುಕ್ತಿದೋಷ

ವರ್ಗೀಕರಣ

ಆಯ್.ಎಸ್. ಅರಳಗುಪ್ಪಿ ಅವರು ಪರಿಶುದ್ಧ ಕನ್ನಡ ಗ್ರಂಥದಲ್ಲಿ (ಪುಟ 81) ವಾಕ್ಯದೋಷಗಳನ್ನು ಹೀಗೆ ವರ್ಗೀಕಿಸಿದ್ದಾರೆ.

1. ವಚನಗಳ ಬಗೆಗಿನ ವಾಕ್ಯದೋಷಗಳು
2. ಪದಗಳ ಸ್ಥಾನಪಲ್ಲಟ ವಾಕ್ಯದೋಷಗಳು
3. ವಿಭಕ್ತಿಪಲ್ಲಟ ವಾಕ್ಯದೋಷಗಳು
4. ಕಾಲಪಲ್ಲಟ ವಾಕ್ಯದೋಷಗಳು
5. ವಾಕ್ಯದಲ್ಲಿ ಅಶುದ್ಧ-ಅಪಪ್ರಯೋಗ ಶಬ್ದದೋಷಗಳು
6. ಅರ್ಥಕ್ಕೆ ಹಾಗೂ ವ್ಯಾಕರಣಕ್ಕೆ ಸಂಬಂಧಿಸಿದ ಮಿಶ್ರ(ವಾಕ್ಯ)ದೋಷಗಳು

ವಿಶ್ವೇಶ್ವರಭಟ್ ಅವರು 'ಸರಿಗಮಪದ' ಗ್ರಂಥದಲ್ಲಿ ಅನೇಕ ವಾಕ್ಯರಚನೆಗಳಲ್ಲಿ ದೋಷಗಳನ್ನು ಗುರುತಿಸಿದ್ದಾರೆ. ಆ ಪೈಕಿ ಕೆಲವು ಕೆಲವು ಹೀಗಿವೆ.

ದೀರ್ಘವಾಕ್ಯ ಬೇಡ (ಪುಟ 25)

ಸರಳ ಮಿತ ಪದ ಬಳಕೆ (ಪುಟ 23)

ವಾಕ್ಯಜೋಡಣೆ ಸರಿಯಿರಲಿ (ಪುಟ 29)

ಪುನರಾವರ್ತಿತ ಪದಗಳ ವಾಕ್ಯಗಳು (ಪುಟ 31)

ಕರ್ತರಿಪ್ರಯೋಗದ ವಾಕ್ಯಗಳು (ಪುಟ 33)

ವಾಕ್ಯದಲ್ಲಿ ವಿಚಾರ ಮಿತಿಗೊಳಿಸಿ (ಪುಟ 33)

ಕಡಿಮೆ ವಿಶೇಷಣ ಬಳಸಿ (ಪುಟ 38)

ಪರಿಚಿತ ಪದ ಬಳಸಿ (ಪುಟ 37)

ಎರಡು ಋಣಾತ್ಮಕ (ನಿಷೇಧಾರ್ಥಕ)ಗಳ ಬಳಕೆ ಬೇಡ (ಪುಟ 40)

ಪದಬಳಕೆಯಲ್ಲಿ ಪಾಂಡಿತ್ಯದ ದರ್ಶನ ಬೇಡ (ಪುಟ 44)

ದೂರಾನ್ವಯದ ದೋಷವನ್ನು ದೂರಮಾಡಿ (ಪುಟ 55)

ವ್ಯಾಕರಣಕ್ಕೆ ಅಪಚಾರ ಬೇಡ

ಕನ್ನಡ ಲೇಖನ ಲಕ್ಷಣ ಗ್ರಂಥದಲ್ಲಿ (1915) ವಾಕ್ಯದ ವಿಶೇಷ ವಿಧಿಗಳು ಎಂಬ 9ನೇ ಅಧ್ಯಾಯದಲ್ಲಿ (ಪುಟ 71) 3 ಬಗೆ ವಾಕ್ಯದೋಷಗಳನ್ನು ಹೇಳಿದೆ.

1. ಸ್ಥಾನಪಲ್ಲಟ
2. ದ್ವಂದ್ವಾರ್ಥ
3. ಖಂಡವಾಕ್ಯ - ಅಖಂಡವಾಕ್ಯ

ಕೆ.ವಿ. ನಾರಾಯಣರು ತೊಂಡು ಮೇವು ಕಂತೆ ಎಂಟು ಗ್ರಂಥದಲ್ಲಿ (ಪುಟ 106) ಸರಿಯಿಲ್ಲದ ವಾಕ್ಯಗಳ ಬಗ್ಗೆ ಹೇಳುತ್ತಾ ವಾಕ್ಯದೋಷಗಳನ್ನು ಕುರಿತು ಹೀಗೆ ಹೇಳಿದ್ದಾರೆ.

ತಪ್ಪಾದ ವಾಕ್ಯಗಳು 2 ಬಗೆ.

1. ವಾಕ್ಯ ಪೂರ್ಣಗೊಳ್ಳದಿರುವುದು
2. ಮೊದಲಲ್ಲಿ ಬಂದ ವಾಕ್ಯದ ತುಂಡಿಗೂ ಬಳಿಕ ಬರುವ ವಾಕ್ಯದ ತುಂಡಿಗೂ ಹೊಂದಾಣಿಕೆ ಇಲ್ಲದಿರುವುದು

ಭಾಷಾವಾಕ್ಯದಲ್ಲಿ (ಹೊಂದಿಕೆ) ಸಂಬಂಧ ಸರಿಯಾಗಿರಬೇಕು ಅರ್ಥವತ್ತಾಗಿರಬೇಕು. ಈ ಸಂಬಂಧ ಸರಿಯಾಗಿದ್ದರೆ ಸ್ಪಷ್ಟವಾಗಿ ಅಭಿಧೇಯದ (ಅರ್ಥದ) ಬೋಧೆಯಾಗುವುದು ಇದರಿಂದ ಅರ್ಥ ಸ್ಪಷ್ಟವಾದಾಗ ವಾಕ್ಯದ ಇಷ್ಟಸಿದ್ಧಿ ಕೈಗೂಡುವುದು. (ಪುಟ 120-ಭಾಷಾದೀಪಿಕೆ)

II ಉದಾ : ವಿಶೇಷಣ - ವಿಶೇಷ್ಯಸಂಬಂಧ ದೋಷ

ಉದಾ 1 : ತಪ್ಪು : ಈ ವರ್ಷದಲ್ಲಿ <u>ಮೂರನೆಯ ಸ್ವಾಮಿಗಳ</u> ಕಾಶೀಪ್ರವಾಸ ನೆರವೇರಿತು.

ಸರಿ : ಈ ವರ್ಷದಲ್ಲಿ ಸ್ವಾಮಿಗಳ (= ಸ್ವಾಮಿಗಳು ಕೈಗೊಂಡ) <u>ಮೂರನೆಯ ಕಾಶೀಪ್ರವಾಸ</u> ನೆರವೇರಿತು.

ವಿವರಣೆ : ಈ ವಾಕ್ಯದಲ್ಲಿ ಮೂರನೆಯ ಎಂಬುದು ಪ್ರವಾಸಕ್ಕೆ ವಿಶೇಷಣ ಸ್ವಾಮಿಗಳಿಗಲ್ಲ ಅದು ಸ್ಥಾನಪಲ್ಲಟವಾದರೆ ಸಂಬಂಧ ತಪ್ಪುವುದು ಅರ್ಥಬಾಧೆ ಯುಂಟಾಗುವುದು ಸ್ಪಷ್ಟ.

ಉದಾ 2 : ತಪ್ಪು : ನವೋದಯ ಬಾಲಕರ ಪಾಠಶಾಲೆ (ವಿಶೇಷಣ ವಿಶೇಷ್ಯ ಸಂಬಂಧ)

ಸರಿ : ಬಾಲಕರ ನವೋದಯ ಪಾಠಶಾಲೆ

ಉದಾ 3 : ತಪ್ಪು : ರಾಷ್ಟ್ರೀಯ ಕನ್ನಡ ವಾರಪತ್ರಿಕೆ (ವಿಶೇಷಣ ವಿಶೇಷ್ಯ ಸಂಬಂಧ)

ಸರಿ : ಕನ್ನಡ ರಾಷ್ಟ್ರೀಯ ವಾರಪತ್ರಿಕೆ

ಉದಾ 4 : ತಪ್ಪು : ನಾಲ್ಕನೆಯ ಮಕ್ಕಳ ಯೋಗಕ್ಷೇಮದ ಶಿಬಿರ

ಸರಿ : ಮಕ್ಕಳ ಯೋಗಕ್ಷೇಮದ ನಾಲ್ಕನೆಯ ಶಿಬಿರ

ವಿವರಣೆ : ವಿಶೇಷಣ=ವಿಶೇಷ್ಯ ದೋಷ ಇಲ್ಲಿದೆ.

(ಭಾಷಾದೀಪಿಕೆ. ಪುಟ 126)

ನಾಮಪದ ಬಳಕೆ ವಾಕ್ಯದೋಷಗಳು

ಲೀಲಾ, ಲತಾ, ಲಲಿತಾ, ಆಶಾ ಮುಂತಾದ ಅಂಕಿತನಾಮಗಳನ್ನು ವ್ಯಾಕರಣ ನಿಯಮದಂತೆ ಬಳಸುವುದಕ್ಕಿಂತ ಅ/ಆಕಾರಾಂತವಾಗಿ ಬಳಸಬೇಕು.

ಸರಿ : ಅವನು ಲತಾಳನ್ನು ನೋಡಿದನು

ತಪ್ಪು : ಅವನು ಲತೆಯನ್ನು ನೋಡಿದನು

ಸರಿ : ನಿನ್ನೆ ಆಶಾಳನ್ನು ಕಂಡೆ

ತಪ್ಪು : ನಿನ್ನೆ ಆಶೆಯನ್ನು ಕಂಡೆ

ನಾಮಪದದ ಬಹುವಚನರೂಪವನ್ನು ಗೌರವಾರ್ಥರೂಪವನ್ನು ಎಚ್ಚರಿಕೆಯಿಂದ ಬಳಸಬೇಕು.

ಸರಿ : ರಾಯರು ಸಂಸ್ಥೆಯ ಪ್ರತಿನಿಧಿಯಾಗಿದ್ದಾರೆ.

ತಪ್ಪು : ರಾಯರು ಸಂಸ್ಥೆಯ ಪ್ರತಿನಿಧಿಗಳಾಗಿದ್ದಾರೆ (ಗಳು, ಬೇಕಿಲ್ಲ)

(ಶುದ್ಧಾಶುದ್ಧ ಕನ್ನಡ ಪುಟ - 58)

ಸರಿ : ಅವರು ಶಿಲ್ಪಶಾಸ್ತ್ರದಲ್ಲಿ ಕುಶಲರು

ತಪ್ಪು : ಅವರು ಶಿಲ್ಪಶಾಸ್ತ್ರದಲ್ಲಿ ಕುಶಲಿಗಳು
ಅವರು ಶಿಲ್ಪಶಾಸ್ತ್ರದಲ್ಲಿ ಕುಶಲಿಗರು

ಭಾವನಾಮದ ಸರಿರೂಪಗಳನ್ನು ಬಳಸದಿದ್ದರೆ ವಾಕ್ಯದೋಷವುಂಟಾಗುತ್ತದೆ.

ತಪ್ಪು : ಅದರಲ್ಲಿ ಬಹಳ ವೈವಿಧ್ಯತೆ ಇದೆ

ಸರಿ : ಅದರಲ್ಲಿ ಬಹಳ ವೈವಿಧ್ಯವಿದೆ

ಅಶುದ್ಧ ಸರ್ವನಾಮ ಬಳಕೆಯ ವಾಕ್ಯದೋಷಗಳು

ಸರಿ : ಅವನು ಏತಕ್ಕೆ ಬಂದಿದ್ದನು?

ತಪ್ಪು : ಅವನು ಏನಿಕ್ಕೆ ಬಂದಿದ್ದನು.

ಪ್ರಕೃತಿ-ಪ್ರತ್ಯಯ ಸಂಬಂಧದೋಷ

ಉದಾ :

ತಪ್ಪು : ಬಹುಗುಣಗೆ ಅಮೆರಿಕಾದಲ್ಲಿ ಶಸ್ತ್ರಚಿಕಿತ್ಸೆ. ಅದಕ್ಕಾಗಿ ಅವರು ಅಮೆರಿಕಾಗೆ ತೆರಳಿದರು. (ಪ್ರಕೃತಿ-ಪ್ರತ್ಯಯ ದೋಷ)

ಸರಿ : ಬಹುಗುಣ + ಅವರಿಗೆ (ಬಹುಗುಣರಿಗೆ) ಅಮೆರಿಕಾದಲ್ಲಿ ಶಸ್ತ್ರಚಿಕಿತ್ಸೆ ಅದಕ್ಕಾಗಿ ಅಮೆರಿಕಕ್ಕೆ ತೆರಳಿದರು.

ವಿವರಣೆ : ಇಲ್ಲಿ ಬಹುಗುಣ ಪ್ರಕೃತಿ ಪದಕ್ಕೆ 'ಗೆ' ಅಲ್ಲ ಅವರಿಗೆ ಪ್ರತ್ಯಯ ಇರಬೇಕು. ಅಮೆರಿಕಾಗೆ ಎಂಬಲ್ಲಿ ಕ್ಕೆ ಪ್ರತ್ಯಯ ಬರಬೇಕು. ಅಮೆರಿಕಕ್ಕೆ ಆಗಬೇಕು.

(ಭಾಷಾದೀಪಿಕೆ : ಪುಟ 127)

ವಿಭಕ್ತಿಯ ಪಲ್ಲಟ ವಾಕ್ಯದೋಷ

1. ತಪ್ಪು : ಬಣ್ಣಬಣ್ಣದ ದೀಪಗಳನ್ನು ನೋಡಲು ಬಹಳ ರಮ್ಯವಾಗಿದೆ.
ದ್ವಿ. ವಿಭಕ್ತಿ

ಸರಿ : ಬಣ್ಣಬಣ್ಣದ ದೀಪಗಳು ನೋಡಲು ಬಹಳ ರಮ್ಯವಾಗಿದೆ.
ಪ್ರ. ವಿಭಕ್ತಿ

ವಿವರಣೆ : (ದೋಷ ಪ್ರ. ವಿಭಕ್ತಿ ಬರಬೇಕಾದ ಕಡೆ ದ್ವಿ ವಿಭಕ್ತಿ ಬಂದಿರುವುದು)

2. ತಪ್ಪು : ಆನೆ ಕುದುರೆ ಮುಂತಾದ ಪಶುವ್ಯಾಪಾರಿಗಳು.

ಸರಿ : ಆನೆ, ಕುದುರೆ ಮುಂತಾದ ಪಶುಗಳ ವ್ಯಾಪಾರಿಗಳು.

ವಿವರಣೆ : (ಷಷ್ಠಿ ವಿಭಕ್ತಿ ಲೋಪವಾಗಿ ಸಮಾಸಪದವಾಗಿದೆ) ಈ ಷಷ್ಠಿ ವಿಭಕ್ತಿ ಯೋಜನೆ ಪದವಿಭಜನೆ ಆಗಬೇಕು.

(ಭಾಷಾದೀಪಿಕೆ : ಪುಟ 130)

ವ್ಯಾಖ್ಯೆ : "ವಾಕ್ಯದಲ್ಲಿ (ವಿಶೇಷಣ) ಶಬ್ದಗಳು, ಸ್ಥಾನಪಲ್ಲಟಗೊಳ್ಳುವಂತ ವಿಭಕ್ತಿ ಪ್ರತ್ಯಯವುಳ್ಳ ಪದಗಳೂ ಪಲ್ಲಟಗೊಂಡು ದೋಷಗಳಾಗುತ್ತವೆ. ಅದರಿಂದ ಆ ವಿಭಕ್ತಿಪದಗಳುಳ್ಳ ವಾಕ್ಯದ ಮೂಲ ಅರ್ಥಕ್ಕೆ ಬಾಧೆ ಬರುತ್ತದೆ ಇಲ್ಲವೇ ಸೂಕ್ತ ಅರ್ಥವೇ ಆಗುವುದಿಲ್ಲ" ಇಂತಹ ದೋಷಗಳನ್ನು ವಿಭಕ್ತಿಪಲ್ಲಟವಾಕ್ಯದೋಷಗಳೆಂದು ಕರೆಯಲಾಗುತ್ತದೆ.

ಅಶುದ್ಧವಾಕ್ಯ : ರಾಮನು ಪುಸ್ತಕ ಹರಿದನು

ಶುದ್ಧವಾಕ್ಯ : ರಾಮನು ಪುಸ್ತಕವನ್ನು ಹರಿದನು

(ತೃತೀಯ ವಿಭಕ್ತಿ ದೋಷ)

ಸಂಧಿ ದೋಷ

ಸಂಧಿಯ ನಿಯಮಕ್ಕೆ ಅನುಸಾರವಾಗಿ ಪದಗಳ ಪ್ರತ್ಯಯಗಳನ್ನು ಸಂಧಿ ಮಾಡಬೇಕು.

ತಪ್ಪು : ಒಂದು ಕಾಲಕ್ಕೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವೇತನ ತಿಂಗಳಿಗೆ ಐದು ರೂಪಾಯಿನಿಂದ ಆರಂಭ

ಸರಿ : ಒಂದು ಕಾಲಕ್ಕೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವೇತನ ತಿಂಗಳಿಗೆ ಐದು ರೂಪಾಯಿಯಿಂದ ಆರಂಭ

ವಿವರಣೆ : ರೂಪಾಯಿ + ಇಂದ = ರೂಪಾಯಿಯಿಂದ (ಯಕಾರಾಗಮ ಸಂಧಿ)

ರೂಪಾಯಿ + ನಿಂದ = ಯಕಾರಾಗಮ ಸಂಧಿ ಆಗದು

(ಭಾಷಾದೀಪಿಕೆ : ಪುಟ - 134)

ಓದುವಾಗ ಸಹಜವಾದ ವಿರಾಮಕ್ಕೆ ಭಂಗ ಬರುವುದಾದರೆ ಸಂಧಿ ಮಾಡಲಾಗದು.

ತಪ್ಪು : ಜಾಣನಾದಣ್ಣನಿಗೆಲ್ಲಿಂದೀಬುದ್ಧಿ ಬಂತೋ?

ಸರಿ : ಜಾಣನಾದ ಅಣ್ಣನಿಗೆ ಎಲ್ಲಿಂದ ಈ ಬುದ್ಧಿ ಬಂತೋ?

ಸಹಜವಾದ ಓದಿಗೆ ಭಂಗ ಬಾರದಿದ್ದಾಗ ಸಂಧಿ ಮಾಡುವುದು ಒಳಿತು. ಏಕೆಂದರೆ ನೀರಸ ಏಕರೂಪತೆ ದೋಷ ಇರದು.

ತಪ್ಪು : ನೀವು ಇಬ್ಬರು ಆ ದಿನ ನಿಮ್ಮ ಊರಿಗೆ ಏಕೆ ಹೋಗಲು ಇಲ್ಲ

ಸರಿ : ನೀವಿಬ್ಬರು ಆದಿನ ನಿಮ್ಮೂರಿಗೆ ಏಕೆ ಹೋಗಲಿಲ್ಲ?

(ಶುದ್ಧಾಶುದ್ಧ ಕನ್ನಡ ಪುಟ 45)

ಕರ್ತೃಕ್ರಿಯಾ ಸಂಬಂಧ ದೋಷ

ತಪ್ಪು : ರಾಜನೂ ರಾಣಿಯೂ ಸೈನ್ಯವೂ ಬಂದರು

ಸರಿ : ರಾಜನೂ ರಾಣಿಯೂ ಸೈನ್ಯವೂ ಬಂದವು ಅಥವಾ
ಸೈನ್ಯವೂ ರಾಜನೂ ರಾಣಿಯೂ ಬಂದರು

ವಿವರಣೆ : ಕರ್ತೃಪದಗಳು ಹಲವಿದ್ದಾಗ ಕೊನೆಯಪದದ ಲಿಂಗ ಅನುಸರಿಸಿ ಕ್ರಿಯಾಪದದ ರೂಪ ಸಿದ್ಧಿಸುತ್ತದೆ.

(ಭಾಷಾದೀಪಿಕೆ : ಪುಟ 134)

ಸರ್ವನಾಮ ಪ್ರಯೋಗಗಳ ವಾಕ್ಯದೋಷಗಳು

ತಾನು, ತಾವು ಪದರೂಪಗಳನ್ನು ಬಳಸುವಾಗ ಎಚ್ಚರ ಇರಬೇಕು.

ಸರಿ : ಅವನು ತಾನು ಮರುದಿನ ಅಲ್ಲಿಗೆ ಹೋಗುವನೆಂದು ಹೇಳಿದನು
ತಪ್ಪು : ಅವನು ತಾನು ಮರುದಿನ ಅಲ್ಲಿಗೆ ಹೋಗುವೆನೆಂದು ಹೇಳಿದನು

ಸರಿ : ರಾಮರಾಯರು ತಮ್ಮ ಹತ್ತಿರ ಹಣವಿಲ್ಲವೆಂದು ಹೇಳಿದರು
ತಪ್ಪು : ರಾಮರಾಯರು ತನ್ನ ಹತ್ತಿರ ಹಣವಿಲ್ಲವೆಂದು ಹೇಳಿದರು

ಸರಿ : ಅವಳು ತಾನು ಅಡಿಗೆ ಬಲ್ಲಳೆಂದು ಹೇಳಿಕೊಂಡಳು
ತಪ್ಪು : ಅವಳು ತಾನು ಅಡಿಗೆ ಬಲ್ಲನೆಂದು ಹೇಳಿಕೊಂಡಳು

ಪದಗಳ ಸ್ಥಾನಪಲ್ಲಟದಿಂದ ಆಗುವ ವಾಕ್ಯದೋಷಗಳು

ಕೆಲವೊಮ್ಮೆ ಪದಗಳನ್ನು ವಾಕ್ಯದಲ್ಲಿ ಸ್ಥಳಪಲ್ಲಟ ಮಾಡಿದರೆ ಅರ್ಥ ವ್ಯತ್ಯಾಸವಾಗುತ್ತದೆ. ಆದ್ದರಿಂದ ಯಾವ ಪದವನ್ನು ವಾಕ್ಯದಲ್ಲಿ ಎಲ್ಲಿ ಬಳಸಬೇಕು ಎಂಬುದರ ಕಡೆ ನಿಗಾ ಇರಬೇಕು ಇಲ್ಲದಿದ್ದಲ್ಲಿ ಅರ್ಥದೋಷಗಳು ಬರುತ್ತವೆ.

1. ಸರಿ : ನನ್ನ <u>ಹಿರಿಯ ಅಣ್ಣನ ಮಗ</u> ಊರಿಗೆ ಬಂದನು
   ತಪ್ಪು : ನನ್ನ <u>ಅಣ್ಣನ ಹಿರಿಯ ಮಗ</u> ಊರಿಗೆ ಬಂದನು

2. ಸರಿ : <u>ಯಾವಾಗಲೂ ಸ್ವಲ್ಪ ನೀರು ಕುಡಿದು</u> ಮಲಗುತ್ತಿದ್ದನು
   ತಪ್ಪು : <u>ಸ್ವಲ್ಪ ನೀರು ಕುಡಿದು ಯಾವಾಗಲೂ</u> ಮಲಗುತ್ತಿದ್ದನು

3. ಸರಿ : <u>ಮುಚ್ಚಳದ ಪೆಟ್ಟಿಗೆಯ ಗಾತ್ರ</u> ಎಷ್ಟಿದೆ?
   ತಪ್ಪು : <u>ಪೆಟ್ಟಿಗೆಯ ಮುಚ್ಚಳದ ಗಾತ್ರ</u> ಎಷ್ಟಿದೆ?

ಮೇಲಿನ ವಾಕ್ಯಗಳಲ್ಲಿ ಅರ್ಥವ್ಯತ್ಯಾಸಗಳಲ್ಲಿ ನಮಗೆ ಬೇಕಾದ ಅರ್ಥಕ್ಕೆ ವಿರುದ್ಧವಾದ ವಾಕ್ಯವು ದೋಷವೆನಿಸುತ್ತದೆ.

(ಶುದ್ಧಾಶುದ್ಧ ಕನ್ನಡ ಪುಟ 216)

ವಚನದೋಷ

ತಪ್ಪು : <u>ಇವೆಲ್ಲಾ</u> ನಮಗೆ ಸಹಜವಾಗಿ <u>ಕಾಣುತ್ತದೆ</u>

ಸರಿ : <u>ಇವೆಲ್ಲಾ</u> ನಮಗೆ ಸಹಜವಾಗಿ <u>ಕಾಣುತ್ತವೆ</u>

ವಿವರಣೆ : ಏಕವಚನ ಕರ್ತೃ ಬರುವೆಡೆ ಬಹುವಚನ ಕ್ರಿಯಾಪದ ಬರುವುದು ಬಹುವಚನದ ಕರ್ತೃ ಬರುವೆಡೆ ಏಕವಚನಕ್ರಿಯಾಪದ ಬರುವುದು ವಚನದೋಷ. ಇಲ್ಲಿ ಬಹುವಚನದ ಕರ್ತೃಪದಕ್ಕೆ ಏಕವಚನಕ್ರಿಯಾಪದ ಬಂದಿದೆ.

(ಭಾಷಾದೀಪಿಕೆ : ಪುಟ - 135)

ವ್ಯಾಖ್ಯೆ :

ವಾಕ್ಯಗಳಲ್ಲಿ ಏಕವಚನ, ಬಹುವಚನ ಇವುಗಳ ಕಡೆಗೆ ಗಮನ ಕೊಡದೆ ವಾಕ್ಯದೋಷಗಳಾಗುತ್ತವೆ. ಮಾತನಾಡುವಾಗ ಮತ್ತು ಬರೆಯುವಾಗ ಇಂತಹ ದೋಷಗಳು ಹೇರಳವಾಗಿ ಕಂಡುಬರುತ್ತವೆ. (ಪರಿಶುದ್ಧಕನ್ನಡ ಪುಟ 81)

ದೋಷಪೂರ್ಣಪದಗಳನ್ನು, ಪದರೂಪಗಳನ್ನು, ಪದಾನುಕ್ರಮಗಳನ್ನು ಒಳಗೊಂಡ ವಾಕ್ಯಗಳನ್ನು ಅಶುದ್ಧವಾಕ್ಯ (ದೋಷವಾಕ್ಯ)ಗಳೆಂದು ಕರೆಯುತ್ತಾರೆ. ದೋಷರಹಿತ ವಾಕ್ಯಗಳನ್ನು ಶುದ್ಧವಾಕ್ಯಗಳೆಂದು ಅಥವಾ ಸರಿವಾಕ್ಯಗಳೆಂದು ಕರೆಯುತ್ತಾರೆ.

ಉದಾ:

1. ಅಶುದ್ಧವಾಕ್ಯ : ಎರಡು ದಿನಕ್ಕೊಮ್ಮೆ ನಳದಲ್ಲಿ ನೀರು ಬರುತ್ತದೆ
   ಶುದ್ಧವಾಕ್ಯ : ಎರಡು ದಿನಗಳಿಗೊಮ್ಮೆ ನಳದಲ್ಲಿ ನೀರು ಬರುತ್ತದೆ.

(ಸಂಖ್ಯಾವಾಚಕದೋಷ)

2. ಅಶುದ್ಧವಾಕ್ಯ : ಸರ್ಕಾರದ ಇತ್ತೀಚಿನ ಕೆಲವು ನಿರ್ಧಾರಗಳು ತೀವ್ರತರದ ಶಂಕೆಗೆ ಎಡೆಮಾಡಿದೆ
   ಶುದ್ಧವಾಕ್ಯ : ಸರ್ಕಾರದ ಇತ್ತೀಚಿನ ಕೆಲವು ನಿರ್ಧಾರಗಳು ತೀವ್ರತರದ ಶಂಕೆಗೆ ಎಡೆಮಾಡಿವೆ

(ಕ್ರಿಯಾವಾಚಕದೋಷ)

3. ಅಶುದ್ಧವಾಕ್ಯ : ಅದರಲ್ಲಿ ಇದು ಎಲ್ಲಕ್ಕೂ ಶ್ರೇಷ್ಠ
   ಶುದ್ಧವಾಕ್ಯ : ಅವುಗಳಲ್ಲಿ ಇದು ಎಲ್ಲಕ್ಕೂ ಶ್ರೇಷ್ಠ

4. ಅಶುದ್ಧವಾಕ್ಯ : ನಿಂದಕರು ತ್ರಿಕಾಲದಲ್ಲೂ ಇರುವವರೇ
   ಶುದ್ಧವಾಕ್ಯ : ನಿಂದಕರು ತ್ರಿಕಾಲಗಳಲ್ಲೂ ಇರುವವರೇ

(ಸಂಖ್ಯಾಪದ ದೋಷ)

(ಪರಿಶುದ್ಧಕನ್ನಡ ಪು. 82-86)

ವಚನದೋಷಗಳು

ತೂಕ ಮತ್ತು ಅಳತೆಗಳನ್ನು ಸೂಚಿಸುವ ಪದಗಳಿಗೆ ಏಕವಚನ-ಬಹುವಚನಗಳು ಅರ್ಥಕ್ಕೆ ಸರಿಯಾಗಿರಬೇಕಾದರೂ ಏಕವಚನವೇ ರೂಢಿಯಲ್ಲಿದೆ.

ತಪ್ಪು : ಹತ್ತು ರೂಪಾಯಿಗಳ ನೋಟು ಸಿಗುತ್ತಿಲ್ಲ
ಸರಿ : ಹತ್ತು ರೂಪಾಯಿ ನೋಟು ಸಿಗುತ್ತಿಲ್ಲ

ತಪ್ಪು : ಅವನಿಗೆ 90° ಡಿಗ್ರಿಗಳ ಜ್ವರವಿದೆ
ಸರಿ : ಅವನಿಗೆ 90° ಡಿಗ್ರಿ ಜ್ವರವಿದೆ

ಸರಿ : ಅವನು ಆರು ಅಡಿ ಎತ್ತರವಿದ್ದಾನೆ

ತಪ್ಪು : ಅವನು ಆರು ಅಡಿಗಳ ಎತ್ತರವಿದ್ದಾನೆ

ತಪ್ಪು : ನಾಟಕ 9 ಗಂಟೆಯಿಂದ ಪ್ರಾರಂಭ

ಸರಿ : ನಾಟಕ 9 ಗಂಟೆಗೆ ಪ್ರಾರಂಭ

(ಶುದ್ಧಾಶುದ್ಧ ಕನ್ನಡ ಪುಟ 85)

ಷಷ್ಠೀ ವಿಭಕ್ತಿಗೆ ಕನ್ನಡದಲ್ಲಿ ದೀರ್ಘಾದೇಶವಾಗಿ ಬರುವುದಿದೆ. ಈ ಸಂಬಂಧಾರ್ಥ ವಿಭಕ್ತಿಯ ಅನುಕರಣೆಯಿಂದಲೋ ಅಥವಾ ಆ ಪದಗಳ ಪ್ರಥಮಾ ವಿಭಕ್ತಿಯ ಅನುಕರಣೆಯಿಂದಲೋ, ದೀರ್ಘವನ್ನು ಪ್ರಯೋಗಿಸುವರು ಇದು ವಸ್ತುತಃ ಸಾಧುವಲ್ಲ.

ತಪ್ಪು : ಭುವನೇಶ್ವರರಿಗೆ ನಿನ್ನ ಅಭಿನಂದನಾಪತ್ರ ಸಲ್ಲಿಸಿದರು

ಸರಿ : ಭುವನೇಶ್ವರರಿಗೆ ನಿನ್ನ ಅಭಿನಂದನ ಪತ್ರ ಸಲ್ಲಿಸಿದರು

ತಪ್ಪು : ನಾಳೆ ಕಾರ್ಯಕಾರೀ ಸಮಿತಿಸಭೆ ಇದೆ

ಸರಿ : ನಾಳೆ ಕಾರ್ಯಕಾರಿಸಮಿತಿಸಭೆ ಇದೆ

ತಪ್ಪು : ನಿನ್ನ ವಿಮರ್ಶಾಗ್ರಂಥ ಓದಿದೆ

ಸರಿ : ನಿನ್ನ ವಿಮರ್ಶಗ್ರಂಥ ಓದಿದೆ

(ಶುದ್ಧಾಶುದ್ಧ ಕನ್ನಡ ಪು. 111)

ಲೇಖನಚಿಹ್ನೆಗಳ ಬಳಕೆಯ ದೋಷ

1. ತಪ್ಪು : ನೀನು ನನ್ನ ಹೆಂಡತಿ, ನಾನು ನಿನ್ನ ಗಂಡ, ನಾವು ಸಿನಿಮಾಕ್ಕೆ ಹೋಗೋಣ

ಸರಿ : ನೀನು, ನನ್ನ ಹೆಂಡತಿ, ನಾನು, ನಿನ್ನ ಗಂಡ, ನಾವೆಲ್ಲರೂ ಸಿನಿಮಾಕ್ಕೆ ಹೋಗೋಣ

ವಿವರಣೆ : ಅಲ್ಪವಿರಾಮವನ್ನು ನಾಲ್ಕು ಕಡೆ ಬಳಸುವಾಗ ಎರಡು ಕಡೆ ಮಾತ್ರ ಬಳಸಿದರೆ ಆಗುವ ಅರ್ಥಾಂತರ ಗಮನಿಸಬಹುದು.

2. ತಪ್ಪು : ಕೆ.ಪಿ.ಸಿ. ನೌಕರರ ಶೀಘ್ರವೇತನ ಪರಿಷ್ಕರಣಕ್ಕೆ ಆಗ್ರಹ

ಸರಿ : ಕೆ.ಪಿ.ಸಿ. ನೌಕರರ ವೇತನ : ಶೀಘ್ರ ಪರಿಷ್ಕರಣಕ್ಕೆ ಆಗ್ರಹ

(: ಲೇಖನಚಿಹ್ನೆಯನ್ನು ಬಳಸುವುದರ ಜತೆಗೆ ಶೀಘ್ರಪದವನ್ನು ಸ್ಥಾನ ಬದಲಿಸಬೇಕು)

3. ಲೇಖನ ಚಿಹ್ನೆಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಬೇಕು.
   ಉದಾ: ಮದುವೆಗೆ ಎಷ್ಟು ಜನ ಬಂದಿದ್ದರು?
   ಮದುವೆಗೆ ಎಷ್ಟು ಜನ ಬಂದಿದ್ದರು!

ಮದುವೆಗೆ ಬಂದ ಜನರೆಷ್ಟು ಎಂಬರ್ಥದಲ್ಲಿ ಕೇಳಿದಾಗ ಪ್ರಶ್ನಾರ್ಥಕ ಚಿಹ್ನೆ (ಪಾಂಗುಕೇಳ್ವಿ) ಬಹಳಜನ ಬಂದಿದ್ದರು ಎಂಬ ಅಚ್ಚರಿಯನ್ನು ವ್ಯಕ್ತಪಡಿಸಿದಾಗ ಆಶ್ಚರ್ಯ ಚಿಹ್ನೆಯನ್ನು (?) ಬಳಸಿದೆ.

ಇಲ್ಲಿ ಅರ್ಥ ಉಚ್ಚಾರದ ರೀತಿಯನ್ನು ಅನುಸರಿಸಿದೆ ಬರಹದಲ್ಲಿ ಚಿಹ್ನೆಯಿಂದ ತಿಳಿಯಬೇಕು, ಮಾತಿನಲ್ಲಿ ಧ್ವನಿಯಿಂದ ಅರ್ಥ ತಿಳಿಯಬೇಕು. ಒಂದೇ ವಾಕ್ಯವಾದರೂ ಉಚ್ಚಾರದ ರೀತಿಯಲ್ಲಿ ಅರ್ಥವ್ಯತ್ಯಾಸವಾಗುತ್ತದೆ.

ಪದಾನುಕ್ರಮಣಿಕೆ ದೋಷ

1. ತಪ್ಪು: ಸರಕಾರಿ ಮಹಿಳೆಯರ ಹೆರಿಗೆ ಎಲ್ಲಿದೆ?
   ಸರಿ : ಮಹಿಳೆಯರ ಸರಕಾರಿ ಹೆರಿಗೆ ಆಸ್ಪತ್ರೆ ಎಲ್ಲಿದೆ?
2. ತಪ್ಪು: ದೇವರ ಕೋಣೆಯಲ್ಲಿ ಸ್ನಾನ ಮುಗಿಸಿ ಪೂಜೆಗೆ ಕುಳಿತಿದ್ದೆ
   ಸರಿ : ಸ್ನಾನ ಮುಗಿಸಿ ದೇವರ ಕೋಣೆಯಲ್ಲಿ ಪೂಜೆಗೆ ಕುಳಿತಿದ್ದೆ

(ಭಾಷಾದೀಪಿಕೆ, ಪುಟ 142)

ವ್ಯಾಖ್ಯೆ :

"ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯಾಪದ, ವಿಶೇಷಣ ಮೊದಲಾದ ಪದಗಳು ಸೂಕ್ತ ಸ್ಥಾನದಲ್ಲಿದ್ದರೆ ಮಾತ್ರ ವಾಕ್ಯಾರ್ಥ ಸರಿಯಾಗಿ ಇರುವುದು. ಅದರಲ್ಲೂ ವಿಶೇಷಣ-ವಿಶೇಷ್ಯ ಸಂಬಂಧ ಪದಗಳ ಸ್ಥಾನಪಲ್ಲಟ ದೋಷಗಳು ಕಂಡುಬಂದರೆ ವಾಕ್ಯ ಸೂಕ್ತ ಅರ್ಥವನ್ನು ಕೊಡುವುದಿಲ್ಲ.

ಅಶುದ್ಧವಾಕ್ಯ : ವರದಕ್ಷಿಣೆಯ ಕುರಿತು ನಿಷೇಧ ವಿಚಾರ ಸಂಕೀರ್ಣ ಏರ್ಪಡಿಸಿದೆ
ಶುದ್ಧವಾಕ್ಯ : ವರದಕ್ಷಿಣೆ ನಿಷೇಧ ಕುರಿತು ವಿಚಾರ ಸಂಕೀರ್ಣ ಏರ್ಪಡಿಸಿದೆ

ಅಶುದ್ಧವಾಕ್ಯ : ಕರಡು ನಿರ್ದೇಶಕರಿಂದ ಅನುಮೋದಿತವಾಗಿದೆ
ಶುದ್ಧವಾಕ್ಯ : ನಿರ್ದೇಶಕರಿಂದ ಕರಡು ಅನುಮೋದಿತವಾಗಿದೆ

(ಕನ್ನಡಶೈಲಿ ಕೈಪಿಡಿ ಪುಟ 19)

ಪದವಿಭಜನೆಯ ದೋಷ

1. ತಪ್ಪು: ಆಜೀವ ವಿಜ್ಞಾನಯಿಂದ ಅನೇಕ ಸಂಶೋಧನೆಗಳು ಇಲ್ಲಿವೆ
   ಸರಿ : ಆ ಜೀವವಿಜ್ಞಾನಿಯಿಂದ ಅನೇಕ ಸಂಶೋಧನೆಗಳು ಇಲ್ಲಿವೆ

ವಿವರಣೆ : ಆಜೀವ ಪದವನ್ನು ಆ ಜೀವ ಎಂದು ಎರಡು ವಿಧವಾಗಿ ವಿಭಜನೆ ಮಾಡಬಾರದು. ಆಜೀವ ಒಂದೇ ಪದ ಬಿಡಿಸಿದರೆ ಬೇರೆ ಅರ್ಥ ಬರುತ್ತದೆ.

2. ತಪ್ಪು: ಮಂಗಳಾ ರತಿಯೊಡನೆ ಕಾರ್ಯಕ್ರಮ ಮುಗಿಯಿತು
   ಸರಿ : ಮಂಗಳಾರತಿಯೊಡನೆ ಕಾರ್ಯಕ್ರಮ ಮುಗಿಯಿತು

ವಿವರಣೆ : ಮಂಗಳಾರತಿ (ಮಂಗಳ+ಆರತಿ ಪದವಿಭಜನೆ ಸರಿ. ಮಂಗಳಾ+ರತಿ ಅಲ್ಲ)

(ಭಾಷಾದೀಪಿಕೆ ಪುಟ 127)

3. ಸರಿ : ಆಸ್ತಿ ಕರ ತುಂಬಲು ಕೋರಿಕೆ
   ತಪ್ಪು: ಆಸ್ತಿಕರ ತುಂಬಲು ಕೋರಿಕೆ

ಈ ಎರಡೂ ವಾಕ್ಯಗಳ ನಡುವಣ ಅರ್ಥವ್ಯತ್ಯಾಸ ಗಮನಿಸಬೇಕು. ಆ ವಾಕ್ಯದೋಷ ತಿಳಿಯುತ್ತದೆ. ಆಸ್ತಿ ಕರ ಪದದ ನಡುವೆ ತೆರವು ಬಿಟ್ಟಿದ್ದರಿಂದ ವಾಕ್ಯ ಅರ್ಥಪೂರ್ಣ ವಾಗಿದೆ.

(ಕನ್ನಡಶೈಲಿ ಕೈಪಿಡಿ ಪುಟ 93)

ಕಾಲಪಲ್ಲಟವಾಕ್ಯ ದೋಷಗಳು

"ಕ್ರಿಯೆ ಈಗ ನಡೆಯುವುದನ್ನು ವರ್ತಮಾನಕಾಲದ ರೂಪಗಳೂ ಕಳೆದು ಹೋದ ಕಾಲದಲ್ಲಿ ನಡೆದುದನ್ನು ಭೂತಕಾಲದ ರೂಪಗಳೂ ಮುಂದೆ ಬರುವ ಕಾಲದಲ್ಲಿ ನಡೆಯುವುದನ್ನು ಭವಿಷ್ಯತ್ಕಾಲದಲ್ಲಿ ನಡೆಯುವುದನ್ನು ಭವಿಷ್ಯತ್‌ಕಾಲದ ರೂಪಗಳೂ ತಿಳಿಸುವುವು. ಆದರೆ ಹಲವು ಸಂದರ್ಭಗಳಲ್ಲಿ ಒಂದು ಕಾಲದ ರೂಪಕ್ಕೆ ಬದಲಾಗಿ ಮತ್ತೊಂದು ಕಾಲದರೂಪ ಬರುತ್ತದೆ" ಇದನ್ನು ಕಾಲಪಲ್ಲಟ ವಾಕ್ಯದೋಷಗಳೆನ್ನುತ್ತಾರೆ.

(ಕನ್ನಡ ವ್ಯಾಕರಣ 98)

ವ್ಯಾಕರಣದ ಪ್ರಕಾರ ಕ್ರಿಯಾಪದಗಳಿಗೆ 'ದ' ವ್ಯಂಜನದ ಆಗಮವೂ ವರ್ತಮಾನ ಕಾಲದಲ್ಲಿ ಉತ್ತ ಆಗಮವೂ ಭವಿಷ್ಯತ್ತಿನಲ್ಲಿ ಉಪ ಆಗಮವೂ ಆಗುತ್ತದೆ ಇವು ಕಾಲವಾಚಕ ವಾಕ್ಯಗಳಲ್ಲಿ ಪಲ್ಲಟವಾದಾಗ ವಾಕ್ಯದೋಷಗಳು ಎನಿಸುತ್ತದೆ.

(ಪರಿಶುದ್ಧ ಕನ್ನಡ ಪು. 92)

ಅಶುದ್ಧ 1 : ಈ ರಸ್ತೆ ಹಾಸನಕ್ಕೆ ಹೋಗುತ್ತದೆ

ಶುದ್ಧ : ಈ ರಸ್ತೆ ಹಾಸನಕ್ಕೆ ಹೋಗುವುದು

(ವರ್ತಮಾನಕಾಲದ ದೋಷ)

ಅಶುದ್ಧ 2 : ಅವನು ನಾಳೆ ಊರಿಂದ ಬರುತ್ತಾನೆ

ಶುದ್ಧ : ಅವನು ನಾಳೆ ಊರಿಂದ ಬರುವನು

(ವರ್ತಮಾನಕಾಲದೋಷ)

ಅಶುದ್ಧ 3 : ಸತ್ತ ಮೇಲೆ ಸ್ವರ್ಗ ಕಂಡನು

ಶುದ್ಧ : ಸತ್ತ ಮೇಲೆ ಸ್ವರ್ಗ ಕಾಣುವನು

(ಭೂತಕಾಲದೋಷ)

ಪುನರುಕ್ತಿ ದೋಷ

ತಪ್ಪು ವಾಕ್ಯ : ಸಕುಟುಂಬ ಸಮೇತರಾಗಿ ಬಂದರು

ಸರಿ ವಾಕ್ಯ : ಸಕುಟುಂಬವಾಗಿ ಬಂದರು

ಅಥವಾ

ಕುಟುಂಬ ಸಮೇತರಾಗಿ ಬಂದರು

ವಿವರಣೆ : ಸಕುಟುಂಬ ಎಂದರೇನೇ ಕುಟುಂಬ ಸಮೇತ ಎಂದರ್ಥ ಸಕುಟುಂಬ ಎಂದಮೇಲೆ ಸಮೇತ ಪದ ಬಳಸಿದರೆ ಅರ್ಥಹೀನ ಪುನರುಕ್ತಿ ಆಗುತ್ತದೆ.

(ಭಾಷಾದೀಪಿಕೆ ಪುಟ 144)

ಅಶುದ್ಧ-ಅಪಪ್ರಯೋಗ ಶಬ್ದ ದೋಷಗಳು

ವ್ಯಾಖ್ಯೆ : ವಾಕ್ಯಗಳಲ್ಲಿ ಶಬ್ದರೂಪ ಶುದ್ಧವಾಗಿದ್ದರೂ ಆ ವಾಕ್ಯದ, ಆ ವಿಷಯದ ಸಂದರ್ಭದಲ್ಲಿ ಅರ್ಥದ ದೃಷ್ಟಿಯಲ್ಲಿ ಪದ ಶುದ್ಧರೂಪದಲ್ಲಿರದಿದ್ದರೆ ಅಥವಾ ಸೂಕ್ತಪದವಾಗದಿದ್ದರೆ ಅಂಥ ವಾಕ್ಯಗಳು ದೋಷಪೂರ್ಣವೆನಿಸುತ್ತದೆ.

1. ಅಶುದ್ಧ : ಬೆಲೆ ಏರಿಕೆ ಅಂತರ್ರಾಷ್ಟ್ರೀಯ ಸಮಸ್ಯೆ ಆಗಿದೆ

   ಶುದ್ಧ : ಬೆಲೆ ಏರಿಕೆ ಅಂತಾರಾಷ್ಟ್ರೀಯ ಸಮಸ್ಯೆ ಆಗಿದೆ

(ಸಂಧಿ ದೋಷ)

2. ಅಶುದ್ಧ : ಕೈ ತೊಳಕೊಂಡು ಬೆನ್ನು ಹತ್ತಿದರು
   ಶುದ್ಧ : ಕೈ ತೊಳೆದುಕೊಂಡು ಬೆನ್ನು ಹತ್ತಿದರು

(ಆಡುನುಡಿರೂಪ ಬಳಕೆ ದೋಷ)

3. ಅಶುದ್ಧ : ಸ್ನಾನಕ್ಕಾಗಿ ಬಿಸಿನೀರನ್ನು ಕಾಸುವರು
   ಶುದ್ಧ : ಸ್ನಾನಕ್ಕಾಗಿ ನೀರನ್ನು ಬಿಸಿಯಾಗಿ ಕಾಸುವರು

4. ಅಶುದ್ಧ : ಮಲ್ಲಿಗೆಯ ಹೂವು ಅರಳಿತು
   ಶುದ್ಧ : ಮಲ್ಲಿಗೆಯ ಮೊಗ್ಗು ಅರಳಿತು

(ಪದ ವ್ಯತ್ಯಾಸದೋಷ)

5. ಅಶುದ್ಧ : ಕಮ್ಯೂನಿಸಂ ಸಿದ್ಧಾಂತ ಸರ್ವಕಾಲಿಕ ಸತ್ಯವಲ್ಲ
   ಶುದ್ಧ : ಕಮ್ಯೂನಿಸಂ ಸಿದ್ಧಾಂತ ಸಾರ್ವಕಾಲಿಕ ಸತ್ಯವಲ್ಲ

(ಪದರೂಪ ವ್ಯತ್ಯಾಸ)

6. ಅಶುದ್ಧ : ಮಾತ್ರುಬಾಷೆಯಲ್ಲಿ ಶಿಕ್ಷಣ ಕೊಡಿ
   ಶುದ್ಧ : ಮಾತೃಭಾಷೆಯಲ್ಲಿ ಶಿಕ್ಷಣ ಕೊಡಿ

(ಪರಿಶುದ್ಧ ಕನ್ನಡ ಪುಟ 95-96)

7. ಅಶುದ್ಧ : ಈಗ ವೇಳೆ ಏನು?
   ಶುದ್ಧ : ಈಗ ವೇಳೆ ಎಷ್ಟು?

(ಪ್ರಶ್ನಾರ್ಥಕ ಪದದೋಷ)

8. ಅಶುದ್ಧ : "ಕಾವೇರಿ ಜಲವಿವಾದ" - ಮಧ್ಯಂತರ ತೀರ್ಪಿನ ವಿರುದ್ಧ ಪ್ರತಿಭಟನೆಗೆ "ಕನ್ನಡ ಚಳುವಳಿಗಾರರ ನಿರ್ಧಾರ".
   ಶುದ್ಧ : ಕಾವೇರಿ ಜಲವಿವಾದ. ಮಧ್ಯಂತರ ತೀರ್ಪಿನ ವಿರುದ್ಧ ಪ್ರತಿಭಟನೆಗೆ "ಕನ್ನಡ ಚಳುವಳಿಗಾರರ ನಿರ್ಧಾರ"

(ಲೇಖನಚಿಹ್ನೆಗಳ ಬಳಕೆದೋಷ)

(ಪರಿಶುದ್ಧ ಕನ್ನಡ ಪುಟ 96)

ಅಶುದ್ಧ : ಶಿವಪೂಜೆಯಲ್ಲಿ ಕರಡಿ ಬಿಟ್ಟ ಹಾಗೆ

ಶುದ್ಧ : ಶಿವಪೂಜೆಯಲ್ಲಿ ಕರಡಿಗೆ ಬಿಟ್ಟಹಾಗೆ

ವಿವರಣೆ : ಇಲ್ಲಿ ಮೊದಲ ವಾಕ್ಯದಲ್ಲಿ ಅರ್ಥದೋಷ ಇದೆ. ಶಿವಪೂಜೆಯಲ್ಲಿ ಕರಡಿಯನ್ನು ಬಿಡುವುದಿಲ್ಲ. ಕರಡಿ ಹತ್ತಿರ ಇರುವುದಿಲ್ಲ. ಕರಡಿಗೆ (ಲಿಂಗ)

ಹತ್ತಿರ ಇರುತ್ತದೆ. ಅದನ್ನು ಬಿಟ್ಟು ಪೂಜೆ ಮಾಡುವುದು ಸರಿಯಲ್ಲ ಎಂಬುದು ಸರಿ ಅರ್ಥ.

(ಕನ್ನಡಶೈಲಿ ಕೈಪಿಡಿ ಪು. 94)

ತಪ್ಪು : ಹಲವು ಸಿಬ್ಬಂದಿಗಳಿಗೆ ಬೇರೆ ಬೇರೆ ತರಬೇತಿ ನೀಡಿ ಇತರ ವಿಭಾಗಗಳಲ್ಲಿ ನಿಯುಕ್ತಗೊಳಿಸಲಾಗಿದೆ

ಸರಿ : ಹಲವು ಸಿಬ್ಬಂದಿಗೆ ಬೇರೆ ಬೇರೆ ತರಬೇತಿ ನೀಡಿ ಇತರ ವಿಭಾಗಗಳಲ್ಲಿ ನಿಯುಕ್ತಿಗೊಳಿಸಲಾಗಿದೆ

ವಿವರಣೆ : ಸಿಬ್ಬಂದಿ ಎಂಬುದು ಸಮೂಹವಾಚಕ, ಬಹುವಚನಪದ ಆದ್ದರಿಂದ ಸಿಬ್ಬಂದಿಗಳಿಗೆ ಎಂಬುದು ತಪ್ಪುರೂಪ ನಿಯುಕ್ತಿಗೊಳಿಸಲಾಗಿದೆ ಸರಿ ರೂಪ)

(ಕನ್ನಡಶೈಲಿ ಕೈಪಿಡಿ ಪುಟ 97)

ಜನಬಳಕೆಯಲ್ಲಿ ಇಲ್ಲದ ಪದಪ್ರಯೋಗ ದೋಷ

ವ್ಯಾಖ್ಯೆ :

ಸಾಧ್ಯವಾದಷ್ಟು ಪರಿಚಿತ ಶಬ್ದಗಳನ್ನು ಬಳಸಿ ವಾಕ್ಯರಚನೆ ಮಾಡುವುದು ಸೂಕ್ತ. ಅದರಲ್ಲೂ ಪತ್ರಿಕೆ, ಬಾನುಲಿ, ದೂರದರ್ಶನ ಮೊದಲಾದ ಮಾಧ್ಯಮಗಳಲ್ಲಿ ಗಮನಿಸ ಬೇಕಾದ ವಿಚಾರ ಇದು. ಪರಿಚಿತ ಪದ ಬಳಕೆಯಿಂದ ಬರಹ, ಮಾತು ಓದುಗರಿಗೆ ಹತ್ತಿರವಾಗುತ್ತದೆ. ಪರಿಚಿತಪದ ಬಳಕೆ ಬಿಟ್ಟು ಕೆಲವರು ಸಂಸ್ಕೃತ ಪದಗಳನ್ನು ಸಮಾಸಗಳನ್ನು ಬಳಸಿ ಪಾಂಡಿತ್ಯ ಪ್ರದರ್ಶಿಸಲು ಬಯಸುತ್ತಾರೆ. ಇದು ಸರಿಯಿಲ್ಲ. ಒಣಪಾಂಡಿತ್ಯಕ್ಕೆ ಸಾರ್ವಜನಿಕ ಮಾಧ್ಯಮಗಳು ಸೂಕ್ತ ಅಲ್ಲ. ಪತ್ರಿಕೆ, ಬಾನುಲಿ ಮೊದಲಾದವು ವೇದಿಕೆ ಅಲ್ಲ. ಆದ್ದರಿಂದ ಪರಿಚಿತವಾದ ಜನ ಅಂಗೀಕರಿಸದ ಅನ್ಯಭಾವಪದಗಳನ್ನು ಬಳಸುವುದು ಸೂಕ್ತ.

(ಸರಿಗಮಪದ ಪುಟ 37)

1. ಬೇಡ : ರಾಮನವಮಿ ದಿವಸ ಶಿವದಾನ ಕೊಟ್ಟರು

   ಇರಲಿ : ರಾಮನವಮಿ ದಿವಸ ಮಜ್ಜಿಗೆ ಕೊಟ್ಟರು

   (ಅಪರಿಚಿತ ಪದ ಬಳಕೆ ದೋಷ)

2. ಬೇಡ : ಅಭಿಯಂತರು ಕಚೇರಿಗೆ ಬಂದಿಲ್ಲ

   ಇರಲಿ : ಇಂಜಿನಿಯರ್ ಕಚೇರಿಗೆ ಬಂದಿಲ್ಲ (ಅಪರಿಚಿತ ಪದಬಳಕೆ ದೋಷ)

3. ಬೇಡ : ನಮ್ಮ ಮನೆ ಕ್ಯಾಟಿಗೆ ಹಾಲು ಕಂಡರೆ ಇಷ್ಟ
ಇರಲಿ : ನಮ್ಮ ಮನೆ ಬೆಕ್ಕಿಗೆ ಹಾಲು ಕಂಡರೆ ಇಷ್ಟ

4. ಬೇಡ : ಅಧಿಕಾರಿಗಳಿಗೆ ಪ್ರಶಿಕ್ಷಣ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು
ಇರಲಿ : ಅಧಿಕಾರಿಗಳಿಗೆ ತರಬೇತಿ ಶಿಬಿರ ಏರ್ಪಡಿಸಲಾಗಿತ್ತು

ಎರಡು ಋಣಾತ್ಮಕ (ನಿಷೇಧಾರ್ಥಕ) ಪದಗಳ ಬಳಕೆ ದೋಷ

"ಎರಡು ಋಣಾತ್ಮಕ ಪದಗಳು ಸೇರಿದರೆ ಅರ್ಥ, ಧನಾತ್ಮಕ. ಒಂದೇ ವಾಕ್ಯದಲ್ಲಿ ಎರಡು ಋಣಾತ್ಮಕ ಸಂಗತಿಗಳನ್ನು ಬಳಸುವಾಗ ಅರ್ಥದ ಬಗ್ಗೆ ಎಚ್ಚರಿಕೆ ಅಗತ್ಯ. ಇಂಗ್ಲಿಷಿನಲ್ಲಿ ಎರಡು ಋಣಾತ್ಮಕಗಳ ಬಳಕೆ ಅಪರೂಪವೇನಲ್ಲ. ಆದರೆ ಕನ್ನಡದಲ್ಲಿ ಸಾಧ್ಯವಾದಷ್ಟು ಈ ರೀತಿಯ ಪ್ರಯೋಗಗಳಿಗೆ ಕಡಿವಾಣ ಹಾಕುವುದು ಲೇಸು."

(ಸರಿಗಮಪದ : ಪುಟ 40)

ಉದಾ :

1. ದ್ವಿ ಋಣಾತ್ಮಕ ವಾಕ್ಯ : ಪಿಂಚಣಿ ಹೆಚ್ಚಿಸದಿರುವ ಸಾಧ್ಯತೆ ಇಲ್ಲ
ಧನಾತ್ಮಕ ವಾಕ್ಯ : ಪಿಂಚಣಿ ಹೆಚ್ಚಿಸುವ ಸಾಧ್ಯತೆ ಇದೆ

2. ದ್ವಿ ಋಣಾತ್ಮಕ ವಾಕ್ಯ : ಲೋಕಸಭೆಯ ಚುನಾವಣೆಯಲ್ಲಿ ಬಿಜೆಪಿ ಅಧಿಕಸ್ಥಾನ ಗಳಿಸುವುದು ಅಸಂಭವವೇನೂ ಅಲ್ಲ
ಧನಾತ್ಮಕ ವಾಕ್ಯ : ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಸ್ಥಾನ ಗಳಿಸುವುದು

(ಸರಿಗಮಪದ : ಪುಟ 41)

ಕ್ರಿಯಾಪದರಹಿತ ವಾಕ್ಯಗಳ ದೋಷ

ಕ್ರಿಯಾಪದರಹಿತ ಪದಪುಂಜಗಳ ವಾಕ್ಯಗಳ ರಚನೆಯನ್ನು ಪತ್ರಿಕೆಗಳಲ್ಲಿ, ಅನೇಕರ ಗ್ರಂಥಗಳಲ್ಲಿ ಕಾಣುತ್ತೇವೆ. ಇದು ಬಳಕೆಗೆ ಸೂಕ್ತವೇ? ಎಂಬ ಪ್ರಶ್ನೆಗೆ ಜೆ.ಆರ್. ಲಕ್ಷ್ಮಣರಾವ್ ಹೇಳುವ ಮಾತುಗಳಿವು : (ಪುಟ 67)

"ಕ್ರಿಯಾಪದಗಳಿಲ್ಲದ ಅವಿರತ ಬರವಣಿಗೆ ಕಿವಿಗೆ ಅಹಿತವಾಗುತ್ತದೆ. ಸುಗಮ ಸಂವಹನಕ್ಕೆ ಅಡ್ಡಿಯುಂಟುಮಾಡುತ್ತದೆ. ಕ್ರಿಯಾಪದವನ್ನು ಬಹಿಷ್ಕರಿಸಿದಾಗ ಬರವಣಿಗೆಯು ತನ್ನ ಪ್ರಪ್ರಥಮ ಕರ್ತವ್ಯವಾದ ಸಂಹವನ ಕ್ರಿಯೆಯನ್ನು ಯಶಸ್ವಿಯಾಗಿ

ನಿರ್ವಹಿಸಿ, ಓದುಗರನ್ನು ಗಲಿಬಿಲಿಗೀಡು ಮಾಡುವುದೆಂಬ ವಿಷಯನಿಷ್ಠ ಸತ್ಯವನ್ನು ಗುರುತಿಸುವುದು ಅತ್ಯಗತ್ಯ"

ಈ ಮಾತಿಗೆ ನಿದರ್ಶನವಾಗಿ ಕೊಡುವ ಗದ್ಯಭಾಗ ಹೀಗಿದೆ "....ಕನ್ನಡದ ನಾನಾ ಆಯಾಮಗಳ ಬೆಳವಣಿಗೆಗಾಗಿ ಸಾಮೂಹಿಕ ಪ್ರಯತ್ನ. ಕುವೆಂಪು, ಶ್ರೀಮಾಲಿ, ಅಂಥವರ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಕನ್ನಡತನ. ಕಲೆ, ವಿಜ್ಞಾನ ಎಲ್ಲವನ್ನೂ ಕನ್ನಡದಲ್ಲಿ ಬೆಳೆಸಬೇಕೆಂಬ ಉತ್ಸಾಹ. ವಿಶ್ವಕೋಶ, ಭಾಷಾಂತರ, ಪಠ್ಯಪುಸ್ತಕ ಶಾಸನ ಸಂಪಾದನೆ, ಜಾನಪದ ಮುಂತಾದ ಎಲ್ಲ ಕೆಲಸಗಳೂ ಪ್ರಾರಂಭ.

ಈ ವಾಕ್ಯಗಳಲ್ಲಿ ಪೂರ್ಣವಿರಾಮ ಚಿಹ್ನೆಗಳಿವೆ. ಪೂರ್ಣ ಅರ್ಥ ಕೊಡುವ ಪದಗಳ ಸಮೂಹವನ್ನು ವಾಕ್ಯ ಎಂದು ಕರೆಯುತ್ತಾರೆ. ಅಂಥ ವಾಕ್ಯ ಮುಗಿಯಲು ಪೂರ್ಣ ವಿರಾಮ ಚಿಹ್ನೆ ಬಳಸಬೇಕು ಎಂದು ತಿಳಿದಿದ್ದ ವ್ಯಾಕರಣ ಪ್ರಥಮ ಪಾಠಗಳನ್ನು ಕಲಿಯುತ್ತಿದ್ದ ಮಗು ಈ ವಾಕ್ಯಗಳನ್ನು ನೋಡಿ 'ಇದರಲ್ಲಿ ವಾಕ್ಯಗಳೇ ಇಲ್ಲ' ಎಂದಿತಂತೆ. ಮಗು ಹೇಳಿದಂತೆ ಪೂರ್ಣ ಅರ್ಥ ಕೊಡುವ ಪದಸಮೂಹ ಒಂದೂ ಇಲ್ಲ. ಇದೇ ಇಲ್ಲಿಯ ದೋಷ ಎನ್ನಬಹುದು.

ಅನಗತ್ಯ ವಿಶೇಷಣಗಳ ಬಳಕೆಯ ದೋಷ

"ಪತ್ರಕರ್ತರಿಗೆ, ಅಂಟಿದ ದೊಡ್ಡ ಜಾಡ್ಯವೆಂದರೆ ವಾಕ್ಯಗಳಲ್ಲಿ ವಿಶೇಷಣಗಳ ಮಿತಿಮೀರಿದ ಬಳಕೆ. ವಿಶೇಷಣಗಳ ಅತಿಬಳಕೆ ವಾಕ್ಯದ ರಕ್ತವನ್ನೇ ತಿಗಣೆಗಳಂತೆ ಹೀರಿ ನಿಃಸತ್ವಗೊಳಿಸುತ್ತವೆ. ವಿಶೇಷಣಗಳು ಹೇಗಿರಲಿ ಅಂದ್ರೆ ಪಾರ್ಟಿಯಲ್ಲಿ ಮಿಂಚುವ ಸುಂದರ ಹೆಂಗಸಿನ ಬೆರಳಲ್ಲಿ ಮಿರುಗುವ ವಜ್ರದ ಉಂಗುರದಂತಿರಲಿ.

ಅತಿಯಾದ ವಿಶೇಷಣಗಳ ಬಳಕೆ ಎಂದರೆ ಎಲ್ಲಾ ಬೆರಳುಗಳಿಗೂ ವಜ್ರದ ಉಂಗುರ ತೊಟ್ಟಂತೆ. ಅದು ಆಡಂಬರಕ್ಕೆ ಸಾಕ್ಷಿ." ಎನ್ನುತ್ತಾರೆ ವಿಶ್ವೇಶ್ವರ ಭಟ್.

ಉದಾ:

1. ದೋಷವಾಕ್ಯ : ಬೆಂಗಳೂರಿನಲ್ಲಿ ಸುರಿದ ಭಾರಿ ಮಳೆಯಿಂದ ತೀವ್ರ ಹಾಗೂ ವಿಪರೀತ ಹಾನಿಯಾಯಿತಲ್ಲದೆ <u>ಅಪಾರ</u> ಸಾವುನೋವು ಸಂಭವಿಸಿತು.

   ನಿರ್ದೋಷ ವಾಕ್ಯ : ಬೆಂಗಳೂರಿನಲ್ಲಿ ಸುರಿದ ಮಳೆಯಿಂದ <u>ಭಾರಿ</u> ಹಾನಿಯಾಯಿತಲ್ಲದೇ ಸಾವು-ನೋವು ಸಂಭವಿಸಿತು.

(ಅನಗತ್ಯ ವಿಶೇಷಣಗಳ ದೋಷ)

2. ದೋಷವಾಕ್ಯ : ರಾಜ್ಯದ ಜನಪ್ರಿಯ, ಪ್ರಖ್ಯಾತ ಹಾಗೂ ಪ್ರಸಿದ್ಧ ಮುಖ್ಯಮಂತ್ರಿ.... ಆಗಮಿಸಿದರು.

ನಿರ್ದೋಷವಾಕ್ಯ : ರಾಜ್ಯದ ಜನಪ್ರಿಯ ಮುಖ್ಯಮಂತ್ರಿ .... ಆಗಮಿಸಿದರು.

(ಅನಗತ್ಯ ವಿಶೇಷಣಗಳ ದೋಷ)

3. ಇಡ್ಲಿ ಪಾತ್ರೆ ಸೆಟ್ ಅನ್ನು ಕೊಂಡು ಪ್ಲಾಸ್ಟಿಕ್ ತಟ್ಟೆಯನ್ನು ಸಂಪೂರ್ಣವಾಗಿ ಉಚಿತ ಪಡೆಯಿರಿ.
   (ಇಲ್ಲಿ ಸಂಪೂರ್ಣವಾಗಿ ಎಂಬುದು ಅನಗತ್ಯ ವಿಶೇಷಣ)

ಅನುವಾದದ ವಾಕ್ಯದೋಷಗಳು

ಕನ್ನಡದಲ್ಲಿ ಇಂಗ್ಲಿಷಿನಿಂದ ನೂರಾರು ಗ್ರಂಥಗಳು ಅನುವಾದವಾಗಿವೆ, ಆಗುತ್ತಿವೆ. ಇಂಥ ಸಂದರ್ಭದಲ್ಲಿ ವಿಶೇಷವಾಗಿ ಕಥಾವಸ್ತು, ವಿಷಯದ ದೃಷ್ಟಿಯಿಂದ ಮೂಲಗ್ರಂಥ ನೋಡುವುದಕ್ಕಿಂತ ಹೆಚ್ಚಾಗಿ ಮೂಲಭಾಷೆಯ ರೀತಿ ರಿವಾಜುಗಳನ್ನು ನುಡಿಗಟ್ಟು, ಗಾದೆ ಮೊದಲಾದುವನ್ನು ವ್ಯಾಕರಣದ ನಿಯಮಗಳನ್ನು ತಿಳಿದಿರಬೇಕು ಎರಡು ಭಾಷೆಗಳ ಪರಿಚಯ ಇರುವವರು. ಕರಡಚ್ಚು ತಿದ್ದಿದರೆ ಗ್ರಂಥ ಹೆಚ್ಚು ದೋಷಮುಕ್ತವಾಗುತ್ತದೆ. ಇಲ್ಲದಿದ್ದಲ್ಲಿ ವಾಕ್ಯದೋಷಗಳು ಅರ್ಥದೋಷಗಳು ಸಾಕಷ್ಟು ಸಂಭವಿಸುತ್ತವೆ.

ಉದಾ: ಗಾದೆಗಳ ಅನುವಾದವನ್ನು ಪದಶಃ ಮಾಡಲಾಗದು ಅದರ ಅರ್ಥ, ಸಾಮಂಜಸ್ಯ ಕಂಡು ಅನುವಾದಿತ ಭಾಷೆಯಲ್ಲಿನ ಸಮಾನಾರ್ಥದ ಅಥವಾ ಸಮೀಪಾರ್ಥದ ಗಾದೆಯನ್ನು ಬಳಸಬೇಕು. ಪದಶಃ ಅನುವಾದ ಅನೇಕ ಸಂದರ್ಭಗಳಲ್ಲಿ ಸಲ್ಲದು. ಕನ್ನಡ ಜಾಯಮಾನ ನೋಡಬೇಕು ಇಂಥ ಸಂದರ್ಭಗಳಲ್ಲಿ.

ಉದಾ: ಕೆಲಸವಿಲ್ಲದನ ತಲೆ ದೆವ್ವಗಳ ಕಾರ್ಖಾನೆ

1. An idle brain is a devil's workshop ಕೆಲಸವಿಲ್ಲದವನ ತಲೆ, ದೆವ್ವಗಳ ಕಾರ್ಖಾನೆ ಎಂದು ಹೇಳುತ್ತಾರೆ.
   (ಈ ಗಾದೆ ಅನುವಾದ ಕನ್ನಡ ಜಾಯಮಾನಕ್ಕೆ ಹೊಂದುವುದಿಲ್ಲ)

2. ಅವರು ಯಾವಾಗಲೋ ಬಕೆಟ್ ಒದ್ದಾಯಿತು.
   He kicked the bucket.
   ಅವರು ಯಾವಾಗಲೋ ತೀರಿಕೊಂಡರು.
   (Kicked the bucket ನುಡಿಗಟ್ಟಿನ ಪದಶಃ ಅನುವಾದ ಸರಿಯಲ್ಲ)

(ಕನ್ನಡಶೈಲಿ ಕೈಪಿಡಿ, ಪುಟ 99)

ಪುಟ್ಟವಾಕ್ಯಗಳು ಗುಣಕಾರಿ ದೀರ್ಘವಾಕ್ಯಗಳು ದೋಷಕಾರಿ

ಸಾಮಾನ್ಯವಾಗಿ ವಾಕ್ಯಗಳನ್ನು ವ್ಯಾಕರಣಗ್ರಂಥಗಳಲ್ಲಿ ಸರಳವಾಕ್ಯ, ಸಂಯೋಜಿತವಾಕ್ಯ, ಮಿಶ್ರವಾಕ್ಯ ಎಂದು ವರ್ಗೀಕರಿಸುತ್ತಾರೆ. ಈ ಬಗೆಯ ವರ್ಗೀಕರಣ ಇಂಗ್ಲಿಷ್ ವ್ಯಾಕರಣ ಪ್ರಭಾವದಿಂದ ಕನ್ನಡ ವ್ಯಾಕರಣಗಳಲ್ಲಿ ಕಾಣಿಸಿಕೊಂಡಿದೆ.

ವಾಕ್ಯಗಳು ಸರಳವಿರಬೇಕು. ಪದಗಳು ಅರ್ಥವಾಗಿರುವಂತಿರಬೇಕು. ರಚನಾಶೈಲಿ ಆಕರ್ಷಕವಾಗಿರಬೇಕು ಎಂಬ ನಿಯಮಗಳು ಎಲ್ಲರಿಗೂ ಮಾನ್ಯವಾದುದು ಆದರೆ ಪುಟ್ಟವಾಕ್ಯಗಳ ರಚನಾ ಕೌಶಲ್ಯ, ಶೈಲಿ ಎಲ್ಲರಿಗೂ ಸಿದ್ಧಿಸುವುದಿಲ್ಲ. ಕನ್ನಡದಲ್ಲಿ ಚಿಕ್ಕವಾಕ್ಯಗಳ ಶೈಲಿಗೆ ಹೆಸರಾದವರು ಹಲವರಿದ್ದಾರೆ. ಅವರಲ್ಲಿ ಸಿದ್ದವನಹಳ್ಳಿ ಕೃಷ್ಣಶರ್ಮರು, ಎಚ್ಚೆಸ್ಕೆ ಪ್ರಸಿದ್ಧರು. ಪುಟ್ಟವಾಕ್ಯ ಎಂದರೆ ಎಷ್ಟು ಉದ್ದ, ದೀರ್ಘವಾಕ್ಯ ಎಷ್ಟು ಉದ್ದ? ಬಾಣನ ಕಾದಂಬರಿ ಶೈಲಿ, ಚಂಪೂ ಕೃತಿಗಳಲ್ಲಿ ಕಂಡುಬರುವ ವಚನಶೈಲಿ, ಹಳಗನ್ನಡದ ಗ್ರಂಥಗಳಲ್ಲಿ ಕಂಡುಬರುವ ದೀರ್ಘವಾಕ್ಯಗಳ ಶೈಲಿ ಇಂದಿಗೆ ಸೂಕ್ತವಲ್ಲ. ವಾಚನಕ್ಕೆ, ಅರ್ಥೈಸಲು ದೀರ್ಘವಾಕ್ಯಗಳು ಗೊಂದಲಗಳನ್ನು ಉಂಟು ಮಾಡುತ್ತದೆ.

ಹಾಗಾದರೆ ವಾಕ್ಯದ ಸರಾಸರಿ ಉದ್ದ ಎಷ್ಟಿರಬೇಕು?

ಈ ಪ್ರಶ್ನೆಗೆ ಸರಿಗಮ 'ಪದ' ಗ್ರಂಥದಲ್ಲಿ ಒಂದು ಪಟ್ಟಿ ಕೊಟ್ಟಿದೆ. (ಪುಟ 52) ವಾಕ್ಯದ ಉದ್ದ ಮತ್ತು ಅದರ ಪರಿಣಾಮ ವಾಚನದಲ್ಲಿ ಉಂಟು ಮಾಡುವುದನ್ನು ಹೀಗೆ ತಿಳಿಸಿದೆ:-

ವಾಚಕಗುಣ		
	ಪದದ ಉದ್ದ	ಪರಿಣಾಮ
1	8 ಪದ	ಅದಕ್ಕಿಂತ ಕಡಿಮೆ ಓದಲು ಅತಿ ಸುಲಭ
2	11 ಪದ	ಓದಲು ಸುಲಭ
3	14 ಪದ	ಸುಲಭವೇ
4	17 ಪದ	ಸರಿಯಾದ ಉದ್ದ
5	25 ಪದ	ಕಷ್ಟ
6	32 ಪದ	ಅತಿಕಷ್ಟ

ಚಿಕ್ಕ ವಾಕ್ಯಗಳಿರಬೇಕು ಎಂದು ಅದನ್ನೇ ವ್ರತವಾಗಿ ಪರಿಪಾಲಿಸಿದರೆ ವಾಕ್ಯಗಳು ಸತ್ವಹೀನವಾಗುವ ಸಂಭವವಿರುತ್ತದೆ.

ಉದಾಹರಣೆಗೆ ಈ ವಾಕ್ಯಗಳನ್ನು ಗಮನಿಸಿ :-

"ಆ ಹುಡುಗಿ ಕಾಡಿನಲ್ಲಿ ಹೋಗುತ್ತಿದ್ದಳು

ಅವಳು ಚಿಕ್ಕವಳು. ಅವಳು ಒಬ್ಬಳೇ ಹೋಗುತ್ತಿದ್ದಳು

ಅವಳು ಮೆಲ್ಲಗೆ ನಡೆಯುತ್ತಿದ್ದಳು"

(ಸರಿಗಮಪದ ಪುಟ 55)

ಸುಲಭವಾಗಿ ಒಂದೇ ವಾಕ್ಯದಲ್ಲಿ ಸುಲಭವಾಗಿ ತಿಳಿಸಬಹುದಾದ ಬೇರೆ ಬೇರೆ ಸಂಗತಿಗಳಿಗೆ ಬೇರೆ ಬೇರೆ ಚುಟುಕು ವಾಕ್ಯಗಳನ್ನು ಬರೆದಿದ್ದರಿಂದ ಬರವಣಿಗೆಯಲ್ಲಿ ಬಿಗಿ ಇಲ್ಲದಂತಾಗಿ ವಾಕ್ಯ ಸತ್ತ್ವಹೀನವಾಗಿದೆ.

ಈ ನಾಲ್ಕು ವಾಕ್ಯಗಳನ್ನು ಸೇರಿಸಿ ಹೀಗೆ ಒಂದೇ ವಾಕ್ಯ ಮಾಡಿದರೆ ಅರ್ಥ ಸುಲಭವಾಗುತ್ತದೆ.

"ಕಾಡಿನಲ್ಲಿ ಈ ಚಿಕ್ಕ ಹುಡುಗಿಯೊಬ್ಬಳೇ ಮೆಲ್ಲಗೆ ನಡೆಯುತ್ತಾ ಹೋಗುತ್ತಿದ್ದಳು"

(ಸರಿಗಮ'ಪದ' ಪುಟ 56)

ಅಚ್ಚುಕಟ್ಟಾದ ತೀರಾ ಚಿಕ್ಕದು ಅಥವಾ ದೊಡ್ಡದಲ್ಲದ ನಿರ್ದೋಷ ವಾಕ್ಯಗಳ ಗ್ರಂಥಗಳು ಕನ್ನಡದಲ್ಲಿ ಹಲವಾರಿವೆ. ಉದಾಹರಣೆಗೆ ಎ.ಆರ್.ಕೃ ಅವರ ವಚನಭಾರತ. ಸಿದ್ದವನಹಳ್ಳಿ ಕೃಷ್ಣಶರ್ಮರ ರಾಮಾವತಾರ, ಗೀತಾ ಪ್ರವಚನ ಇತ್ಯಾದಿ.

ಅರ್ಥದೋಷದ ಪದಗಳ ವಾಕ್ಯಗಳ ವಿಚಾರ

ಮುದ್ರಾರಾಕ್ಷಸನ ಹಾವಳಿ ಎಂದು ಕರೆಯುವಾಗಲೆಲ್ಲ ಪದಗಳ ಕಾಗುಣಿತ, ಲೇಖನ ಚಿಹ್ನೆ, ಶುದ್ಧರೂಪಗಳ ವಿಷಯ ನೆನಪಾಗುವುದು ಸಹಜ. ಅದರ ಜತೆಗೆ ಬಳಸಿದ ಪದದಲ್ಲಿ ಕಾಗುಣಿತ ದೋಷ, ವಾಕ್ಯದಲ್ಲಿ ಲೇಖನಚಿಹ್ನೆ ಬಳಕೆ, ಪದದ ಶುದ್ಧರೂಪ ಬಳಕೆ ಆಗಿದ್ದರೂ ಬಳಸಿದ ಅಪ್ರಸ್ತುತದಿಂದ ವಾಕ್ಯದ ಉದ್ದೇಶಿತ ಅರ್ಥಕ್ಕೆ ವಿರುದ್ಧವಾಗಿರುತ್ತದೆ. ಈ ಬಗೆಯ ವಾಕ್ಯದೋಷಗಳನ್ನು ಅರ್ಥದೋಷದ ವಾಕ್ಯಗಳು ಎನ್ನಬಹುದು. ಅರ್ಥ ತಿಳಿಯದ ಕಾರಣದಿಂದ ಕರಡಚ್ಚನ್ನು ಸರಿಯಾಗಿ ತಿದ್ದದ ಕಾರಣ ಈ ರೀತಿ ಅನರ್ಥಕಾರಿ ಅಥವಾ ಅಪಾರ್ಥಕಾರಿ ವಾಕ್ಯಗಳು ಅಚ್ಚಾಗಿರುತ್ತದೆ.

ಉದಾ :

ಸರಿ : ಸಂಜೆ ವಿದ್ವಾಂಸರಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ.

ತಪ್ಪು : ಇಂದು ಸಂಜೆ ವಿದ್ವಾಂಸರಿಂದ ಉಪವಾಸಕಾರ್ಯಕ್ರಮ ಏರ್ಪಡಿಸಲಾಗಿದೆ.

ಸರಿ : ಈ ಅಭಿಪ್ರಾಯ ರೈಸರದು.

ತಪ್ಪು : ಈ ಅಭಿಪ್ರಾಯ ರೈತರದು.

ಇಲ್ಲೆಲ್ಲಾ ಪದಗಳು ವಾಕ್ಯಗಳು ರಚನೆಯಲ್ಲಿ ಸರಿಯಾಗಿವೆ ಆದರೆ ಅರ್ಥದಲ್ಲಿ ಆಭಾಸವುಂಟು ಮಾಡಿವೆ.

ಸಂಕ್ಷಿಪ್ತವಾಕ್ಯಗಳ ರಚನೆಯ ಮಿತಿ

ದೊಡ್ಡವಾಕ್ಯಗಳನ್ನು ಚಿಕ್ಕದು ಮಾಡಲು ಒಂದು ಮಿತಿ ಇರುತ್ತದೆ. ಅರ್ಥಕ್ಕೆ ಸ್ವಾರಸ್ಯಕ್ಕೆ ಧಕ್ಕೆ ಬಾರದಂತೆ ಪುಟ್ಟ ವಾಕ್ಯಗಳ ರಚನೆ ಇರಬೇಕು. ದೊಡ್ಡ ವಾಕ್ಯಗಳನ್ನು ಸಂಕ್ಷೇಪಿಸಬೇಕು. ವಿಪರೀತ ಸಂಕ್ಷೇಪೀಕರಣ ಮಾಡಿದರೆ ವಾಕ್ಯದ ಗತಿ ಏನಾಗುತ್ತದೆ ಎಂಬುದಕ್ಕೆ ವಿಶ್ವೇಶ್ವರಭಟ್ಟರು ತಮ್ಮ ಸರಿಗಮ'ಪದ'ದಲ್ಲಿ (ಪುಟ 23) ಒಂದು ದೃಷ್ಟಾಂತ ನೀಡಿದ್ದಾರೆ.

"ಮೀನು ಮಾರಾಟಗಾರನೊಬ್ಬನಿದ್ದನಂತೆ. ಆತ ಅಂಗಡಿ ಮುಂದೆ 'ಇಲ್ಲಿ ತಾಜಾ ಮೀನನ್ನು ಮಾರಲಾಗುತ್ತದೆ' ಎಂದು ಬೋರ್ಡು ಬರೆಯಿಸಿದನಂತೆ.

ಆತ ಸ್ನೇಹಿತ ಇಲ್ಲಿ ಎಂದು ಬರೆದಿದ್ದನ್ನು ಅಳಿಸುವಂತೆ ಹೇಳಿದನಂತೆ, ಕಾರಣ, ಇಲ್ಲಿ ಅಲ್ಲದೇ ಆತ ಬೇರೆತ್ತಲೂ ಮಾರುತ್ತಿಲ್ಲವಲ್ಲ.

ಅನಂತರ ತಾಜಾ ಎಂಬುದನ್ನು ಅಳಿಸಲು ಹೇಳಿದನಂತೆ. ಕಾರಣ ತಾಜಾ ಇರದ ಮೀನನ್ನು ಯಾರೂ ಮಾರುವುದಿಲ್ಲವಲ್ಲ.

ಬಳಿಕ ಮಾರಲಾಗುತ್ತದೆ ಎಂಬುದನ್ನು ತೆಗೆಯುವಂತೆ ಹೇಳಿದನಂತೆ. ಕಾರಣ, ಅಂಗಡಿಯಾತ ಮೀನನ್ನು ಪುಕ್ಕಟೆಯಾಗಿ ನೀಡುತ್ತಿಲ್ಲವಲ್ಲ. ಕೊನೆಗೆ ಉಳಿದಿದ್ದು ಮೀನು ಶಬ್ದ ಇದನ್ನು ಅಳಿಸುವಂತೆ ಹೇಳಿದನಂತೆ ಕಾರಣ, ಮೈಲು ದೂರದಿಂದ ವಾಸನೆಯಿಂದಲೇ ಹೇಳಬಹುದು ಅಲ್ಲಿ ಮೀನು ಮಾರುತ್ತಿದ್ದಾರೆಂದು. ಕೊನೆಗೆ ಮೀನು ಮಾರಾಟಗಾರ ಬೋರ್ಡನ್ನೇ ಕಿತ್ತೊಗೆದನಂತೆ."

ಆಕರಗ್ರಂಥ ಸೂಚಿ

1. ಕನ್ನಡ ವಾಕ್ಯಗಳು (ಆಂತರಿಕ ರಚನೆ ಮತ್ತು ಅರ್ಥವ್ಯವಸ್ಥೆ) : ಡಿ.ಎನ್. ಶಂಕರಭಟ್ಟ 1978
2. ಶುದ್ಧಾಶುದ್ಧ ಕನ್ನಡ : ರಾಜಗೋಪಾಲಾಚಾರ್ಯ 1990
3. ಕನ್ನಡಶೈಲಿ ಕೈಪಿಡಿ : ಸಮಿತಿ ಕನ್ನಡ ವಿವಿ 1995
4. ಕನ್ನಡ ಬರವಣಿಗೆ : ದೋಷಗಳು, ದೌರ್ಬಲ್ಯಗಳು : ಪ್ರೊ. ಟಿ.ವಿ. ವೆಂಕಟಾಚಲಶಾಸ್ತ್ರಿ, ಪ್ರೊ. ಜೆ.ಆರ್. ಲಕ್ಷ್ಮಣರಾವ್ 2010
5. ಕನ್ನಡ ರಚನೆ ಮತ್ತು ಬಳಕೆ (ತೊಂಡುಮೇವು ಸಂಪುಟ 8) : ಡಾ. ಕೆ.ವಿ. ನಾರಾಯಣ 2010
6. ಕನ್ನಡ ವಾಕ್ಯಗಳ ಒಳರಚನೆ : ಡಿ.ಎನ್. ಶಂಕರಭಟ್ಟ 2004
7. ವಾಕ್ಯ ಚಿಂತಾಮಣಿ : ಪಂಡಿತ ಎಚ್. ಶೇಷಯ್ಯಂಗಾರ್ 1935
8. ಬಳಕೆಯ ಕನ್ನಡ : ಹೆಚ್. ಸಿದ್ಧಲಿಂಗಯ್ಯ 2005
9. ಭಾಷಾದೀಪಿಕೆ : ಟಿ. ಕೇಶವಭಟ್ಟ 1993
10. ಶಬ್ದಾದರ್ಶ : ಬಿ. ಮಲ್ಲಪ್ಪ 1956
11. ಸರಿಗಮ'ಪದ' : ವಿಶ್ವೇಶ್ವರಭಟ್ 2008
12. ಕನ್ನಡ ಲೇಖನ ಲಕ್ಷಣ : 1915 ಲೇ?
13. ಕನ್ನಡ ಮಧ್ಯಮ ವ್ಯಾಕರಣ : ತೀ.ನಂ.ಶ್ರೀ 1960
14. ಪರಿಶುದ್ಧ ಕನ್ನಡ : ಅಯ್.ಎಸ್. ಅರಳಗುಪ್ಪೆ 2011
15. ಹೊಸಗನ್ನಡ ವ್ಯಾಕರಣ : ಟಿ.ವಿ. ವೆಂಕಟಾಚಲಶಾಸ್ತ್ರಿ 2007 ಇತ್ಯಾದಿ.

ಅಧ್ಯಾಯ : 8

ಕರಡು ತಿದ್ದುವಿಕೆ ಮತ್ತು ಕೋಶ - ಸೂಚಿ ಸಾಹಿತ್ಯ

ಕರಡು ತಿದ್ದುವಿಕೆ ಒಂದು ಮಹತ್ವದ ಕಲೆ. ಕರಡು ತಿದ್ದುಗಾರ ಇರುವ, ಇಲ್ಲದ ಸಾಮಗ್ರಿಗಳನ್ನು ಒದಗಿಸಿಕೊಂಡು ರುಚಿಕಟ್ಟಾದ ನಳಪಾಕ ಸಿದ್ಧಪಡಿಸುವ ಬಾಣಸಿಗ ನಿದ್ದಂತೆ. ಅವನ ಶ್ರಮ ಅಪಾರ. ಆದರೆ ಆ ಕೆಲಸ ತೆರೆಮರೆಯಲ್ಲಿ ಅಚ್ಚಿನಮನೆಯಲ್ಲಿ ನಡೆಯುವುದರಿಂದ ಹೊರಗೆ ಕಾಣುವುದಿಲ್ಲ. ಸಿನಿಮಾ-ನಾಟಕಗಳ ನಿರ್ದೇಶಕನಿದ್ದಂತೆ ಅಥವಾ ಕಾಳಿದಾಸನ ನಾಟಕದಲ್ಲಿ ಬರುವ ದುರ್ವಾಸನ ಪಾತ್ರವಿದ್ದಂತೆ ಹೊರಗೆ ಕಾಣಿಸಿಕೊಳ್ಳುವುದಿಲ್ಲ.

ಕರಡು ತಿದ್ದುವವನು ಬರಿಗೈಯಲ್ಲಿ ತಿದ್ದಲು ಸಾಧ್ಯವಿಲ್ಲ. ಅನೇಕ ಅನೇಕ ಪರಿಕರಗಳು ಮುಖ್ಯವಾಗಿ ಗ್ರಂಥ-ಲೇಖನ ಸಾಧನಗಳು ಅಗತ್ಯ. ಪದಗಳ ಶುದ್ಧಾಶುದ್ಧತೆ ಬಗ್ಗೆ ಸಂಶಯ ಬಂದಾಗ ಸರಿರೂಪ ನಿರ್ಧರಿಸಲು ವಿವಿಧ ನಿಘಂಟುಗಳು ಬೇಕು. ಪಾರಿಭಾಷಿಕ ವಿವರಣೆಗಳನ್ನು ತಾಳೆ ನೋಡುವಾಗ ಆಕರಗ್ರಂಥಗಳು ಬೇಕು, ವಿಷಯನಿರೂಪಣೆಯಲ್ಲಿ ಲೋಪವಾದಾಗ ಸರಿಪಡಿಸಲು ಆಯಾ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳ ನೆರವು ಬೇಕು. ಇದಕ್ಕಾಗಿ, ಗ್ರಂಥಭಂಡಾರಗಳ, ಲೇಖಕರ ಗ್ರಂಥಗಳ, ಪತ್ರಿಕೆಗಳ ಸೂಚಿಗಳು, ಮಾಹಿತಿಕೋಶಗಳು ಬೇಕು. ಅಡುಗೆಗೆ ಸಾಮಗ್ರಿಗಳು ಪರಿಕರಗಳು ಬೇಕಾಗುವ ಹಾಗೆ ಕನ್ನಡಗ್ರಂಥಸೂಚಿಗಳು ಈ ಕೊರತೆಯನ್ನು ನಿವಾರಿಸುವಲ್ಲಿ ನೆರವಾಗುತ್ತವೆ.

ಎಷ್ಟೋವೇಳೆ ಕನ್ನಡದಲ್ಲಿ ಇಂಗ್ಲಿಷಿನಲ್ಲಿ ಪ್ರಕಟವಾದ ಗ್ರಂಥಸೂಚಿಗಳ ಪರಿಚಯವಿಲ್ಲದೆ, ಲೇಖಕರು, ಕರಡುತಿದ್ದುಗಾರರು, ವಿಮರ್ಶಕರು ತಪ್ಪು ಮಾಹಿತಿ ನೀಡುತ್ತಾರೆ. ಇದೇ ಕನ್ನಡದಲ್ಲಿ ಈ ವಿಷಯಕ್ಕೆ ಪ್ರಥಮಗ್ರಂಥ ಎನ್ನುತ್ತಾರೆ. ತಾಂತ್ರಿಕ ವಿವರಣೆಗಳನ್ನು ತಪ್ಪಾಗಿ ನೀಡುತ್ತಾರೆ. ವಿಷಯಲೋಪ ಮಾಡುತ್ತಾರೆ. ವಿದ್ವಾಂಸರ ದೃಷ್ಟಿಯಲ್ಲಿ ಲೇಖಕರು ಸಣ್ಣವರಾಗುತ್ತಾರೆ. ಈ ದೋಷಗಳ ನಿವಾರಣೆಗೆ ಗ್ರಂಥಸೂಚಿ ಸಾಹಿತ್ಯ ಪರಿಚಯ ಇರಬೇಕು. ಆ ದೃಷ್ಟಿಯಿಂದ ಅತಿ ಸಂಕ್ಷಿಪ್ತವಾಗಿ ಕನ್ನಡ ಗ್ರಂಥಸೂಚಿ ಸಾಹಿತ್ಯ ಕುರಿತು ಇಲ್ಲಿ ಪ್ರಸ್ತಾಪಿಸಿದೆ.

ಕನ್ನಡದಲ್ಲಿ ಗ್ರಂಥಸೂಚಿ ಸಾಹಿತ್ಯ ವೈವಿಧ್ಯಮಯವಾಗಿದೆ. ಆ ಪೈಕಿ ಕೆಲವು ಪ್ರಕಾರಗಳು ಹೀಗಿವೆ.

(1) ಜನಪ್ರಿಯ ಗ್ರಂಥಮಾಲೆಗಳು (2) ವ್ಯಕ್ತಿಆಧಾರಿತ ಕೃತಿಸೂಚಿಗಳು (3) ಪ್ರಕಾಶಕರ ಗ್ರಂಥಸೂಚಿಗಳು (4) ನಿಯತಕಾಲಿಕೆಗಳ ಲೇಖನನುಡಿಗಳು (5) ಶಬ್ದಕೋಶಗಳು (6) ವಿದೇಶೀಯರ ಶಬ್ದಕೋಶಗಳು (7) ಪೌರಾಣಿಕ ಕೋಶಗಳು (8) ಧಾರ್ಮಿಕ ಶಬ್ದಕೋಶಗಳು (9) ವಿಜ್ಞಾನ ಶಬ್ದಕೋಶಗಳು (10) ವಿಶೇಷ ಶಬ್ದಕೋಶಗಳು (11) ಬಹುಭಾಷಾ ಶಬ್ದಕೋಶಗಳು (12) ಪಾರಿಭಾಷಿಕ ಶಬ್ದಕೋಶಗಳು (13) ವ್ಯಕ್ತಿ ಆಧಾರಿತ ಕೃತಿಸೂಚಿಗಳು (14) ಗ್ರಂಥಾಧಾರಿತ ಶಬ್ದಕೋಶಗಳು (15) ಗಾದೆಕೋಶಗಳು (16) ಸೂಕ್ತಿಕೋಶಗಳು (17) ವಿಶ್ವಕೋಶಗಳು (18) ಏಕವ್ಯಕ್ತಿ ರಚಿತ ವಿಶ್ವಕೋಶಗಳು (19) ಸಮಿತಿ ರಚಿತ ವಿಶ್ವಕೋಶಗಳು (20) ಕೈಪಿಡಿಗಳು (21) ಕನ್ನಡ ಸಾಹಿತ್ಯ ಚರಿತ್ರೆಗಳು (22) ಕನ್ನಡ ಲೇಖಕರ ಮಾಹಿತಿಕೋಶಗಳು (23) ವಾರ್ಷಿಕಗಳು (24) ವಿಷಯಾಧಾರಿತ ಕೃತಿಸೂಚಿಗಳು (25) ತಾಳೆಗರಿ ಹಸ್ತಪ್ರತಿ ಸೂಚಿಗಳು (26) ಇತ್ಯಾದಿ.

ವರ್ಗೀಕರಣ

ಮೇಲ್ಕಂಡ ವಿವಿಧಕೋಶ ಸೂಚಿ-ಸಾಹಿತ್ಯವನ್ನು ಈ ಕೆಳಕಂಡಂತೆ ವರ್ಗೀಕರಿಸ ಬಹುದು.

I ಕೋಶಸಾಹಿತ್ಯ

ಅ) ಏಕಭಾಷಾ ಶಬ್ದಕೋಶ (ಕ-ಕ ಶಬ್ದಕೋಶ)

ಆ) ದ್ವಿಭಾಷಾ ಶಬ್ದಕೋಶ (ಕ-ಇಂ ಇಂ-ಕ ಇತ್ಯಾದಿ)

ಇ) ಬಹುಭಾಷಾಕೋಶಗಳು (ಕ-ಇಂತೆ, ಕ-ಇ-ತೆ-ತ-ಮ ಇತ್ಯಾದಿ)

ಈ) ವಿದೇಶೀಯರು ರಚಿಸಿದ ಶಬ್ದಕೋಶಗಳು

ಉ) ಪೌರಾಣಿಕ ಶಬ್ದಕೋಶಗಳು

ಊ) ಧಾರ್ಮಿಕ ಶಬ್ದಕೋಶಗಳು

ಋ) ಪಾರಿಭಾಷಿಕ ಶಬ್ದಕೋಶಗಳು

ಎ) ಏಕವ್ಯಕ್ತಿ ಆಧಾರಿತ ಕೃತಿಪರಿಚಯಕೋಶಗಳು

ಏ) ಏಕಗ್ರಂಥ ಶಬ್ದಕೋಶಗಳು

ಐ) ಗಾದೆ ಕೋಶಗಳು

ಒ) ಸೂಕ್ತಿ ಕೋಶಗಳು

II ವಿಶ್ವಕೋಶಗಳು

ಅ) ಸಂಕ್ಷಿಪ್ತ ಸಮಗ್ರ ವಿಶ್ವಕೋಶಗಳು

ಆ) ಏಕವ್ಯಕ್ತಿರಚಿತ ವಿಶ್ವಕೋಶಗಳು

ಇ) ಸಮಿತಿ ರಚಿತ ವಿಶ್ವಕೋಶಗಳು

ಈ) ವಿಜ್ಞಾನ ವಿಶ್ವಕೋಶಗಳು

III ಕೈಪಿಡಿಗಳು

IV ಕನ್ನಡಸಾಹಿತ್ಯ ಚರಿತ್ರೆಗಳು

V ಕೃತಿಸೂಚಿಗಳು

ಅ) ಕನ್ನಡ ಲೇಖಕರ ಮಾಹಿತಿ ಸೂಚಿಗಳು

ಆ) ವಾರ್ಷಿಕ ಸೂಚಿಗಳು

ಇ) ವಿಷಯಾಧಾರಿತ ಕೃತಿಸೂಚಿಗಳು

ಈ) ವ್ಯಕ್ತಿ ಆಧಾರಿತ ಕೃತಿಸೂಚಿಗಳು

ಉ) ಸಾಹಿತ್ಯ ಪ್ರಕಾರದ ಕೃತಿಸೂಚಿಗಳು

VI ತಾಳೆಗರಿ ಗ್ರಂಥ ಸಂಗ್ರಹಗಳು

ಊ) ಪ್ರಕಾಶಕರ ಗ್ರಂಥಸೂಚಿಗಳು

ಋ) ಪ್ರಸಾರಾಂಗಗಳ ಗ್ರಂಥಸೂಚಿಗಳು

ೠ)ನಿಯತಕಾಲಿಕೆಗಳ ಗ್ರಂಥಸೂಚಿಗಳು

VI ಅಚ್ಚಾದ ಹಸ್ತಪ್ರತಿಸೂಚಿಗಳು

ಯಾವುದಾದರೂ ಸುಸಜ್ಜಿತ ಪುಸ್ತಕ ಭಂಡಾರಕ್ಕೆ ಹೋದರೆ ಅಲ್ಲಿ ನೀವು ಯಾವುದೇ ವಿಷಯದ ಗ್ರಂಥವನ್ನು ಕೇಳಿದಾಗ ಅಥವಾ ಒಬ್ಬ ಲೇಖಕರ ಗ್ರಂಥ ಕೇಳಿದಾಗ ಅಥವಾ ಒಂದು ಗ್ರಂಥದ ಹೆಸರು ಹೇಳಿ ಅದು ಬೇಕೆಂದಾಗ ಪುಸ್ತಕಭಂಡಾರಿ, ಲೇಖಕರ ಸೂಚಿ, ಗ್ರಂಥಸೂಚಿ, ವಿಷಯಸೂಚಿ, ಕೆಲವು ಕಡೆ ಪತ್ರಿಕಾಸೂಚಿಗಳನ್ನು ಪರಿಶೀಲಿಸಿ ನೀವು ಕೇಳಿದ ಗ್ರಂಥವನ್ನು ಹುಡುಕಿಕೊಡುತ್ತಾರೆ. ಪುಸ್ತಕಭಂಡಾರದಲ್ಲಿರುವ ಗ್ರಂಥಗಳ

ಉಪಯೋಗವಾಗಬೇಕಾದರೆ ಈ ತ್ರಿಸೂಚಿಗಳು ಅತ್ಯಗತ್ಯವಾಗಿದೆ. ಈ ಎಲ್ಲ ಸೂಚಿಗಳೂ ಅಕಾರಾದಿಕ್ರಮದಲ್ಲಿರುತ್ತವೆ.

ನೀವು ಕೇಳಿದ ಗ್ರಂಥ ಕೆಲವೇ ನಿಮಿಷದಲ್ಲಿ ದೊರಕುತ್ತದೆ ಇಲ್ಲವೇ ಆ ಬಗ್ಗೆ ಮಾಹಿತಿ ಸಿಗುತ್ತದೆ. ಯಾರೋ ತೆಗೆದುಕೊಂಡು ಹೋಗಿದ್ದಾರೆ, ಯಾರೋ ಕಳೆದು ಹಾಕಿದ್ದಾರೆ, ನಮ್ಮ ಪುಸ್ತಕಭಂಡಾರದಲ್ಲಿ ಆ ಗ್ರಂಥ ಇಲ್ಲ ಇತ್ಯಾದಿ ಮಾಹಿತಿಯನ್ನು ನಿಮಗೆ ನೀಡುತ್ತಾರೆ. ಲಕ್ಷಾಂತರ ಗ್ರಂಥಗಳಿರುವ ಭಂಡಾರಗಳಲ್ಲಿ ನಮಗೆ ಬೇಕಾದ ಗ್ರಂಥ ಸಿಗುವಂತೆ ಮಾಡಲು ಅಥವಾ ಅದು ಇಲ್ಲದಿರುವ ಬಗ್ಗೆ ಮಾಹಿತಿ ಸಿಗಲು ಮುಖ್ಯ ಸಾಧನ ಗ್ರಂಥಸೂಚಿ. ಗ್ರಂಥಸೂಚಿ ಗ್ರಂಥಾಲಯದ ದಿಕ್ಸೂಚಿ. ಓದುಗನಿಗೆ ಮಾಹಿತಿ ನೀಡುವ ಕೈಮರ.

ಈ ಎಲ್ಲ ಮಾತುಗಳನ್ನು ಹೇಳಿದ್ದರ ಉದ್ದೇಶ ಇಷ್ಟೆ. ಇಂದು ಕನ್ನಡದಲ್ಲಿ ವರ್ಷಕ್ಕೆ ಸಾವಿರಾರು ಗ್ರಂಥಗಳು ಹೊರಬೀಳುತ್ತಿವೆ. ಒಂದು ಕಾಲದಲ್ಲಿ ವರ್ಷಕ್ಕೆ ಕೆಲವು ನೂರು ಗ್ರಂಥಗಳೂ ಪ್ರಕಟವಾಗುತ್ತಿರಲಿಲ್ಲ. ಮತ್ತು ಕಲೆ, ಸಾಹಿತ್ಯ, ವಿಜ್ಞಾನ, ಧರ್ಮ ಇತ್ಯಾದಿ ನಾನಾಕ್ಷೇತ್ರಗಳಲ್ಲಿ ವಿಪುಲವಾಗಿ ಗ್ರಂಥಗಳು ಪ್ರಕಟವಾಗುತ್ತಿರಲಿಲ್ಲ. ಒಂದು ಕಾಲದಲ್ಲಿ ಒಂದು ಕ್ಷೇತ್ರಕ್ಕೆ ಸೇರಿದ ಅಚ್ಚಾದ ಗ್ರಂಥಗಳನ್ನೆಲ್ಲಾ ಒಬ್ಬರು ಮನಸ್ಸು ಮಾಡಿದ್ದರೆ ಒಂದೆರಡು ವರ್ಷದಲ್ಲಿ ಅಧ್ಯಯನ ಮಾಡಲು ಶಕ್ಯವಿತ್ತು. ಇಂದು ಯಾರಿಗೂ ಸಾಧ್ಯವಿಲ್ಲ; ಅಷ್ಟೊಂದು ಗ್ರಂಥಗಳು ಬಂದಿವೆ, ಬರುತ್ತಿವೆ.

ಇಂಥ ಸಂದರ್ಭದಲ್ಲಿ ಇದುವರೆಗೆ ಏನಾಗಿದೆ ಕೆಲಸ, ನಮಗೆ ಬೇಕಾದ ಕ್ಷೇತ್ರದಲ್ಲಿ ಏನೇನು ಗ್ರಂಥಗಳು ಬಂದಿವೆ ಎಂಬುದನ್ನು ತಿಳಿಯುವುದು ಅನಿವಾರ್ಯವಾಗಿದೆ. ಇದಕ್ಕೆ ಬೇಕಾಗಿರುವುದು ಸೂಚಿಗ್ರಂಥ.

ಸೂಚೀಗ್ರಂಥವನ್ನು ತಯಾರಿಸುವುದು ಒಂದು ಕಲೆ. ಪರಿಶ್ರಮದಿಂದ ಅಗಾಧ ಸಾಮಗ್ರಿಯನ್ನು ವರ್ಗೀಕರಿಸಿ ವಿಷಯ ಪರಿಣತಿಯಿಂದ ಪಟ್ಟಿಮಾಡಬೇಕಾದ ಶ್ರಮದಾಯಕ ಕೆಲಸವಾಗಿದೆ. ಗ್ರಂಥಾಲಯ ವಿಜ್ಞಾನಶಾಸ್ತ್ರದಲ್ಲಿ ಇದನ್ನು ಪ್ರತ್ಯೇಕವಾಗಿ ಕಲಿಸುತ್ತಾರೆ.

ಪುಸ್ತಕಗಳನ್ನು ವಿಷಯಾನುಸಾರ, ಲೇಖಕರ ಅನುಸಾರ, ಗ್ರಂಥನಾಮಗಳ ಅನುಸಾರ ಅಕಾರಾದಿಯಾಗಿ ವರ್ಗೀಕರಿಸಲು ಗ್ರಂಥಭಂಡಾರಶಾಸ್ತ್ರದಲ್ಲಿ ಒಂದು ಪದ್ಧತಿಯೇ ಇದೆ. ಹಸ್ತಪ್ರತಿಗಳನ್ನು ಅಚ್ಚಿನಪ್ರತಿಗಳನ್ನು ಪತ್ರಿಕೆಗಳನ್ನು ವ್ಯಕ್ತಿಪರಿಚಯಗಳನ್ನು ಸಂಸ್ಥೆಗಳ ವಿವರಗಳನ್ನು ದಾಖಲೆಪತ್ರಗಳನ್ನು ವರ್ಗೀಕರಿಸಲು ಪ್ರತ್ಯೇಕ ವಿಧಾನಗಳಿವೆ.

ಗ್ರಂಥಸೂಚಿ ನಮಗೇಕೆ ಬೇಕು? ಎಂಬ ಪ್ರಶ್ನೆ ಸಹಜ. ಯಾವುದೋ ಒಂದು ಪುಸ್ತಕ ತೆಗೆದುಕೊಂಡು ಓದುವ ಓದುಗನಿಗೆ ಸಮಸ್ಯೆಯಿಲ್ಲ. ಕೈಗೆ ಸಿಕ್ಕ ಪುಸ್ತಕ ಓದುವವರಿಗೆ ಸಮಸ್ಯೆಯಲ್ಲ. ಕೇವಲ ಕಾದಂಬರಿ, ಕಥೆ, ನಾಟಕ ಇತ್ಯಾದಿ ಒಂದನ್ನೇ ಓದುವವರಿಗೆ ಅಷ್ಟಾಗಿ ಸಮಸ್ಯೆ ಇಲ್ಲ. ಸಮಸ್ಯೆ ಇರುವುದು ಬರುವುದು, ಸಂಶೋಧಕರಿಗೆ, ವಿದ್ವಾಂಸರಿಗೆ, ಗ್ರಂಥರಚನೆ ಮಾಡುವವರಿಗೆ. ಲೇಖಕರ ಬಗ್ಗೆ ವಿಷಯದ ಬಗ್ಗೆ ಸಮಗ್ರ ಮಾಹಿತಿ ಬೇಕೆಂಬುವರಿಗೆ ಎಲ್ಲ ವಿಷಯ ಮಾಹಿತಿ ಒಳಗೊಂಡ ಸೂಚಿಗಳು ಬೇಕು.

ಸಂಶೋಧಕರಿಗೆ ತಾವು ಸಂಶೋಧನೆ ನಡೆಸುತ್ತಿರುವ ಕ್ಷೇತ್ರದಲ್ಲಿ ಇದುವರೆಗೆ ಏನು ಕೆಲಸ ನಡೆದಿದೆ ಎಂಬುದನ್ನು ತಿಳಿಯಲು ಗ್ರಂಥಸೂಚಿ ಅತ್ಯಗತ್ಯ. ಒಬ್ಬ ಲೇಖಕನ ಕೃತಿ ಓದಿದಾಗ ಆ ಲೇಖಕ ಇನ್ನೇನು ಬರೆದಿದ್ದಾರೆ ಎಂಬುದನ್ನು ತಿಳಿಯಲು ಓದುಗನಿಗೆ ಗ್ರಂಥಸೂಚಿ ಮುಖ್ಯ. ತನ್ನ ಭಾಷೆಯಲ್ಲಿ ಇನ್ನೇನು ಕೆಲಸ ಆಗಬೇಕು ಎಂಬುದನ್ನು ಚಿಂತಿಸಲು ಇದುವರೆಗೆ ಆಗಿರುವ ಕೆಲಸದ ಮಾಹಿತಿ ಕೊಡುವ ಗ್ರಂಥಸೂಚಿ ಮುಖ್ಯ.

ಇಂದು ವ್ಯವಸ್ಥಾತ್ಮಕ ಗ್ರಂಥಸೂಚಿಗಳಿಲ್ಲದೆ ಯಾವ ಕ್ಷೇತ್ರದಲ್ಲಿ ಏನು ಕೆಲಸ ಎಷ್ಟು ಆಗಿದೆ ಎಂಬ ಅರಿವೇ ನಮಗಾಗಿಲ್ಲ. ಹೀಗಾಗಿ ಎಷ್ಟೋಸಲ ಇತರರು ಈಗಾಗಲೇ ಮಾಡಿದ ಕೆಲಸವನ್ನು ನಾವು ತಿಳಿಯದೆ ಮತ್ತೆ ಮತ್ತೆ ಮಾಡಿರುವ ನಿದರ್ಶನಗಳಿವೆ. ದೇಶ ವಿದೇಶಗಳಲ್ಲಿ ಇತರ ಭಾಷೆಗಳಲ್ಲಿ ಆಗಿರುವ ಸಾಧನೆ ಕೆಲಸಗಳನ್ನು ತಿಳಿಯದೆ ಮಾಡಿರುವ ಕೆಲಸಗಳಿಂದ ಕೋಟ್ಯಂತರ ರೂಗಳಷ್ಟು ಕಾಲವ್ಯಯ ಶ್ರಮ ವಿಜ್ಞಾನಕ್ಷೇತ್ರದ ಸಂಶೋಧನಾ ಕ್ಷೇತ್ರದಲ್ಲಿ ಆಗಿದೆ.

ವಿವಿಧ ಗ್ರಂಥಸೂಚಿಗಳು

ಗ್ರಂಥಋಣ 'ಆಕರಸಾಹಿತ್ಯ', 'ಪ್ರಮಾಣಗ್ರಂಥಾವಳಿ', 'ಪರಾಮರ್ಶನಗ್ರಂಥಗಳು', 'ಹೆಚ್ಚಿನ ಓದಿಗೆ', ಮೊದಲಾದ ಹೆಸರುಗಳಲ್ಲಿ ಅನುಬಂಧವಾಗಿ ಶಾಸ್ತ್ರೀಯ ಗ್ರಂಥಗಳಲ್ಲಿ ಸಂಶೋಧನ ಗ್ರಂಥಗಳಲ್ಲಿ ಗ್ರಂಥದ, ಅಧ್ಯಾಯದ ಕೊನೆಗೆ ಕೊಟ್ಟ ಹಲವು ಸೂಚಿಗಳನ್ನು ಸಾಮಾನ್ಯವಾಗಿ ನೋಡುತ್ತೇವೆ. ಅವುಗಳಲ್ಲಿ ಗ್ರಂಥಸೂಚಿ, ಲೇಖಕಸೂಚಿ, ವಿಷಯಸೂಚಿ, ಪತ್ರಿಕಾಲೇಖನಸೂಚಿ, ಮುಖ್ಯಪದಸೂಚಿ ಇತ್ಯಾದಿಗಳಿರುತ್ತವೆ.

ಸಂಶೋಧಕರಿಗೆ, ಇವು ಬಹಳ ಮಹತ್ವದ ಆಧಾರಗಳಾಗಿವೆ. ಕ್ಷೇತ್ರಕಾರ್ಯವಿಲ್ಲದ ಗ್ರಂಥಾಭ್ಯಾಸದ ಅಧ್ಯಯನಕಾರರಿಗೆ ತಲಕಾವೇರಿ ಎಂದರೆ ಗ್ರಂಥಸೂಚಿಗಳು. ಗ್ರಂಥಸೂಚಿಯ ಉಪಯುಕ್ತತೆಯನ್ನು ಕುರಿತು ಕನ್ನಡಗ್ರಂಥಸೂಚಿ (ಸಂಪುಟ 1) ಮುನ್ನುಡಿಯಲ್ಲಿ ಪ್ರಭುಶಂಕರರು ಹೇಳಿದಂತೆ "ಗ್ರಂಥಸೂಚಿ ಸಂಶೋಧಕರಿಗೆ ಅತ್ಯಂತ

ಆವಶ್ಯಕವಾದ ಆಕರಗ್ರಂಥ. ಯಾವುದೇ ವಿಷಯದಲ್ಲಿ ಸಂಶೋಧನೆಗೆ ತೊಡಗುವ ಮೊದಲು, ಸಂಶೋಧಕ ಮಾಡುವ ಕೆಲಸವೆಂದರೆ, ಆವರೆಗೆ ಆ ವಿಷಯವಾಗಿ ಹೊರಬಂದ ವಿಷಯಗಳನ್ನು ಸಂಗ್ರಹಿಸುವುದು. ಆ ಕೆಲಸಕ್ಕೆ ಸೂಚಿಯಿಂದ ದೊರೆಯುವಂಥ ತಕ್ಷಣದ ಸಿದ್ಧನೆರವು, ಬೇರೆ ಯಾವುದರಿಂದಲೂ ದೊರೆಯುವುದಿಲ್ಲ". ಏಕೆಂದರೆ ಗ್ರಂಥಸೂಚಿ ಎಂದರೆ "ಯಾವುದೇ ಭಾಷೆಯಲ್ಲಿ ರಚಿತವಾದ ಎಲ್ಲ ಬಗೆಯ ಬರವಣಿಗೆಗಳನ್ನು ಕುರಿತ ಎಲ್ಲ ಅಂಶಗಳ ಶಾಸ್ತ್ರೀಯ ನಿರೂಪಣೆ" ಆಗಿದೆ.

ಕನ್ನಡಗ್ರಂಥಸೂಚಿಗಳ ಮಹತ್ವ

ಕೇವಲ ಸಂಶೋಧನಗ್ರಂಥ ರಚನೆಗಷ್ಟೆ ಅಲ್ಲದೆ, ಪಾಠ ಹೇಳುವ ಅಧ್ಯಾಪಕರಿಗೆ, ಮಾರ್ಗದರ್ಶನ ಮಾಡುವ ವಿದ್ವಾಂಸರಿಗೆ, ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ, ಒಂದು ಗ್ರಂಥ ಓದಿದಾಗ ಅದರ ವಿಷಯದ ಬಗ್ಗೆ ಅಥವಾ ಆ ಲೇಖಕನ ಬಗ್ಗೆ ಹೆಚ್ಚಿನ ವಿಷಯ ತಿಳಿಯುವ ಕುತೂಹಲ ಮೂಡಿದ ಓದುಗರಿಗೆ, ಒಬ್ಬ ವ್ಯಕ್ತಿ ಅಥವಾ ಗ್ರಂಥವನ್ನು ಪ್ರಶಸ್ತಿಗೆ ಆಯ್ಕೆ ಮಾಡುವ ಸಂದರ್ಭದಲ್ಲಿ ಪರಿಶೀಲಕರಿಗೆ, ಸಂಶೋಧನೆಗೆ ಹೊಸವಿಷಯ ಆರಿಸಿಕೊಳ್ಳಲು ಇದುವರೆಗೆ ಆಯಾಕ್ಷೇತ್ರದಲ್ಲಿ ಏನು ಕೆಲಸ ನಡೆದಿದೆ ಎಂದು ತಿಳಿದುಕೊಳ್ಳಬಲ್ಲ ಯುವ ಸಂಶೋಧಕರಿಗೆ ಗ್ರಂಥಸೂಚಿಗಳು ಅಮೂಲ್ಯ ಆಕರಗಳು.

ಕನ್ನಡದಲ್ಲಿ ಗ್ರಂಥಸೂಚಿ ರಚನೆ 19ನೇ ಶತಮಾನದಲ್ಲಿ ಪ್ರಾರಂಭವಾಯಿತೆನ್ನಬಹುದು.

ಮೊದಲನೆಯದಾಗಿ 1864ನೇ ಡಿಸೆಂಬರ್‌ವರೆಗೆ ಬೊಂಬಾಯಿ ಪ್ರಾಂತದಲ್ಲಿ ಪ್ರಕಟವಾದ ದೇಶೀಯ ಪ್ರಕಟನೆಗಳು ಎಂಬ ಗ್ರಂಥಸೂಚಿಯನ್ನು ಸರ್ ಎ. ಗ್ರಾಂಟ್ ಇಂಗ್ಲಿಷಿನಲ್ಲಿ ರಚಿಸಿದರು. ಅದರಲ್ಲಿ 860 ಗ್ರಂಥಗಳ ದಾಖಲೆಯನ್ನು ಕಾಣಬಹುದು.

1910ರಲ್ಲಿ ಎಲ್.ಡಿ. ಬಾರ್ನೆಟ್ ಅವರು "ಬ್ರಿಟಿಷ್ ಮ್ಯೂಸಿಯಂ ಲೈಬ್ರರಿಯಲ್ಲಿ ಇರುವ ಕನ್ನಡ, ಬಡಗ ಮತ್ತು ಕೊಡಗು ಭಾಷೆಗಳ ಗ್ರಂಥಸೂಚಿ ಮತ್ತು 1985ರಲ್ಲಿ ಪ್ರಕಟವಾದ ಶ್ರೀಮತಿ ಗೌರ್ ಅವರು (ಆರ್. ಬಾರ್ನೆಟ್ ಅವರ ಸತಿ) ಬಾರ್ನೆಟ್ ಗ್ರಂಥಸೂಚಿಯ ಮುಂದುವರೆದ ಭಾಗವನ್ನು ಪ್ರಕಟಿಸಿದ್ದಾರೆ. ಅನಂತರ ಗಮನಾರ್ಹ ಮಹತ್ವದ ಬೃಹತ್ ಕನ್ನಡ ಗ್ರಂಥಸೂಚಿಗಳೆಂದರೆ ಮೊದಲನೆಯದು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ ಕನ್ನಡಗ್ರಂಥ ಸೂಚಿ (12ಕ್ಕೂ ಮಿಗಿಲು ಸಂಪುಟಗಳು) ಎರಡನೆಯದು ಕೇಂದ್ರ ರಾಷ್ಟ್ರೀಯ ಗ್ರಂಥಾಲಯ ಹೊರತಂದ ರಾಷ್ಟ್ರೀಯ ಗ್ರಂಥಾಲಯದ ಕನ್ನಡ ಗ್ರಂಥಗಳ ಸೂಚಿ.

ಜನಪ್ರಿಯ ಗ್ರಂಥಮಾಲೆಸೂಚಿಗಳು

ಮೈವಿವಿ, ಕವಿವಿ ಇತ್ಯಾದಿ ಪ್ರಸಾರಾಂಗಗಳ ಗ್ರಂಥಸೂಚಿಗಳಂತೆ ಖಾಸಗಿ ಸಂಸ್ಥೆಗಳು ಅಧ್ಯಯನ ಕೇಂದ್ರಗಳ ಮೂಲಕ ಜನಪ್ರಿಯ ಅಗ್ಗದ ಬೆಲೆಯ ಸುಲಭ.ಹೊತ್ತಿಗೆಗಳನ್ನು ಪ್ರಕಟಿಸುತ್ತಿವೆ. ಜೆಎಸ್‌ಎಸ್ ಸಂಸ್ಥೆ, ಗದುಗಿನ ತೋಂಟದಾರ್ಯ ಮಠ, ಮೊದಲಾದವು ಪ್ರಕಟಿಸಿರುವ ಪ್ರಕಟನೆಗಳು ಜನಪ್ರಿಯವಾಗಿವೆ. ಜನಪ್ರಿಯ ಅಗ್ಗದ ಮಾಲೆಯ ಪುಸ್ತಕಗಳನ್ನು ಪ್ರಕಟಿಸುವುದನ್ನು ಪ್ರಾರಂಭಿಸಿದವರಲ್ಲಿ ಸುಬೋಧ ರಾಮರಾಯರು ಪ್ರಸಿದ್ಧರು. ಇವರ ಸುಬೋಧ ಕುಸುಮಾಂಜಲಿ ಗ್ರಂಥಮಾಲೆ, ಇದರಂತೆಯೇ ಮಂಗಳೂರಿನ ಒಂದಾಣೆ ಗ್ರಂಥಮಾಲೆ, ವಯಸ್ಕರ ಶಿಕ್ಷಣ ಸಮಿತಿ ಗ್ರಂಥಮಾಲೆ, ಭಾರತ-ಭಾರತಿ ಪುಸ್ತಕ ಮಾಲೆಗಳ ಕೊಡುಗೆ ಚರಿತ್ರಾರ್ಹವಾಗಿದೆ. ಈ ಎಲ್ಲ ಮಾಲೆಗಳ ಗ್ರಂಥಸೂಚಿಗಳನ್ನು ಗಮನಿಸಿದಾಗ ಕನ್ನಡ ಸಾಹಿತ್ಯದಲ್ಲಿ ವಿಷಯವೈವಿಧ್ಯ ಎಷ್ಟರಮಟ್ಟಿಗೆ ಬೆಳೆದಿದೆ ಎಂಬುದು ತಿಳಿಯುತ್ತದೆ.

I ಕೋಶಸಾಹಿತ್ಯ

ಆಕರಗ್ರಂಥಗಳಾಗಿ, ಶಬ್ದಸೂಚಿ, ಅರ್ಥಸೂಚಿ, ಪಾರಿಭಾಷಿಕಪದಸೂಚಿ, ವ್ಯಕ್ತಿವಿವರಸೂಚಿ, ವ್ಯಾಖ್ಯಾಶಬ್ದಸೂಚಿ ವಿವಿಧ ವಿಷಯುಗಳನ್ನು ಒಳಗೊಂಡ ಸೂಚೀಗ್ರಂಥವರ್ಗಕ್ಕೆ ಸೇರುವ ಗ್ರಂಥವೆಂದರೆ, ಶಬ್ದಕೋಶಗಳು.

ಭಾಷೆಯ ಹಿನ್ನೆಲೆಯಲ್ಲಿ ಶಬ್ದಕೋಶಗಳಲ್ಲಿ ಕನ್ನಡ-ಕನ್ನಡ, ಏಕಭಾಷಾಕೋಶ, ಸಂಸ್ಕೃತ-ಕನ್ನಡ, ಕನ್ನಡ-ಇಂಗ್ಲಿಷ್, ಕನ್ನಡ-ತೆಲುಗು, ಕನ್ನಡ-ತಮಿಳು, ಕನ್ನಡ-ಹಿಂದಿ ಮೊದಲಾದ ದ್ವಿಭಾಷಾ ಬಹುಭಾಷಾ ನಿಘಂಟುಗಳು ಕನ್ನಡದಲ್ಲಿ ಕಂಡುಬರುತ್ತವೆ.

ಈ ನಿಘಂಟುಗಳನ್ನು ಹಳೆಯಕಾಲದ ನಿಘಂಟುಗಳು, ಆಧುನಿಕ ಕಾಲದ ನಿಘಂಟುಗಳು ಅಥವಾ ತಾಳೆಗರಿಲಿಖಿತ ನಿಘಂಟುಗಳು, ಆಧುನಿಕ ಅಚ್ಚಿನಕಾಲದ ನಿಘಂಟುಗಳು ಎಂದು ವರ್ಗೀಕರಿಸಬಹುದು. ಏಕಭಾಷಾ ನಿಘಂಟುಗಳಲ್ಲಿ, ಪ್ರಾಚೀನ ನಿಘಂಟುಗಳಲ್ಲಿ, ಹಳಗನ್ನಡ ನಿಘಂಟುಗಳಾದ ಕರ್ನಾಟಕ ಶಬ್ದಸಾರಂ, ಕರ್ನಾಟಕ ನಿಘಂಟು, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ, ಕರ್ನಾಟಕ ಸಂಜೀವನಂ, ಕನ್ನಡಭಾರತ ನಿಘಂಟು ಮೊದಲಾದವು ಹಳಗನ್ನಡ ಭಾಷಾ ನಿಘಂಟುಗಳಾಗಿ ಪದ್ಯರೂಪದಲ್ಲಿವೆ.

ಇನ್ನು ಹೊಸಗನ್ನಡ ಕನ್ನಡ-ಕನ್ನಡ ನಿಘಂಟುಗಳು ಸಾಕಷ್ಟಿವೆ. ಇವುಗಳಲ್ಲಿ ಜೆ.ಎ. ಅವರ ಕನ್ನಡ ಕಸ್ತೂರಿ ಕೋಶ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ರತ್ನಕೋಶ,

ಶಿವರಾಮಕಾರಂತರ ಸಿರಿಗನ್ನಡ ಅರ್ಥಕೋಶ, ರಮಾಕಾಂತರಾವ್ ಅವರ ಕನ್ನಡ-ಕನ್ನಡಕೋಶ, ಕಾವ್ಯಮಂಜರಿ (ಟಿ. ಕೇಶವಭಟ್ಟ ಇವರಿಂದ) ಮೊದಲಾದ ಕೋಶಗಳು ಕನ್ನಡದಲ್ಲಿ ಪ್ರಸಿದ್ಧವಾಗಿವೆ. ಪರಿಷತ್ತಿನ ಬೃಹತ್ ಕನ್ನಡ ನಿಘಂಟು ಕನ್ನಡದಲ್ಲಷ್ಟೇ ಅಲ್ಲ ಭಾರತದಲ್ಲೇ ಪ್ರಮಾಣಭೂತ ಏಕಭಾಷಾ (ಕ - ಕ) ನಿಘಂಟಾಗಿದೆ.

ವಿದೇಶೀಯರು ರಚಿಸಿದ ಶಬ್ದಕೋಶಗಳು

ಆಧುನಿಕ ಕನ್ನಡ ಶಬ್ದಕೋಶಗಳನ್ನು ಮೊದಲಿಗೆ ನಿರ್ಮಿಸಿದವರು ಕ್ರೈಸ್ತ, ಜರ್ಮನ್ ಮಿಷನರಿಗಳು. ಮತಪ್ರಚಾರಕ್ಕೆ ದೇಶೀಯರ ಭಾಷೆಯನ್ನು ತಿಳಿಯಬೇಕು. ಅದಕ್ಕಾಗಿ ವ್ಯಾಕರಣಗಳನ್ನು, ಶಬ್ದಕೋಶಗಳನ್ನು ದೇಶೀಯರ ನೆರವಿನಲ್ಲಿ (ದ್ವಿಭಾಷಿಕ ನಿಘಂಟುಗಳನ್ನು) ರಚಿಸಿದರು. ಹಾಗೆ ರಚಿತವಾದ ನಿಘಂಟುಗಳಲ್ಲಿ ರೀವ್ ಮತ್ತು ಕಿಟೆಲ್ಲರ ನಿಘಂಟುಗಳು ಇತಿಹಾಸ ಪ್ರಸಿದ್ಧವಾಗಿವೆ. ರೀವ್ ನಿಘಂಟು ಕನ್ನಡದ ಮೊದಲ ನಿಘಂಟು (ಅಚ್ಚಿನಯುಗದಲ್ಲಿ) ಎಂದು ಪ್ರಸಿದ್ಧವಾದರೆ, ಇಂದಿಗೂ ಪ್ರಮಾಣಭೂತವೆನಿಸಿರುವ ನಿಘಂಟು ಕಿಟೆಲ್ಲರ ನಿಘಂಟಾಗಿದೆ. ಮಿಷನರಿಗಳ ಇತರ ನಿಘಂಟುಗಳು ಹೀಗಿವೆ :

1. ಕಿಟೆಲ್ ನಿಘಂಟು (ಕ-ಇಂ) ಬಾಸೆಲ್‌ಮಿಷನ್, ಮಂಗಳೂರು, 1894
2. ಕಿಟೆಲ್ ನಿಘಂಟು (ಪರಿಷ್ಕೃತ) (ಕ-ಇಂ) ಎಂ. ಮರಿಯಪ್ಪಭಟ್ ಪ್ರ: ಮದರಾಸ್ ವಿಶ್ವವಿದ್ಯಾಲಯ 1969-72
3. ಕನ್ನಡ-ಇಂಗ್ಲಿಷ್ ನಿಘಂಟು - ವಿಲಿಯಂ ರೀವ್ ಪ್ರ: ಗೌರ್ನಮೆಂಟ್ ಗೆಜೆಟ್ ಪ್ರೆಸ್, ಮದ್ರಾಸ್, 1832
4. ಇಂಗ್ಲಿಷ್-ಕನ್ನಡ ನಿಘಂಟು - ಜಾನ್ ಪಿ. ಗ್ಯಾರೆಟ್, ಗೌರ್ನಮೆಂಟ್ ಪ್ರೆಸ್, ಬೆಂಗಳೂರು, 1872
5. ಕನ್ನಡ-ಇಂಗ್ಲಿಷ್ ಶಾಲಾ ನಿಘಂಟು-ಜೆ. ಬುಚರ್, ಕೆನರೀಸ್ ಮಿಷನ್ ಪ್ರೆಸ್ ಅಂಡ್ ಬುಕ್ ಡಿಪೋ, ಮಂಗಳೂರು, 1899
6. ಇಂಗ್ಲಿಷ್-ಕನ್ನಡ ಶಾಲಾ ನಿಘಂಟು - ಎಫ್. ಜೀಗ್ಲರ್. ಬಾಸೆಲ್ ಮಿಷನ್ ಪ್ರೆಸ್ ಬುಕ್ ಅಂಡ್ ಟ್ರಾಕ್ಟ್ ಡಿಪಾಸಿಟರಿ, ಮಂಗಳೂರು, 1896

7. ಆಂಗ್ಲೋ-ಕ್ಯಾನರೀಸ್ ಕ್ರೌನ್ ಡಿಕ್ಷನರಿ - ಕ್ರಿಸ್ತಾನುಜ ವತ್ಸ, ಪ್ರ: ಬಾಸೆಲ್ ಮಿಷನ್ ಬುಕ್ ಅಂಡ್ ಟ್ರಸ್ಟ್ ಡಿಪಾಸಿಟರಿ ಮಂಗಳೂರು, 1910

8. ಕನ್ನಡ-ಲ್ಯಾಟಿನ್ ನಿಘಂಟು : ಸಂ. ಬೋರ್ಟೆಲೋಪ್ ಕ್ಯಾಥೋಲಿಕ್ ಪ್ರೆಸ್, ಬೆಂಗಳೂರು, 1955

9. ಇಂಗ್ಲಿಷ್-ಕನ್ನಡ ನಿಘಂಟು ಲೇ: ಅಗರ್ಡ್. ಎ.ಜೆ ಅನು: ಬಾಲಸುಬ್ರಹ್ಮಣ್ಯಂ ಮತ್ತು ಪ್ರಭುಶಂಕರ ಪ್ರ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1985

10. ಇಂಗ್ಲಿಷ್-ಕನ್ನಡ ಡಿಕ್ಷನರಿ ಕೆರಲ್ ಜೆ.ಎಂ. ಪ್ರ: ಮಿಷನ್‌ಹೌಸ್ ಬಳ್ಳಾರಿ 1824

11. ಆಕ್ಸ್‌ಫರ್ಡ್ ಸಚಿತ್ರ ನಿಘಂಟು : ಲೇ: ಹಾರ್ನ್‌ವೆಲ್ ಇ.ಸಿ. ಮತ್ತು ಡಿ.ಎಚ್. ಹೊವ್ ಅನು: ಶಶಿಕಲಾ ಡಿ. ಜವರೇಗೌಡ, ಪ್ರ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಮದ್ರಾಸ್ 1925

12. ವರ್ಣರಂಜಿತ ಸಚಿತ್ರ ಶಾಲಾ ನಿಘಂಟು (ಇಂ-ಇಂ-ಕ) ಮೂಲ : ಇಸಬೆಲ್‌ಮೇರಿ ಮ್ಯಾಕಲೀನ ಅನು: ಎನ್. ಬಸವಾರಾಧ್ಯ ಮತ್ತು ಟಿ.ಆರ್. ಮಹಾದೇವಯ್ಯ

13. ಸಹಸ್ರಾರ್ಧ ವೃಕ್ಷಾದಿಗಳ ವರ್ಣನೆ ಲೇ: ಸಿ. ಸ್ಟೋಲ್ಜ್ ಜಿ. ಪ್ಲೆಬ್ಸಿ ಪ್ರ: ಬಾಸೆಲ್‌ಮಿಷನ್ ಬುಕ್ ಅಂಡ್ ಟ್ರಸ್ಟ್, ಡಿಪಾಸಿಟರಿ ಮಂಗಳೂರು 1908

ಪೌರಾಣಿಕವ್ಯಕ್ತಿಕೋಶಗಳು

ಸಂಸ್ಕೃತದಲ್ಲಿರುವ ಪುರಾಣ, ಇತಿಹಾಸ, ವೇದೋಪನಿಷತ್ತು, ಪ್ರಸ್ಥಾನತ್ರಯಗಳನ್ನೂ ಕಾವ್ಯಗಳನ್ನೂ ಆಧರಿಸಿದ ಕೋಶಗಳು ಹಲವಾರು ಕನ್ನಡದಲ್ಲಿ ರಚಿತವಾಗಿವೆ. ಕೆಲವನ್ನು ಇಲ್ಲಿ ಉದಾಹರಿಸಿದೆ.

1. ಪುರಾಣ ಭಾರತಕೋಶ : ಲೇ: ಯಜ್ಞನಾರಾಯಣಭಟ್ಟ

2. ಪುರಾಣನಾಮಚೂಡಾಮಣಿ : ಪಾನ್ಯಂಸುಂದರಶಾಸ್ತ್ರಿ ಮತ್ತು ಬೆನಗಲ್ ರಾಮರಾವ್

3. ಮಹಾಭಾರತಕೋಶ : ಸಿ. ಗೋಪಾಲಕೃಷ್ಣಶಾಸ್ತ್ರೀ

4. **ಪುರಾಣಲೋಕದ ಬಾಲಕರು** : ತಾರಾನಾಥ ವರ್ಕಾಡಿ
5. **ಮಹಾಭಾರತದ ಪಾತ್ರಸಂಗತಿಗಳು** : ಅ.ರಾ. ಮಿತ್ರ
6. **ಪುರಾಣಲೋಕ** (ಪುರಾಣಪರಿಚಯಲೇಖನ) ಸಂ: ಡಾ. ಪಾದೇಕಲ್ಲು ವಿಷ್ಣುಮೂರ್ತಿಭಟ್ಟ, ಪ್ರ: ಬ್ರಹ್ಮಶ್ರೀ ಮಿತ್ತೂರು ಪುರೋಹಿತ ತಿಮ್ಮಯ್ಯಭಟ್ಟ ಪ್ರತಿಷ್ಠಾನ, ದ.ಕ., 2015

ಧಾರ್ಮಿಕಶಬ್ದಕೋಶಗಳು

ಧರ್ಮ-ಸಿದ್ಧಾಂತದ ಹಿನ್ನೆಲೆಯಲ್ಲಿ ಬಂದಿರುವ ಕೋಶಗಳು ವಿಶ್ವಕೋಶದಂತೆ ವಿವಿಧ ವಿಷಯಗಳನ್ನೂ ಆಯಾ ಧರ್ಮದ, ಪಾರಿಭಾಷಿಕ ಪದಗಳ ವಿವರಣೆಗಳನ್ನೂ ಒಳಗೊಂಡ ಕೋಶಗಳು ಬಂದಿವೆ.

1. **ಮಾಧ್ವನಿಘಂಟು** - ಟಿ.ಕೆ. ವೇಣುಗೋಪಾಲದಾಸ್
2. **ಜೈನಪಾರಿಭಾಷಿಕ ಪದವಿವರಕೋಶ** - ಸರಸ್ವತಿ ವಿಜಯಕುಮಾರ್ ಮತ್ತು ಬಾ.ವೆ. ಶ್ರೀಧರ
3. **ಶಿವಾನುಭವ ಶಬ್ದಕೋಶ** - ಫ.ಗು. ಹಳಕಟ್ಟಿ 1943 ಸಮಾಜ ಪುಸ್ತಕಾಲಯ, ಧಾರವಾಡ

ವಿಜ್ಞಾನಶಬ್ದಕೋಶಗಳು

ವಿಜ್ಞಾನಕ್ಕೆ ಸಂಬಂಧಿಸಿದಂತೆ ಸಹಸ್ರಾರ್ಧ ವೃಕ್ಷಗಳ ವರ್ಣನೆ, ಮನೋವಿಜ್ಞಾನ ಶಬ್ದಕೋಶ, ರಸಾಯನಶಾಸ್ತ್ರಕೋಶ, ಕೆ.ಆರ್. ಚಕ್ರವರ್ತಿಗಳ ವಿಜ್ಞಾನಪದಕೋಶ, ನವಕರ್ನಾಟಕದ ಜ್ಞಾನ-ವಿಜ್ಞಾನಕೋಶ, ಸಂಕ್ಷಿಪ್ತಕೃಷಿ-ಪರಿಸರ ಸಚಿತ್ರ ಶಬ್ದಾರ್ಥಕೋಶ, ನವಕರ್ನಾಟಕ ವಿಜ್ಞಾನ-ತಂತ್ರಜ್ಞಾನ, ಪದಸಂಪದ ಮೊದಲಾದ ಕೋಶಗಳು ಪ್ರಕಟವಾಗಿವೆ. ಹೆಚ್ಚಿನ ವಿವರಗಳಿಗೆ ಕನ್ನಡದಲ್ಲಿ ವಿಜ್ಞಾನಶಬ್ದಕೋಶಗಳು-ವಿಶ್ವಕೋಶಗಳು, ಲೇಖನ, ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ವಿಜ್ಞಾನದ ಸಂಪುಟದಲ್ಲಿ ನೋಡಬಹುದು.

ಕನ್ನಡ ವಿಜ್ಞಾನ ಶಬ್ದಕೋಶಗಳು - ವಿಶ್ವಕೋಶಗಳು
ಭಾಗ -I ವಿಜ್ಞಾನ ಶಬ್ದಕೋಶಗಳು (ಭಾಗಶಃ ಮತ್ತು ಪೂರ್ಣ)

ಕ್ರಮ ಸಂಖ್ಯೆ	ವರ್ಷ	ಕೃತಿ	ಲೇಖಕರು/ಸಂಪಾದಕರು	ಪ್ರಕಾಶಕರು	ಭಾಷೆ	ವಿಭಾಗ
1	1965	ವಿಷತಂತ್ರ ಅಥವಾ ಅಗದ ತಂತ್ರ (ಜಿನರಾಳಕರ)	ರಾಮಚಂದ್ರ ಕೃಷ್ಣ ಕುಲಕರ್ಣಿ	ರಾಮಚಂದ್ರಕೃಷ್ಣ ಕುಲಕರ್ಣಿ ಬೆಳಗಾವಿ	ಸಂ-ಕ.	ವೈದ್ಯ ವಿಜ್ಞಾನ
2	1967	ವಿಜ್ಞಾನ ಶಬ್ದಾವಳಿ	ಎಸ್. ಶ್ರೀನಿವಾಸಾಚಾರ್	ಬುಕ್ ಸೆಂಟರ್, ಹುಬ್ಬಳ್ಳಿ	ಇಂ-ಕ.	ಸಾಮಾನ್ಯ ವಿಜ್ಞಾನ
3	1969	ಮನೋವಿಜ್ಞಾನ ಕೋಶ	ಬಿ. ಕೃಷ್ಣನ್	ಮೈಸೂರು ವಿಶ್ವವಿದ್ಯಾನಿಲಯ	ಇಂ-ಕ.	
4	1973	ಪಾರಿಭಾಷಿಕ ಶಬ್ದಕೋಶ-ಔಷಧ ನಿಯಂತ್ರಣ ಇಲಾಖೆ	ಇಲಾಖೆಯ ತಜ್ಞರು	ಸಾಮಾನ್ಯ ಆಡಳಿತ ಇಲಾಖೆ, ಕರ್ನಾಟಕ ಸರ್ಕಾರ	ಇಂ-ಕ.	
5	1973	ಸಸ್ಯಗಳ ನಿಘಂಟು	ಎಸ್.ಕೆ. ಮಲ್ಲಿಕಾರ್ಜುನಪ್ಪ	ಮೈಸೂರು ವಿಶ್ವವಿದ್ಯಾನಿಲಯ	ಇಂ-ಕ.	
6	1973	ಇಂಗ್ಲಿಷ್-ಕನ್ನಡ ವೈದ್ಯ ಪದಕೋಶ	ಡಿ.ಎಸ್. ಶಿವಪ್ಪ	ಸುಧೀರ್ ಪ್ರಕಾಶನ, ಮೈಸೂರು	ಇಂ-ಕ.	
7	1973	ಪಾರಿಭಾಷಿಕ ಶಬ್ದಕೋಶ-ಕಾರ್ಖಾನೆ ಮತ್ತು ಬಾಯಲರುಗಳ ಪರಿವೀಕ್ಷಣಾ ಇಲಾಖೆ	ಇಲಾಖೆಯ ತಜ್ಞರು	ಸಾಮಾನ್ಯ ಆಡಳಿತ ಇಲಾಖೆ, ಕರ್ನಾಟಕ ಸರ್ಕಾರ-ಪರಿಷ್ಕರಣೆ ಕನ್ನಡ ಸಂಸ್ಕೃತಿ ನಿರ್ದೇಶನಾಲಯ (1986)	ಇಂ-ಕ.	

8	1974	ಪಾರಿಭಾಷಿಕ ಶಬ್ದಕೋಶ-ಗಣಿ ಮತ್ತು ಭೂವಿಜ್ಞಾನ ಇಲಾಖೆ	ಇಲಾಖೆಯ ತಜ್ಞರು	ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ	ಇಂ-ಕ.	
9	1974	ಪಾರಿಭಾಷಿಕ ಶಬ್ದಕೋಶ ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣ ನಿರ್ದೇಶನಾಲಯ	ಇಲಾಖೆಯ ತಜ್ಞರು	ಸಾಮಾನ್ಯಾಡಳಿತ ಇಲಾಖೆ	ಇಂ-ಕ.	
10	1975	ಸಸ್ಯ ವರ್ಗೀಕರಣ ಶಾಸ್ತ್ರ	ಡಾ. ಈ. ಬೋರಯ್ಯ	ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು	ಕ-ಇಂ.	ಸಸ್ಯ ವಿಜ್ಞಾನ
11	1975	ಪಾರಿಭಾಷಿಕ ಶಬ್ದಕೋಶ ಅರಣ್ಯ ಇಲಾಖೆ	ಇಲಾಖೆಯ ತಜ್ಞರು	ಸಾಮಾನ್ಯಾಡಳಿತ ಇಲಾಖೆ	ಇಂ-ಕ.	
12	1975	ಪಾರಿಭಾಷಿಕ ಶಬ್ದಕೋಶ ರೇಷ್ಮೆ ಇಲಾಖೆ	ಇಲಾಖೆಯ ತಜ್ಞರು	ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯ	ಇಂ-ಕ.	
13	1976	ಪಾರಿಭಾಷಿಕ ಶಬ್ದಕೋಶ ಕೃಷಿ ಇಲಾಖೆ	ಇಲಾಖೆಯ ತಜ್ಞರು	ಭಾಷೆ ಮತ್ತು ಕನ್ನಡ ಇಂ-ಕ. ಅಭಿವೃದ್ಧಿ ನಿರ್ದೇಶನಾಲಯ		
13ಎ	1992	ಪಾರಿಭಾಷಿಕ ಶಬ್ದಕೋಶ ಕೃಷಿ ಇಲಾಖೆ,	ಇಲಾಖೆಯ ತಜ್ಞರು	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ		
14	1977	ಕೃಷಿ ರಸಾಯನ ಶಾಸ್ತ್ರ ಪಾರಿಭಾಷಿಕ ಶಬ್ದಕೋಶ	ಸಂ: ಎಚ್.ಕೆ. ನರಸಿಂಹೇಗೌಡ ಮತ್ತು ಇತರರು	ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು	ಇಂ-ಕ.	ರಸಾಯನ ವಿಜ್ಞಾನ

15	1979	ಕೆಲವು ಸಸ್ಯಗಳ ವೈಜ್ಞಾನಿಕ ಕುಟುಂಬ, ಇಂಗ್ಲಿಷ್ ಹಾಗೂ ಕನ್ನಡ ಹೆಸರುಗಳು	ಎಸ್.ಜಿ. ನರಸಿಂಹಾಚಾರ್	ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು	ಇಂ-ಕ.	
16	1983	ಆಯುರ್ವೇದೀಯ ಶಾರೀರ ಶಬ್ದಕೋಶ	ರಾ. ಕೃ. ಕುಲಕರ್ಣಿ	ಸಾಹಿತ್ಯ ಭಂಡಾರ, ಹುಬ್ಬಳ್ಳಿ	ಇಂ-ಕ.	ವೈದ್ಯವಿಜ್ಞಾನ
17	1984	ಜೀವಶಾಸ್ತ್ರ ಪಾರಿಭಾಷಿಕ ಶಬ್ದಕೋಶ	ಸಂಪಾದಕ ಸಮಿತಿ	ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು	ಇಂ-ಕ.	ಕೃಷಿ
18	1986	ಎನ್.ಜಿ.ಇ.ಎಫ್.ಇಂಗ್ಲಿಷ್ ಕನ್ನಡ ಔದ್ಯಮಿಕ ನಿಘಂಟು	ಸಮಿತಿ (ನಿರ್ದೇಶಕರು: ತ.ರಂ. ಕೃಷ್ಣೇಗೌಡ)	ಎನ್.ಜಿ.ಇ.ಎಫ್.	ಇಂ-ಕ.	ತಂತ್ರಜ್ಞಾನ
19	1986	ಪಾರಿಭಾಷಿಕ ಶಬ್ದಕೋಶ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಇಲಾಖೆ	ಇಲಾಖೆಯ ತಜ್ಞರು	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ	ಇಂ-ಕ.	
20	1987	ಸಂಖ್ಯಾಕಲನ ವಿಜ್ಞಾನದ ಪಾರಿಭಾಷಿಕ ಪದಗಳು	ಟಿ.ಸಿ. ವೆಂಕಟರಮಣ	ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ	ಇಂ-ಕ.	ಸಂಖ್ಯಾ ಕಲನ ವಿಜ್ಞಾನ
21	1987	ರಸಾಯನ ಶಾಸ್ತ್ರ ಪಾರಿಭಾಷಿಕ ಶಬ್ದಕೋಶ	ಎಸ್. ವೆಂಕಟೇಶಮೂರ್ತಿ	ರಸಾಯನ ಶಾಸ್ತ್ರ ಅಧ್ಯಾಪಕ ವೇದಿಕೆ, ಬೆಂಗಳೂರು	ಇಂ-ಕ.	
22	1989	ಔದ್ಯಮಿಕ ಕನ್ನಡ	ಭ. ಮಲ್ಲಿಕಾರ್ಜುನ, ಎಸ್.ಎಸ್. ಯದುರಾಜನ್	ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮೈಸೂರು ಮತ್ತು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ. ಬೆಂಗಳೂರು	ಇಂಗ್ಲಿಷ್-ಕನ್ನಡ	ತಂತ್ರಜ್ಞಾನ

23	1990	ಇಂಗ್ಲಿಷ್-ಕನ್ನಡ ವಿಜ್ಞಾನ ಶಬ್ದಕೋಶ	ಜೆ.ಆರ್. ಲಕ್ಷ್ಮಣರಾವ್, ಅಡ್ಯನಡ್ಕ ಕೃಷ್ಣಭಟ್	ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು	ಇಂ-ಕ.	
24	1990	ವನಸಿರಿ	ಅಜ್ಜಂಪುರ ಕೃಷ್ಣಸ್ವಾಮಿ	ಸ್ವರ್ಣಾಂಬ ಪಬ್ಲಿಕೇಷನ್ಸ್, ಬೆಂಗಳೂರು	ಕ.-ಕ.	
25	1990	ಖಗಸಿರಿ	ಅಜ್ಜಂಪುರ ಕೃಷ್ಣಸ್ವಾಮಿ	ಸ್ವರ್ಣಾಂಬ ಪಬ್ಲಿಕೇಷನ್ಸ್, ಬೆಂಗಳೂರು	ಕ-ಇಂ.	
26	1992	ಓಷಧಿ ಕೋಶ	ಬಿ.ಎಸ್. ಅಣ್ಣಯ್ಯ, ಡಾ. ಅಕ್ಕಮಹಾದೇವಿ	ಕರ್ನಾಟಕ ಸರ್ಕಾರ, ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ನಿರ್ದೇಶನಾಲಯ ಬೆಂಗಳೂರು	ಕನ್ನಡ-ಸಂಸ್ಕೃತ	ವೈದ್ಯ ವಿಜ್ಞಾನ
27	1992	ಪಾರಿಭಾಷಿಕ ಶಬ್ದಕೋಶ ಅಗ್ನಿಶಾಮಕ ಸೇವೆಗಳ ಇಲಾಖೆ	ಇಲಾಖೆಯ ತಜ್ಞರು	ಕನ್ನಡ ಮತ್ತು ಸಂಸ್ಕತಿ ನಿರ್ದೇಶನಾಲಯ	ಇಂ-ಕ.	
28	1994	ಪಾರಿಭಾಷಿಕ ಪದಕೋಶ ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ಇಲಾಖೆ	ಇಲಾಖೆಯ ತಜ್ಞರು	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ	ಇಂ-ಕ.	
29	1994	ಪಾರಿಭಾಷಿಕ ಪದಕೋಶ ವೃತ್ತಿ ಶಿಕ್ಷಣ ಇಲಾಖೆ	ಇಲಾಖೆಯ ತಜ್ಞರು ನಿರ್ದೇಶನಾಲಯ	ಕನ್ನಡ ಮತ್ತು ಸಂಸ್ಕೃತಿ	ಇಂ-ಕ.	
30	1994	ಪಾರಿಭಾಷಿಕ ಶಬ್ದಕೋಶ ಸರ್ಕಾರಿ ವೈಮಾನಿಕ ತರಬೇತಿ ಶಾಲೆ	ಇಲಾಖೆಯ ತಜ್ಞರು ನಿರ್ದೇಶನಾಲಯ	ಕನ್ನಡ ಮತ್ತು ಸಂಸ್ಕೃತಿ	ಇಂ-ಕ.	

31	1995	ವಿಜ್ಞಾನ ಪಾರಿಭಾಷಿಕ ನಿಘಂಟು	ಸಂ: ಪಂಡಿತ ಕೆ.ಆರ್. ಚಕ್ರವರ್ತಿ	ಕಾವ್ಯ ಕಲಾ ಪ್ರಕಾಶನ, ಬೆಂಗಳೂರು	ಇಂ-ಕ.	ಸಾಮಾನ್ಯ ವಿಜ್ಞಾನ
32	1998	ಇಂಗ್ಲಿಷ್-ಕನ್ನಡ ಪರಿಸರ ನಿಘಂಟು	ಟಿ.ಎಸ್. ವಿವೇಕಾನಂದ ಶೇಷಗಿರಿ ಜೋಡಿದಾರ್	ಇಂದ್ರಪ್ರಸ್ಥ ಪ್ರಕಾಶನ, ಬೆಂಗಳೂರು	ಇಂ-ಕ.	
33	1999	ಬಡಿಗ ವೃತ್ತಿಪರ ಮಂಜರಿ	ಡಾ.ಎಸ್.ಎಸ್. ಅಂಗಡಿ	ವಿದ್ಯಾನಿಧಿ ಪ್ರಕಾಶನ ಗದಗ	ಕನ್ನಡ	ತಂತ್ರಜ್ಞಾನ
34	1999	ವಿಜ್ಞಾನ ಶಬ್ದಾರ್ಥಕೋಶ	ಇಂದ್ರಜಿತ್	ಪಾರು ಪ್ರಕಾಶನ, ಗದಗ	ಇಂ-ಕ.	ಸಾಮಾನ್ಯ ವಿಜ್ಞಾನ
35	1999	ಉಪಯುಕ್ತ ಸಸ್ಯಗಳ ಕನ್ನಡ-ಇಂಗ್ಲಿಷ್ ಮತ್ತು ಸಸ್ಯ ಶಾಸ್ತ್ರೀಯ ಹೆಸರುಗಳು	ಮಾಗಡಿ ಆರ್. ಗುರುದೇವ್	ದಿವ್ಯಚಂದ್ರ ಪ್ರಕಾಶನ, ಬೆಂಗಳೂರು	ಕ.-ಇಂ-ವೈ.ನಾಮ	
36	2000	ಕನ್ನಡ ಗಣಕ ಪದಕೋಶ	ಕನ್ನಡ ಗಣಕ ಪರಿಷತ್ತಿನ ಸದಸ್ಯರು	ಕನ್ನಡ ಗಣಕ ಪರಿಷತ್, ಬೆಂಗಳೂರು	ಇಂ-ಕ.	ತಂತ್ರಜ್ಞಾನ
37	2001	ಕೃಷಿ ಇಂಜಿನಿಯರಿಂಗ್ ಪಾರಿಭಾಷಿಕ ಶಬ್ದಕೋಶ	ಸಂ: ಸಿ.ಕೆ. ಕುಮುದಿನಿ ಮತ್ತು ಸಂಗಡಿಗರು	ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು	ಇಂ-ಕ.	ಕೃಷಿ ವಿಜ್ಞಾನ
38	2001	ನವಕರ್ನಾಟಕ ವಿಜ್ಞಾನ ಪದ ವಿವರಣ ಕೋಶ	ಪ್ರಧಾನ ಸಂಪಾದಕರು: ಜಿ.ಟಿ. ನಾರಾಯಣರಾವ್ ಸಂಪಾದಕರು ಸಿ.ಆರ್. ಕೃಷ್ಣರಾವ್, ಕೆ.ಎಲ್. ಗೋಪಾಲಕೃಷ್ಣರಾವ್	ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ., ಬೆಂಗಳೂರು	ಕ.-ಇಂ.	

39	2002	ಕಂಪ್ಯೂಟರ್ ಪದ ವಿವರಣ ಕೋಶ	ಚಿದಾನಂದ ಗೌಡ ಚಿ.ವಿ., ಶ್ರೀನಾಥಶಾಸ್ತ್ರಿ	ಕನ್ನಡ ಪುಸ್ತಕ ಪ್ರಾಧಿಕಾರ	ಇಂ-ಕ.	
40	2009	ಇಂಗ್ಲಿಷ್-ಕನ್ನಡ ರಸಾಯನಶಾಸ್ತ್ರ ನಿಘಂಟು	ರಘುರಾಮ ಲಕ್ಷ್ಮೀನಾರಾಯಣ ಮಂಗಳೂರ್	ಸಂವಹನ ಪ್ರಕಾಶನ, ಮೈಸೂರು	ಇಂ-ಕ.	
41	2011	ಅಕಾರಾದಿ ನಿಘಂಟು ಮತ್ತು ವೈದ್ಯ ನಿಘಂಟು	ಸಂ. ವೈ.ಸಿ. ಭಾನುಮತಿ	ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ	ಸಂಸ್ಕೃತ-ಕನ್ನಡ	ವೈದ್ಯ ವಿಜ್ಞಾನ
42	2011	ನವಕರ್ನಾಟಕ ವಿಜ್ಞಾನ ತಂತ್ರಜ್ಞಾನ ಪದಸಂಪದ	ಕೆ.ಎಲ್. ಗೋಪಾಲಕೃಷ್ಣರಾವ್, ಟಿ.ಆರ್. ಅನಂತರಾಮು ಸಿ.ಆರ್. ಕೃಷ್ಣರಾವ್	ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ. ಬೆಂಗಳೂರು	ಕ.-ಇಂ.	
43	2013	ನರ್ವಕರ್ನಾಟಕ ವಿಜ್ಞಾನ-ತಂತ್ರಜ್ಞಾನ ನಿಘಂಟು	ಟಿ.ಆರ್. ಅನಂತರಾಮು ಸಿ.ಆರ್. ಕೃಷ್ಣರಾವ್	ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ. ಬೆಂಗಳೂರು	ಇಂ.-ಕ.	
44	?	ಪಾರಿಭಾಷಿಕ ಶಬ್ದಕೋಶ ಪುರಾತತ್ತ್ವ ಮತ್ತು ವಸ್ತು ಸಂಗ್ರಹಾಲಯ	ಇಲಾಖೆಯ ತಜ್ಞರು ನಿರ್ದೇಶನಾಲಯ	ಕನ್ನಡ ಮತ್ತು ಸಂಸ್ಕೃತಿ	ಇಂ-ಕ.	
45	?	ಪಾರಿಭಾಷಿಕ ಶಬ್ದಕೋಶ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ	ಇಲಾಖೆಯ ತಜ್ಞರು	ಸಾಮಾನ್ಯ ಆಡಳಿತ ಇಲಾಖೆ	ಇಂ-ಕ.	
46	?	ಪಾರಿಭಾಷಿಕ ಶಬ್ದಕೋಶ ಚಲಚ್ಚಿತ್ರ ಇಲಾಖೆ	ವಿಷಯ ತಜ್ಞರು	ಸಾಮಾನ್ಯಾಡಳಿತ ಇಲಾಖೆ	ಇಂ-ಕ.	

ವಿಜ್ಞಾನ ಶಬ್ದಕೋಶಗಳು (ಭಾಗಶಃ ಮತ್ತು ಪೂರ್ಣ)

1	1861(1) 2010(2)	ಲತೀನ್ ಕನ್ನಡ - ಲ್ಯಾಟಿನ್ ನಿಘಂಟು ಯೆತಿಯೇನ್ ಲೂಯಿ	ಸಂ: ಬಿಷಪ್ ಕ್ರೈಸ್ತರ ಕನ್ನಡ ಸಂಘ ಶಾರ್ಬೊನೊ	ಅಖಿಲ ಕರ್ನಾಟಕ ಕ್ಯಾಥೊಲಿಕ್
2	1885	ಕಲ್ಪದ್ರುಮವೆಂಬ ಸಂಸ್ಕೃತಕೋಶ (ಸಂ-ಕ)	ಟಿ. ಸುಬ್ಬರಾಯಶಾಸ್ತ್ರೀ	ಬೆಂಗಳೂರು ಬುಕ್ ಡಿಪೋ
3	1888(1) 2011(2)	ಗುರುಬಾಲ ಪ್ರಬೋಧಿಕ ನಾಮಲಿಂಗಾನುಶಾಸನ ಅಮರಕೋಶ- ಲಿಂಗಾಭಟ್ಟೀಯ ಟೀಕಾ ಸಹಿತ (ಸಂ-ಕ)	ಸಂ: ಬಿ. ಗಣಪತಿಶಾಸ್ತ್ರಿ ಬೆಂಗಳೂರು	ಪುಸ್ತಕ ಶಕ್ತಿ ಪ್ರಕಾಶನ
4	1919	ಭಾರತಿ ಶಬ್ದಮಾಲಾ ಭಾಗ 1, 2 (ಇಂ-ಕ)	ಭಾರತೀ ಸಂಪಂಗಿ ರಾಮಯ್ಯ	ಭಾರತೀ ಪಬ್ಲಿಷಿಂಗ್ ಹೌಸ್, ಬೆಂಗಳೂರು
5	1942(1) ಪರಿಷ್ಕೃತ:1 962 ವಿಸ್ತೃತ 1994(5)?	ಡಿ.ಕೆ. ಭಾರದ್ವಾಜ ಅವರ ಇಂಗ್ಲಿಷ್ ಇಂಗ್ಲಿಷ್-ಕನ್ನಡ ಸ್ಟ್ಯಾಂಡರ್ಡ್ ಡಿಕ್ಷನರಿ	ಡಿ.ಕೆ. ಭಾರದ್ವಾಜ	ಸಂಕೇಶ್ವರ, ಹುಬ್ಬಳ್ಳಿ
6	1950	ಲೋಕೋಪಕಾರಂ (ಚಾವುಂಡರಾಯ)	ಸಂ: ಎಚ್. ಶೇಷಯ್ಯಂಗಾರ್	-

7	1959(1) 1962(9)	ಇಂಗ್ಲಿಷ್ ಬೋಧಕ (ಇಂ-ಕ)	ಡಾ. ಎಲ್.ಪಿ. ಫರ್ನಾಂಡಿಸ್	ಲೇಖಕರು : ಪ್ರಾವಿಡೆನ್ಸ್ ಹಾಸ್ಪಿಟಲ್, ತುರುವೇಕೆರೆ
8	1959	ಇಂಗ್ಲಿಷ್-ಕನ್ನಡ ನಿಘಂಟು	ಎಂ.ವಿ. ಜಂಬುನಾಥನ್	ಜೆ.ಎಸ್. ರಾವ್, ಸರಸ್ವತೀಪುರಂ, ಮೈಸೂರು
9	1968	ಧನಂಜಯ ಶಬ್ದಕೋಶ-ಧನಂಜಯ (ಸಂ-ಕ)	ಸಂ: ಡಿ. ಪದ್ಮನಾಭ ಶರ್ಮ	ರಾಜಕಮಲ್ ಪ್ರಕಾಶನ, ಭುವನಹಳ್ಳಿ
10	1972	ದ್ವಿಭಾಷಾ ಬೋಧಕ (ಕ-ಇಂ)	ಜಿ.ಎ. ಸತ್ಯನಾರಾಯಣ	ಸುಭಾಷ್ ಸ್ಟೋರ್ಸ್, ಬೆಂಗಳೂರು
11	1975(1) 1996(2)	ಅಮರಸಿಂಹನ ನಾಮಲಿಂಗಾನುಶಾಸನ ಅಮರಕೋಶ (ಸಂ-ಕ)	ಸಂ: ವಿದ್ವಾನ್ ಎನ್. ರಂಗನಾಥ ಶರ್ಮಾ	ಸುವಿದ್ಯಾ ಪ್ರಕಾಶನ, ಬೆಂಗಳೂರು
12	1975	ಕರ್ನಾಟಕ ಶಬ್ದಮಂಜರಿ-ವಿರಕ್ತ ತೋಂಟದಾರ್ಯ (ಕ-ಕ)	ಸಂ: ವಿ. ಶಿವಾನಂದ	ವೀರಶೈವ ಅಧ್ಯಯನ ಸಂಸ್ಥೆ, ಗದಗ
13	1989- 2004	ಇಂಗ್ಲಿಷ್-ಕನ್ನಡ ನಿಘಂಟು	ತಜ್ಞರು	ಮೈಸೂರು ವಿಶ್ವವಿದ್ಯಾನಿಲಯ
14	1991(1) 1996(2)	ಪದಾರ್ಥ ಚಿಂತಾಮಣಿ (ವಿವರಣಕೋಶ)	ಪಾ.ವೆಂ. ಆಚಾರ್ಯ	ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು

15	1994(17)	ಲರ್ನ್ ಕನ್ನಡ ಇನ್ ಥರ್ಟಿ ಡೇಸ್ (ಕ-ಇಂ)	ರಂಗರಾವ್	ಬಾಲಾಜಿ ಪಬ್ಲಿಕೇಷನ್ಸ್, ಮದ್ರಾಸ್
16	1994	ಗಜಶಾಸ್ತ್ರ ಶಬ್ದಕೋಶ (ಸಂ-ಕ)	ಸಂ: ಟಿ.ವಿ. ವೆಂಕಟಾಚಲ ಶಾಸ್ತ್ರೀ	ಕಾವ್ಯಾಲಯ ಪ್ರಕಾಶಕರು, ಮೈಸೂರು
17	2001	ಬೇಟೆ : ಸಾಂಸ್ಕೃತಿಕ ಪದಕೋಶ (ಕ-ಕ)	ಸ.ಚಿ. ರಮೇಶ್	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
18	2001	ನ್ಯೂ ಮಾಡ್ರನ್ ಡಿಕ್ಷನರಿ (ಇಂ-ಕ)	ಅರವಿಂದ ಕೆ. ಸುಗೂರ್ ಮತ್ತು ವಿ.ವಿ. ಅಳವಂಡಿ	ಪಿ.ಸಿ. ಶಾಬಾದಿ ಮಠ್ ಬುಕ್ ಡಿಪ್ಪೋ ಪಬ್ಲಿಷರ್, ಗದಗ
19	2003	ಸರಳ ಕನ್ನಡ ಕಲಿಕೆ (ಕ-ಇಂ)	ಶಶಿಧರ ವಿಶ್ವಾಮಿತ್ರ	ಲಿಪಿ ಪ್ರಕಾಶನ, ಬೆಂಗಳೂರು
20	2007	ಸುಮ್ಮನೆ ಮಾತಾಡಿ	ಸರೋಜಿನಿ ವಿಟ್ಟಾಚಿ	ಕಾಕ್ಸ್‌ಟೌನ್, ಬೆಂಗಳೂರು
21	2008	ಇಂಗ್ಲಿಷ್ ಪದಗಳಿಗೆ ಕನ್ನಡದ್ದೇ ಪದಗಳು (ಇಂ-ಕ)	ಡಿ.ಎನ್. ಶಂಕರ ಭಟ್	ಬಾಶಾ ಪ್ರಕಾಶನ, ಹೆಗ್ಗೋಡು
22	2010 (12)	ಕನ್ನಡದಿಂದಲೇ ಲರ್ನ್ ಅಂಡ್ ಟೀಚ್ ಇಂಗ್ಲಿಷ್	ರೇವಣ್ಣ ಸಿದ್ದಪ್ಪ	ಸಂಗಮ ಪಬ್ಲಿಕೇಷನ್, ತುಮಕೂರು
23	2014	ಇಂಗ್ಲಿಷ್ ಅಂದ್ರೆ ತುಂಬ ಸುಲಭ	ಎನ್. ಭವಾನಿಶಂಕರ್	ಶಾರದಾ ಪುಸ್ತಕ ಪ್ರಕಾಶನ, ಶಿರ್ವ, ಉಡುಪಿ ಜಿಲ್ಲೆ
24	?	ವಕಾಬ್ಯುಲರಿ ಆಂಗ್ಲೋ ಕನ್ನಡ	?	ಎನ್. ವಾಸನ್ ಕಂಪನಿ, ಬೆಂಗಳೂರು

ವಿಶೇಷ ಶಬ್ದಕೋಶಗಳು

1. ಶ್ರೀವತ್ಸ ನಿಘಂಟು (ಸಂಖ್ಯಾಶಬ್ದಗಳ ಕೋಶ) ಟಿ.ವಿ. ವೆಂಕಟಾಚಲಶಾಸ್ತ್ರಿ
2. ಸಂಜ್ಞಾರ್ಥಕೋಶ : ಡಿ.ವಿ. ಹೊಳ್ಳ
3. ಅಕ್ಕಮಹಾದೇವಿ ವಚನ ಪದ ಪ್ರಯೋಗಕೋಶ (ಎಸ್.ಆರ್. ಗುಂಜಾಳ)
4. ವಚನಸಾಹಿತ್ಯದ ಆಕರಕೋಶ (ಕಲ್ಬುರ್ಗಿ ಹಿರೇಮಠ)
5. ಅಲ್ಲಮನ ವಚನಪದಕೋಶ (ವಿಜಯಕುಮಾರ್)
6. ಸಂಕ್ಷೇಪ ನಿಘಂಟು (ರಮೇಶ್ ಬೆ.ಗೋ)
7. ಗೋವಿಂದ ಪೈ ಅವರ ಪದಪ್ರಯೋಗಕೋಶ - ಎ.ವಿ. ನಾವಡ
8. ಹನಸೋಗೆ ಅವರ ಕನ್ನಡ ಸಮಾನಾರ್ಥಕ ಕೋಶ
9. ಜೈನಪಾರಿಭಾಷಿಕ ಶಬ್ದಕೋಶ, ತ.ಸು. ಶಾಮರಾಯ + ಪ. ನಾಗರಾಜಯ್ಯ
10. ಶಿವಾನುಭವ ಶಬ್ದಕೋಶ, ಫ.ಗು. ಹಳಕಟ್ಟಿ
11. ಕರ್ನಾಟಕ ಸಂಗೀತ ಪಾರಿಭಾಷಿಕ ಕೋಶ (ಸಂಪತ್ಕುಮಾರಾಚಾರ್ಯ)
12. ಇಂಗ್ಲಿಷ್-ಕನ್ನಡ ವೈದ್ಯ ಶಬ್ದಕೋಶ (ಡಿ.ಎಸ್. ಶಿವಪ್ಪ)
13. ಪತ್ರಿಕಾ ನಿಘಂಟು (ಸಂ. ಎಲ್. ಗುಂಡಪ್ಪ)
14. ಸೆಕ್ಸ್ ನಿಘಂಟು (ವಿಶ್ವರೂಪಾಚಾರ್)
15. ಕನ್ನಡವೃತ್ತಿಪದಕೋಶ (ಶಿವಾನಂದ ವಿರಕ್ತಮಠ)
16. ರಗಳೆಗಳ ನಾಮಕೋಶ : ಸಂ: ಮೃತ್ಯುಂಜಯ ರುಮಾಲೆ 2000 ಪ್ರ. ಕನ್ನಡವಿಶ್ವವಿದ್ಯಾಲಯ ಹಂಪಿ
17. ಜಾನಪದ ಗ್ರಂಥಸೂಚಿ: ಸಂ: ಬಿ.ಎಸ್. ಸ್ವಾಮಿ, ಪ್ರ. ಸಿ.ಪಿ. ಇನೋವೇಷನ್ಸ್, ಬೆಂಗಳೂರು 2013
18. ಸಂಕ್ಷಿಪ್ತ ಕನ್ನಡ ಜಾನಪದ ಗ್ರಂಥಸೂಚಿ : ಸಂ: ಎಚ್.ಎಂ. ಮಹೇಶ್ವರಯ್ಯ

ಬಹುಭಾಷಾ ಕೋಶಗಳು

ಕನ್ನಡದಲ್ಲಿ ದ್ವಿಭಾಷಾನಿಘಂಟುಗಳಲ್ಲಿ ಇಂ-ಕ, ಸಂ-ಕ, ನಿಘಂಟುಗಳೇ ಹೆಚ್ಚು. ಆಧುನಿಕ ಕಾಲದಲ್ಲಿ ಇತರ ಭಾಷೆಗಳ ನಿಘಂಟುಗಳು ಕನ್ನಡದಲ್ಲಿ ಬಂದಿವೆ. ತೆಲುಗು-

ಕನ್ನಡ, ಕನ್ನಡ-ತುಳು, ಕನ್ನಡ-ಮರಾಠಿ, ಕನ್ನಡ-ಹಿಂದಿ, ಲ್ಯಾಟಿನ್-ಕನ್ನಡ, ಕನ್ನಡ-ಲ್ಯಾಟಿನ್, ಕನ್ನಡ-ಜಪಾನೀ, ಕನ್ನಡ-ರಷ್ಯನ್ ಭಾಷೆಗಳ ನಿಘಂಟುಗಳು ಪ್ರಕಟವಾಗಿದ್ದು ಕನ್ನಡದ ವ್ಯಾಪ್ತಿ ಹೆಚ್ಚಾಗಿದೆ. ಇನ್ನೂ ಜಗತ್ತಿನ ಇತರ ಭಾಷೆಗಳ, ಭಾರತದ ಅನ್ಯಭಾಷೆಗಳ ನಿಘಂಟುಗಳು ಕನ್ನಡಕ್ಕೆ ಬರಬೇಕಾಗಿದೆ. ಇಂಗ್ಲಿಷಿನಲ್ಲಿ ಸಿಗುವ ಹಾಗೆ ಜಗತ್ತಿನ, ಭಾರತದ ಭಾಷೆಗಳ ದ್ವಿಭಾಷಾ ನಿಘಂಟುಗಳು ಕನ್ನಡಕ್ಕೆ ಬರಬೇಕು.

ಪಾರಿಭಾಷಿಕ ಶಬ್ದಕೋಶಗಳು

ಕನ್ನಡದಲ್ಲಿ ವಿಜ್ಞಾನದ ಗ್ರಂಥಗಳು ಹೆಚ್ಚಾಗಿ ಬಳಕೆಗೆ ಬಂದಿದ್ದು ಇಪ್ಪತ್ತನೇ ಶತಮಾನದಲ್ಲಿ ವಿಜ್ಞಾನದ ಶಬ್ದಕೋಶಗಳು ಬಂದಿದ್ದು ಈ ಶತಮಾನದಲ್ಲೇ. ಕಲೆ, ಶಾಸ್ತ್ರ, ವಿಜ್ಞಾನಗಳ ಪಾರಿಭಾಷಿಕ ಕೋಶಗಳು ಕನ್ನಡಕ್ಕೆ ಸಾಕಷ್ಟು ಬಂದಿವೆ.

ಆಡಳಿತಕ್ಕೆ ಸಂಬಂಧಿಸಿದಂತೆ

1. **ಕಿಸಂವಾರ್ ಗ್ಲಾಸರಿ ಆಫ್ ಕನ್ನಡವರ್ಡ್ಸ್** (ನರಸಿಂಹರಾವ್ ಉಲ್ಲಾಳ) (1891)
2. ಎಚ್ಚೆಸ್ಕೆ ಅವರ **ಬ್ಯಾಂಕಿಂಗ್ ನಿಘಂಟು**
3. ಸಂಸ್ಕೃತಿ ನಿರ್ದೇಶನಾಲಯದ **ಆಡಳಿತ ಶಬ್ದಕೋಶ**
4. ಕೃಷಿ ಅಬಕಾರಿ, ಖಜಾನೆ ಶಿಕ್ಷಣ, ಪೋಲಿಸ್, ರೇಷ್ಮೆ ಇಲಾಖೆ, ರಾಜ್ಯಲೆಕ್ಕಪತ್ರ, ಮೊದಲಾದ **ಇಲಾಖಾ ಶಬ್ದಕೋಶಗಳು**
5. ವಿವಿಧ ಇಲಾಖೆಗಳ 44 ಕ್ಕೂ ಹೆಚ್ಚಿನ ಪಾರಿಭಾಷಿಕ (ಇಂ-ಕ) ಶಬ್ದಕೋಶಗಳು ಬಂದಿವೆ.
6. **ಕೃಷಿ ಪದಕೋಶ :** ಸಂ: ಕೆವಿ ನಾರಾಯಣ ಮತ್ತು ಇತರರು 1998 ಪ್ರ: ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
7. **ದ್ರಾವಿಡ ನಿಘಂಟು** (4000 ಪದಗಳು, ತಮಿಳು, ತುಳು, ತೆಲುಗು, ಭಾಷೆಗಳ ಸಮಾನಾರ್ಥಕ ಪದಗಳೊಡನೆ) 2001 ಸಂ: ಸುಬ್ಬಣ್ಣ ರೈ ಮತ್ತು ಇತರರು
8. **ದಿನದಿನ-1** (ಹೊಸಪದಗಳ ರಚನೆಯ ಕೋಶ) ಸಂ: ಕೆ.ವಿ ನಾರಾಯಣ ಮತ್ತು ಇತರರು 1977 ಪ್ರ: ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
9. **ದಿನದಿನ-2** (ಹೊಸಪದಗಳ ರಚನೆಯ ಕೋಶ) ಸಂ: ಸಾಂಬಮೂರ್ತಿ 2001 ಪ್ರ: ಹಂಪಿ, ಕನ್ನಡ ವಿಶ್ವವಿದ್ಯಾಲಯ
10. **ನಿಷೇಧಾರ್ಥಪದಕೋಶ** ಸಂ: ಸಾಂಬಮೂರ್ತಿ 1991 ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

11. **ಬೇಟೆ: ಸಾಂಸ್ಕೃತಿಕ ಪದಕೋಶ** : ಲೇ: ಸ.ಚ. ರಮೇಶ್ 2001, ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

12. **ನೇಕಾರ ವೃತ್ತಿ ಪದಕೋಶ** : ಸಂ: ಸಾಂಬಮೂರ್ತಿ 2000 ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

13. **ಪಾಂಚಾಳವೃತ್ತಿ ಪದಕೋಶ** : ಸಂ: ಡಿ. ಪಾಂಡುರಂಗಬಾಯಿ 2000 ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

14. **ವಿವಿಧ ವೃತ್ತಿ ಪದಕೋಶ** : ಅಶೋಕಕುಮಾರ ರಂಜೇರೆ, 2000 ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

15. **ಸಂಕೀರ್ಣ ವೃತ್ತಿಪದಕೋಶ** : ಸಂ: ಎಸ್.ಎಸ್. ಅಂಗಡಿ 2000 ಪ್ರ: ಕನ್ನಡ ವಿಶ್ವವಿದ್ಯಾಲ, ಹಂಪಿ

16. **ಸಾಂಸ್ಕೃತಿಕ ಪದಕೋಶ-1** (ಮೈಲಾರಲಿಂಗ) ಲೇ: ಮಂಜುನಾಥ ಬೇವಿನಕಟ್ಟೆ 2000 ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

17. **ಸಾಂಸ್ಕೃತಿಕ ಪದಕೋಶ-2** (ನೀಲಗಾರರು) ಲೇ: ವೆಂಕಟೇಶ ಇಂದ್ವಾಡಿ 2000 ಪ್ರ: ಕನ್ನಡ ವಿಶ್ವವಿದ್ಯಾಲಯ ಹಂಪಿ

18. **ಷಟ್‌ಭಾಷೀಯ ಒಕ್ಕಬಿಲೇರಿ** ಪ್ರ: ಟಿ.ಎನ್. ಕೃಷ್ಣಯ್ಯಶೆಟ್ಟಿ ಬೆಂಗಳೂರು 1957

19. **ಆರುಭಾಷೆಗಳ ಒಕ್ಕಬಿಲೇರಿ** ಸಂ: ಶಾಮರಾಯ ಡಿ. ಸೂಲಿಬೆಲೆ ಪ್ರ: ವಿಬಿ ಸುಬ್ಬಯ್ಯ ಅಂಡ್ ಸನ್ಸ್ ಬೆಂಗಳೂರು 1893

20. **ಅಕಾರಾದಿ ವೈದ್ಯ ನಿಘಂಟು** ಲೇ: ಅಮೃತನಂದಿ ಕ್ರಿ.ಶ. 1300

21. **ಕರ್ನಾಟಕ ಕಲ್ಪದ್ರುಮಂ** : ಲೇ: ರಾಮಸ್ವಾಮಿಶಾಸ್ತ್ರಿ ಮತ್ತು ಹೆಸರುಘಟ್ಟದ ಹೊನ್ನಪ್ಪ ಪ್ರ: ಲಕ್ಷ್ಮೀವಿಲಾಸ ಪ್ರೆಸ್, ಬೆಂಗಳೂರು 1885

22. **ಅಭಿಧಾನವಸ್ತುಕೋಶ** (ನಾಗವರ್ಮ ಕ್ರಿ.ಶ. 1145) ಸಂ: ಎಚ್. ಶೇಷಯ್ಯಂಗಾರ್ ಮತ್ತು ಎ. ವೆಂಕಟರಾವ್ ಪ್ರ: ಪ್ರಾಚ್ಯ ಸಂಶೋಧನಾ ಸಂಸ್ಥೆ ಮದ್ರಾಸ್, 1933

23. **ಶ್ರೀ ಚಾಮುಂಡಿಕಾಲಘು ನಿಘಂಟು** (1848) ಮುಮ್ಮಡಿ ಕೃಷ್ಣರಾಜ ಒಡೆಯರು ಸಂ: ಎಲ್. ಗುಂಡಪ್ಪ ಮತ್ತು ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ ಪ್ರ: ಕಸಾಪ ಬೆಂಗಳೂರು 1954

24. **ಶ್ರೀ ಕೃಷ್ಣರಾಜ ಕರ್ನಾಟ ಭಾಷಾ ರತ್ನಾಕರಂ** ಸಂ: ಜೆ. ರಘುಪತ್ಯಾಚಾರ್ಯ 1972 ಪ್ರ: ಗ್ರ್ಯಾಜುಯೇಟ್ ಅಸೋಸಿಯೇಷನ್, ಮೈಸೂರು

25. ಶಬ್ದಕಲ್ಪದ್ರುಮ (ಸಂ-ಕ ನಿಘಂಟು) 1919 ಪ್ರ: ಟಿ.ಎನ್. ಕೃಷ್ಣಯ್ಯಶೆಟ್ಟಿ ಬೆಂಗಳೂರು ಸಂ: ಟಿ. ಸುಬ್ಬರಾಯಶಾಸ್ತ್ರಿ

26. ಶಬ್ದಮಂಜರಿ ಕೋಶ ಲೇ: ಗಂಗಾಧರ ಮಡಿವಾಳೇಶ್ವರ ತಾರಮುರಿ 1869 ಪ್ರ: ವಿಚಾರದರ್ಪಣ ಪ್ರೆಸ್, ಬೆಂಗಳೂರು

27. ಕನ್ನಡ ರತ್ನಕೋಶ ಸಂ: ಸಮಿತಿ ಪ್ರ: ಕಸಾಪ 1977

28. ಕನ್ನಡ ನಿಘಂಟು ಸಮಿತಿ ಪ್ರ: ಕನ್ನಡ ಸಾಹಿತ್ಯ ಪರಿಷತ್ತು

29. ಸಂಕ್ಷಿಪ್ತ ಕನ್ನಡ ನಿಘಂಟು : 1975 ಪ್ರ: ಕಸಾಪ ಬೆಂಗಳೂರು

30. ಸಚಿತ್ರ ಕನ್ನಡ-ಕನ್ನಡ ಕಸ್ತೂರಿಕೋಶ : ಜೆ.ಎ. ಕವಲಿ 1951 ಪ್ರ: ರಾಮಾಶ್ರಯ ಬುಕ್ ಡಿಪೋ ಧಾರವಾಡ

31. ಸಿರಿಗನ್ನಡ ಅರ್ಥಕೋಶ : ಶಿವರಾಮಕಾರಂತ ಪ್ರ: ಹರ್ಷ ಮುದ್ರಣಾಲಯ, ಪುತ್ತೂರು 1941

32. ಕನ್ನಡ-ಕನ್ನಡ ಶಬ್ದಕೋಶ : ಹೆಚ್.ವಿ. ರಮಾಕಾಂತರಾವ್ ಪ್ರ: ಕೆ.ಎಸ್. ಕುಲಕರ್ಣಿ, ಹುಬ್ಬಳ್ಳಿ 1952

33. ತುಳು ಕನ್ನಡ ನಿಘಂಟು : ಕು.ಶಿ. ಹರಿದಾಸಭಟ್ ಮತ್ತು ಯುಪಿ ಉಪಾಧ್ಯಾಯ ಪ್ರ: ಗೋವಿಂದಪ್ಪೈ ಸಂಶೋಧನಾ ಕೇಂದ್ರ, ಉಡುಪಿ 1980

34. ಗುರುಬಾಲ ಪ್ರಬೋಧಿಕ (ಸಂ-ಕ) ಅಮರಕೋಶ ವ್ಯಾಖ್ಯಾನ ಪುನರ್ಮುದ್ರಣ : ಡಿ. ಗಣಪತಿಶಾಸ್ತ್ರಿಗಳು 2013

ಏಕವ್ಯಕ್ತಿ ಆಧಾರಿತ ಕೃತಿಕೋಶಗಳು

4. ನೂರಕ್ಕೆ ಹತ್ತೇ ಹೆಜ್ಜೆ (ಪ್ರೊ. ಕೆ.ಎಸ್. ಕೃಷ್ಣಮೂರ್ತಿಗಳ ಜೀವನ ಕೃತಿಸೂಚಿ) ಲೇಖಕರು : ಕೆ.ಎಸ್. ಕೃಷ್ಣಮೂರ್ತಿ ಪ್ರ: ಕನ್ನಡ ಗೆಳೆಯರ ಬಳಗ, ಬೆಂಗಳೂರು 2007

5. ಹಂಪನಾ ಕೃತಿಗಳು (ಇಂಗ್ಲಿಷ್) ಸಂ: ತೇಜಸ್ವಿನಿ ಜಾಗ್ವಾ ಪ್ರ: ಅರ್ಕಾವತಿ ಪ್ರಕಾಶನ, ಬೆಂಗಳೂರು 2012

6. ರಘುಸುತಕೃತಿಶ್ರೇಣಿ ಲೇ: ಕೆ.ಆರ್. ಪದ್ಮಜೆ (ರಘುಸುತ ಕಾವ್ಯನಾಮದ ಕೆ.ಆರ್. ರಂಗಾಚಾರ್ ಅವರ ಲೇಖನಗಳ ಕೃತಿಗಳಸೂಚಿ) 1997

7. ಸಿ.ಆರ್. ಚಂದ್ರಶೇಖರರ ಕೃತಿ ಪರಿಚಯ ಸಂ: ಲೇಖಕರು ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು 2002

8. ಹರಿಹರಪ್ರಿಯ ಸಾಹಿತ್ಯ ಸಂ: ಹರಿಹರಪ್ರಿಯ ಪ್ರ: ಹರಿಹರಪ್ರಿಯ, ಪುಸ್ತಕಮನೆ, ತಲಘಟ್ಟಪುರ, ಬೆಂಗಳೂರು

9. ಟಿ.ವಿ. ವೆಂಕಟಾಚಲಶಾಸ್ತ್ರೀ ಗ್ರಂಥ - ಲೇಖನಸೂಚಿ ಪ್ರ: ಟಿ.ವಿ. ವೆಂ, ಜಯಲಕ್ಷ್ಮೀಪುರಂ, ಮೈಸೂರು

10. ಗೋವಿಂದಪೈ ಪದಪ್ರಯೋಗ ಕೋಶ, ಎ.ವಿ. ನಾವಡ ಮತ್ತು ಸೋಮಯಾಜಿ ಪ್ರ: ಗೀತಾ ಬುಕ್ ಹೌಸ್, ಮೈಸೂರು 1986

ಏಕಗ್ರಂಥ ಶಬ್ದಕೋಶಗಳು

1. ಅಭಿನವ ಪಂಪವಿರಚಿತ ರಾಮಚಂದ್ರಚರಿತ ಪುರಾಣದ ನಿಘಂಟು ಪ್ರ: ಕಸಾಪ 1921

2. ಕುಮಾರವ್ಯಾಸ ನಿಘಂಟು, ಎನ್ಕೆ ಪ್ರ: ಸಮಾಜಪುಸ್ತಕಾಲಯ ಧಾರವಾಡ, 1971

3. ಪಂಪಭಾರತ ನಿಘಂಟು : ಬೆಳ್ಳಾವೆ ವೆಂಕಟನಾರಾಯಣಪ್ಪ ಪ್ರ: ಕಸಾಪ ಬೆಂಗಳೂರು 1931

4. ಕುಮಾರವ್ಯಾಸ ಭಾರತ ನಿಘಂಟು - ತಸು ಶಾಮರಾಯ ಪ್ರ: ಬೆಂವಿವಿ 1981

5. ರನ್ನನ ಗದಾಯುದ್ಧದ ಪದವಿಭಾಗಾನುಕ್ರಮ ಕೋಶ : ಹು.ಗು. ಬೆಂಗೇರಿ

6. ಅಲ್ಲಮನ ವಚನ ಪದ ಕೋಶ ಲೇ: ಹ.ಸು. ವಿಜಯಕುಮಾರ ಬೆಂವಿವಿ ಪ್ರಸಾರಾಂಗ 1982

7. ಅಕ್ಕಮಹಾದೇವಿ ವಚನ ಪದಪ್ರಯೋಗ ಕೋಶ ಗುಂಜಾಳ ಎಸ್.ಆರ್.

8. ಬಸವಣ್ಣನವರ ವಚನ ಪದ ಪ್ರಯೋಗಕೋಶ - ಎಸ್.ಆರ್. ಗುಂಜಾಳ ಸುವಿಧಾನಗ್ರಂಥಮಾಲೆ, ಧಾರವಾಡ 1977

9. ಶ್ರೀ ತೋಂಟದ ಸಿದ್ಧಲಿಂಗಶಿವಯೋಗಿಗಳ ವಚನ ಪದಪ್ರಯೋಗಕೋಶ 1979 ಪ್ರ: ಕವಿವಿ ಧಾರವಾಡ

10. ಮಹಾಕವಿ ಹರಿಹರನ ಕೃತಿಗಳ ಪದಕೋಶ - ಬಸವರಾಜ ಮಲಶೆಟ್ಟಿ ಪ್ರ: ಜಗದ್ಗುರು ಕೊಟ್ಟೂರುಮಠ 1991

11. ಕನ್ನಡ ರಾಮಾಯಣ ಗ್ರಂಥಸೂಚಿ, ಸಂ : ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಪ್ರ: ಪ್ರೇಮಸಾಯಿ ಪ್ರಕಾಶನ, ಬೆಂಗಳೂರು 1998

ಗಾದೆಕೋಶಗಳು

1. **ಕನ್ನಡ ಗಾದೆಗಳು** (ಕಲ್ಪಚ್ಚಿನ ಪ್ರತಿ) 1852
2. **ಗ್ರಂಥಸ್ಥ ಗಾದೆಗಳು** - ಅಚ್ಚಪ್ಪ ಪ್ರ: ಲೇಖಕರು 1969
3. **ಕರ್ನಾಟಕ ಲೋಕೋಕ್ತಿವಿಧಾನ** ಬಾಸೆಲ್ ಮಿಷನ್ ಬುಕ್ ಅಂಡ್ ಟ್ರಾಕ್ಟ್ ಡಿಪಾಜಿಟರಿ ಮಂಗಳೂರು 1919
4. **ಜನಪ್ರಿಯ ಗಾದೆಗಳ ನಿಘಂಟು** - ಕಾವ್ಯಪ್ರೇಮಿ ಪ್ರ: ಸಮಾಜಪುಸ್ತಕಾಲಯ, ಧಾರವಾಡ
5. **ಗಾದೆಗಳ ಭಂಡಾರ (ಭಾಗ 1)** ಜಂಗಮಕೋಟೆ ಕೃಷ್ಣಶಾಸ್ತ್ರಿ ಪ್ರ: ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು
6. **ಸಾಮತಿ ಸಂಗ್ರಹ** ಲೇ: ಐಮನ್ ಮತ್ತು ನರಸಿಂಗರಾವ್ 1894 ಬೆಳಗಾವಿ
7. **ಕನ್ನಡ ಗಾದೆಗಳ ಮಹಾಕೋಶ** (2 ಭಾಗಗಳು) ಲೇ: ಹು.ಮ. ರಾಮಾರಾಧ್ಯ ಪ್ರ: ಕಸಾಪ 1982
8. **ಕಿಟೆಲ್ ಕೋಶದ ಗಾದೆಗಳು** : ರಾಮೇಗೌಡ ಪ್ರ: ಉಷಾ ಸಾಹಿತ್ಯಮಾಲೆ, ಮೈಸೂರು 1969
9. **ಗಾದೆಗಳ ಗೀತೆಗಳು** : ಹು.ಮ. ರಾಮಾರಾಧ್ಯ ಪ್ರ: ದರ್ಶನ ಅಂಡ್ ಕಂಪೆನಿ 1960
10. **ನೆನಪಿಗೆ ಬಂದ ಗಾದೆಗಳು** - ಪರಮೇಶ್ವರಭಟ್ಟ, ಎಸ್.ವಿ. ಪ್ರ: ಉಷಾ ಸಾಹಿತ್ಯ ಮಾಲೆ 1972
11. **ಕನ್ನಡ ಗಾದೆಗಳ ಕೋಶ** ವಿ. ವೆಂಕಟರಮಣಯ್ಯ 1963, ಸಮಾಜ ಪುಸ್ತಕಾಲಯ, ಧಾರವಾಡ
12. **ಸಹಸ್ರ ಗಾಥಾಮೃತ ಕಲಶವು** ಪ್ರ: ಬಾಸೆಲ್‌ವಿಷನ್ ಬುಕ್ ಅಂಡ್ ಟ್ರ್ಯಾಕ್ಟ್ ಡಿಪಾಜಿಟರಿ 1874
13. **ನಮ್ಮ ಸುತ್ತಿನ ಗಾದೆಗಳು** - ಸುಧಾಕರ, ಪ್ರ: ಮೈಸೂರು ಕನ್ನಡ ಅಧ್ಯಯನ ಸಂಸ್ಥೆ 1973
14. **ಉತ್ತರ ಕರ್ನಾಟಕ ಗಾದೆಗಳು**, ಬಿ.ಬಿ. ಹೆಂಡಿ ಮತ್ತು ಲಠ್ಠೆ, ಸಮಾಜ ಪುಸ್ತಕಾಲಯ 1974
15. **ಲಂಬಾಣಿ ಗಾದೆಗಳು** - ಸಣ್ಣರಾಮ, ಪ್ರ: ಕಸಾಪ 1982

16. ನೂತನ ಸಹಸ್ರಗಾಥಾ ಕುಸುಮಮಂಜರಿ - ಸಂಗಪ್ಪ ಸಿ. ಮೈಸೂರು ಕ್ರೌನ್ ಪ್ರೆಸ್ 1911

17. ಗ್ರಾಮೀಣ ಗಾದೆಗಳು : ಬಿ. ಕೃಷ್ಣಪ್ಪರೆಡ್ಡಿ, ಕಸಾಪ 1981

ಸೂಕ್ತಿಕೋಶಗಳು

1. **ಹಳಗನ್ನಡ ನಾಣ್ಣುಡಿಕೋಶ** - ಹು.ಗು. ಬೆಂಗೇರಿ, ಸಮಾಜ ಪುಸ್ತಕಾಲಯ ಧಾರವಾಡ 1986

2. **ನುಡಿರತ್ನಕೋಶ** : ಟಿ.ವಿ. ವೆಂಕಟರಮಣಯ್ಯ, ಗೀತಾ ಬುಕ್ ಹೌಸ್, ಮೈಸೂರು 1967

3. **ನುಡಿಕಿಡಿ** - ಡಿ.ಎಸ್. ಶಿವಪ್ಪ, ಸುಧೀರ್ ಪ್ರಕಾಶನ, ಮೈಸೂರು

4. **ನೀತಿಮುಕ್ತಾಹಾರ** ರಾ.ಬಾ. ಕುಲಕರ್ಣಿ : ರಾಮ ಪ್ರೆಸ್, ಬೆಳಗಾವಿ 1918

5. **ಸಂಸ್ಕೃತ ಲೋಕೋಕ್ತಿಗಳು** : ಅಚ್ಚಪ್ಪ ಪ್ರ: ಲೇಖಕರು 1983

6. **ಚೆನ್ನುಡಿ** (ಕನ್ನಡ ಸುಭಾಷಿತಗಳ ಬೃಹತ್ ಸಂಪುಟ) ಟಿ.ವಿ. ವೆಂಕಟಾಚಲಶಾಸ್ತ್ರಿ, ಸುವಿದ್ಯಾ ಪ್ರಕಾಶನ, ಬೆಂಗಳೂರು 1891

7. **ಸುಭಾಷಿತ ರತ್ನಾವಳಿ** : ರಮಾನಂದ 1970 ಸಮಾಜ ಪುಸ್ತಕಾಲಯ, ಧಾರವಾಡ

8. **ವಾಕ್ಯ ಮಾಣಿಕ್ಯಕೋಶ** : ಜಿ.ಎಸ್. ಶಿವರುದ್ರಪ್ಪ ಮತ್ತು ಎಸ್. ವಿದ್ಯಾಶಂಕರ ಪ್ರ: ಬೆಂವಿವಿ ಪ್ರಸಾರಾಂಗ 1972

9. **ಜಾಗತಿಕ ಸತ್ಯಗಳು** : ವೀರಭದ್ರಪ್ಪ ಸಜ್ಜನಶೆಟ್ಟಿ ಸಮಾಜ ಪುಸ್ತಕಾಲಯ, ಧಾರವಾಡ 1966

10. **ಅಮೃತಬಿಂದುಗಳು** : ಆರ್.ಸಿ. ಹಿರೇಮಠ ಮತ್ತು ಡಾ. ಕೆ. ಕೃಷ್ಣಮೂರ್ತಿ, ಪ್ರ: ಕವಿವಿ 1973

II ವಿಶ್ವಕೋಶಗಳು

ಗ್ರಂಥಸೂಚಿ ಸಾಹಿತ್ಯವನ್ನು ಹಲವು ಬಗೆಯಲ್ಲಿ ವರ್ಗೀಕರಿಸಬಹುದು. ಗ್ರಂಥಗಳ ಮಾಹಿತಿಸೂಚಿ, ವಿಷಯಗಳ ಮಾಹಿತಿಸೂಚಿ, ಲೇಖಕರ ಸೂಚಿ, ಪತ್ರಿಕಾಸೂಚಿ ಇತ್ಯಾದಿ.

ಈ ಪೈಕಿ ವಿಷಯಗಳ ಮಾಹಿತಿ ಸೂಚಿಯಲ್ಲಿ ವಿಶ್ವಕೋಶಗಳ ಪಾತ್ರ ಪ್ರಧಾನವಾಗಿದೆ. ಒಬ್ಬ ಲೇಖಕನಿಗೆ ಅಥವಾ ಸಾಮಾನ್ಯನಿಗೆ, ಒಂದು ಪದಕ್ಕೆ ಅರ್ಥ

ಬೇಕಾದರೆ ಶಬ್ದಕೋಶ ಬೇಕಾಗುವಂತೆ, ಒಂದು ವಿಷಯದ ಸಂಕ್ಷಿಪ್ತ ಪರಿಚಯ (ಹಾಗೆಂದರೇನು) ಬೇಕಾದಾಗ ವಿಶ್ವಕೋಶದ ಮೊರೆ ಹೋಗಬೇಕಾಗುತ್ತದೆ. ಆ ವಿಷಯವಾಗಿ ವಿಸ್ತಾರವಾಗಿ ತಿಳಿಸುವ ಗ್ರಂಥಗಳು ಇದ್ದರೂ ಅದರ ಆವಶ್ಯಕತೆ ಆ ಸಂದರ್ಭದಲ್ಲಿ ಆ ಲೇಖಕನಿಗೆ ಅಥವಾ ಸಾಮಾನ್ಯನಿಗೆ ಬೇಕಿರುವುದಿಲ್ಲ. ಸಂಕ್ಷಿಪ್ತ ವಿವರ ಅಷ್ಟೇ ಬೇಕಾಗುತ್ತದೆ. ಇವುಗಳನ್ನು ದೊರಕಿಸುವ ಗ್ರಂಥಗಳೇ ವಿಶ್ವಕೋಶಗಳು.

ವಿಶ್ವಕೋಶವೆಂದರೆ ಉಮಾಪತಿ ಅವರು ಹೇಳುವಂತೆ "ಯಾವುದೇ ಒಂದು ವಿಷಯ ಕುರಿತಂತೆ ಸಮಗ್ರ ಚಿತ್ರ, ಚಾರಿತ್ರಿಕ ಹಿನ್ನೆಲೆ, ಒಂದು ಸ್ಥಳದ ವಿವರಣೆ, ಜೀವನದ ಯಾವುದೇ ಕ್ಷೇತ್ರದಲ್ಲಿ ಸಾಕಷ್ಟು ಖ್ಯಾತಿ ಪಡೆದವರ ವ್ಯಕ್ತಿ ಪರಿಚಯಗಳನ್ನು ಸುಲಭ ಶೈಲಿಯಲ್ಲಿ ಆಕರ್ಷಕವಾಗಿ ಸೂಚಿಸುವ ಗ್ರಂಥವೇ ವಿಶ್ವಕೋಶ" ಪಂಡಿತ ಪಾಮರರಿಬ್ಬರಿಗೂ ಜ್ಞಾನಧನ ಗ್ರಂಥ ವಿಶ್ವಕೋಶ.

ಸಂಕ್ಷಿಪ್ತ ಸಮಗ್ರ ವಿಶ್ವಕೋಶಗಳು

ಸಾಮಾನ್ಯವಾಗಿ ವಿಶ್ವಕೋಶಗಳನ್ನು ಸಮಗ್ರ ವಿಶ್ವಕೋಶಗಳು, ಸಂಕ್ಷಿಪ್ತ ವಿಶ್ವಕೋಶಗಳು, ವಿಷಯವಿಶ್ವಕೋಶಗಳು ಎಂದು ವರ್ಗೀಕರಿಸಬಹುದು.

ಸಂಕ್ಷಿಪ್ತ ವಿಶ್ವಕೋಶಗಳು ಎಂದಾಗ ಒಂದೇ ಸಂಪುಟದಲ್ಲಿ ವಿವಿಧ ವಿಷಯಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಒಳಗೊಂಡಿರುತ್ತವೆ. **ಸಮಗ್ರ ವಿಶ್ವಕೋಶಗಳಲ್ಲಿ** ಜ್ಞಾನಪ್ರಪಂಚದ ಎಲ್ಲ ಶಾಖೆಗಳಿಗೆ ಸಂಬಂಧಿಸಿದ ವಿವರಗಳಿರುತ್ತವೆ. ಕಲೆ, ವಿಜ್ಞಾನ, ಸಾಹಿತ್ಯ, ಭಾಷೆ, ಭೂಗೋಳ, ಇತಿಹಾಸ ಗ್ರಂಥಗಳು ಮೊದಲಾದ ವಿಭಾಗಗಳ ವಿಷಯಗಳನ್ನೆಲ್ಲ ಒಳಗೊಂಡಿರುತ್ತವೆ. ಹಲವು ಸಂಪುಟಗಳಲ್ಲೂ ಇರುತ್ತವೆ.

ಸಮಗ್ರ ವಿಶ್ವಕೋಶಗಳ ರಚನೆ ಒಬ್ಬ ವ್ಯಕ್ತಿಯಿಂದ ರಚಿತವಾಗಬಹುದು (ಹಲವು ಬಗೆ ಮಿತಿಗಳು ಇಂಥ ವಿಶ್ವಕೋಶಗಳಿಗಿರುತ್ತವೆ) ಉದಾಹರಣೆ : ಶಿವರಾಮಕಾರಂತರು ರಚಿಸಿದ ಬಾಲಪ್ರಪಂಚ ಇತ್ಯಾದಿ. ಅಥವಾ ಹಲವು ವ್ಯಕ್ತಿಗಳು ಸೇರಿದ ಸಮಿತಿಯಿಂದ ರಚಿತವಾಗಿರಬಹುದು. ಇಲ್ಲವೇ ಒಂದು ಸಂಸ್ಥೆ ಹಲವಾರು ಉಪಸಮಿತಿಗಳ ನೆರವಿನಿಂದ ವಿಶ್ವಕೋಶವನ್ನು ರಚಿಸಬಹುದು. ಉದಾಹರಣೆ : **ಕನ್ನಡ ವಿಶ್ವಕೋಶ** (ಮೈ.ವಿ.ವಿ.)

ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲ ವಿವರಗಳನ್ನು ಕೋಶರೂಪದಲ್ಲಿ ಕೊಟ್ಟಿರುವ ಗ್ರಂಥಗಳನ್ನು 'ವಿಷಯ ವಿಶ್ವಕೋಶಗಳು' ಎಂದು ಕರೆಯಬಹುದು. ಉದಾ : **ಕರ್ನಾಟಕ ವಿಷಯ ವಿಶ್ವಕೋಶ** ಮೈ.ವಿ.ವಿ. (ಮೈ.ವಿ.ವಿ.)

ಏಕವ್ಯಕ್ತಿರಚಿತ ವಿಶ್ವಕೋಶಗಳು (ಪ್ರಾಚೀನ)

ಒಬ್ಬನೇ ವ್ಯಕ್ತಿ ವಿವಿಧ ಜ್ಞಾನಕ್ಷೇತ್ರಗಳ ಪರಿಚಯ ಹೊಂದಿದ ಸಂದರ್ಭದಲ್ಲಿ ಇಂಥ ಕೋಶಗಳು ರಚನೆ ಆಗಲು ಶಕ್ಯ. ಇದು ಅಪೂರ್ವ ಸಾಧನೆ. ಕನ್ನಡದಲ್ಲಿ ನಿಜಗುಣ ಶಿವಯೋಗಿಗಳು ರಚಿಸಿದ **ವಿವೇಕ ಚಿಂತಾಮಣಿ** (1500) ಮತ್ತು 1129ರಲ್ಲಿ ರಚಿತವಾದ ಚಾಲುಕ್ಯ ಅರಸ ಸೋಮೇಶ್ವರನ **ಮಾನಸೋಲ್ಲಾಸ,** ಕೆಳದಿಯರಸು ಬಸವರಾಜೇಂದ್ರ ವಿರಚಿತ **ಶಿವತತ್ತ್ವ ರತ್ನಾಕರ** ಗ್ರಂಥ (1709) ಕನ್ನಡದಲ್ಲಿ ಮೊದಲ ಪ್ರಯತ್ನಗಳು ಎನ್ನಬಹುದು.

ಈ ಗ್ರಂಥಗಳು ತಾಳೆಗರಿ ಗ್ರಂಥಗಳು ಎಂಬುದನ್ನು ನೆನಪಿಡಬೇಕು. ಹಿಂದಿನ ಕಾಲದಲ್ಲಿ ವಿಶ್ವಕೋಶ ಎಂದರೆ ಒಬ್ಬ ವ್ಯಕ್ತಿ ವಿವಿಧ ವಿಷಯಗಳನ್ನು ಕುರಿತು ಬರೆದ ಗ್ರಂಥ ಎಂದು ಸೀಮಿತಾರ್ಥದಲ್ಲಿ ಅರ್ಥೈಸಬೇಕಾಗಿದೆ. ಇಂದಿನ ಕಾಲದ ಹಾಗೆ ಗ್ರಂಥಸೂಚಿ ರಚನೆ ಕಲ್ಪನೆ ಇರಲಿಲ್ಲ. ಒಂದು ವಿಷಯಕ್ಕೆ ಸಂಬಂಧಿಸಿದಂತೆ ಹತ್ತಾರು ಲೇಖಕರ ಅಥವಾ ಹತ್ತಾರು ಗ್ರಂಥಗಳನ್ನು ಕುರಿತ ವಿಷಯ ನಿರೂಪಣಾ ಗ್ರಂಥಗಳನ್ನೇ ಸಂಕ್ಷಿಪ್ತ ವಿಶ್ವಕೋಶಗಳೆನ್ನಬಹುದು. ಇಂದಿನ ವಿಶ್ವಕೋಶದ ಅರ್ಥದಲ್ಲಲ್ಲ ಎಂಬುದನ್ನು ನೆನಪಿಡಬೇಕು.

ಕಾವ್ಯಸಾರ, ಸೂಕ್ತಿಸುಧಾರ್ಣವ ಸಂಕಲನಗಳು ಅಷ್ಟಾದಶ ವರ್ಣನೆಗಳನ್ನು ಕುರಿತು ವಿವಿಧ ಕವಿಗಳು ಮಾಡಿರುವ ಗ್ರಂಥಗಳನ್ನು ಏಕವಿಷಯ ವಿಶ್ವಕೋಶ ಎನ್ನಬಹುದು.

ಏಕವ್ಯಕ್ತಿ ರಚಿತ ವಿಶ್ವಕೋಶಗಳು (ಆಧುನಿಕ)

ಆಧುನಿಕ ಕಾಲದಲ್ಲಿ ಎಂದರೆ 19-20ನೇ ಶತಮಾನದಲ್ಲಿದ್ದ ಮತ್ತು ಅಲ್ಲಿಂದೀಚೆಗೆ ಅನೇಕ ಏಕವ್ಯಕ್ತಿರಚಿತ ವಿಶ್ವಕೋಶಗಳು ಪ್ರಕಟವಾಗಿವೆ. ಅವುಗಳಲ್ಲಿ ಮೊದಲ ಪ್ರಯತ್ನವೆಂದರೆ ಶಿವರಾಮಕಾರಂತರ ಬಾಲಪ್ರಪಂಚ ಮತ್ತು ವಿಜ್ಞಾನಪ್ರಪಂಚ ವಿಶ್ವಕೋಶಗಳು. ಇವು ವಿದ್ಯಾರ್ಥಿಗಳನ್ನೂ ಜನಸಾಮಾನ್ಯರನ್ನೂ ದೃಷ್ಟಿಯಲ್ಲಿಟ್ಟು ಕೊಂಡು ರಚಿಸಿರುವ ವಿಶ್ವಕೋಶಗಳಾದರೂ ಇಂದಿಗೂ ಆಕರಗ್ರಂಥಗಳಾಗಿವೆ. ಅದ್ಭುತಸಾಹಸ ತೋರಿಸಿಕೊಂಡಿವೆ. ನವಕರ್ನಾಟಕ ಪ್ರಕಾಶನದ ನಿರಂಜನರಿಂದ ಸಂಪಾದಿತ **ವಿಶ್ವಕಥಾಕೋಶ** ಏಕಸಾಹಿತ್ಯ ಪ್ರಕಾರದ ಕಥಾ ವಿಶ್ವಕೋಶವಾಗಿದೆ.

ವಿಶ್ವಕೋಶ ಮಾದರಿಯ ಕೆಲವು ಗ್ರಂಥಗಳನ್ನು ಕೆಲವರು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ :

1. ಮೈಸೂರು ಪವಿತ್ರ ಪ್ರಕಾಶನದ **ಹರ್ಷಕೋಶ** (ಮಕ್ಕಳ ಜ್ಞಾನಸಂಪುಟ) (1985)
2. ಬೆಂಗಳೂರು ಆಶಾಸಾಹಿತ್ಯ ಪ್ರಕಾಶನದ **ಕಿರಿಯರ ಜ್ಞಾನಕೋಶ** (1991)
3. ಜಿ. ಜ್ಞಾನಾನಂದರ **'ವಿಶ್ವಕೋಶ'** ಸಮಾಜ ಪುಸ್ತಕಾಲಯದ ಪ್ರಕಟನೆ (1960)
4. **ಗೃಹದೀಪಿಕೆ** (ನಿತ್ಯೋಪಯೋಗಿ ವಿಷಯಗಳು) ಲೇಖಕರು: ಸಜ್ಜನಶೆಟ್ಟಿ ಪ್ರ: ಸಮಾಜಪುಸ್ತಕಾಲಯ
5. **ವಿಶ್ವವಿಜ್ಞಾನ** ಲೇ: ಕೆವಿ ರಾಮರಾವ್, ಭಾರತ್ ಬುಕ್ ಡಿಪೋ ಹುಬ್ಬಳಿ 1967
6. **ವಿವಿಧ ವಿಷಯಕೋಶ** ಲೇ: ಟಿ. ಚಂದ್ರರಾಜಶೆಟ್ಟಿ ಅಂತರಂಗ ಕಾರ್ಯಾಲಯ 1949
7. **ಗೃಹಸಂಗಾತಿ** (ಗೃಹಜೀವನ ವಿಶ್ವಕೋಶ) ಲೇ: ಜೆ.ಬಿ. ಲೋಬೋ ಪ್ರ: ಲೋಬೋ ಪಬ್ಲಿಷರ್ಸ್ 1988

ಸಮಿತಿ ರಚಿತ ವಿಶ್ವಕೋಶಗಳು

ಸಮಗ್ರ ವಿಶ್ವಕೋಶ ಅಥವಾ ಸಮರ್ಪಕ ವಿಶ್ವಕೋಶ ರಚನೆಗೆ ಬೇಕಾದ ಸರ್ವಶಾಸ್ತ್ರ ವಿಶಾರದತೆ ಅಥವಾ ಸರ್ವಜ್ಞತ್ವ ಒಬ್ಬ ವ್ಯಕ್ತಿಯಲ್ಲಿರಲು ಅಸಾಧ್ಯ. ಏಕೆಂದರೆ ಲೋಕಜ್ಞಾನದ ಬೆಳವಣಿಗೆ ಅಪಾರ ಮತ್ತು ಯಾವುದೇ ಭಾಷೆಯಲ್ಲಾದರೂ ಒಂದು ಜನಾಂಗ ನಿರ್ಮಿಸಲು ಜ್ಞಾನನಿಧಿಯ ಪರಿಚಯ ಒಬ್ಬ ವ್ಯಕ್ತಿಗಿರಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಹತ್ತಾರು ವ್ಯಕ್ತಿಗಳು ಒಂದಾಗಿ ವಿಷಯವರ್ಗೀಕರಣ ಮಾಡಿಕೊಂಡು ಒಂದೊಂದು ವಿಷಯದ ಜವಾಬ್ದಾರಿಯನ್ನು ಒಬ್ಬೊಬ್ಬರು ಹೊತ್ತು ವಿವಿಧ ಲೇಖಕರಿಂದ ಲೇಖನಗಳನ್ನು ಬರೆಯಿಸಿ ಅವುಗಳನ್ನು ಕ್ರೋಡೀಕರಿಸಿ ಒಂದೇ ಸಂಪುಟ ಅಥವಾ ಹಲವು ಸಂಪುಟಗಳನ್ನಾಗಿ ಪ್ರಕಟಿಸುವ ಪರಿಪಾಟವನ್ನು ಕಾಣುತ್ತೇವೆ.

ಒಂದೇ ಸಂಪುಟದ ವಿಶ್ವಕೋಶಕ್ಕೆ ಎಲ್.ಎಸ್. ಶೇಷಗಿರಿರಾಯರ ಸಂಪಾದಕತ್ವದ, **ಕಿರಿಯರ ಕರ್ನಾಟಕ** ಒಂದು ನಿದರ್ಶನವಾಗಿದೆ.

ಸಾಮಾನ್ಯವಾಗಿ ಬಹುತೇಕ ವಿಶ್ವಕೋಶಗಳು ಸಮಿತಿಯಿಂದ ಸಂಸ್ಥೆಗಳಿಂದ ರೂಪುಗೊಂಡಿವೆ.

ಉದಾ : ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಕನ್ನಡ ವಿಶ್ವಕೋಶ (14 ಸಂಪುಟ)

ಕನ್ನಡ ವಿಶ್ವಕೋಶವನ್ನು ಹಲವು ವಿಷಯ ವಿಭಾಗದ ವಿಶ್ವಕೋಶಗಳನ್ನಾಗಿ ಪ್ರಕಟಿಸುತ್ತವೆ. ಈಗಾಗಲೇ ಕೆಲವು ಸಂಪುಟಗಳು ಪ್ರಕಟವಾಗಿವೆ.

1. ಕರ್ನಾಟಕ ವಿಷಯ ವಿಶ್ವಕೋಶ (2 ಭಾಗಗಳು)
2. ಜಾನಪದ ವಿಷಯ ವಿಶ್ವಕೋಶ : ಸಂ: ಚಂದ್ರಶೇಖರ ಕಂಬಾರ ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
3. ಭೂಗೋಳ ವಿಜ್ಞಾನ ವಿಷಯ ವಿಶ್ವಕೋಶ
4. ಇತಿಹಾಸ ಮತ್ತು ಪುರಾತತ್ವ ವಿಷಯ ವಿಶ್ವಕೋಶ ಇತ್ಯಾದಿ.

ಸಮಿತಿರಚಿತ ಏಕಸಂಪುಟ ವಿಷಯ ವಿಶ್ವಕೋಶಗಳು ಕನ್ನಡದಲ್ಲಿ ಹತ್ತಾರು ಪ್ರಕಟವಾಗಿವೆ. ಕೆಲವನ್ನು ಉದಾಹರಿಸಬಹುದು.

5. ಚಿತ್ರಕಲಾ ಪ್ರಪಂಚ (ಸಂ: ಎನ್. ಮರಿಶಾಮಾಚಾರ್) ಕರ್ನಾಟಕ ಲಲಿತಕಲಾ ಅಕಾಡೆಮಿ 1993
6. ಕಲಾಕೋಶ (ಸಂ : ಪಿ. ಆರ್. ತಿಪ್ಪೇಸ್ವಾಮಿ, ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ 1994
7. ಶಿಲ್ಪಕಲಾ ಪ್ರಪಂಚ (ಸಂ: ಅ.ಲ. ನರಸಿಂಹನ್ ಮತ್ತು ಮರಿಶಾಮಾಚಾರ್ 1994) ಪ್ರ: ಲಲಿತ ಕಲಾ ಅಕಾಡೆಮಿ, ಬೆಂಗಳೂರು.
8. ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ನಿರಂಜನರ ಸಂಪಾದಕತ್ವದಲ್ಲಿ ಪ್ರಕಟವಾದ 7ಸಂಪುಟಗಳ ಕಿರಿಯರ ಜ್ಞಾನಗಂಗೋತ್ರಿ ವಿಶಿಷ್ಟ ವಿಶ್ವಕೋಶವಾಗಿದೆ.
9. ಮೊದಲ ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟವಾದ ಅವಲೋಕನ ಗ್ರಂಥವನ್ನು ವಿಶ್ವಕೋಶಗಳ ಸಾಲಿಗೆ ಸೇರಿಸಬಹುದು. ಕೈಪಿಡಿಗಳು, ಗೆಜೆಟಿಯರ್‌ಗಳೂ ವಿಶ್ವಕೋಶದ ವರ್ಗಕ್ಕೇ ಸೇರುತ್ತವೆ.

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯವು ವಿಷಯಾನುಸಾರ ವಿಶ್ವಕೋಶಗಳನ್ನು ಪ್ರಕಟಿಸಿದೆ. ಅವುಗಳ ವಿವರ ಹೀಗಿದೆ.

10. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ - 1 ಭಾಷೆ 1995 2008 ಪು. 400 ಸಂ: ಕೆ.ವಿ. ನಾರಾಯಣ ಮತ್ತು ಇತರರು 2000
11. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ -2 ಕರಕುಶಲ ಕಲೆಗಳು 2000
12. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-3 ಧರ್ಮ 2000
13. ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ-4 ಚರಿತ್ರೆ 2001
14. ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ-5 ಜೀವಜಗತ್ತು 2002
15. ಕರ್ನಾಟಕ ಜನಪದ ಕಲೆಗಳ ಕೋಶ 1996
16. ಭಾರತ ಸಮಾಜಕಾರ್ಯ ವಿಶ್ವಕೋಶ-3 ಭಾಗಗಳು 1968
17. ವೈದ್ಯ ವಿಶ್ವಕೋಶ - ಎ.ಎಸ್. ಶಂಕರ್ 1995
18. ಶ್ರೀ ತತ್ತ್ವನಿಧಿ - ಮುಮ್ಮಡಿ ಕೃಷ್ಣರಾಜ ಒಡೆಯರ್ - 1992
19. ಕರ್ನಾಟಕ ರಾಜ್ಯ ಕೋಶ-1 ಸಸ್ಯಸಂಪುಟ 2001
20. ಕರ್ನಾಟಕ ರಾಜ್ಯಕೋಶ-4 ಜನಸಮುದಾಯ ಸಂಪುಟ - 2000
21. ಭೂಗ್ರಹ ವಿಶ್ವಕೋಶ - ಮೂಲ ಲೌಸಿ ಸ್ಟಿಲ್‌ಬರಿ (ಕನ್ನಡಕ್ಕೆ)
22. ಮಾನವದೇಹ ವಿಶ್ವಕೋಶ - ಸ್ಟೀವ್ ಪಾರ್ಕರ್ (ಕನ್ನಡಕ್ಕೆ)
23. ಆಶ್ಚರ್ಯ ಸಂಗತಿಗಳ ವಿಶ್ವಕೋಶ - ಪ್ರ: ಪ್ಯಾರಗಾನ್, ನೊಯ್ಡಾ
24. ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವಕೋಶ - ಪ್ರ. ಪ್ಯಾರಗಾನ್, ನೊಯ್ಡಾ
25. ಜ್ಞಾನ-ವಿಜ್ಞಾನ ವಿಶ್ವ - ಬಿ.ವಿ. ಸುಭದ್ರ, ಸ್ವಪ್ನ ಬುಕ್ ಹೌಸ್
26. ಪಕ್ಷಿ ಪ್ರಪಂಚ - ಹರೀಶ್‌ಭಟ್, ಪ್ರಮೋದ್ ಸುಬ್ಬರಾವ್, ಪ್ರ: ಆಸೀಮ ಪ್ರತಿಷ್ಠಾನ, ಬೆಂಗಳೂರು

ಕನ್ನಡ ವಿಜ್ಞಾನ ವಿಶ್ವಕೋಶಗಳು (ಭಾಗಶಃ ಮತ್ತು ಪೂರ್ಣ)

1	1936	ಬಾಲ ಪ್ರಪಂಚ (ಮೂರು ಸಂಪುಟಗಳು)	ಶಿವರಾಮ ಕಾರಂತ	ಸತ್ಯಶೋಧನ ಪ್ರಕಟಣ ಮಂದಿರ, ಬೆಂಗಳೂರು
2	1969-2004	ಕನ್ನಡ ವಿಶ್ವಕೋಶ (14 ಸಂಪುಟಗಳು)	ಸಂ: (ವಿಜ್ಞಾನ ವಿಭಾಗ) ಜಿ.ಟಿ. ನಾರಾಯಣರಾವ್	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
3	1969 (1) 1986 (2)	ವಿವೇಕ ಚೂಡಾಮಣಿ (ಕನ್ನಡ) (ನಿಜಗುಣ ಶಿವಯೋಗಿ) (ಆರನೇ ಪರಿಚ್ಛೇದ, ಪುಟ 208-240)	ಸಂ: ಜಿ.ಎಂ. ಉಮಾಪತಿ ಶಾಸ್ತ್ರಿ ಮೂರು ಸಾವಿರ ಮಠ, ಹುಬ್ಬಳ್ಳಿ	ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲ,
4	2010 (25)	ಚಮತ್ಕಾರ ಫಲಚಂದ್ರಿಕೆ (8ನೇ ಪ್ರಕರಣ)	ತೋಟಪ್ಪಯ್ಯ ಶಾಸ್ತ್ರೀ ಬುಕ್ ಡಿಪೋ, ಗದಗ	ಸದಾಶಿವ ಶಾಸ್ತ್ರಿ, ವಿಜಯಾ ಗದಗ
5	1994	ಕಿರಿಯರ ಕರ್ನಾಟಕ	ಪ್ರ.ಸಂ. ಎಲ್.ಎಸ್. ಶೇಷಗಿರಿರಾವ್	ಕನ್ನಡ ವಿಶ್ವವಿದ್ಯಾಲಯ, ಹಂಪಿ
6	1998	ಮಾನಸೋಲ್ಲಾಸ (ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸೋಮೇಶ್ವರ) (ಸಂಸ್ಕೃತ-ಕನ್ನಡ)	ಸಂ: ಎಂ.ಎಂ. ಕಲಬುರ್ಗಿ ಧಾರವಾಡ	ಕರ್ನಾಟಕ ವಿಶ್ವವಿದ್ಯಾಲಯ,
7	1999	ಶಿವತತ್ತ್ವ ರತ್ನಾಕರ (ಸಂಸ್ಕೃತ-ಕನ್ನಡ) (ಕೆಳದಿ ನೃಪಾಲ ಬಸವರಾಜ)	ಸಂ: ಮಲ್ಲೇಪುರಂ ವೆಂಕಟೇಶ	ಕನ್ನಡ ವಿಶ್ವವಿದ್ಯಾಲಯ, ಹಂಪಿ

8	2015	ವಿಜ್ಞಾನ-ತಂತ್ರಜ್ಞಾನ	ಶಂ: ಟಿ.ಆರ್. ಅನಂತರಾಮು	ಕನ್ನಡ ಸಾಹಿತ್ಯ ಪರಿಷತ್ತು
9	1959	ವಿಜ್ಞಾನ ಪ್ರಪಂಚ 4 ಸಂಪುಟಗಳು 1. ಈ ಜಗತ್ತು 2. ಜೀವಜೀವನ 3. ವಸ್ತುಚೈತನ್ಯ 4. ವಿಜ್ಞಾನ ಸಾಧನ	ಶಿವರಾಮಕಾರಂತ	ಹರ್ಷ ಪ್ರಕಟನಾಲಯ ಪುತ್ತೂರು
10	1970	ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ	ಸಂ: ಎಲ್.ಎಸ್. ಶೇಷಗಿರಿರಾವ್	ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು
11	1989	ಪ್ರಾಣಿ ಪ್ರಪಂಚ	ಶಿವರಾಮಕಾರಂತ	ಅಕ್ಷರ ಪ್ರಕಾಶನ, ಹೆಗ್ಗೋಡು
12	2001	ಸಸ್ಯ ಸಂಪುಟ (ಕರ್ನಾಟಕ ರಾಜ್ಯಕೋಶ-1)	ಲೇ: ಸಿ.ಡಿ. ಪಾಟೀಲ ಮತ್ತು ಇತರರು	ಪ್ರಸಾರಾಂಗ ಕನ್ನಡ ವಿವಿ
13	2006	ಪ್ರಾಣಿ-ಪಕ್ಷಿ ಸಂಪುಟ ಕರ್ನಾಟಕ ರಾಜ್ಯಕೋಶ-2	ಲೇ: ಹಾ.ಬ. ದೇವರಾಜು ಮತ್ತು ಇತರರು	ಕನ್ನಡ ವಿಶ್ವವಿದ್ಯಾಲಯ ಹಂಪಿ
14	2006	ಪಕ್ಷಿ ಪ್ರಪಂಚ	ಲೇ: ಹರೀಶ್ ಆರ್. ಭಟ್ ಮತ್ತು ಇತರರು	ಅಸೀಮ ಪ್ರತಿಷ್ಠಾನ ಬೆಂಗಳೂರು
15	2006	ಪ್ರಾಣಿ ವಿಜ್ಞಾನ ಏಕವಿಷಯ ವಿಶ್ವಕೋಶ	ಸಂ: ಎಸ್.ಎಸ್. ಹೆಗಡೆ	ಮೈಸೂರು ವಿವಿ

16	1994	ಸಚಿತ್ರ ವಿಶ್ವಕೋಶ	ಕೆ. ಪುಟ್ಟಸ್ವಾಮಿ	?
17	1970-74	ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ 7 ಸಂಪುಟಗಳು	ನಿರಂಜನ (ಪ್ರಧಾನ ಸಂಪಾದಕರು) ಬೆಂಗಳೂರು	ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ,
18	1995	ವೈದ್ಯ ವಿಶ್ವಕೋಶ	ಪ್ರಧಾನ ಸಂಪಾದಕರು ಡಾ. ಪಿ.ಎಸ್. ಶಂಕರ್	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
19	1998	ಜ್ಞಾನ ವಿಜ್ಞಾನಕೋಶ	ಪ್ರಧಾನ ಸಂಪಾದಕರು ಎಂ.ಎ. ಸೇತುರಾವ್ ಕೆ.ಎಲ್. ಗೋಲಾಕೃಷ್ಣರಾವ್	ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು
20	2002	ಜೀವ-ಜಗತ್ತು	ಸಂಪಾದಕರು: ಎಚ್.ಎಸ್. ಶ್ರೀಮತಿ ಶಿವಾನಂದ ಎಸ್. ವಿರಕ್ತಮಠ	ಕನ್ನಡ ವಿಶ್ವವಿದ್ಯಾಲಯ ಹಂಪಿ

III ಕೈಪಿಡಿಗಳು

ವಿಶ್ವಕೋಶಗಳಲ್ಲದಿದ್ದರೂ ಅದೇ ಮಾದರಿಯಲ್ಲಿ ವಿವಿಧ ವಿಷಯಗಳನ್ನು ಕುರಿತು ಸಂಕ್ಷಿಪ್ತ ಮಾಹಿತಿಕೋಶಗಳ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ. ಈ ಮಾದರಿ ಗ್ರಂಥಗಳಲ್ಲಿ ವಿಶಿಷ್ಟವಾದುದು ಬೆಳಗಾಂ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ಪ್ರಕಟವಾದ ಕರ್ನಾಟಕ ಕೈಪಿಡಿ (ಇಂಗ್ಲಿಷ್ ಮತ್ತು ಕನ್ನಡಗಳಲ್ಲಿ) ಗಮನಾರ್ಹ ಗ್ರಂಥವಾಗಿದೆ. ಇದಕ್ಕೂ ಮುಂಚೆ ಗೆಜೆಟಿಯರ್‌ಗಳು ಪ್ರಕಟವಾಗಿವೆ.

1. **ಕರ್ನಾಟಕದ ಕೈಪಿಡಿ** ಸಂ. ದ.ಕೃ. ಭಾರದ್ವಾಜ್, ಪ್ರ: ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಬೆಂಗಳೂರು 1920
2. **ಕರ್ನಾಟಕ ಪರಂಪರೆ ಭಾಗ 1 ಮತ್ತು 2**, ಸಂ: ಕೆ. ಸಂಪದ್ಗಿರಿರಾವ್ ಮತ್ತು ಇತರರು ಪ್ರ: ಮೈಸೂರು ರಾಜ್ಯ ಸರ್ಕಾರ.
3. **ಮೈಸೂರು ರಾಜ್ಯ**
4. **ಕರ್ನಾಟಕ ರಾಜ್ಯ ಗ್ಯಾಜೆಟಿಯರ್** (3 ಭಾಗಗಳು) ಮುಖ್ಯ ಸಂಪಾದಕ ಸೂರ್ಯನಾಥ ಯು ಕಾಮತ್ 1985 ಪ್ರ: ಕರ್ನಾಟಕ ರಾಜ್ಯ ಸರ್ಕಾರ
5. **ಕರ್ನಾಟಕ ಗೆಜೆಟಿಯರ್** (ಮುಂಬಯಿ ಕರ್ನಾಟಕದ 4 ಜಿಲ್ಲೆಗಳಿಗೆ ಸಂಬಂಧಿಸಿದ್ದು) ಸಂ: ವೆಂಕಟೇಶ ರಂಗೋಕಟ್ಟಿ
6. **ಭಾರತದ ಗೆಜೆಟಿಯರ್** (4 ಸಂಪುಟಗಳು) ಕನ್ನಡಾನುವಾದ
7. **ಕರ್ನಾಟಕ ಗೆಜೆಟಿಯರ್** (3 ಸಂಪುಟಗಳು) ಕನ್ನಡಾನುವಾದ ಪ್ರ: ಕರ್ನಾಟಕ ಸರ್ಕಾರ
8. ಕರ್ನಾಟಕ ರಾಜ್ಯ ರಚನೆ ಆದಮೇಲೆ ಪ್ರಕಟವಾದ ಜಿಲ್ಲಾವಾರು ಗೆಜೆಟಿಯರ್‌ಗಳು
9. **ಕರ್ನಾಟಕ ಸ್ವದೇಶೀ ಕೈಪಿಡಿ** - ಸಂ. ರಾ. ಶ್ರೀ ಹುಕ್ಕೇರಿ 1931
10. **ಕನ್ನಡ ಸಂಘ ಸಂಸ್ಥೆಗಳು** - ವೆಂಕಟೇಶ ಸಾಂಗ್ಲಿ
11. **ಬ್ಯಾಂಕ್ ವ್ಯವಸಾಯ ಕೈಪಿಡಿ**, ಲೇ: ಬಿಂ.ರಾ. ಕೆಂಭಾವಿ ಪ್ರ: ಮಿಂಚಿನಬಳ್ಳಿ, ಧಾರವಾಡ 1951
12. **ಕರ್ನಾಟಕ ಸರ್ಕಾರದ ಸೇವಾ ನಿಯಮಗಳ ಕೈಪಿಡಿ** ಲೇ: ಪಿ. ಗೋವಿಂದರಾವ್, ಪ್ರ: ಸುಯೋಗ, ಪ್ರಕಾಶನ ವಿಜಾಪುರ, 1983
13. **ಕರ್ನಾಟಕ ಮಹಾ ನಗರ ಪಾಲಿಕೆಗಳ ನಾಗರಿಕರ ಕೈಪಿಡಿ** ಲೇ: ಆರ್.ವಿ. ಜಠಾರ, ಪ್ರ: ರಾಮಾಶ್ರಯ ಬುಕ್ ಡಿಪೋ, ಧಾರವಾಡ 1984

14. **ಮುಂದೇನು? ಉದ್ಯೋಗ ಮಾಹಿತಿ ಕೈಪಿಡಿ** - ಬಿ.ಸಿ. ಜವಳಿ ಪ್ರ: ಕನ್ನಡ ಅಧ್ಯಯನಪೀಠ, ಧಾರವಾಡ, 1979

15. **ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು** - ಸಂ: ಕೆ. ಕುಶಾಲಪ್ಪಗೌಡ ಮತ್ತು ಕೆ. ಚೆನ್ನಪ್ಪಗೌಡ, ಪ್ರ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಧರ್ಮಸ್ಥಳ

16. **ಬೆಂಗಳೂರು ಜೀವನ** ಪ್ರ: ಲೂಥ್‌ವಾಣಿ ಮೀಡಿಯಾ ಪ್ರೈವೇಟ್ ಲಿ. ಬೆಂಗಳೂರು

17. **ಕರ್ನಾಟಕ ಚರಿತ್ರೆ** (7 ಸಂಪುಟಗಳು) ಸಂ: ಹಲವರು ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಸಾರಾಂಗ

18. **ಕನ್ನಡ ಶೈಲಿ ಕೈಪಿಡಿ** - ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

19. **ಕರ್ನಾಟಕ ದೇವಾಲಯ ಕೋಶ : (ಕೊಪ್ಪಳ ಜಿಲ್ಲೆ)** 2001 ಲೇ: ಕೆ. ಎಂ.ಸುರೇಶ್ ಮತ್ತು ಇತರರು ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

20. **ಕರ್ನಾಟಕ ದೇವಾಲಯ ಕೋಶ (ಬಳ್ಳಾರಿ ಜಿಲ್ಲೆ)** 1999 ಲೇ: ಕೆ.ಎಂ. ಸುರೇಶ್ ಮತ್ತು ಇತರರು ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

21. **ಕರ್ನಾಟಕ ದೇವಾಲಯ ಕೋಶ (ಹಾವೇರಿ ಜಿಲ್ಲೆ)** ಸಿ. ಮಹಾದೇವ ಮತ್ತು ಇತರರು, 1999 ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

22. **ವ್ಯವಸಾಯ ಕೈಪಿಡಿ ಮತ್ತು ದಿನಚರಿ** : ಎಸ್. ಪರಶಿವಮೂರ್ತಿ ಪ್ರ: ಮೈಸೂರು ಪ್ರಾದೇಶಿಕ ಕೃಷಿಕ ಸಮಾಜ, ಬೆಂಗಳೂರು 1970

23. **ಸಿಬ್ಬಂದಿ ಆಡಳಿತ ಕನ್ನಡ ಕೈಪಿಡಿ** ಲೇ: ನವರತ್ನರಾಮ್ ಪ್ರ: ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು 1988

24. **ಆಡಳಿತ ಭಾಷಾಕೈಪಿಡಿ** ಲೇ: ಅಬ್ದುಲ್ ರೆಹಮಾನ್ ಪಾಷ ಪ್ರ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು 1985

25. **ಹಳ್ಳಿಗರ ಕೈಪಿಡಿ** : ಆರ್.ಆರ್. ದಿವಾಕರ ಪ್ರ: ಕರ್ನಾಟಕ ಲೋಕಮಾನ್ಯ ಪರ್ಸ್‌ಫಂಡ್, ಹುಬ್ಬಳ್ಳಿ, 1938

26. **ಮೈಸೂರು ವಿಶ್ವವಿದ್ಯಾನಿಲಯ ಕಚೇರಿ ಕೈಪಿಡಿ** ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು 1984

27. **ವಿದ್ಯುತ್ ಕೆಲಸಗಾರರಿಗೆ ವಿದ್ಯುತ್ ಕೈಪಿಡಿ** ಲೇ: ವಿ.ಗಂ. ಲಾಳಗೆ ಪ್ರ: ಸಾಹಿತ್ಯ ಭಂಡಾರ, ಹುಬ್ಬಳ್ಳಿ

28. ಆಯುರ್ವೇದ ಕುಟುಂಬ ಕೈಪಿಡಿ : ಅಭಿನವ ಸುಶ್ರುತ ಪ್ರ: ಸಮಾಜ ಪುಸ್ತಕಾಲಯ, ಧಾರವಾಡ 1990

29. ಗೃಹವೈದ್ಯ ಕೈಪಿಡಿ - ತಿರುಕ, 1987 ಪ್ರ: ಮಲ್ಲಾಡಿಹಳ್ಳಿ ಅನಾಥಸೇವಾಶ್ರಮ, ವಿಶ್ವಸ್ತ ಸಮಿತಿ

30. ಕನ್ನಡ-ಕನ್ನಡಿಗ-ಕರ್ನಾಟಕ : ಕನ್ನಡ ಶಕ್ತಿ ಕೇಂದ್ರ ಪ್ರ: ಕನ್ನಡ ಶಕ್ತಿ ಕೇಂದ್ರ, ಬೆಂಗಳೂರು 1990

31. ವೀರಶೈವ ಧರ್ಮದ ಕೈಪಿಡಿ ಲೇ: ಎಸ್.ಸಿ. ನಂದಿಮಠ ಅನು: ಪ್ರೇಮಾದೇವಿ ಮಳಿಮಠ ಪ್ರ: ಕವಿವಿ ಪ್ರಸಾರಾಂಗ, ಧಾರವಾಡ 1990

32. ಕನ್ನಡ ನಿಘಂಟುಗಳ ನಿಘಂಟು (ಹಸ್ತಪ್ರತಿ) ಬೆಳ್ಳಾವೆ ವೆಂಕಟನಾರಾಯಣಪ್ಪ : ಕಸಾಪ 1930

IV ಕನ್ನಡ ಸಾಹಿತ್ಯ ಚರಿತ್ರೆಗಳು

ವ್ಯಕ್ತಿಗಳ ಪರಿಚಯದ ಸಾಹಿತ್ಯ ಚರಿತ್ರೆಗಳಂತೆ ವಿಷಯಗಳ ಆಧಾರಿತ ಸಾಹಿತ್ಯ ಚರಿತ್ರೆಗಳಿವೆ. ಇವುಗಳಲ್ಲಿ ಏಕವಿಷಯಿಕ ಚರಿತ್ರೆ ಗ್ರಂಥಗಳು ಹಾಗೂ ಬಹು ವಿಷಯಕ ಗ್ರಂಥಗಳಿವೆ.

1. ಕನ್ನಡ ಸಾಹಿತ್ಯ ಚರಿತ್ರೆ - ರಂ. ಶ್ರೀ ಮುಗಳಿ
2. ವೈದಿಕ ಸಾಹಿತ್ಯ ಚರಿತ್ರೆ - ಅನಂತರಂಗಾಚಾರ್
3. ವೀರಶೈವ ಸಾಹಿತ್ಯ ಚರಿತ್ರೆ - ಎಲ್. ವಿದ್ಯಾಶಂಕರ
4. ಕರ್ನಾಟಕ ಕವಿ ಚರಿತ್ರೆ - ಆರ್. ನರಸಿಂಹಾಚಾರ್
5. ಅವಲೋಕನ ಪ್ರಥಮ ವಿಶ್ವಕನ್ನಡ ಸಮ್ಮೇಳನದ ಪ್ರಕಟನೆ
6. ಸಂಸ್ಕೃತ ಕವಿ ಚರಿತ್ರೆ
7. ಸಿರಿಗನ್ನಡ ಗ್ರಂಥಕರ್ತರ ಕೋಶ - ವೆಂಕಟೇಶ ಸಾಂಗ್ಲಿ
8. ಹೊಸಗನ್ನಡ ಸಾಹಿತ್ಯದ ಅರುಣೋದಯ - ಶ್ರೀನಿವಾಸ ಹಾವನೂರ
9. ಹೊಸಗನ್ನಡ ಸಾಹಿತ್ಯದ ಉದಯಕಾಲ - ರಾ.ಯ. ಧಾರವಾಡಕರ
10. ಬೆಂಗಳೂರು ವಿಶ್ವವಿದ್ಯಾನಿಲಯದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟಗಳು ಮತ್ತು ಸಾಮಾನ್ಯನಿಗೆ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು

ಮೈಸೂರು-ವಿಶ್ವವಿದ್ಯಾನಿಲಯ ಪ್ರಕಟಿಸಿರುವ **ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳು** ಹಂಪಿ ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಇತಿಹಾಸ **ಸಂಪುಟಗಳು** ಇವೇ ಮೊದಲಾದವು ಸಮಿತಿ ರಚಿತ ಸಾಹಿತ್ಯ ಚರಿತ್ರೆಗಳಾಗಿವೆ.

11. **ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ** 1928 ಎ. ವೆಂಕಟಸುಬ್ಬಯ್ಯ
12. **ದಶಕದ ಕನ್ನಡ ಸಾಹಿತ್ಯ** - ಸಂ: ಎಫ್.ಟಿ. ಹಳ್ಳಿಕೇರಿ ಮತ್ತು ಕೆ. ರವೀಂದ್ರನಾಥ
13. **ಸಾಹಿತ್ಯ ಕರ್ನಾಟಕ** (ಕನ್ನಡ ಕವಿಗಳ ಸ್ಥಳ, ಕಾಲಸೂಚಿ) ಸಂ: ಡಿ.ವಿ. ಪರಶಿವಮೂರ್ತಿ, ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002

V ಕೃತಿಸೂಚಿಗಳು

ವಿಶ್ವಕೋಶಗಳು, ನಿಘಂಟುಗಳು, ಗೌರವಗ್ರಂಥಗಳು, ಸಂಶೋಧನ ಗ್ರಂಥಗಳು, ಕನ್ನಡ ಸಾಹಿತ್ಯ ಚರಿತ್ರೆಗಳು, ಕೈಪಿಡಿ (ಗೆಜೆಟಿಯರ್‌ಗಳು) ವಾರ್ಷಿಕಗ್ರಂಥಗಳು, ಗ್ರಂಥಸೂಚಿ ಗ್ರಂಥಗಳು ನಿಯತಕಾಲಿಕೆಸೂಚಿಗಳು ಆಕರಗ್ರಂಥಗಳು ಅಥವಾ ಸಂದರ್ಭಗ್ರಂಥಗಳು ಆಧಾರಗ್ರಂಥಗಳು ಎನಿಸುತ್ತವೆ. ಈ ಬಗ್ಗೆ ವಿವರಗಳನ್ನು ಕನ್ನಡದಲ್ಲಿ ಸಂದರ್ಭ ಗ್ರಂಥಗಳು: **ಸಮಗ್ರಸಮೀಕ್ಷೆ (ಲೇ : ಅಶೋಕ)** ಗ್ರಂಥವನ್ನು ಪರಾಮರ್ಶಿಸಬಹುದು.

ವ್ಯಕ್ತಿಆಧಾರಿತ ಸಮಗ್ರಕೃತಿಸೂಚಿಗಳು

ಒಬ್ಬೊಬ್ಬ ಲೇಖಕನೇ ಹತ್ತಾರು ಅಥವಾ ನೂರಾರು ಗ್ರಂಥಗಳನ್ನು ರಚಿಸಿದಾಗ, ನೂರಾರು ಲೇಖನಗಳನ್ನು ಬರೆದಾಗ ಅವುಗಳನ್ನೆಲ್ಲ ಕ್ರೋಡೀಕರಿಸಿ ಅವರನ್ನು ಕುರಿತ ಅಭಿನಂದನ ಗ್ರಂಥಗಳಲ್ಲಿ ಕೊಟ್ಟಿರುತ್ತಾರೆ. ಕೆಲವೊಮ್ಮೆ ಪ್ರತ್ಯೇಕ ಗ್ರಂಥವನ್ನಾಗಿ ಪ್ರಕಟಿಸಿರುತ್ತಾರೆ. ಇಂಥ ಪ್ರಕಟನೆಗಳು ಕನ್ನಡದಲ್ಲಿ ಸಾಕಷ್ಟಿವೆ. ಮೊದಲಿಗೆ ಕೆಲವನ್ನು ಸೂಚಿಸಿದೆ. ಬೆಂಗಳೂರಿನಲ್ಲಿ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಸಾಹಿತಿಗಳ ಜೀವನ-ಸಾಧನೆ ಪರಿಚಯದ ಕಾರ್ಯಕ್ರಮಗಳನ್ನು ಪ್ರತಿತಿಂಗಳೂ ಬಿಡದೆ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಕೆ.ಎನ್. ಶ್ರೀಹರಿ ಅವರು ನಡೆಸಿದಾಗ, ಪ್ರತಿಯೊಂದು ಆಹ್ವಾನಪತ್ರಿಕೆಯಲ್ಲಿ ಆಯಾ ಲೇಖಕರ ಸಮಗ್ರ ಕೃತಿಪಟ್ಟಿ ನೀಡುತ್ತಿದ್ದರು. ಇದನ್ನು **ಆಹ್ವಾನಪತ್ರ ಗ್ರಂಥಸೂಚಿ** ಎನ್ನಬಹುದು. ಈಗ ಈ ಬಗೆಯಲ್ಲಿ ಆಗೊಮ್ಮೆ ಈಗೊಮ್ಮೆ ಪ್ರಕಟವಾಗುತ್ತದೆ. ಇಲ್ಲಿ ಪುಸ್ತಕರೂಪದಲ್ಲಿ ಬಂದ ಏಕವ್ಯಕ್ತಿ ಕೃತಿಸೂಚಿಗಳನ್ನು ಮಾತ್ರ ಪಟ್ಟಿ ಮಾಡಿದೆ. ಸಾಮಾನ್ಯವಾಗಿ ಈ ಬಗೆ ಗ್ರಂಥಗಳನ್ನು ಪ್ರಕಾಶಕರು ಅಥವಾ ಲೇಖಕರೇ ಪ್ರಕಟಿಸಿರುತ್ತಾರೆ.

1. ರಾಸಸಾಹಿತ್ಯ (ಸಮೇತನಹಳ್ಳಿ ರಾಮರಾಯರ ಗೌರವಗ್ರಂಥ) ಪ್ರ : ರಾಸ ಪ್ರಕಾಶನ, ಮೈಸೂರು
2. ಡಾ. ಬಿ.ಎ.ಎಸ್. ಸ್ವಾಮಿ ಅವರ ಕೃತಿ ಪರಿಚಯ : ಲೇಖಕರು ಪ್ರ: ಮಲೆ ಮಾದೇಶ್ವರ ಮಹಾಸಂಪುಟದಲ್ಲಿ ಪ್ರಕಟಿತ.
3. **ಸೂಕ್ತಿಸಾರ ಟಿ.ವಿ. ವೆಂಕಟರಮಣಯ್ಯ** (ಗೌರವಗ್ರಂಥ ಮತ್ತು ಲೇಖನ ಗ್ರಂಥಸೂಚಿ) ಕವಿತಾ ಕೃಷ್ಣ, ಪ್ರ: ಕವಿತಾ ಪ್ರಕಾಶನ, ತುಮಕೂರು, ಇಸವಿ 2006
4. **ಸಮೀಕ್ಷೆ** (ಸಂಕೇತಿ ಸಮುದಾಯದ ಅಧ್ಯಯನಮಾಲೆಯ 10 ಸಂಪುಟಗಳ ವಿಷಯಸೂಚಿ) ಸಂ: ಡಾ. ಬಿ.ಎಸ್. ಪ್ರಣತಾರ್ತಿಹರನ್, ಪ್ರ: ಸಮುದಾಯ ಅಧ್ಯಯನ ಕೇಂದ್ರ, ಮೈಸೂರು ಇಸವಿ 2014

ಪ್ರಕಾಶಕರ ಗ್ರಂಥಸೂಚಿಗಳು

ನಮ್ಮಲ್ಲಿ ನೂರಾರು ಗ್ರಂಥಗಳ ಪ್ರಕಾಶಕರಿದ್ದಾರೆ. ಕೆಲವು ಪ್ರಕಾಶಕರು ಸಾವಿರಕ್ಕೂ ಮಿಕ್ಕು ಕನ್ನಡಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕನ್ನಡಸಾಹಿತ್ಯ ಪರಿಷತ್ತು, ನವಕರ್ನಾಟಕ ಪ್ರಕಾಶನ, ಐಬಿಎಚ್ ಪ್ರಕಾಶನ ಮೊದಲಾದವು 1000ಕ್ಕೂ ಮೇಲ್ಪಟ್ಟು ಗ್ರಂಥಗಳನ್ನು ಪ್ರಕಟಿಸಿವೆ. ಅವುಗಳ ವಿಸ್ತೃತಸೂಚಿಯೇ ಒಂದು ಬೃಹತ್‌ಗ್ರಂಥವಾಗುತ್ತದೆ. ಈ ಪೈಕಿ ಕೇವಲ ಗ್ರಂಥಗಳ ಹೆಸರು ಇತರೆ ಸಂಗತಿಗಳನ್ನು ಅತಿ ಸಂಕ್ಷಿಪ್ತವಾಗಿ ನೀಡಿರುವುದು ನವಕರ್ನಾಟಕ ಪ್ರಕಾಶನಗಳ ಪ್ರಕಟನೆಗಳಲ್ಲಿ ಕಂಡುಬಂದರೆ, ವಿಸ್ತೃತ ವಿವರಣಾತ್ಮಕ ವಿವರಣೆಗಳನ್ನು ಐಬಿಎಚ್ ಗ್ರಂಥಾವಳಿಯಲ್ಲಿ (ಸಂಪಾದಕರು ಟಿ.ವಿ. ವೆಂಕಟರಮಣಯ್ಯ) ಕಾಣುತ್ತೇವೆ. ವಿವಿಧ ವಿಷಯಗಳನ್ನು ಕುರಿತ 1869 ಪ್ರಕಟನೆಗಳನ್ನು ಈ ಗ್ರಂಥದಲ್ಲಿ ಕಾಣಬಹುದು.

ಸಾಮಾನ್ಯವಾಗಿ ಪ್ರಕಾಶಕರ ಪುಸ್ತಕ ಸೂಚಿಗಳಲ್ಲಿ ಹೆಸರು, ವಿಷಯವಿಭಾಗ, ಪ್ರಕಟನೆ ವರ್ಷ, ಬೆಲೆಗಳಿರುತ್ತವೆ. ಕೆಲವೊಮ್ಮೆ ಕೇವಲ ಹೆಸರು, ಲೇಖಕರು ಅಥವಾ ಸಂಪಾದಕರು ಬೆಲೆ ನಮೂದಿತವಾಗಿರುತ್ತವೆ. ಅನೇಕ ಪ್ರಕಾಶಕರು ಪುಸ್ತಕಪಟ್ಟಿ ಪ್ರಕಟಿಸುವಾಗ ಲಭ್ಯವಿಲ್ಲದ ಪುಸ್ತಕಗಳನ್ನು ನಕ್ಷತ್ರಚಿಹ್ನೆ ಮೂಲಕ ಪ್ರತಿಗಳು ತೀರಿವೆ ಎಂದು ಸೂಚಿಸುತ್ತಾರೆ. ಇನ್ನು ಕೆಲವರು ನಮ್ಮ ಪ್ರಕಾಶನದ ಕೆಲವು ಗ್ರಂಥಗಳು ಎಂದು ಆಯ್ಕೆ ಮಾಡಿದ್ದ ಗ್ರಂಥಗಳಪಟ್ಟಿ ಕೊಡುತ್ತಾರೆ. ಕೆಲವು ಪ್ರಕಾಶಕರು ತಮ್ಮ ಪ್ರಕಟನೆಗಳ ಜತೆಗೆ ತಾವು ಮಾರಾಟ ಮಾಡುವ ಗ್ರಂಥಗಳ ಪಟ್ಟಿಯನ್ನಷ್ಟೆ ನೀಡಿರುತ್ತಾರೆ.

ಮತ್ತೆ ಕೆಲವರು (ಉದಾಹರಣೆಗೆ ಹೇಳುವುದಾದರೆ, ಅಂಕಿತ, ಅಭಿನವ ಮೊದಲಾದವರು) ಇದುವರೆಗೆ ತಾವು ಪ್ರಕಟಿಸಿರುವ ಗ್ರಂಥಗಳಪಟ್ಟಿಯನ್ನಷ್ಟೇ ಪ್ರತಿ ಪುಸ್ತಕದಲ್ಲಿ ಪ್ರಕಟಿಸುತ್ತಾರೆ. ಇದರ ಉಪಯುಕ್ತತೆ ಹೆಚ್ಚು.

ಪುಸ್ತಕಗಳ ರಕ್ಷಾಕವಚ ಚಿತ್ರಗಳೊಡನೆ, ತಮ್ಮ ಪ್ರಕಾಶನದ ಇತಿಹಾಸ, ಬೆಳವಣಿಗೆ, ಬಂದ ಪ್ರಶಸ್ತಿಗಳು ಇತ್ಯಾದಿ ವಿವರಗಳನ್ನು ಕೆಲವು ಪ್ರಕಾಶಕರ ಗ್ರಂಥಸೂಚಿಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ಪ್ರಕಾಶಕರ ಪುಸ್ತಕಪಟ್ಟಿಗಳು ಉಚಿತವಾಗಿ ಸಿಗುತ್ತವೆ.

ಅನೇಕ ಪ್ರಕಾಶನಗಳು ಮಾಲೆಗಳಾಗಿ ಪುಸ್ತಕಗಳ ಸೂಚಿಯನ್ನು ಪ್ರಕಟಿಸುತ್ತವೆ. ಉದಾಹರಣೆಗೆ ಹಂಪಿ ವಿಶ್ವವಿದ್ಯಾಲಯದ ಪ್ರಕಟನೆಗಳಲ್ಲಿ ಸಾಮಾನ್ಯ ಪ್ರಕಟನೆಗಳು ವಿಶ್ವಕೋಶಗಳು, ಕರ್ನಾಟಕ ರಾಜ್ಯಕೋಶಗಳು ಕರ್ನಾಟಕ ಚರಿತ್ರೆಮಾಲೆ, ಶಾಸನಸಂಪುಟಮಾಲೆ, ಬುಡಕಟ್ಟು ಮಹಾಕಾವ್ಯಮಾಲೆ, ಬುಡಕಟ್ಟು ಅಧ್ಯಯನ ಮಾಲೆ, ಕರ್ನಾಟಕ ಜನಪದ ಕಾವ್ಯಮಾಲೆ, ಚಿಂತನಮಾಲೆ, ಏಕಪ್ರಕರಣ ಗ್ರಂಥಮಾಲೆ, ಸಮಗ್ರ ಜೈನಸಾಹಿತ್ಯಮಾಲೆ, ಪಠ್ಯಪುಸ್ತಕಮಾಲೆ, ಮಂಟಪಮಾಲೆ ಇತ್ಯಾದಿ ಮಾಲಾಪ್ರಕಟನೆಗಳ ಗ್ರಂಥಸೂಚಿಯನ್ನು ಕಾಣುತ್ತೇವೆ.

ಕಾಲಕಾಲಕ್ಕೆ ಪುಸ್ತಕಗಳ ದರಗಳನ್ನು ಪರಿಷ್ಕರಿಸಿ ಪುಸ್ತಕಪಟ್ಟಿಗಳನ್ನು ಪ್ರಕಟಿಸುತ್ತಾರೆ. ಅಂಥ ಪ್ರಕಾಶಕರು ಪುಸ್ತಕಪಟ್ಟಿಯ ಪ್ರಕಟನೆಯ ಇಸವಿ ಹಾಕಿರುತ್ತಾರೆ. ಬದಲಿಸಿದ ಬೆಲೆಗಳನ್ನು ಸೀಲ್ ಹಾಕುವುದರ ಮೂಲಕ ಸೂಚಿಸುವುದೂ ಉಂಟು. ಮಾರಾಟಗಾರರಲ್ಲಿ ಕೆಲವರು ಬೆಲೆಗಳನ್ನು ತಿದ್ದಿ ಹಳೆಯ ಪ್ರಕಟನೆಗಳನ್ನು ಮಾಡುವುದೂ ಉಂಟು.

ಸಾಹಿತ್ಯಭಂಡಾರ, ಸಮಾಜ ಪುಸ್ತಕಾಲಯ, ಮನೋಹರ ಗ್ರಂಥಮಾಲೆ ಮೊದಲಾದವು ಕಾಲಕಾಲಕ್ಕೆ ಪರಿಷ್ಕೃತ ಬೆಲೆಪಟ್ಟಿ ಪ್ರಕಟಿಸುತ್ತವೆ. ಹಿಂದಿನ ದರಪಟ್ಟಿಗಳು ರದ್ದಾಗಿದೆ ಎಂದು ಪ್ರಕಟಿಸುತ್ತಾರೆ. ಪರಿಷ್ಕೃತಪಟ್ಟಿ ಪ್ರಕಾರ ಬದಲಿಸಿದ ಬೆಲೆಗಳನ್ನು ಸಂಸ್ಥೆಯ ಹೆಸರಿನೊಂದಿಗೆ ಚೀಟಿ ಅಂಟಿಸಿರುತ್ತಾರೆ ಇಲ್ಲವೇ ಸೀಲ್ ಹಾಕಿರುತ್ತಾರೆ.

ಹಳೆಯ ಪುಸ್ತಕ ವ್ಯಾಪಾರಿಗಳಂತು ಬೆಲೆಗಳನ್ನು ತಿದ್ದುವುದು ಸಾಮಾನ್ಯ. ಕೇವಲ ಕನ್ನಡಗ್ರಂಥಗಳ ಪ್ರಕಾಶಕರೇ ಹೆಚ್ಚಿದ್ದರೂ ಕೆಲವು ಪ್ರಕಾಶಕರು ಅನೇಕ ಭಾಷೆಗಳಲ್ಲಿ ಗ್ರಂಥ ಪ್ರಕಟಿಸುತ್ತಾರೆ. ಅವರು ಕನ್ನಡಗ್ರಂಥಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸುತ್ತಾರೆ. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಕನ್ನಡ ಪ್ರಕಟನೆಗಳು ಒಂದು ನಿದರ್ಶನ. ಅನುವಾದಿತ ಗ್ರಂಥಗಳನ್ನು ವಿಷಯಾನುಸಾರ ಕೊಟ್ಟು ಲೇಖಕರ ಹೆಸರು, ಪುಸ್ತಕ ಹೆಸರುಗಳನ್ನು ಇಂಗ್ಲಿಷಿನಲ್ಲೂ ಕೊಟ್ಟಿದ್ದಾರೆ. ಅನ್ಯಭಾಷೆಗಳಲ್ಲಿ ವಿವಿಧ ಸಾಹಿತ್ಯ

ಪ್ರಕಾರದ ಗ್ರಂಥಗಳು ಕನ್ನಡಕ್ಕೆ ಯಾವುವು ಬಂದಿವೆ ಎಂಬುದನ್ನು ತಿಳಿಸುವಲ್ಲಿ ಈ ಅಕಾಡೆಮಿ ಪ್ರಕಟನೆ ಉಪಯುಕ್ತವಾಗಿದೆ. ತೌಲನಿಕ ಅಧ್ಯಯನಕ್ಕೆ ಇಂಥ ಗ್ರಂಥಸೂಚಿ ಮಹತ್ವದ್ದು. ಅಂತೆಯೇ ಕನ್ನಡಗ್ರಂಥಗಳು ಇಂಗ್ಲಿಷ್ ಮೊದಲಾದ ಭಾಷೆಗಳ ಅನುವಾದಪಟ್ಟಿಯನ್ನು ಗಮನಿಸುವಂಥದ್ದು. ಉದಾಹರಣೆಗೆ ಬಾರ್ನೆಟ್‌ರ ಗ್ರಂಥಸೂಚಿ.

ಪ್ರಸಾರಾಂಗಗಳ ಗ್ರಂಥಸೂಚಿಗಳು

ಸಾಮಾನ್ಯವಾಗಿ ವಿಶ್ವವಿದ್ಯಾನಿಲಯಗಳೆಲ್ಲ ಪ್ರಕಟನ ವಿಭಾಗವನ್ನು ಹೊಂದಿದ್ದು ಪ್ರತಿ ವಿಶ್ವವಿದ್ಯಾನಿಲಯವೂ ನಾನಾಬಗೆಯ ಪ್ರಕಟನೆಗಳನ್ನು, ನಿಘಂಟು, ವಿಶ್ವಕೋಶ, ಮೊದಲಾದವನ್ನು ಪ್ರಕಟಿಸುತ್ತವೆ. ಇವುಗಳ ಪಟ್ಟಿಯನ್ನು ಪ್ರಕಟಿಸುತ್ತವೆ. ಮೈಸೂರು ವಿಶ್ವವಿದ್ಯಾನಿಲಯವು ಕರ್ನಾಟಕದ ಮೊದಲ ವಿಶ್ವವಿದ್ಯಾನಿಲಯವಾಗಿದ್ದು ಪ್ರಸಾರಾಂಗದ ಮೂಲಕ ಪುಸ್ತಕಗಳ ಮಾಲೆಗಳನ್ನು ಪ್ರಾರಂಭಿಸಿತು. ಮೈ.ವಿ.ವಿ. ಪ್ರಾರಂಭಿಸಿದ ಪ್ರಚಾರ ಪುಸ್ತಕಮಾಲೆ ಸುಲಭಬೆಲೆಯ ಪುಟ್ಟ ಪುಸ್ತಕಗಳು ಅತಿಜನಪ್ರಿಯವಾಗಿ ಉಳಿದವರಿಗೆ ಮಾದರಿ ಆಗಿ ಈಗ ಅನೇಕ ಸಂಸ್ಥೆಗಳೂ ವಿಶ್ವವಿದ್ಯಾನಿಲಯಗಳೂ ಪ್ರಚಾರ ಪುಸ್ತಕಮಾಲೆ ಯನ್ನು ಪ್ರಕಟಿಸುತ್ತಿವೆ. ಈ ಪುಸ್ತಕಗಳಲ್ಲಿ ಆಯಾಮಾಲೆಯ ಹಿಂದಿನ ಪುಸ್ತಕಗಳ ಪಟ್ಟಿಯನ್ನು ಸಮಗ್ರವಾಗಿ ಅಥವಾ ಆಯ್ಕೆ ಮಾಡಿ ಪ್ರಕಟಿಸಿರುತ್ತವೆ.

ನಿಯತಕಾಲಿಕೆಗಳ ಲೇಖನಸೂಚಿಗಳು

ಪುಸ್ತಕ ಪ್ರಪಂಚದಷ್ಟೇ ಲೇಖನ ಪ್ರಪಂಚವೂ ಮಹತ್ವದ್ದು. ಎಷ್ಟೋ ಗ್ರಂಥಗಳು ಪತ್ರಿಕೆಯಲ್ಲಿ ಪ್ರಕಟವಾಗಿ ನಂತರ ಪುಸ್ತಕವಾಗಿ ಪ್ರಕಟವಾಗುವುದೇ ಇಲ್ಲ. ಇನ್ನು ಲೇಖನಗಳೂ ಅಷ್ಟೆ. ಈಚೆಗೆ ಲೇಖನಸಂಗ್ರಹಗಳು ಸಾಕಷ್ಟು ಬರುತ್ತಿದ್ದರೂ ಗ್ರಂಥಲೇಖನ ಸಂಗ್ರಹದ ಪುಸ್ತಕಗಳು ಇನ್ನೂ ಬರಬೇಕಾದ್ದು ಹೆಚ್ಚು. ಪತ್ರಿಕೆಯಲ್ಲಿಯ ಅಂಕಣಬರಹ, ವ್ಯಕ್ತಿಚಿತ್ರಗಳು, ಕಥೆಗಳು, ಕಾದಂಬರಿಗಳು ಹೆಚ್ಚಿನ ಪ್ರಮಾಣದಲ್ಲಿ ಪುಸ್ತಕಗಳಾಗಿವೆ. ಈ ದೃಷ್ಟಿಯಿಂದ ಟಿ.ವಿ. ವೆಂಕಟರಮಣಯ್ಯನವರ ಗ್ರಂಥಗಳಲ್ಲಿನ ಲೇಖನಗಳನ್ನು ಒಳಗೊಂಡ ಕನ್ನಡಭಾಷಾ ಸಾಹಿತ್ಯ ಲೇಖನಸೂಚಿ ಮಹತ್ವದ ಗ್ರಂಥ. ಕನ್ನಡದಲ್ಲಿ ಪ್ರಸಿದ್ಧ ಪತ್ರಿಕೆಗಳ ಲೇಖನಸೂಚಿಗಳು ಈಚೆಗೆ ಬಂದಿವೆ. ಅವುಗಳಲ್ಲಿ ಕನ್ನಡನುಡಿ ಲೇಖನಗಳು, ಪ್ರಬುದ್ಧಕರ್ನಾಟಕ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಜೀವನ, ಶಿವಾನುಭವ, ಲೋಚನ, ಇತಿಹಾಸದರ್ಶನ ಲೇಖನಸೂಚಿ ಮುಂತಾದವು ಅತ್ಯುಪಯುಕ್ತವಾಗಿವೆ. ನಿಯತಕಾಲಿಕೆಗಳ ಲೇಖನಗಳ ಸೂಚಿಗ್ರಂಥಗಳು ಒಂದೆಡೆಯಾದರೆ ಈ ಬಗೆಗೆ ಶ್ರೀನಿವಾಸಹಾವನೂರು

ಸಿದ್ಧಪಡಿಸಿರುವ ಕನ್ನಡಪತ್ರಿಕಾಸೂಚಿ (1843-1972) ಕನ್ನಡದ ಹಿಂದಿನ-ಇಂದಿನ ಕನ್ನಡ ಪತ್ರಿಕೆಗಳ ಸಮಗ್ರಸೂಚಿ ಆಗಿದೆ.

ಅನಂತರದಲ್ಲಿ ಬರೆದ ಕನ್ನಡಗ್ರಂಥಸೂಚಿಗಳಲ್ಲಿ ಗಮನಾರ್ಹವಾದುವೆಂದರೆ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಸುಮಾರು 13 ವರ್ಷಗಳ ಕಾಲ ಪ್ರಕಟವಾದ ಸಾಹಿತ್ಯ ವಾರ್ಷಿಕಗಳು ಮತ್ತು ಗ್ರಂಥಲೋಕ ಪತ್ರಿಕೆಯಲ್ಲಿ (ಸಂ: ಆರ್.ಎಲ್. ಅನಂತರಾಮಯ್ಯ) ವಿಮರ್ಶಿಸಿದ ಗ್ರಂಥಗಳನ್ನು ಪ್ರತ್ಯೇಕಿಸಿ ಪ್ರಕಟಿಸಲಾದ ವಾರ್ಷಿಕ ಗ್ರಂಥಾವಳಿ ಗ್ರಂಥಸೂಚಿಗಳು. ಪ್ರಮುಖ ದಿನಪತ್ರಿಕೆಗಳಲ್ಲಿ ವಾರಾಂತ್ಯ ಬರುವ ಇತ್ತೀಚಿನ ಗ್ರಂಥಗಳಪಟ್ಟಿ, ಮಾಸಪತ್ರಿಕೆಗಳಲ್ಲಿ ಪ್ರಕಟವಾಗುವ ಸಾದರಸ್ವೀಕಾರ ಹಾಗೂ ವಿಮರ್ಶೆಗಳು ಗಮನಿಸಬೇಕಾದ ಸೂಚಿಗಳಾಗಿವೆ.

ಕಾಲಕಾಲಕ್ಕೆ ಪತ್ರಿಕೆಗಳಲ್ಲಿ ಪ್ರಕಟವಾಗುವ ಗ್ರಂಥಗಳ ಪರಿಚಯ, ವಿಮರ್ಶೆ, ಸ್ವೀಕಾರಗಳು ಕನ್ನಡಸಾಹಿತ್ಯದ ಬೆಳವಣಿಗೆಯ ಹೊಸದಿಕ್ಕುಗಳನ್ನು ತೋರಿಸುವಲ್ಲಿ ತೋರುಗಂಬಗಳಾಗಿವೆ. ಉದಾಹರಣೆಗೆ ಗ್ರಂಥಲೋಕ ಮಾಸಪತ್ರಿಕೆ 1990ವರೆಗೆ 15295 ಪುಸ್ತಕಗಳನ್ನೇ ಸೂಚೀಕರಿಸಿದೆ.

ಗ್ರಂಥಸೂಚಿ ಪುಸ್ತಕಗಳು

1. **ಕನ್ನಡಭಾಷಾ ಸಾಹಿತ್ಯ ಲೇಖನಸೂಚಿ** ಟಿ.ವಿ. ವೆಂಕಟರಮಣಯ್ಯನವರು ಪ್ರಕಟಿಸಿದ ಬೃಹತ್ ಲೇಖನಗಳ ಸೂಚಿ ಆಗಿದೆ. ಪತ್ರಿಕೆಗಳಲ್ಲಿ ಪುಸ್ತಕಗಳಲ್ಲಿ ಬಂದ ಲೇಖನ ಈ ಸೂಚಿ ಅತ್ಯುಪಯುಕ್ತವಾಗಿದ್ದು ಇದನ್ನು ಯಾರೂ ಮುಂದುವರೆಸಲಿಲ್ಲ. ಇದು ಕನ್ನಡಕ್ಕೆ ಕೊರತೆಯಾಗಿದೆ.
2. **ಕರ್ನಾಟಕದಲ್ಲಿಯ 378 ವೃತ್ತಪತ್ರಿಕೆಗಳು** ಸಂ: ರಾ.ಯ. ಧಾರವಾಡಕರ ಪ್ರ: ಎಚ್.ಆರ್. ನವರೆ 1949
3. **ಜೀವನ, ಜಯಕರ್ನಾಟಕ ಮತ್ತು ಶಿವಾನುಭವ (ಲೇಖಕರ ಸೂಚಿ)** ಸಂ : ಎಂ.ಆರ್. ಸಣ್ಣರಾಮೇಗೌಡ, ಪ್ರ: ಮೈವಿವಿ ಪ್ರಸಾರಾಂಗ 1967.

ನಿಯತಕಾಲಿಕೆಗಳ ಲೇಖನಸೂಚಿಗಳು

4. **ಪ್ರಬುದ್ಧಕರ್ನಾಟಕ ಕವಿಕಾವ್ಯಸೂಚಿ** - ಸಂ: ಎನ್. ಅನಂತರಂಗಾಚಾರ್, ಪ್ರ: ಮೈವಿವಿ 1982.
5. **ಜಯಂತಿ ಪತ್ರಿಕೆಯ ಲೇಖಕರ ಸೂಚಿ** - ಸಂ : ಅನಿಲಧಾರವಾಡಕರ ಪ್ರ. ಸತ್ಯದೀಪ ಪ್ರಕಾಶನ, ಧಾರವಾಡ 1982.

6. ಕನ್ನಡ ನಿಯತಕಾಲಿಕ ಬರಹಗಳ ಸೂಚಿ (1969-74) ಮೈವಿವಿ ಗ್ರಂಥಾಲಯ, ಪ್ರ. ಮೈವಿವಿ ಪ್ರಸಾರಾಂಗ.
7. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಲೇಖನಸೂಚಿ - ಪ್ರ : ಕಸಾಪ, ಸಂ: ಟಿ.ವಿ. ವೆಂಕಟರಮಣಯ್ಯ, 1983.
8. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಲೇಖನ ಸೂಚಿ - ಟಿ.ವಿ. ಸುಬ್ರಹ್ಮಣ್ಯಂ, ಪ್ರ: ಮೈಸೂರು ವಿವಿ ಪ್ರಸಾರಾಂಗ 1971.
9. ದಕ್ಷಿಣ ಕನ್ನಡ ಜಿಲ್ಲಾ ಪತ್ರಿಕೆಗಳು (1842-1942) ಸಂ: ಬಿ. ಶಂಕರಭಟ್ಟ, ಪ್ರ: ಮಂಗಳೂರು.
10. ಕರ್ನಾಟಕ ಪತ್ರಿಕೆಗಳು - ಸಂ: ಹನುಮಾನ್ ಪ್ರ: ಹನುಮಾನ್ ಅಂಡ್ ಕೋ, ಮೈಸೂರು 1919.

ಕನ್ನಡ ಲೇಖಕರ ಮಾಹಿತಿಸೂಚಿಗಳು

ಅನೇಕ ವಿಷಯಗಳ ಬಗ್ಗೆ ಯಾವ ಯಾವ ಗ್ರಂಥಗಳಿವೆ ಎಂಬುದು ತುಂಬಾ ಉಪಯುಕ್ತ ಸೂಚಿಗಳಾಗಿವೆ. ಲೇಖಕರ ಸೂಚಿಯಂತೆ ವಿಷಯಸೂಚಿ ಗ್ರಂಥಗಳ ಪಟ್ಟಿಯೂ ಅಗತ್ಯವಿದೆ. ಪುಸ್ತಕಗಳ ವಿಷಯವರ್ಗೀಕರಣ ಕನ್ನಡಕ್ಕೆ ಸಂಬಂಧಿಸಿದಂತೆ ಸರ್ವಸಮರ್ಪಕವಾಗಿ ಆಗಿಲ್ಲ. ಉದಾಹರಣೆಗೆ, ಸಮಗ್ರ ಕೃತಿಗಳ ಪರಂಪರೆ, ಅಭಿನಂದನ ಗ್ರಂಥಗಳ ಪರಂಪರೆ, ಪ್ರಕಾಶಕರ ಪುಸ್ತಕಸೂಚಿ, ಪತ್ರಿಕಾಲೇಖನಸೂಚಿ ಇತ್ಯಾದಿಗಳ ವರ್ಗೀಕರಣವನ್ನು ಪುಸ್ತಕ ಭಂಡಾರಗಳಲ್ಲಿ ಕಾಣೆವು ಮತ್ತು ಕನ್ನಡದಲ್ಲಿ ಒಂದು ಪುಸ್ತಕ ಹಲವು ವಿಷಯಗಳಿಗೆ ಸಂಬಂಧಿಸಿದಾಗ, ಅದನ್ನು ಯಾವುದೋ ಒಂದು ವರ್ಗಕ್ಕೆ ಸೇರಿಸಿದಾಗ, ಇನ್ನೊಂದು ವರ್ಗದಲ್ಲಿ ಆ ಪುಸ್ತಕ ಸೇರುವುದಿಲ್ಲ. ಒಂದೇ ಪುಸ್ತಕದಲ್ಲಿ ವಿವಿಧ ವಿಷಯಗಳು, ವಿವಿಧ ಲೇಖಕರ ಬರಹಗಳು ಇದ್ದಾಗ ಆಯಾ ಲೇಖಕರ, ಆಯಾ ವಿಷಯಗಳ ಸೂಚಿಯಲ್ಲಿ ಈ ಗ್ರಂಥದ ಲೇಖನಗಳು ವರ್ಗೀಕರಣ ಆಗಿರುವುದಿಲ್ಲ. ಹೀಗಾಗಿ ಕನ್ನಡಗ್ರಂಥಸೂಚಿ ರಚನೆಯಲ್ಲಿ ಹಲವಾರು ಸಮಸ್ಯೆಗಳಿವೆ.

ಕನ್ನಡ ಲೇಖಕರನ್ನು ಕುರಿತ ಲೇಖನಸೂಚಿಗಳ ಹಾಗೆ ಗ್ರಂಥಸೂಚಿಗಳು ಕನ್ನಡದಲ್ಲಿ ಸಾಕಷ್ಟು ಬಂದಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕಾಣಿಸಿದೆ. ಗ್ರಂಥಸೂಚಿಯಲ್ಲಿ ವಿಷಯಾನುಸಾರಪಟ್ಟಿಯನ್ನು ಕೆಲವರು ಕೊಟ್ಟರೆ ಲೇಖಕರಾನುಸಾರವಾಗಿ ಕೆಲವರು ಕೊಡುತ್ತಾರೆ.

ಕನ್ನಡ ಸಾಹಿತ್ಯ ಚರಿತ್ರೆಗಳಿಗೂ ಕನ್ನಡ ಸಾಹಿತ್ಯ ಮಾಹಿತಿ ಗ್ರಂಥಗಳಿಗೂ ಒಂದು ವ್ಯತ್ಯಾಸವಿದೆ. ಸಾಹಿತ್ಯ ಚರಿತ್ರೆಗಳಲ್ಲಿ ಸಾಹಿತಿ ಕವಿಗಳ ಪರಿಚಯದ ಜತೆಗೆ ಅವರ ಕೃತಿಗಳ ಬಗ್ಗೆ ಪರಿಚಯ ವಿಮರ್ಶೆ ಇರುತ್ತದೆ. ಮಾಹಿತಿಗ್ರಂಥಗಳಲ್ಲಿ ಲೇಖಕರ ಜೀವನದ ವಿವರ ಮತ್ತು ಕೃತಿಗಳ ಪಟ್ಟಿ ಇರುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯ ಅಂಗವನ್ನಾಗಿಯೇ ಈ ಬಗೆಯ ಗ್ರಂಥಗಳನ್ನು ಪರಿಗಣಿಸಬಹುದಾಗಿದೆ. ಒಂದು ರೀತಿ ಲೇಖಕಸೂಚಿ ಗ್ರಂಥಸೂಚಿಗಳ ಮಿಶ್ರಣ ಈ ಬಗೆಯ ಗ್ರಂಥಗಳು ಎನ್ನಬಹುದು.

ಕೆಲವು ಗ್ರಂಥಗಳನ್ನು ಇಲ್ಲಿ ಉಲ್ಲೇಖಿಸಿದೆ.

1. **ಕನ್ನಡ ಸಾಹಿತಿಗಳ ಮಾಹಿತಿ** ಸಂ: ನೀಲಾಪಾಟೀಲ ಸಂಕ್ರಮಣ ಪ್ರಕಾಶನ 2010
2. **ಕನ್ನಡ ಸಾಹಿತಿ ದರ್ಶನ** : ಲೇ: ಎಸ್.ವಿ. ಶ್ರೀನಿವಾಸರಾವ್ ಪ್ರ: ಸೌರಭ ಪ್ರಕಾಶನ, ಶ್ರೀನಗರ, ಬೆಂಗಳೂರು 2007
3. **ಸಾಹಿತಿ ಮಾಹಿತಿ ಕೋಶ** : ಲೇ: ಬಿ.ಜಿ. ಸತ್ಯಮೂರ್ತಿ ಪ್ರ: ಲೇಖಕರು. 10 ಸಂಪುಟಗಳಲ್ಲಿ ಸಮಕಾಲೀನ ಲೇಖಕ - ಲೇಖಕಿಯರ ಪರಿಚಯಗ್ರಂಥ.
4. **ಆಧುನಿಕ ಕನ್ನಡ ಬರಹಗಾರರು** : ಸಂಪಾದಕರು ಕನ್ನಡ ಗ್ರಂಥಸೂಚಿ ಸಂಪಾದಕ ಮಂಡಳಿ, ಮೈಸೂರು ಪ್ರ: ಮೈ.ವಿ.ವಿ. 1983 ಈ ಸಂಪುಟದಲ್ಲಿ 1002 ಜನ ಲೇಖಕರ 71 ಲೇಖಕಿಯರ ಸಂಕ್ಷಿಪ್ತ ಪರಿಚಯವಿದೆ
5. **ಲೇಖಕಿಯರ ಮಾಹಿತಿ ಕೋಶ** : ಸಂಪಾದಕ ಮಂಡಳಿ ಪ್ರ: ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು 2013
6. **ಆಧುನಿಕ ಕನ್ನಡ ಲೇಖಕಿಯರು** : ಸಂ: ಚಿ ನ ಮಂಗಳಾ ಮತ್ತು ಇತರರು ಪ್ರ: ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜು, ಬೆಂಗಳೂರು 1993
7. **ನಮ್ಮ ಕೀರ್ತನ ಕಲಾವಿದರು** : ಲೇ: ಎಂ.ಎ. ಜಯರಾಮರಾವ್ ಪ್ರ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 1986
8. **ದಕ್ಷಿಣ ಕನ್ನಡದ ಬರಹಗಾರರು** : ಸಂ: ಸೂರ್ಯನಾರಾಯಣ ಚಡಗ, ಪ್ರ: ಗೀತಾ ಪಬ್ಲಿಕೇಶನ್ಸ್, ಬೆಂಗಳೂರು 1967
9. **ಕನ್ನಡದ ಲೇಖಕಿಯರು** : ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
10. **ಕನ್ನಡದ ಕವಯಿತ್ರಿಯರು** : ಲೇ: ಕುಲಶೇಖರಿ
11. **ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರು** 1996

12. ಶ್ರೀಮುಡಿ -ಕರಾವಳಿ ಲೇಖಕಿಯರ ಮಾಹಿತಿ ಕಣಜ 2009
13. ಉಡುಪಿ ಜಿಲ್ಲೆಯ ಬರಹಗಾರರ ಮಾಹಿತಿಕೋಶ 2007
14. ಭವ್ಯ ಪರಂಪರೆ : ಸಂ: ಜಿ. ಬ್ರಹ್ಮಪ್ಪ ಮತ್ತು ಇತರರು ಅತ್ತಿಮಬ್ಬೆ ಪ್ರಕಾಶನ, ಬೆಂಗಳೂರು
15. ಪ್ರಶಸ್ತಿ - **85** ಸಂ: ಜಿ.ಎನ್. ರಂಗನಾಥರಾವ್. ಕರ್ನಾಟಕ ನಾಟಕ ಅಕಾಡೆಮಿ ಪ್ರತಿವರ್ಷ ಪ್ರಶಸ್ತಿ ನೀಡುವ ಸಂದರ್ಭದಲ್ಲಿ ಪ್ರಶಸ್ತಿ ವಿಜೇತರ ಜೀವನ-ಸಾಧನೆಗಳನ್ನು ವಿವರಿಸುವ ಗ್ರಂಥ ಹೊರತರುತ್ತಿದೆ. ಅದರಲ್ಲಿ ಈ ಗ್ರಂಥವು ಒಂದು (1985ರಲ್ಲಿ ಪ್ರಶಸ್ತಿ ಪಡೆದವರ ಪರಿಚಯ, ಮಾಹಿತಿ)
16. ಕನ್ನಡ ಸಾಹಿತ್ಯ ಪರಿಷತ್ತು ಪ್ರತಿವರ್ಷ ಏರ್ಪಡಿಸುವ ಸಾಹಿತ್ಯ ಸಮ್ಮೇಳನಗಳಲ್ಲಿ ನಾನಾಗೋಷ್ಠಿಗಳಲ್ಲಿ ಭಾಗವಹಿಸುವವರ ಲೇಖಕ-ಕವಿಗಳ ಪರಿಚಯ ಪುಸ್ತಕ ಹೊರತರುತ್ತಿದೆ. ಈ ಬಗೆ ಪುಸ್ತಕಗಳು ಎಷ್ಟು ಬಂದಿವೆ ನಿಖರ ಮಾಹಿತಿ ಇಲ್ಲ. ಇಲ್ಲಿ ಒಂದು ಪುಸ್ತಕದ ಮಾಹಿತಿಯನ್ನು ಉದಾಹರಣೆಗೆ ವಿವರಿಸಿದೆ.

    61ನೇ ಕನ್ನಡ ಸಾಹಿತ್ಯ ಸಮ್ಮೇಳನ ದಾವಣಗೆರೆ (1992) ಗೋಷ್ಠಿಗಳಲ್ಲಿ ಪಾಲ್ಗೊಂಡವರ ಪರಿಚಯ ಪುಸ್ತಕ. ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
17. ಚಿಕ್ಕಮಗಳೂರು ಜಿಲ್ಲಾ ಲೇಖಕರ ಮಾಹಿತಿ ಕೋಶ ಸಂ: ಹಾ.ಮ. ನಾಗಾರ್ಜುನ ಮತ್ತು ಇತರರು ಪ್ರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಿಕ್ಕಮಗಳೂರು
18. ಕನ್ನಡ ಜೀವನ ಚರಿತ್ರೆ : ಲೇ: ಎಂ.ವಿ. ಸೀತಾರಾಮಯ್ಯ ಪ್ರ: ಕನ್ನಡ ಸಾಹಿತ್ಯ ಪರಿಷತ್ತು 1973. 1947 ರಿಂದ 1972 ರವರೆಗಿನ 12 ಗ್ರಂಥಗಳ ಬಗ್ಗೆ ಪ್ರಸ್ತಾಪ ಈ ಗ್ರಂಥದಲ್ಲಿದೆ. ಜೀವನಚರಿತ್ರೆ ಗ್ರಂಥಗಳ ಲೇಖಕರ ಸಾಕಷ್ಟು ಮಾಹಿತಿ ಈ ಗ್ರಂಥದಲ್ಲಿದೆ.
19. ಅಂಕಿತ ಸಹಸ್ರ ಶಿಷ್ಯನಾಮಾವಳಿ (ಅಂಕಿತವುಳ್ಳ 1000 ಹರಿದಾಸರ ಪಟ್ಟಿ) ಸಂ: ಎ.ಎನ್. ಅನಂತಸ್ವಾಮಿರಾವ್, ಪ್ರ: ದಾಸಕೂಟಸಭಾ, ದೇವರಾಯನದುರ್ಗ, ಇ 2011
20. ರಾಷ್ಟ್ರೀಯ ಗ್ರಂಥಸೂಚಿ (ಕನ್ನಡ ವಿಭಾಗ, ಬೆಂಗಳೂರು ಮೈಸೂರು ಸರ್ಕಾರ 1958 ರಿಂದ 1963 ಗ್ರಂಥಗಳು ಪ್ರ: ಸರಕಾರದ ಸಾಹಿತ್ಯ ಮತ್ತು ಅಭಿವೃದ್ಧಿ ಇಲಾಖೆ ಬೆಂಗಳೂರು, ಸಂ: ಬಿ.ಎಸ್. ಕೇಶವನ್ ಮತ್ತು ಇತರರು.

21. **ಬ್ರಿಟಿಷ್ ಮ್ಯೂಜಿಯಂ ಗ್ರಂಥಾಲಯದಲ್ಲಿರುವ ಕನ್ನಡ, ಬಡಗ ಮತ್ತು ಕೊಡಗು ಗ್ರಂಥಗಳ ಸೂಚಿ,** ಸಂ: ಎಲ್.ಡಿ. ಬಾರ್ನೆಟ್ ಪ್ರ: ಬ್ರಿಟಿಷ್ ಮ್ಯೂಸಿಯಂ ಲಂಡನ್ 1910

22. **ಬ್ರಿಟಿಷ್ ಲೈಬ್ರರಿಯಲ್ಲಿರುವ ಕನ್ನಡ ಗ್ರಂಥಗಳ ಪುರವಣಿ** ಸಂ: ಆಲ್. ಬುರ್ಟಿನ್ ಪ್ರ: ಬ್ರಿಟಿಷ್ ಲೈಬ್ರರಿ ಲಂಡನ್ 1985

23. **ಮಾಹಿತಿ ಮೂಲಗಳು** (ಆಯ್ದ ಕನ್ನಡ ಪರಾಮರ್ಶನ ಗ್ರಂಥಗಳ ಸಂಕ್ಷಿಪ್ತ ಪರಿಚಯ) ಸಂ: ಎಸ್.ಎಂ. ರೂಗಿ ಪ್ರ: ದೀಪಾ ಪ್ರಕಾಶನ, ಅನಿಗೋಳ, ಬೈಲಹೊಂಗಲ 1984

24. **ಕನ್ನಡ ಚಲನಚಿತ್ರ ಇತಿಹಾಸ** (2 ಸಂಪುಟಗಳು) ಸಂ: ವಿಜಯಾ ಮತ್ತು ಇತರರು ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

25. **ಕನ್ನಡ ಜಾನಪದ ಗ್ರಂಥಸೂಚಿ** ಸಂ: ಸಿ.ಟಿ. ಗುರುಪ್ರಸಾದ್ 2000 ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಾರ್ಷಿಕಸೂಚಿಗಳು

ಸಾಹಿತ್ಯ ವಾರ್ಷಿಕ : ಕಾಲಕಾಲಕ್ಕೆ ನಿರ್ದಿಷ್ಟ ಅವಧಿಯಲ್ಲಿ ಬರುವ ಪ್ರಕಟನೆಗಳು ಹಲವಾರು ವಿಧ. ದಿನ, ವಾರ, ಪಕ್ಷಮಾಸ ದೈನಿಕ, ತ್ರೈಮಾಸಿಕ, ವಾರ್ಷಿಕಗಳೆಂಬ ಪತ್ರಿಕೆಗಳೂ ಪ್ರಕಟನೆಗಳೂ ಇವೆ. ಸಾಮಾನ್ಯವಾಗಿ ವಾರ್ಷಿಕವಾಗಿ ಪ್ರಕಟವಾಗುವ ಪ್ರಕಟನೆಗಳೆಂದು ಕರೆಯುತ್ತಾರೆ. ಪತ್ರಿಕೆಗಳೆಂದು ಕರೆಯುವುದಿಲ್ಲ. ವಾರ್ಷಿಕ ಬಿಟ್ಟು ಉಳಿದೆಲ್ಲ ಅವಧಿಯ ಪ್ರಕಟನೆಗಳನ್ನು ನಿಯತಕಾಲಿಕೆಗಳೆಂದು ಪರಿಗಣಿಸುತ್ತಾರೆ. ವಾರ್ಷಿಕ ಸಂಚಿಕೆಗಳು ಒಂದರ್ಥದಲ್ಲಿ ನಿಯತಕಾಲಿಕೆ ಎನಿಸಿದರೂ ತಪ್ಪಿಲ್ಲ. ಸಾಮಾನ್ಯವಾಗಿ ಪಂಚಾಂಗ, ಕ್ಯಾಲೆಂಡರ್, ವರದಿ, ಡೈರಿಗಳು ಮೊದಲಾದವು ವರ್ಷಕ್ಕೊಮ್ಮೆ ಪ್ರಕಟವಾಗುವುದರಿಂದ ಅವು ವಾರ್ಷಿಕಗಳೇ. ಸಾಧನೆಗಳ ಸಮೀಕ್ಷೆಗಳು ವಾರ್ಷಿಕ ವರದಿಯಲ್ಲಿರುತ್ತವೆ. ಸಾಹಿತ್ಯರಂಗದಲ್ಲಿ ವಾರ್ಷಿಕಗಳು ಕಳೆದ ವರ್ಷದ ಸಾಧನೆಯನ್ನು ಕುರಿತಿರುತ್ತವೆ. ಸಾಹಿತ್ಯ ವಾರ್ಷಿಕ ಹಿಂದಿನ ವರ್ಷದಲ್ಲಿ ಕನ್ನಡದಲ್ಲಿ ಬಂದ ಗ್ರಂಥಗಳ ಸಮೀಕ್ಷೆಯನ್ನು ಒಳಗೊಂಡಿರುತ್ತವೆ.

ಕನ್ನಡದಲ್ಲಿ ಪ್ರಕಟವಾಗುವ ಗ್ರಂಥಗಳನ್ನು ವರ್ಷಕ್ಕೊಮ್ಮೆ ಸಮೀಕ್ಷೆ ಮಾಡುವ ಪರಿಪಾಟವನ್ನು ಕಾಣುತ್ತೇವೆ. ಅನೇಕ ಗ್ರಂಥ ಪ್ರಶಸ್ತಿಗಳನ್ನು ಕೊಡುವಾಗ, ಸಾಹಿತ್ಯ ಅಕಾಡೆಮಿಗಳು ಪ್ರಶಸ್ತಿಗೆ ಗ್ರಂಥಗಳನ್ನು ಆಯ್ಕೆ ಮಾಡುವಾಗ, ಹಿಂದಿನವರುಷವನ್ನು

ಮಾನದಂಡವಾಗಿ ಇಟ್ಟುಕೊಂಡಿರುತ್ತಾರೆ. ಜಿ. ನಾರಾಯಣರ ಕಾಲದಲ್ಲಿ ಆಯಾ ವರುಷದಲ್ಲಿ ಬಂದ ಗ್ರಂಥವನ್ನೆಲ್ಲಾ ಒಂದೆಡೆ ಪ್ರದರ್ಶಿಸಲಾಗುತ್ತಿತ್ತು. ಸಮಕಾಲೀನ ಗ್ರಂಥಗಳನ್ನು ತಕ್ಷಣ ಗುರುತಿಸಲು ಸಾಧ್ಯವಾಗುತ್ತಿತ್ತು. ವಿಶ್ವವಿದ್ಯಾನಿಲಯಗಳು ವಾರ್ಷಿಕಗಳನ್ನು ಪ್ರಕಟಿಸುವುದುಂಟು.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಜಿ.ಎಸ್. ಶಿವರುದ್ರಪ್ಪನವರು ವರ್ಷದ ಅವಧಿಯಲ್ಲಿ ಪ್ರಕಟವಾದ ಎಲ್ಲ ಕನ್ನಡ ಗ್ರಂಥಗಳನ್ನು ಸಂಗ್ರಹಿಸಿ ಅವುಗಳನ್ನು ಸಾಹಿತ್ಯ ಪ್ರಕಾರದ ರೀತಿಯಲ್ಲಿ ವರ್ಗೀಕರಿಸಿ, ಆಯಾವರ್ಗದ ಪುಸ್ತಕಗಳನ್ನು ಸಮೀಕ್ಷಿಸಿ ವಿಮರ್ಶೆಯನ್ನು ಪ್ರಕಟಿಸುವ ಪರಿಪಾಟವನ್ನು ಪ್ರಾರಂಭಿಸಿದರು. ಇದರಿಂದ ಪ್ರಶಸ್ತಿಗಳಿಗೆ ಪುಸ್ತಕ ವಿವರ ಸುಲಭವಿತ್ತು. ಕನ್ನಡದಲ್ಲಿ ಈಚೆಗೆ ಬಂದ ಗ್ರಂಥಗಳೇನು ಎಂದು ತಿಳಿಯುತ್ತಿತ್ತು. 1971 ರಿಂದ 81 ವರೆಗೆ ಸಾಹಿತ್ಯ ವಾರ್ಷಿಕಗಳು ಪ್ರಕಟವಾದವು. ಈ ಸಾಹಿತ್ಯ ವಾರ್ಷಿಕದ ಇನ್ನೊಂದು ವೈಶಿಷ್ಟ್ಯವೆಂದರೆ ಆಯಾವರ್ಷದಲ್ಲಿ ಪ್ರಕಟವಾದ ಪುಸ್ತಕ ಪತ್ರಿಕಾಲೇಖನಗಳ ಸೂಚಿ ವಿಷಯಾನುಸಾರ ಪ್ರಕಟವಾಗುತ್ತಿತ್ತು.

2. ಭಾರತ ವಾರ್ಷಿಕ : ಭಾರತದ ಸಾಮಾನ್ಯ ವಿಷಯಗಳು, ಭಾರತದ ರಾಜ್ಯಗಳ ಆಡಳಿತ ಇತ್ಯಾದಿ ವಿಷಯಗಳು, ಕರ್ನಾಟಕದ ವಿಷಯ ವಿವರಗಳು ಹೀಗೆ 3 ಭಾಗಗಳನ್ನು ಒಳಗೊಂಡಿದೆ. ಪ್ರ: ಮೈಸೂರು ರೇಶ್ಮೆ ಉದ್ಯಮ ಕೇಂದ್ರ. ಇ 1981

3. ಕನ್ನಡ ವಾರ್ಷಿಕ : 1991, 1992, 1993, 1994 ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರತಿವರ್ಷವೂ ಆಯಾ ವರ್ಷದ ಸಾಹಿತ್ಯಿಕ, ಭೌಗೋಳಿಕ, ರಾಜಕೀಯ, ಸಾಂಸ್ಕೃತಿಕ, ಕಲೆ, ವಿಜ್ಞಾನ ಕ್ಷೇತ್ರಗಳಲ್ಲಿ ನಡೆದ ಸಂಗತಿಗಳು ಬಂದ ಗ್ರಂಥಗಳ ಸಮೀಕ್ಷೆ ಜತೆಗೆ ಕನ್ನಡ ಚಟುವಟಿಕೆಗಳನ್ನು ಪ್ರಸ್ತಾಪಿಸುತ್ತದೆ.

ವಿಷಯಾಧಾರಿತ ಕೃತಿಸೂಚಿಗಳು

ವ್ಯಕ್ತಿ ಕೃತಿಸೂಚಿಗಳಲ್ಲಿ ವ್ಯಕ್ತಿ ಮುಖ್ಯ ಕೇಂದ್ರವಾದರೆ ವಿಷಯವಾರು ಗ್ರಂಥಸೂಚಿಯಲ್ಲಿ ವಿಷಯ ಪ್ರಧಾನವಾಗಿರುತ್ತದೆ. ಯಾರು ಬರೆದರು ಎಂಬುದು ಮುಖ್ಯವಲ್ಲ ಇಲ್ಲಿ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದೆಯೇ ಎಂಬುದು ಮುಖ್ಯ.

ಇಂಥ ವಿಷಯಸೂಚಿಗಳು ಕನ್ನಡದಲ್ಲಿ ಹತ್ತಾರಿವೆ. ಕೆಲವನ್ನು ಇಲ್ಲಿ ಉದಾಹರಿಸಿದೆ.

1. ಕನ್ನಡದಲ್ಲಿ ಕಾನೂನು ಸಾಹಿತ್ಯ-ರಾ.ಯ. ಧಾರವಾಡಕರ, ಕವಿವಿ 1926
2. ವಿಜ್ಞಾನ ಮತ್ತು ಸಮಾಜವಿಜ್ಞಾನ ಗ್ರಂಥಗಳ ಪರಿಚಯ ಧಾರವಾಡ, ಮೈಸೂರು ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ, 1966

3. ರಂಗಸೌರಭ (1880 ರಿಂದ 1980 ವರೆಗೆ ಪ್ರಕಟವಾದ ಕನ್ನಡ ನಾಟಕಗಳ ಸೂಚಿ- ಸಂ: ಆರ್.ಎಲ್. ಅನಂತರಾಮಯ್ಯ ಪ್ರ: ನಾಟ್ಯಸಂಘ ಥಿಯೇಟರ್, ಮೈಸೂರು 1980
4. ತತ್ತ್ವಶಾಸ್ತ್ರ ಕನ್ನಡ ಗ್ರಂಥಗಳಪಟ್ಟಿ ಪ್ರ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ 1967
5. ಜ್ಞಾನ-ವಿಜ್ಞಾನ ಗ್ರಂಥಗಳ ಪ್ರದರ್ಶನ 395 ಕೃತಿಗಳ ಗ್ರಂಥಸೂಚಿ ಸಂ: ಕೆ.ಎಸ್. ದೇಶಪಾಂಡೆ ಮತ್ತು ಇತರರು ಪ್ರ: ಸ.ಸ. ಮಾಳವಾಡ, ಧಾರವಾಡ 1957
6. ವಿಶ್ವವಿಜ್ಞಾನಸೂಚಿ ಸಂ: ಬಿ.ಎಸ್. ಕೇಶವನ್ 1961
7. ಕನ್ನಡದಲ್ಲಿ ಶಿಲ್ಪ ಮತ್ತು ತಾಂತ್ರಿಕ ಸಾಹಿತ್ಯ : ಕೆ.ಆರ್. ಮೋಹನ್, ಪ್ರ: ಕಸಾಪ 1977

ವ್ಯಕ್ತಿ ಆಧಾರಿತ ಕೃತಿಸೂಚಿಗಳು

ಇತರರು ಸಿದ್ಧಪಡಿಸಿದ ವ್ಯಕ್ತಿಕೃತಿಸೂಚಿಗಳು ಹತ್ತಾರಿವೆ.

8. **ಹಾಮಾನಾ ಹೊತ್ತಿಗೆಗಳು** : ಸಂ: ಸುಜಾತಾ (ಎಚ್.ಎಸ್) 1991 ಪ್ರ: ಸುಹಾಸ ಪ್ರಕಟನೆ, ಮೈಸೂರು
9. **ಜ.ಚ.ನಿ ವಾಙ್ಮಯ ಪರಿಚಯ** - ಸಂ: ಪಿ.ಸಿ. ಸುಂದರೇಶನ್, ಶೈಲ ಜಗದ್ಗುರು ನಿಡುಮಾಮಿಡಿ ನಿವಾಸ, ಬೆಂಗಳೂರು 1984
10. **ಡಾ. ಬೆಟಗೇರಿ ಕೃಷ್ಣಶರ್ಮರ ಸಾಹಿತ್ಯ ದರ್ಶನ** - ಹ.ಶಿ. ಭೈರವ 1982
11. **ಮಾಸ್ತಿಯವರ ಪುಸ್ತಕಗಳ ಗ್ರಂಥಸೂಚಿ** 1984 ಸಂ: ಹಾಮಾ ನಾಯಕ, ಪ್ರ: ಬೆಂವಿವಿ ಪ್ರಸಾರಾಂಗ
12. **ಗೋಕಾಕ ಗ್ರಂಥಾವಳಿ** - ಸಂ: ಹಾಮಾನಾಯಕ ಸುರುಚಿ ಪ್ರಕಾಶನ 1980
13. **ಬಸವಸಾಹಿತ್ಯ ದರ್ಪಣ**, ಗುಂಜಾಳ ಎಸ್.ಆರ್. 1977 ಪ್ರ: ಬಸವಸಮಿತಿ, ಬೆಂಗಳೂರು
14. **ಕನ್ನಡದಲ್ಲಿ ಗಾಂಧಿ ಸಾಹಿತ್ಯ** - ಸಂ: ನೀಲತ್ತಳ್ಳಿಕಸ್ತೂರಿ, ಗಾಂಧೀಸಾಹಿತ್ಯ ಸಂಘ, 1979
15. **ಕಾರಂತ ಕೃತಿಕರಂಡ** : ಸಾಹಿತ್ಯ ಕೃತಿ, ಶೇಖರಇಡ್ಯ ಮತ್ತು ಮಾಲಿನಿಮಲ್ಯ ಪ್ರ: ಎಸ್.ಬಿ.ಎಸ್. ಪಬ್ಲಿಷರ್ಸ್, 1991

16. ಕರ್ನಾಟಕ ಕವಿಚರಿತ್ರೆಯ ಅನುಕ್ತ ಕೃತಿಸೂಚಿ ಸಂ: ಎಸ್. ಶಿವಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು 1967

ಸಾಹಿತ್ಯಪ್ರಕಾರದ ಕೃತಿಸೂಚಿಗಳು

17. **ಕರ್ನಾಟಕ ಅಧ್ಯಯನ ಗ್ರಂಥಸೂಚಿ-3** ಸಂ: ಟಿ.ವಿ. ವೆಂಕಟಾಚಲಶಾಸ್ತ್ರಿ ಮತ್ತು ಸಿ.ಆರ್. ಲೀಲಾಸುಬ್ರಹ್ಮಣ್ಯ.
18. **ಪತ್ರಿಕೋದ್ಯಮ ವಾಙ್ಮಯಸೂಚಿ** - ಸಂ: ಟಿ.ವಿ. ವೆಂಕಟರಮಣಯ್ಯ ಪ್ರ: ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು 1988
19. **ಕನ್ನಡ ಜಾನಪದ ಗ್ರಂಥಸೂಚಿ** - ಸಂ: ಹಾಮಾನಾ ಕನ್ನಡ ಅಧ್ಯಯನ ಸಂಸ್ಥೆ, ಮೈವಿವಿ 1974
20. **ಸಂಕ್ಷಿಪ್ತ ಕನ್ನಡ ಜಾನಪದ ಗ್ರಂಥಸೂಚಿ** : ಎಚ್.ಎಂ. ಮಹೇಶ್ವರಯ್ಯ
21. **ಕನ್ನಡ ಜಾನಪದ ವಾಙ್ಮಯದ ಅಭ್ಯಾಸಸೂಚಿ** - ಸಂ: ಡಿ. ಲಿಂಗಯ್ಯ, ಪ್ರ: ಕರ್ನಾಟಕ ಜಾನಪದ ಸಾಹಿತ್ಯ ಸಮ್ಮೇಳನ 1967
22. **ಜಾನಪದ ಗ್ರಂಥಸೂಚಿ** - ಸಂ: ಬಿ.ಎಸ್. ಸ್ವಾಮಿ, ಪ್ರ: ಸಿ.ಪಿ. ಇನೋವೇಷನ್ಸ್, ಬೆಂಗಳೂರು, 2013
23. **ಜಾನಪದ ಸಂಚಯ** - ಸಂ: ವಿರೂಪಾಕ್ಷಗೌಡ ಮತ್ತು ಪಂ. ಗುರುಮೂರ್ತಿ ಪ್ರ: ಬೊಮ್ಮನಹಳ್ಳಿ ಯುವಕರ ಸಂಘ, 1979
24. **ಕನ್ನಡ ಗ್ರಂಥಸೂಚಿ** (12 ಸಂಪುಟಗಳು) ಸಂ: ಸಂಪಾದಕಸಮಿತಿ, ಪ್ರ: ಮೈಸೂರು ವಿಶ್ವವಿದ್ಯಾನಿಲಯ
25. **ಸಮಗ್ರ ಹರಿದಾಸ ವಾಙ್ಮಯಕೋಶ** - (15500 ಕೀರ್ತನಸೂಚಿ 146 ಹರಿದಾಸರ ಕೀರ್ತನೆಗಳು) ಸಂ: ಶ್ರೀನಿವಾಸ ಹಾವನೂರ, ಬೆಂಗಳೂರು ಪ್ರ: ಪ್ರಗತಿ ಪ್ರಕಾಶನ, ಬೆಂಗಳೂರು
26. **ಕನ್ನಡ ಚಂಪೂ ಕಾವ್ಯಗಳ ಪದ್ಯಾನುಕ್ರಮಣಿಕೆ** : ಸಂ: ಎನ್. ಅನಂತರಂಗಾಚಾರ್, ಪ್ರ: ಮೈವಿವಿ ಪ್ರಸಾರಾಂಗ 1972
27. **ಕನ್ನಡ ಸಂಶೋಧನ ಪ್ರಬಂಧಗಳ ವರ್ಗೀಕೃತ ಸೂಚಿ** ಸಂ: ಡಾ. ಸಂಗಮೇಶ ಸವದತ್ತಿಮಠ ಮತ್ತು ಇತರರು ಪ್ರ: ವಿದ್ಯಾನಿಧಿ ಪ್ರಕಾಶನ, ಗದಗ (ವಿವಿಗಳು ಪ್ರಕಟಿಸಿದ

ವಿಷಯಾನುಸಾರವಾಗಿ ಪ್ರಬಂಧಗಳ ಸೂಚಿ, ಸಂಶೋಧನಕರ ಸೂಚಿ ಈ ಗ್ರಂಥದಲ್ಲಿದೆ.)

28. ಕಲ್ಲಚ್ಚಿನ ಕನ್ನಡ ಹೊತ್ತಗೆಗಳ ವಿವರಣ ಸೂಚಿ ಸಂ: ಗೌ.ಮ. ಉಮಾಪತಿಶಾಸ್ತ್ರಿ ಪ್ರ: ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನಮಾಲೆ 2004

29. ಕನ್ನಡ ಅಭಿನಂದನ ಗ್ರಂಥಗಳ ಲೇಖನಗಳ ಸೂಚಿ ಸಂ: ಪ.ಕೃ. ಪಾಟೀಲ, ಪ್ರ: ಮೈಸೂರು ವಿಶ್ವವಿದ್ಯಾನಿಲಯ, 1972

30. ಪುಸ್ತಕಲೋಕದರ್ಶಿನಿ, ಕೆ.ಎಸ್. ಉಮಾಪತಿ

31. ಹಳ್ಳಿಯ ಪುಸ್ತಕಾಲಯಗಳ ಪುಸ್ತಕಗಳ ಯಾದಿ ಮುಂಬಯಿ ಸರ್ಕಾರಿ ಪ್ರೆಸ್

32. ಆಯ್ದ ಕನ್ನಡ ಪುಸ್ತಕಗಳು (1924-1957 ವರೆಗಿನ ಆಯ್ದ ಕನ್ನಡ ಪುಸ್ತಕಗಳಪಟ್ಟಿ) ಕವಿವಿ ಧಾರವಾಡ 1956

33. ಗ್ರಂಥಪರಿಚಯ (ಬೆಂಗಳೂರು, 470 ಮುಖ್ಯಗ್ರಂಥಗಳ ವಿವರ) ಪ್ರ: ಕನ್ನಡ ಪುಸ್ತಕ ಪ್ರದರ್ಶನ ಕೇಂದ್ರ, ಬೆಂಗಳೂರು 1968

34. ಗ್ರಂಥ ಪರಿಚಯ (ಧಾರವಾಡ) ಪ್ರ: ಮೈಸೂರು ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ, 1966

35. ಸಮೀಕ್ಷೆ (ಸಂಕೇತಿ ಸಮುದಾಯದ ಅಧ್ಯಯನದ 10 ಸಂಪುಟಗಳ ಕೃತಿಸೂಚಿ) ಸಂ: ಡಾ. ಬಿ.ಎಸ್. ಪ್ರಣತಾರ್ತಿಹರನ್ ಪ್ರ: ಸಮುದಾಯ ಅಧ್ಯಯನ ಕೇಂದ್ರ, ಮೈಸೂರು, 2014

VI ತಾಳೆಗರಿ ಹಸ್ತಪ್ರತಿ ಸೂಚಿಗಳು

ಕನ್ನಡದಲ್ಲಿ ಅಚ್ಚಾದ ಗ್ರಂಥಗಳ ಮೂಲವನ್ನು ಆರು ಬಗೆಯಾಗಿ ವರ್ಗೀಕರಿಸಬಹುದು.

1. ತಾಳೆಗರಿ ಗ್ರಂಥಗಳ ಆಧಾರದ ಮೇಲೆ ಅಚ್ಚಾದ ಗ್ರಂಥಗಳು
2. ಶಿಲಾಶಾಸನ ಮತ್ತು ತಾಮ್ರಶಾಸನಗಳ ಆಧಾರದ ಮೇಲೆ ಅಚ್ಚಾದ ಗ್ರಂಥಗಳು
3. ಪ್ರಾಚೀನ ಕಾಗದದ ಪ್ರತಿಗಳ ಆಧಾರದಿಂದ ಅಚ್ಚಾದ ಗ್ರಂಥಗಳು
4. ಅಚ್ಚಿನಯಂತ್ರಗಳ್ಳು ಬಂದಮೇಲೆ ಸ್ವತಂತ್ರವಾಗಿ ಬರೆದ ಗ್ರಂಥಗಳು
5. ಇತರ ಆಧಾರಗಳಿಂದ ಸಂಪಾದಿಸಿದ ಗ್ರಂಥಗಳು
6. ಪತ್ರಿಕಾ ಸಾಹಿತ್ಯ

ಇವುಗಳನ್ನು ಅವಲಂಬಿಸಿ, ಹಸ್ತಪ್ರತಿಸೂಚಿ, ಶಾಸನಸಾಹಿತ್ಯಸೂಚಿ, ಅಚ್ಚಿನಗ್ರಂಥಗಳ ಸೂಚಿ ಎಂದು ಮೂರು ವಿಧವಾಗಿ ವರ್ಗೀಕರಿಸಬಹುದು.

ಅಚ್ಚಿನಯುಗ ಪ್ರಾರಂಭವಾಗುವ ಮುನ್ನ ಬರಹದ ಕೆಲಸ ತಾಳೆಗರಿಗಳ ಮೇಲೆ (ಉತ್ತರ ಭಾರತದಲ್ಲಿ ಭೂರ್ಜಪತ್ರದ ಮೇಲೆ) ಮಾಡುತ್ತಿದ್ದರು. ಶಾಸನಗಳನ್ನು ಕಲ್ಲು ಅಥವಾ ತಾಮ್ರ ಇತ್ಯಾದಿ ಲೋಹದ ಮೇಲೆ ಬರೆಯುತ್ತಿದ್ದರು. ಹೀಗಾಗಿ ನಮ್ಮಲ್ಲಿ ಲಕ್ಷಾಂತರ ತಾಳೆಗರಿಗಳು, ಸಾವಿರಾರು ಶಾಸನಗಳು ಉಪಲಬ್ಧವಿವೆ.

ಇವುಗಳನ್ನು ಗ್ರಂಥಸೂಚಿ ಮಾಡುವ ವಿಧಾನ ವಿವರಗಳು ಬೇರೆ ಬೇರೆಯಾಗಿವೆ. ಶಾಸನ ಸಂಪುಟಗಳ ಮತ್ತು ತಾಳೆಗರಿಗ್ರಂಥಗಳಸೂಚಿ ಬಗ್ಗೆ ಎಸ್. ಕಾರ್ತಿಕ್ ಅವರ ಲೇಖನಪಟ್ಟಿಯನ್ನು ಗಮನಿಸಬಹುದು. ಇಲ್ಲಿ ಅಚ್ಚಿನ ಗ್ರಂಥಸೂಚಿಗಳನ್ನಷ್ಟೆ ಪ್ರಸ್ತಾಪಿಸಲಾಗಿದೆ. ವಿಶ್ವವಿದ್ಯಾನಿಲಯಗಳು, ತಾಳೆಗರಿ ಸಂಗ್ರಹ ಕೇಂದ್ರಗಳು, ಕೆಳದಿ ಮ್ಯೂಸಿಯಂ, ಕನ್ನಡ ಸಾಹಿತ್ಯ ಪರಿಷತ್ತು, ಮಠಗಳು, ಬಿಎಂ ಪ್ರತಿಷ್ಠಾನ ಮೊದಲಾದ ಸಂಶೋಧನ ಸಂಸ್ಥೆಗಳು ತಾಳೆಗರಿಗಳ ಹಸ್ತಪ್ರತಿಸೂಚಿಗಳನ್ನು ಪ್ರಕಟಿಸಿವೆ. ಆಸಕ್ತರು ಅವುಗಳನ್ನು ಪರಿಶೀಲಿಸಬಹುದು. ಇನ್ನು ಶಾಸನ ಇಲಾಖೆಯ ಪ್ರಕಟನೆಗಳ ಸೂಚಿಯನ್ನು ಶಾಸನ ಇಲಾಖೆ ಹಾಗೂ ಸಂಶೋಧಕರು ಅನೇಕರು ಸಂಪಾದಿಸಿದ್ದಾರೆ.

VII ಅಚ್ಚಾದ ಹಸ್ತಪ್ರತಿ ಸೂಚಿಗಳು

ಕನ್ನಡ ಗ್ರಂಥಸೂಚಿಗಳು ಬಹುತೇಕ ಅಚ್ಚಾದ ಗ್ರಂಥಗಳ ಸೂಚಿಗಳಾಗಿವೆ. ಆದರೆ ಅಪ್ರಕಟಿತ ಹಾಗೂ ಪ್ರಕಟಿತ ಗ್ರಂಥಗಳ ಹಸ್ತಪ್ರತಿಗಳ ಸೂಚಿಗಳು ಸಾಕಷ್ಟು ಕನ್ನಡದಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಿವೆ.

1. **ಕನ್ನಡ ಹಸ್ತಪ್ರತಿ ಸೂಚಿ, ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ**
2. **ಯಕ್ಷಗಾನ ಹಸ್ತಪ್ರತಿಗಳ ವಿವರಣಸೂಚಿ** (ಮೇಲ್ಕಂಡ ಸಂಸ್ಥೆ)
3. **ತುಳು ಲಿಪಿ ಹಸ್ತಪ್ರತಿಗಳ ವಿವರಣ ಸೂಚಿ** (ಮೇಲ್ಕಂಡ ಸಂಸ್ಥೆ)
4. **ಕಸಾಪ ಹಸ್ತಪ್ರತಿಸೂಚಿ** (ಸಂ: ಎಸ್. ಶಿವಣ್ಣ)
5. **ಕನ್ನಡ ವೈದ್ಯಶಾಸ್ತ್ರದ ಹಸ್ತಪ್ರತಿಗಳು** (ಡಾ. ಅಯ್.ಎನ್. ಹುರಳಿ)
6. **ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಸೂಚಿಗಳ ಸಂಪುಟಗಳು**

7. ಮೈಸೂರು ಓರಿಯಂಟಲ್ ಇನ್ಸ್ಟಿಟ್ಯೂಟ್ ಲೈಬ್ರರಿಯಲ್ಲಿನ ಅಚ್ಚಿನ ಮತ್ತು ಕೈಬರಹಗಳ ಕರ್ನಾಟಕದ ಪುಸ್ತಕಪಟ್ಟಿಗಳು 1921, 1930 ಪ್ರ: ಗೌರ್ನಮೆಂಟ್ ಬ್ರಾಂಚ್ ಪ್ರೆಸ್, ಮೈಸೂರು

8. ಮೈಸೂರು ಶ್ರೀಮನ್ಮಹಾರಾಜರ ಅರಮನೆಯ ಸರಸ್ವತಿ ಭಂಡಾರದ ಹಸ್ತಪ್ರತಿಗಳ ಸೂಚಿ (1900-1905) ಪ್ರ: ಜಿ.ಟಿ.ಎ. ಮುದ್ರಾಕ್ಷರ ಶಾಲೆ, ಮೈಸೂರು

9. ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಕನ್ನಡ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ ಪ್ರ: ಉಸ್ಮಾನಿಯಾ ವಿಶ್ವವಿದ್ಯಾನಿಲಯ, ಹೈದರಾಬಾದ್ 1966

10. ಮೈಸೂರು ಮತ್ತು ಕೊಡಗು ಇಲ್ಲಿ ಲಭ್ಯವಿರುವ 2944 ಸಂಸ್ಕೃತ ಹಸ್ತಪ್ರತಿಗಳ ಸೂಚಿ - ಸಂ: ಲೂಯಿರೈಸ್ ಪ್ರ: ಮೈಸೂರು ಗೌರ್ನಮೆಂಟ್ ಪ್ರೆಸ್, 1884

11. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ (4 ಸಂಪುಟಗಳು) ಮೈಸೂರು ವಿವಿ ಸಂ: ಬಿಎಸ್ ಸಣ್ಣಯ್ಯ ಮತ್ತು ಎಸ್. ಶಿವಣ್ಣ

12. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂ: ಎಸ್. ಶಿವಣ್ಣ, ಬೆಂ.ವಿ.ವಿ.

13. ವೀರಶೈವ ಅಪ್ರಕಟಿತ ಗ್ರಂಥಸೂಚಿ (1700 ಗ್ರಂಥಗಳ ವಿವರ) ಸಂ: ಎಸ್. ಶಿವಣ್ಣ ಪ್ರ: ವೀರಶೈವ ಅಧ್ಯಯನ ಸಂಸ್ಥೆ, ಗದಗ, 1982

14. ಮೈಸೂರು ವಿಶ್ವವಿದ್ಯಾಲಯ ಕೈಬರಹದ ಕನ್ನಡ ಗ್ರಂಥಗಳ ಅಕಾರಾದಿ ಸೂಚಿ (1981-1957) ಪ್ರ: ಮೈವಿವಿ 1956

15. ಕನ್ನಡ ಹಸ್ತಪ್ರತಿಗಳ ವಿವರಣಾತ್ಮಕ ಸೂಚಿ (7 ಸಂಪುಟಗಳು) ಸಂ: ಎಸ್. ಕುಪ್ಪುಸ್ವಾಮಿಶಾಸ್ತ್ರಿ ಮತ್ತು ಇತರರು ಪ್ರ: ಮದ್ರಾಸ್ ಸರ್ಕಾರ 1935-58

16. 1890-1920 ವರೆಗೆ ನಮೂದಾದ ಗ್ರಂಥಗಳ ವರ್ಗೀಕೃತಸೂಚಿ ಪ್ರ: ಮದ್ರಾಸ್ ಸರ್ಕಾರ, ಪ್ರಕಟನೆ 1962-1966

17. ಕನ್ನಡ ಪ್ರಾಂತೀಯ ತಾಡಪತ್ರಿಯ ಗ್ರಂಥಸೂಚಿ ಸಂ: ಕೆ. ಭುಜಬಲಿಶಾಸ್ತ್ರಿ ಪ್ರ: ಮೂಡಬಿದ್ರೆ ಜೈನಮಠ 1948

18. ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ (ಸಂಪುಟ 1) ಸಂ: ಕೆಳದಿ ಗುಂಡಾಜೋಯಿಸ್ ಮತ್ತು ನಾಗೀತಾಚಾರ್ಯ 1987

19. **ಕನ್ನಡ ಸಂಶೋಧನ ಸಂಸ್ಥೆ ಧಾರವಾಡ, ಇಲ್ಲಿ ಲಭ್ಯವಿರುವ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು** (12 ಸಂಪುಟಗಳು) ಸಂಪಾದಕರು : ಬಿಎಸ್ ಕುಲಕರ್ಣಿ ಮತ್ತು ಇತರರು ಪ್ರ: ಕನ್ನಡ ಸಂಶೋಧನ ಸಂಸ್ಥೆ ಧಾರವಾಡ 1956-69

20. **ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಸೂಚಿ** -1 ಸಂ: ಎಫ್.ಟಿ. ಹಳ್ಳಿಕೇರಿ ಮತ್ತು ಕೆ. ರವೀಂದ್ರನಾಥ್ ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ 2000

21. **ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಸೂಚಿ** -2 ಸಂ: ವೀರೇಶಬಡಿಗೇರ ಮತ್ತು ಎಸ್.ಆರ್. ಚನ್ನವೀರಪ್ಪ 2000 ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ

(ಟಿಪ್ಪಣಿ : ಕನ್ನಡ ಗ್ರಂಥಸೂಚಿ ಸಾಹಿತ್ಯದ ವೈವಿಧ್ಯವನ್ನು ತೋರಿಸಲು ಕೆಲವು ಮುಖ್ಯಗ್ರಂಥಗಳನ್ನು - ಸೂಚಿಗಳನ್ನು ಆಯಾ ವಿಭಾಗದಲ್ಲಿ ತೋರಿಸಿದೆ; ಯಾವ ವಿಭಾಗದಪಟ್ಟಿಯೂ ಪೂರ್ಣವಲ್ಲ. ಮಾದರಿಗಾಗಿ ಉಲ್ಲೇಖಿಸಿರುವುದು ಕೆಲವು ಗ್ರಂಥಗಳಷ್ಟೆ.

ಗ್ರಂಥಗಳ ವಿವರಗಳನ್ನು ಕೊಡುವಾಗ ಎಲ್ಲ ಗ್ರಂಥಗಳ ಬಗ್ಗೆ ಪೂರ್ಣ ಮಾಹಿತಿ ದೊರಕದ ಕಾರಣ ಮಾಹಿತಿ ಅಪೂರ್ಣವಾಗಿದೆ.

ಕನ್ನಡ ಗ್ರಂಥಸೂಚಿಗಳ ಸ್ವರೂಪ ತೋರಿಸುವ ಲೇಖನ ಇದು. ಆದಕಾರಣ ಎಲ್ಲ ಗ್ರಂಥಗಳ ಪಟ್ಟಿಯನ್ನು ಇಲ್ಲಿ ಕೊಟ್ಟಿಲ್ಲ.

ಪ್ರಕಟಿತ ಕನ್ನಡ ಗ್ರಂಥಸೂಚಿ ಕುರಿತ ಲೇಖನ ಮತ್ತು ಗ್ರಂಥಗಳ ನೆರವನ್ನು ಪಡೆದಿದ್ದೇನೆ, ಅವರೆಲ್ಲರಿಗೂ ಆಭಾರಿ ಆಗಿದ್ದೇನೆ.)

ಹಿನ್ನುಡಿ

ವರಕವಿ ಬೇಂದ್ರೆಯವರು ದಶಕಗಳ ಹಿಂದೆ 'ಕನ್ನಡವನ್ನು ಬಳಸಿ, ಉಳಿಸಿ, ಬೆಳೆಸಿ' ಎಂದು ಕರೆಕೊಟ್ಟಿದ್ದರು. ಆ ನುಡಿಯನ್ನು ಇಂದು ಹೆಚ್ಚುಹೆಚ್ಚು ಪ್ರಚಾರ ಮಾಡಲಾಗುತ್ತಿದೆ. ಕನ್ನಡಕ್ಕೆ ಒದಗಬಹುದಾದ ಅಪಾಯವನ್ನು ವರಕವಿಯು ಎಂದೋ ಊಹಿಸಿದ್ದರು; ಇಂದು ಆ ಅಪಾಯವು ಕಾಣಿಸಿಕೊಂಡಿದೆ ಮತ್ತು ದಿನದಿನಕ್ಕೆ ಹೆಚ್ಚುತ್ತಿದೆ.

ಇಂಥ ಅಪಾಯದ ಕಾಲದಲ್ಲಿಯೇ ಆಡಳಿತ ಕನ್ನಡ, ವ್ಯವಹಾರ ಕನ್ನಡ, ವಾಣಿಜ್ಯ ಕನ್ನಡ, ವಿಜ್ಞಾನ ಕನ್ನಡ ಎಂಬ ಒತ್ತುಕೊಟ್ಟು ಭಾಷೆಯನ್ನು ಬಲಗೊಳಿಸಲಾಗುತ್ತಿದೆ. ಇವುಗಳ ಸಾಲಿಗೆ ಸೇರಿರುವ ಇನ್ನೊಂದು ಕ್ಷೇತ್ರ ಕರಡಚ್ಚು ತಿದ್ದುವ ಬಗೆಗಿನದು. ಒಂದು ಕಡೆ ಕನ್ನಡವು ಬಳಕೆಯಿಂದ ತಪ್ಪಿಹೋಗುತ್ತಿರುವುದೂ ನಿಜ; ಇನ್ನೊಂದು ಮಗ್ಗುಲಿನಲ್ಲಿ ಕನ್ನಡ ಭಾಷೆಯು ದೃಢವಾದ ಅಚ್ಚುಕಟ್ಟು ಪಡೆಯುತ್ತಿರುವುದೂ ಕಾಣುತ್ತಿದೆ.

ಕರಡಚ್ಚು ತಿದ್ದುವುದು ಒಂದು ಶಾಸ್ತ್ರ. ಆಡಳಿತ ಕನ್ನಡಕ್ಕೆ ಸಂಬಂಧಿಸಿದಂತೆ ತರಬೇತಿ ಶಿಬಿರಗಳು ನಡೆಯುತ್ತವೆ. ವಿಜ್ಞಾನ ಲೇಖನಗಳನ್ನು ಬರೆಯುವ ಕಾರ್ಯಾಗಾರಗಳು ನಡೆಯುತ್ತವೆ. ಕರಡಚ್ಚು ತಿದ್ದುವುದೂ ಸೇರಿದಂತೆ ಪ್ರಾಯೋಗಿಕ ಕನ್ನಡಕ್ಕಾಗಿಯೇ ಪಾಠ್ಯವನ್ನು ರೂಪಿಸಿ ಎಂ.ಎ. ಪದವೀಧರರನ್ನು ಸಿದ್ಧಪಡಿಸಬೇಕಾದುದು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಅಗತ್ಯ.

ಒಮ್ಮೆ ದೇಜಗೌ ಅವರಲ್ಲಿ ಕೇಳಿದೆ, 'ಎಲ್ಲ ಸ್ನಾತಕೋತ್ತರ ಕೇಂದ್ರಗಳೂ, ವಿಶ್ವವಿದ್ಯಾಲಯಗಳೂ ಕುಟ್ಟಿದ್ದನ್ನೇ ಕುಟ್ಟುತ್ತಿರುತ್ತವೆ. ಹೊಸತನ್ನೇಕೆ ಮಾಡವು?' ತತ್‌ಕ್ಷಣ ಉದ್ಗರಿಸಿದರು, 'ಕಷ್ಟಪಟ್ಟು ತಯಾರಿ ಮಾಡಿಕೊಳ್ಳಬೇಕಾಗುತ್ತದಲ್ಲ!' ಕಷ್ಟಪಟ್ಟು ಹೊಸ ಸಾಧನೆಗಳನ್ನು ಮಾಡಿ ಕನ್ನಡಭಾಷೆಗೂ ಸಾಹಿತ್ಯಕ್ಕೂ ಹೊಸ ಆಯಾಮವನ್ನು ಕಲ್ಪಿಸುವವರು ಮತ್ತು ತೇಜಸ್ಸನ್ನು ತುಂಬುವವರು ನಮ್ಮ ನಡುವೆಯೇ ಇದ್ದಾರೆ. ಅಂಥ ಅಪರೂಪದ ವಿದ್ವಾಂಸರಲ್ಲಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರೂ ಸೇರಿದ್ದಾರೆ.

ಪುಸ್ತಕಸೃಷ್ಟಿಯೇ ಬೇರೆ, ಪರಿಷ್ಕಾರವೇ ಬೇರೆ; ಆದರೆ ಎರಡೂ ಸೃಜನಶೀಲ ಕ್ರಿಯೆಗಳೇ. ಯಾವುದು ಹೆಚ್ಚು ಪ್ರಾಧಾನ್ಯದ್ದು? ಪುಸ್ತಕವೇ ಸೃಷ್ಟಿಯಾಗದಿದ್ದರೆ ಪರಿಷ್ಕಾರದ ಮಾತಿಲ್ಲ, ಪರಿಷ್ಕಾರವಾಗದಿದ್ದರೆ ಪುಸ್ತಕವು ಪೂರ್ಣವಾಗುವುದಿಲ್ಲ, ಅರ್ಥಪೂರ್ಣವಾಗುವುದಿಲ್ಲ ಎಂದೇ ಹೇಳಬೇಕು.

ಗ್ರಂಥಕರ್ತನಿಗೆ ಪರಿಷ್ಕಾರದ ಸ್ವಲ್ಪವಾದರೂ ಜ್ಞಾನವಿರಬೇಕಾದುದು ಅಗತ್ಯ, ಪರಿಷ್ಕಾರ ಮಾಡುವವನಿಗೆ ಸಾಹಿತ್ಯದ ಅಂತರಂಗದ ಸಂಸ್ಕಾರ ಇರಬೇಕಾದುದೂ

ಅಗತ್ಯ. ಪರಿಷ್ಕಾರ ನಿಪುಣನು ಮೂಲಗ್ರಂಥವನ್ನೇ ಸೃಷ್ಟಿಸುವ ಶಕ್ತನಲ್ಲದಿರಬಹುದು, ಆದರೆ ಮೂಲಗ್ರಂಥದ ಸೊಗಸನ್ನು ಹೆಚ್ಚಿಸಿ ದೋಷವನ್ನು ತೊಡೆಯುವ ಅವನ ಕೈಯಾಡಿಕೆ ಕಡಮೆ ಮಹತ್ತ್ವದ್ದಲ್ಲ. ಮೂಲಗ್ರಂಥಕರ್ತನು ಪರಿಷ್ಕಾರನಿಪುಣನೂ ಆಗಿರುವ ಸ್ವಾರಸ್ಯಕರ ನಿದರ್ಶನಗಳನ್ನು ಪ್ರೊ. ಅನಾಜಿ ತಮ್ಮ ಕೃತಿಯಲ್ಲಿ ಕಾಣಿಸಿದ್ದಾರೆ.

'ಪರಿಷ್ಕಾರ' ಎನ್ನುವುದರಲ್ಲಿ ಕರಡಚ್ಚು ತಿದ್ದುವಿಕೆಯೂ ಸೇರಿದೆ. ಕರಡಚ್ಚು ತಿದ್ದುವ ಕಲೆಯ ಎಲ್ಲೆಯರಿಯದ ವ್ಯಾಪ್ತಿ ಮತ್ತು ಸೂಕ್ಷ್ಮತೆಯ ವಲಯಕ್ಕೇ 'ಪರಿಷ್ಕಾರ' ಎನ್ನುವುದು. ಕೇವಲ ಅಲ್ಪವಿರಾಮ, ಅರ್ಧವಿರಾಮ, ಭಾವಸೂಚಕ ಚಿಹ್ನೆಗಳ ಸೂಕ್ತತೆಯನ್ನು ನಿರ್ಣಯಿಸಲೂ ಔಚಿತ್ಯಪ್ರಜ್ಞೆಬೇಕು. ಆ ಪ್ರಜ್ಞೆ ಸಿದ್ಧಿಸಲೂ ಸಾಹಿತ್ಯದ ಗರಡಿಯಲ್ಲಿ ನುರಿಯಬೇಕು.

ಅಕ್ಷರಮಾಲೆಯ ಸರಿಯಾದ ಅರಿವಿನಿಂದ ತೊಡಗಿ ವ್ಯಾಕರಣ ಛಂದಸ್ಸುಗಳಲ್ಲಿ ಹಾದು ವಿವಿಧ ಭಾಷೆಗಳು ಮತ್ತು ಜ್ಞಾನಕ್ಷೇತ್ರಗಳಲ್ಲಿ ಪರಿಶ್ರಮ ಇರಬೇಕಾದುದು ಪರಿಷ್ಕಾರಕ್ಕೆ ಬೇಕಾದ ಕನಿಷ್ಠ ಸಿದ್ಧತೆ. ಜತೆಗೆ ವಿವಿಧ ಕೋಶಗಳು ಮತ್ತು ಅವುಗಳನ್ನು ಬಳಸುವ ಚಾತುರ್ಯ! 'ಪಠ್ಯಪುಸ್ತಕಕಾರರು', 'ಓದುಗ-ವಿಮರ್ಶಕರು' ಪುಸ್ತಕ ಪರಿಷ್ಕರಣಕ್ಕೆ ದೊರೆತರೆ ಅಂಥ ಗ್ರಂಥಕರ್ತನು ಪುಣ್ಯವಂತನೇ ಸರಿ.

ಅದರಲ್ಲಿ ಸಂಶಯವಿಲ್ಲ; ಆದರೆ ಗ್ರಂಥಕರ್ತನು ತನ್ನ ಗ್ರಂಥದ ಆಶಯ, ಓಟದ ಎಳೆ, ಮಿಡಿತ, ಶಬ್ದಸಂಗೀತವನ್ನು ಉಳಿಸಿಕೊಳ್ಳುವಷ್ಟು ಜಾಗೃತನಾಗಿದ್ದು ಪರಿಷ್ಕಾರ ಕರ್ತನಿಗೆ ತಲೆ ಒಪ್ಪಿಸುವುದು ಅತ್ಯಗತ್ಯ.

ಪ್ರೊ. ಅನಾಜಿ ಅವರು ಸಿದ್ಧಪಡಿಸಿರುವ ಈ ಕೃತಿ ಎಂಟು ಪರಿಚ್ಛೇದಗಳಲ್ಲಿ ಇವನ್ನೆಲ್ಲಾ ಬಿಡಿಸಿಟ್ಟಿದೆ. ಅವರು ಕನ್ನಡ ಪ್ರಾಧ್ಯಾಪಕರಾಗಿ ದಶಕಗಳ ಕಾಲ ಪದವಿ ವಿದ್ಯಾರ್ಥಿಗಳಿಗೆ ಕನ್ನಡವನ್ನು ಕಲಿಸಿರುವವರು. 25000 ಗ್ರಂಥಗಳ ಭಾಂಡಾರವನ್ನು ಮನೆಯಲ್ಲೇ ರೂಪಿಸಿ, ಬೇಕೆಂದಾಗ ಅವನ್ನು ಹೆಕ್ಕಿ ತೆಗೆದು ಬಳಸಬಹುದಾದಷ್ಟು ಶಿಸ್ತುಗಾರ, ಪುಸ್ತಕಪ್ರೇಮಿ, ಓದಾಳಿ. ಅವರ ನೆನಪಿನಶಕ್ತಿಯೂ ಅಗಾಧವಾದುದು. ಎಂಬತ್ತರ ಹರಯದಲ್ಲೂ ಕ್ರಿಯಾಶೀಲ. ಉಪನ್ಯಾಸ, ಗೋಷ್ಠಿ, ಬಾನುಲಿ ದೂರದರ್ಶನಗಳಲ್ಲಿ ಪ್ರಸಾರ, ಕಾರ್ಯಕ್ರಮಗಳ ಯೋಜನೆ ಮತ್ತು ನಿರ್ವಹಣೆ ಹೀಗೆ ಅವರದು ವೈವಿಧ್ಯಪೂರ್ಣವೂ ವ್ಯಾಪಕವೂ ಆದ ಕಾರ್ಯಕ್ಷೇತ್ರ. ಎಲ್ಲಕ್ಕಿಂತ ಅತಿಶಯವಾದುದು ಇನ್ನೊಬ್ಬರನ್ನು ಬೆಳೆಸಿ ಆನಂದಪಡುವ ಉದಾರಬುದ್ಧಿ. ಈ ಗುಣಸಮುಚ್ಚಯದ ಪಕ್ವನೆಲೆಯಲ್ಲಿ ನಿಂತು ಅವರು ಈ ಕೃತಿಯನ್ನು ಸಿದ್ಧಪಡಿಸಿದ್ದಾರೆ.

ಮೂವತ್ತು ವರ್ಷಗಳ ಹಿಂದೆ ನನ್ನ ಮೊದಲ ಪುಸ್ತಕವನ್ನು ಸಿದ್ಧಪಡಿಸುವ ಹೊತ್ತಿನಲ್ಲಿ ಪ್ರೊ. ಅನಾಜಿ ಅವರನ್ನು ಹುಡುಕಿಕೊಂಡು ಮೈಸೂರಿನಿಂದ ಬೆಂಗಳೂರಿಗೆ ಹೋಗಿದ್ದೆ. ಮೈಸೂರಿನಲ್ಲಿ ವಿದ್ವಾಂಸರು ಇರಲಿಲ್ಲವೆಂದಲ್ಲ. ಆ ಕಾಲಕ್ಕೆ ನನಗೆ ಬರವಣಿಗೆಯ ದಾರಿ ತೋರಿಸುವ ಅತ್ಯಂತ ಆತ್ಮೀಯರಾದ ಗುರುವನ್ನು ಅವರಲ್ಲಿ ಕಂಡುಕೊಂಡಿದ್ದೆ. ಆಮೂಲಾಗ್ರವಾಗಿ ನೋಡಿ ತಿದ್ದಿಕೊಟ್ಟಿದ್ದರು.

ಬರುತ್ತೇವೆ ಎಂದೇ ಏಕೆ ಬರೆಯಬೇಕು, ಬರುತ್ತೀವಿ ಎಂದರೆ ಆಗದೆ? ನಾವು ನಮ್ಮ ಊರಿನಲ್ಲಿ ಬಳಸುವುದೇ 'ಭಾವಿ' ಎಂದು, ಅದನ್ನೇಕೆ ಬಳಸಬಾರದು? 'ಕತೆ' ಎಂದು ಬರೆದು ಪಕ್ಕದಲ್ಲೇ 'ಕಥಾವಸ್ತು' ಎಂದು ಬರೆಯುವ ಇಬ್ಬಗೆ ಏಕೆ? ಇಂಥ ಪ್ರಶ್ನೆಗಳನ್ನು ಕೇಳಿಕೊಂಡು ಅವರ ಮುಂದೆ ಕೂತಿದ್ದೆ. ಇವತ್ತು 226 ಪುಟಗಳ ದೊಡ್ಡಕೃತಿಯನ್ನೇ ಬರೆದು ಪ್ರಕಟಿಸಿ ನನ್ನಂಥ ಸಹಸ್ರಾರು ಕನ್ನಡ ಬರಹಗಾರರಿಗೆ ಉಪಕಾರ ಮಾಡಿದ್ದಾರೆ. ಬರಹಗಾರರು ಇದನ್ನು ಅಗತ್ಯವಾಗಿ ಬಳಸಿಕೊಳ್ಳಬೇಕು. ಅಧ್ಯಾಪಕರು, ವಿದ್ಯಾರ್ಥಿಗಳು, ವಿವಿಧ ಮಾಧ್ಯಮದವರು, ಓದುಗರು, ಕರಡಚ್ಚು ತಿದ್ದುವವರು... ಈ ಕೃತಿ ಯಾರಿಗೆ ತಾನೆ ಬೇಡ?

– ಡಾ. ಬಿ.ಎಸ್. ಪ್ರಣತಾರ್ತಿಹರನ್

ಮೈಸೂರು



ಪ್ರೊ. ಜಿ. ಅಶ್ವತ್ಥನಾರಾಯಣ (ಅನಾಜಿ) ಅವರು ಕರ್ನಾಟಕದಲ್ಲಿ ಸದ್ದಿಲ್ಲದೆ ಕನ್ನಡ ಸಾಹಿತ್ಯ ಪರಿಚಾರಿಕೆ ಮಾಡುತ್ತಿರುವ ನಿವೃತ್ತ ಕನ್ನಡ ಪ್ರಾಧ್ಯಾಪಕರು; ವಾಗ್ಮಿ ಸಾಹಿತಿಗಳಾದ ಅವರು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಮೂವತ್ತು ವರ್ಷಗಳ ಕಾಲ ನಾಡಿನ ವಿವಿಧ ಪದವಿ ಕಾಲೇಜುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಕನ್ನಡ ಪಾಠ ಹೇಳಿದ್ದಾರೆ. ಅಮೆರಿಕೆಯಲ್ಲಿ ಕನ್ನಡ ಮಕ್ಕಳಿಗೆ ಕನ್ನಡ ಕಲಿಸಿದ್ದಾರೆ. ಅನಕೃ-ರಾಮಮೂರ್ತಿ ನೇತೃತ್ವದ ಕನ್ನಡ ಚಳುವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬರಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದ ಇವರು ಸಿಂಚನ ಕನ್ನಡ ವೇದಿಕೆ, ದೇವುಡು ಪ್ರತಿಷ್ಠಾನ, ಅಖಿಲ ಕರ್ನಾಟಕ ಮಕ್ಕಳಕೂಟ, ಬಿಎಂಶ್ರೀ ಪ್ರತಿಷ್ಠಾನ ಮೊದಲಾದ ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯರಾಗಿದ್ದಾರೆ. ಶಾಲಾ-ಕಾಲೇಜು ಪಠ್ಯಪುಸ್ತಕ ತಯಾರಿಕೆಯಲ್ಲಿ ಪಾಲ್ಗೊಂಡಿದ್ದಾರೆ. ಎಂಫಿಲ್, ಪಿಎಚ್.ಡಿ ವ್ಯಾಸಂಗಿಗಳಿಗೆ ಮಾರ್ಗದರ್ಶಕರಾಗಿದ್ದಾರೆ. ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು, ಮಹಲಿಂಗರಂಗನ ಅನುಭವಾಮೃತ, ಸೌಂದರ್ಯಲಹರೀಸ್ತೋತ್ರದೀಪಿಕಾ ಮೊದಲಾದ ಗ್ರಂಥಗಳನ್ನು ಸಂಪಾದಿಸಿದ್ದಾರೆ. ದೇವುಡು ನರಸಿಂಹಶಾಸ್ತ್ರಿ, ಹೊಸಕೆರೆ ಚಿದಂಬರಯ್ಯ ಮೊದಲಾದವರ ಜೀವನಚರಿತ್ರೆಗಳನ್ನೂ ಇತರ ಅನೇಕ ಗ್ರಂಥಗಳನ್ನೂ ರಚಿಸಿದ್ದಾರೆ.



ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ೫೬೦೦೦೨